
ಕಂಡಿದ್ದು
?
ಕಾಡಿದ್ದು
Deepthi
Bookhouse
ಕುಮಾರ್ ಆರ್.ಎ.



ಪ್ರೊ| ಆರ್.ಎ.ಕುಮಾರ್‌ರವರ ಭಾಷಾಪ್ರಯೋಗದ ವಿಚಾರವಾಗಿ ಒಂದೆರಡು ಮಾತು ಹೇಳಬೇಕೆನಿಸುತ್ತದೆ. ಶ್ರೀಯುತರು ಮಂಡ್ಯ ನಗರದಲ್ಲಿ ಹಲವಾರು ವರ್ಷ ವಾಸಿಸಿದುರ ಪ್ರಭಾವವೋ ಏನೋ, ಒಂದಿಷ್ಟು ಲೇಖನಗಳು ಆ ಪ್ರದೇಶದ ಆಡುಭಾಷೆಯಲ್ಲಿದೆ. ಉಳಿದವು ಶಿಷ್ಟ ಕನ್ನಡದಲ್ಲಿದೆ. ಮಂಡ್ಯದ ಆಡುಭಾ಼ಷೆಯಲ್ಲಿ ಬರೆಯುವುದೂ ಕಷ್ಟ, ಓದುವುದೂ ಕಷ್ಟ. ಆದರೆ ಓದಲು ಸ್ವಾರಸ್ಯಕರ ಎನಿಸುವುದು ಸುಳ್ಳಲ್ಲ.

ಪ್ರೊ| ಆರ್.ಎ.ಕುಮಾರ್‌ರವರ ಲೇಖನಿಯಿಂದ ಕತೆ, ಕಾದಂಬರಿ, ಹಾಸ್ಯಲೇಖನಗಳಂತಹ ಇತರ ಸಾಹಿತ್ಯ ಪ್ರಕಾರಗಳೂ ಹೊರಹೊಮ್ಮಲಿ ಅಂತ ನಾನು ಆಶಿಸುತ್ತೇನೆ.

– **ಜಿ.ವಿ.ಗಣೇಶಯ್ಯ**

ನೀವು ಪ್ರೀತಿಯಿಂದ ಕಳುಹಿಸಿದ 'ಕಂಡದ್ದು – ಕಾಡಿದ್ದು' ಓದಿದೆ. 'ಕಂಡದ್ದು – ಕಾಡಿದ್ದು'' ಕುರಿತು ಅನ್ನಿಸಿದ್ದು, ನಿಮ್ಮ ಎಲ್ಲ ಬರಹಗಳಿಗೆ ಓದಿಸಿಕೊಳ್ಳುವ ಗುಣವಿದೆ. ಅಲ್ಲಲ್ಲಿ ಇರುವ ಹಾಸ್ಯ ನಗೆ ಬರಿಸುತ್ತದೆ. ನಿಮ್ಮ ಅನುಭವಗಳನ್ನು ಹಂಚಿಕೊಂಡಿದ್ದೀರಿ. ನಿಮ್ಮ ಅನುಭವಗಳು ಸಾರ್ವತ್ರಿಕವೂ ಆದಾಗ ಅದಕ್ಕೆ ಸಾಹಿತ್ಯದ ಮೌಲ್ಯ ಬರುತ್ತದೆ. ಆ ಗುಣ ಇದರಲ್ಲಿನಅನೇಕ ಲೇಖನಗಳಿಗಿದೆ. ಒಟ್ಟಿನಲ್ಲಿ ಒಂದು ಒಳ್ಳೆಯ ಹರಟೆಹೊಡೆದ ಅನುಭವವನ್ನು ಇಲ್ಲಿನ ಲೇಖನಗಳು ತಂದುಕೊಟ್ಟವು. ಇದಕ್ಕೆ ಅನುವುಮಾಡಿಕೊಟ್ಟುದಕ್ಕೆ ವಂದನೆಗಳು.

– **ಪ್ರೊ| ಹೆಚ್.ಎಲ್.ಕೇಶವಮೂರ್ತಿ**

ನಿಮ್ಮ 'ಕಂಡಿದ್ದು – ಕಾಡಿದ್ದು' ಹರಟೆಗಳನ್ನು ಉತ್ಸಾಹದಿಂದ ಓದಿಕೊಂಡೆ. ಆರಂಭದಿಂದ ಅಂತ್ಯದವರೆಗೆ ಬಿಡುವೇಕೊಡದೇ ಕೇಳಿಸಿಕೊಂಡೆ. ನಿಮ್ಮ ಧ್ವನಿ ಅಷ್ಟೇ ಅಕ್ಷರಾಕರ್ಷಕ ವಾಗಿದೆ. ಇದು ಅಕ್ಷರಶಃ ಸತ್ಯ. ಅದರಲ್ಲೂ 'ಬಿಳಿಗಿರಿ ರಂಗನ ಬೆಟ್ಟದ' ಬಗೆಗಿನ ನಿಮ್ಮ ಬರವಣಿಗೆ, ದೈತ್ಯ ಶಂಖು ಹುಳುವಿನ ಬಗೆಗೆ ಬರೆದ ಕಥನ, ಉಲ್ಲಾಸದ ಹರಟೆಗಳು ನನಗೆ ಪ್ರಿಯವಾದುವು. ನಿಮ್ಮ ಅನುಭವ ಕಥನಗಾರಿಕೆ, ಶಾಬ್ದಿಕ ಹುರುಪು, ನಮ್ಮ ಒಳಗಿನ ಕದವನ್ನು ತಟ್ಟಿದೆ. ನಿಮ್ಮ ಮುಂದಿನ ಬರವಣಿಗೆಗಳಿಗೆ ಇದು ಹಸಿರು ದೀಪವಾಗಲೀ.

– **ಪ್ರೊ । ಅ.ರಾ.ಮಿತ್ರ**

# ಕಂಡಿದ್ದು-ಕಾಡಿದ್ದು

ಲೇಖಕರು
**ಕುಮಾರ್. ಆರ್.ಎ**

ಪ್ರಕಾಶಕರು
**ದೀಪ್ತಿ ಬುಕ್ ಹೌಸ್**
ನಂ. 285/ಎಫ್6, 5ನೇ ವೆಸ್ಟ್ ಕ್ರಾಸ್
ಉತ್ತರಾದಿಮಠದ ರಸ್ತೆ, ಮೈಸೂರು

# KANDIDDU KADIDDU

*Written by :*

**Kumar R.A.**

Published by :

**Deepti Book House**

No. 285/F6, 5th West Cross,

Uttaradimutt Road, Mysore

| | |
|---|---|
| Pages | : iv +xiv+ 210 = 228 |
| First Edition | : 2016 |
| Copy Right | : Publisher |
| Copies | : 1000 |
| Price | : 185/- |
| ಪುಟಗಳು | : iv +xiv+ 210 = 228 |
| ಮೊದಲ ಮುದ್ರಣ | : 2016 |
| © | : ಪ್ರಕಾಶಕರದ್ದು |
| ಪ್ರತಿಗಳು | : 1000 |
| ಬೆಲೆ | : 185/– |
| ಮುಖಪುಟ ವಿನ್ಯಾಸ | : ಲತಾ ಜಿ.ಪಿ. |
| ಅಕ್ಷರ ಜೋಡಣೆ | : ಕುಮಾರ್ ಆರ್.ಎ |
| ಮುದ್ರಣ | : ದೀಪ್ತಿ ಬುಕ್ ಹೌಸ್, ಮೈಸೂರು |

# ಒಳ್ನುಡಿ

ನಾನು ಭಾಷೆ ಮತ್ತು ಸಾಹಿತ್ಯದ ವಿದ್ಯಾರ್ಥಿ. ಇಡೀ ಬದುಕು ಅವುಗಳನ್ನು ಕಲಿಯುವ ಗ್ರಹಿಸುವ, ಬೋಧಿಸುವ ಆನಂದಾನುಭವಗಳಿಂದ ತುಂಬಿಹೋಗಿದೆ. ಬೇರೆಬೇರೆ ಬಗೆಯ ಕಲೆಗಳಲ್ಲೂ ನನಗೊಂದಿಷ್ಟು ಆಸಕ್ತಿ, ಪ್ರವೇಶ ಇರುವುದರಿಂದ ನನ್ನ ಬದುಕಿಗೊಂದು ಧನ್ಯತೆಯ ಭಾವ ಆವರಿಸಿಕೊಂಡಿದೆ. ಈ ಭಾಷೆ, ಸಾಹಿತ್ಯ, ಕಲೆ ಪ್ರತಿನಿತ್ಯವೂ ಪ್ರತಿಕ್ಷಣವೂ ಎಂತೆಂಥವೋ ವಿಸ್ಮಯಗಳನ್ನು ನನ್ನೆದುರು ತೆರೆದುನಿಲ್ಲಿಸುತ್ತವೆ.

ಹಾಗೆ ನೋಡಿದರೆ, ಕುತೂಹಲದ ಕಣ್ಣಿರುವವರಿಗೆ ನಮ್ಮ ಸುತ್ತಮುತ್ತ ಇರುವ ಯಾವ ವಸ್ತುವಿಷಯಗಳೂ, ಘಟಿಸುವ ಯಾವ ವಿದ್ಯಮಾನಗಳೂ ನಗಣ್ಯವೆನ್ನುವಂತೆಯೇ ಇಲ್ಲ. "ಅಣುವಿನಲ್ಲೂ ಆ ಮಹತ್ತು ಬಿತ್ತದಂತೆ ಮಲಗಿದೆ" ಅನ್ನುತ್ತದೆ ಕವಿವಾಣಿ. ಹೌದಲ್ಲವಾ? ಸಾಸಿವೆಗಿಂತಲೂ ಸಣ್ಣದಾದ ಒಂದು ಆಲದಬೀಜ ಸಾವಿರಾರು ವರ್ಷ ಮೈಚಾಚಿ ಬದುಕಬಲ್ಲ ಒಂದು ಬೃಹತ್ ಆಲದಮರವನ್ನು, ಅಲ್ಲ, ಆಲದಮರಗಳನ್ನು ಧರಿಸಿಕೊಂಡಿರುತ್ತದೆ. ಹಾಗೆಯೇ ಭೂಮಿಯ ಹೊಟ್ಟೆಯೊಳಗೆಲ್ಲಾ ತನ್ನ ಅಸಂಖ್ಯ ಬೇರುಗಳನ್ನು ತುರುಕಿ, ಭೂಮಿಯ ಮೈಮೇಲೆ ಭೀಮಗಾತ್ರದ ಕೊಂಬೆರೆಂಬೆಗಳನ್ನು ಚಾಚಿ ಹರಡಿಕೊಳ್ಳುವ ಅದೊಂದು ಅಧಮ್ಯ ಉತ್ಸಾಹವೂ, ಸಂಕಲ್ಪವೂ ಆ ನಸುರು ಬೀಜದಲ್ಲೇ ಸಾಂದ್ರಗೊಂಡಿರುತ್ತದೆ. ತನ್ನ ಬುಡಕ್ಕೆ ಹಾಕಿದ ಗಬ್ಬುನಾರುವ ಗೊಬ್ಬರವನ್ನು ಸುಗಂಧವಾಗಿ ಪರಿವರ್ತಿಸಿ, ಅಂಥ ಅಚ್ಚ ಬೆಳ್ಳಗಿನ, ಮೃದುಸುಂದರ ಮಲ್ಲಿಗೆಯನ್ನು ಅರಳಿಸಿಕೊಳ್ಳುವ ಶಕ್ತಿ, ಮೈಯಿಡೀ ಹಸುರೇ ಹಸುರಾಗಿರುವ ಬಳ್ಳಿಯ ಅದ್ಯಾವ ಅಗೋಚರ ಕವಾಟದಲ್ಲಿ ಸೇರಿಕೊಂಡಿದೆ? ಅಚ್ಚರಿಯಲ್ಲವೇ? ನಮ್ಮ ಸುತ್ತಣ ಜಗತ್ತು ಇಂಥ ಅಚ್ಚರಿಗಳನ್ನು ನಮ್ಮ ಕಣ್‌ಮುಂದೆ ತೆರೆಯದಿದ್ದರೆ ನಾವ್ಯಾರೂ ಕವಿಗಳಾಗುವುದೋ, ಕಲಾವಿದನಾಗುವುದೋ, ಲೇಖಕನಾಗುವುದೋ, ವಿಜ್ಞಾನಿಯಾಗುವುದೋ ಸಾಧ್ಯ ಆಗುವುದೇ ಇಲ್ಲ. ಅಷ್ಟೆಲ್ಲಾ ಏಕೆ? ಒಂದು ಒಳ್ಳೆಯ ಮನುಷ್ಯಜೀವವಾಗುವುದೂ ಸಾಧ್ಯವಾಗುವುದಿಲ್ಲ.

ಇದಕ್ಕೇ ನಮ್ಮ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ತಮ್ಮೊಂದು ಕವಿತೆಯಲ್ಲಿ ಹೇಳಿಬಿಟ್ಟಿದ್ದಾರೆ –

ನೋಡು ಇದೋ ಇಲ್ಲರಳಿ ನಗುತಿದೆ

ಏಳುಸುತ್ತಿನ ಮಲ್ಲಿಗೆ:

ಇಂಥ ಹಚ್ಚನೆ ಹಸುರು ಗಿಡದಿಂದ

ದೆಂತು ಮೂಡಿತು ಬೆಳ್ಳಗೆ?

'ಭಾಷೆ ಅನ್ನುವುದು ನಮ್ಮ ಮನಸ್ಸಿನ ಭಾವನೆಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಇರುವೊಂದು ಮಾಧ್ಯಮ' ಅನ್ನುವುದು ಭಾಷೆಯ ಉಪಯೋಗದ ಬಗೆಗಿನ ಪ್ರಾಥಮಿಕ ತಿಳಿವಳಿಕೆ ಮಾತ್ರ. ಭಾಷೆಯ ಶಕ್ತಿ, ಸಾಧ್ಯತೆ, ಸಾಮರ್ಥ್ಯಗಳು ಹೇಳಿಮುಗಿಸಲು ಸಾಧ್ಯವಿಲ್ಲದಷ್ಟು. ಭಾಷೆಗೆ ಏನನ್ನಾದರೂ 'ಹೇಳುವುದ'ನ್ನೂ ಮೀರಿ ಒಂದು ಅನುಭವವನ್ನು ಕಟ್ಟುವ, ಸೃಷ್ಟಿಸುವ ಶಕ್ತಿಯೂ ಸಾಧ್ಯತೆಯೂ ಗರ್ಭಸ್ಥವಾಗಿರುತ್ತದೆ. ಹಾಗಾಗಿಯೇ ಭಾಷೆ ಭಾಷೆಯು 'ಅಭಿವ್ಯಕ್ತಿ ಮಾಧ್ಯಮ' ಅನ್ನುವ ಪ್ರಾಥಮಿಕ ಹಂತವನ್ನು ಮೀರಿ ಅದೊಂದು ಕಲೆ, ಮುಕ್ತಿ, ಮೋಕ್ಷ ಅನ್ನುವಎತ್ತರಕ್ಕೆ, ವೈಶಾಲ್ಯಕ್ಕೆ, ಸೌಂದರ್ಯಕ್ಕೆ ಏರುತ್ತದೆ. ಇಂಥ ಹಲಬಗೆಯ ಆಲೋಚನೆಗಳನ್ನು ಮನಸ್ಸಿನಲ್ಲಿರಿಸಿಕೊಂಡೇ ನನ್ನ ಪ್ರೀತಿಯ ಸಜ್ಜನ ಹಿರಿಯರಾದ ಪ್ರೊ ಆರ್.ಎ.ಕುಮಾರ್ ಅವರ ಬರವಣಿಗೆಗಳನ್ನು ಓದಿದ್ದೇನೆ.

'ಹೇಳಿದರೆ ಹಾಳಾಗುವುದು ಅನುಭವದ ಸವಿಯು, ಹೇಳದಿರೆ ತಾಳಲಾರನು ಕವಿಯು' ಅನ್ನುವ 'ಉಭಯ ಸಂಕಟ'ವನ್ನು ಕವಿ ಕುವೆಂಪು ಅವರೇ ಅನುಭವಿಸಿದ್ದಾರೆ. ನಮ್ಮೆಷ್ಟೋ ಹಿರಿಯ ಲೇಖಕರಿಗೆ ಬರೆಯುವುದು ಕಷ್ಟ, ಆದರೆ ಅದಕ್ಕಿಂತಲೂ ದೊಡ್ಡ ಕಷ್ಟ ಬರೆಯದೇ ಇರುವುದು. ಅಂದರೆ ಈ ಮಾತುಗಳ ಅರ್ಥ ಇಷ್ಟೆ. ಸೂಕ್ಷ್ಮ ಮನಸ್ಸಿನಿಂದ ಜಗತ್ತಿನ ಅನುಭವಗಳನ್ನು ಗ್ರಹಿಸುವವರಿಗೆ, ಸೂಕ್ಷ್ಮ ಕಣ್ಣುಗಳಿಂದ ನೋಡುವವರಿಗೆ, ಸೂಕ್ಷ್ಮ ಕಿವಿಗಳಿಂದ ಕೇಳಿಸಿಕೊಳ್ಳುವವನಿಗೆ ಬರೆವ ತುಡಿತ ಬರೆದಲ್ಲದೆ ಮುಗಿಯದು ಅನ್ನುವಷ್ಟು ಅಸಾಧ್ಯವಾಗುತ್ತದೆ.

ಪ್ರೊ ಕುಮಾರ್ ತಮ್ಮ ಬದುಕಿನ ಬಹುಭಾಗ ಕಾಲೇಜಿನ ಮೇಷ್ಟ್ರಾಗಿ, ಕೆಲಕಾಲ ಪ್ರಿನ್ಸಿಪಾಲರಾಗಿ ಕೆಲಸಮಾಡಿದವರು. ಸಾಹಿತ್ಯ ಅವರ ಓದಿನ ವಿಷಯವಲ್ಲ, ಬೋಧನೆಯ ವಿಷಯವೂ ಅಲ್ಲ. ಆದರೆ ಅವರದೊಂದು ಸಹೃದಯೀ ಸೂಕ್ಷ್ಮ ಮನಸ್ಸು. ಸಕಲ ಜೀವಾತ್ಮರಿಗೂ ಲೇಸನೇಬಯಸುವ ಸ್ವಭಾವ. ತನ್ನನ್ನು ತಾನೇ ಯಾವ ಲೌಖಿಕ ಉಪಾಧಿಗಳನ್ನೂ ಲೆಕ್ಕಿಸದೆಗೇಲಿಮಾಡಿಕೊಳ್ಳುವ ಧಾರಾಳತನ. ಒಂದಿಷ್ಟೂ ಜಂಬ. ಗತ್ತು. ಹಮ್ಮು ಅಹಂಕಾರಗಳಿಲ್ಲದ ವ್ಯಕ್ತಿತ್ವ. ಈ ಪುಸ್ತಕದ ಬರಹಗಳ ಕಲಾತ್ಮಕತೆ ಇತ್ಯಾದಿಗಳ ಬಗೆಗೆ ಆಮೇಲೆ ಮಾತಾಡುವ. ಇಲ್ಲಿ ಸಾಮಾನ್ಯ ಮನುಷ್ಯನೊಬ್ಬನ

ಬದುಕಿನಲ್ಲಿ ಎದುರಾಗುವ ಸಾಮಾನ್ಯ ವಿಷಯಗಳು, ಘಟಿಸುವ ಮಾಮೂಲು ಸಂಗತಿಗಳು ಪ್ರೊ|| ಕುಮಾರ್‌ರವರ ಲೇಖನಿಯ ವಸ್ತುಗಳಾಗಿವೆ. ಕುಮಾರ್ ಅವರ ಆಸಕ್ತಿಯೇ ಹರಟೆಯಾದುದರಿಂದ ಆ ವಿಷಯ ಸಂಗತಿಗಳನ್ನು ಲಘುಧಾಟಿಯಲ್ಲಿ ನಿರೂಪಿಸುತ್ತಾ ಹೋಗುತ್ತಾರೆ. ತರಕಾರಿಯವರು, ಪಾನೀಪೂರಿಯವರು, ತಮ್ಮ ಸಹೋದ್ಯೋಗಿಗಳು, ಸ್ನೇಹಿತರು, ಮಡದಿ ಮುಂತಾದ ವರೆಲ್ಲರೂ ಈ ಹರಟೆಯ ಪಾತ್ರಗಳಾಗಿ ಬಂದುಹೋಗುತ್ತಾರೆ. ಆಯಾ ಸಂದರ್ಭ ಸನ್ನಿವೇಶಗಳಿಗೆ ಅನುಗುಣವಾಗಿ ಭಾಷೆ ಗ್ರಾಂಥಿಕವೋ, ಆಡುಮಾತೋ ಆಗುತ್ತದೆ.

'ಮಾತು' ಅಂದದ್ದಕ್ಕಾಗಿ ಇಲ್ಲೇ ಹೇಳಿಬಿಡುತ್ತೇನೆ. ಈ ಲೇಖಕರಿಗೆ ಭಾಷೆ ಮತ್ತು ಆಡು ಭಾಷೆ ಇವೆರಡೂ ತೀವ್ರ ಆಸಕ್ತಿಯ ವಿಷಯಗಳಾಗಿರುವುದರಿಂದ ಅವುಗಳ ಬಗ್ಗೆಯೇ ನಾಲ್ಕೈದು ಲೇಖನಗಳಿವೆ. ಭಾಷೆಯಿಂದಾಗುವ ತಮಾಷೆ ಪ್ರಸಂಗಗಳಿವೆ.

ತಮ್ಮ ವೃತ್ತಿಜೀವನವನ್ನು ಮಂಡ್ಯದಲ್ಲೇ ನಡೆಸಿರುವ ಪ್ರೊ|| ಕುಮಾರ್ ಮಂಡ್ಯದ ಬದುಕನ್ನು ಅಂಗುಲಂಗುಲ ಬದುಕಿದ್ದಾರೆ. ಮಂಡ್ಯ ಎಂಬುದು ಒಂದು ಊರಿನ, ಒಂದು ಜಿಲ್ಲೆಯ ಹೆಸರು ಮಾತ್ರವಲ್ಲ. ಮಂಡ್ಯಕ್ಕೇ ಒಂದು ಬದುಕಿನ ಶೈಲಿ ಇದೆ. ಆ ಶೈಲಿಯು ಅಲ್ಲಿನ ಭೌಗೋಳಿಕ ಪರಿಸರ, ಕೃಷಿಪದ್ಧತಿ, ಸಾಮಾಜಿಕ ವೈವಿಧ್ಯ, ಆರ್ಥಿಕ ಸ್ಥಿತಿಗತಿ ಇತ್ಯಾದಿಯಾದ ಹಲವು ವಿಷಯಗಳಿಂದ ರೂಪುಗೊಂಡಿದ್ದು, ಸಹಜವಾಗಿಯೇ ಮಂಡ್ಯದ ಆಡುಭಾಷೆಯಲ್ಲೂ ಮೇಲೆಹೇಳಿದ ಎಲ್ಲಾ ಸಂಗತಿಗಳೂ ಮುದ್ರಿತವಾಗಿವೆ. ಅಲ್ಲಿಯ ಜನರ ಸ್ವಭಾವದ ಮೇಲೂ ಆ ಎಲ್ಲ ಸಂಗತಿಗಳ ಪ್ರಭಾವ ಇದ್ದೇ ಇದೆ. ಪ್ರೊ|| ಕುಮಾರ್ ಅವರ ಹರಟೆಗಳಲ್ಲಿ, ಚಿಂತನೆಗಳಲ್ಲಿ ಅದೆಲ್ಲವೂ ದೀಪ್ತಗೊಂಡಿರುವುದು ಢಾಳವಾಗಿಯೇ ಕಾಣಿಸುತ್ತದೆ.

ಇಲ್ಲಿಯ ಲೇಖನಗಳಿಗೆ ಏಕಸೂತ್ರತೆಯ ಹಂಗಿಲ್ಲ. ಆಯಾ ಸಂದರ್ಭ ಸನ್ನಿವೇಶಗಳಲ್ಲಿ – ಅದು ವೈಯುಕ್ತಿಕವಾಗಿರಬಹುದು, ಸಾಮಾಜಿಕವಾಗಿರಬಹುದು – ಯಾವುದು ತಟಕ್ಕನೆ ತಮ್ಮ ಲೇಖನಿಗೆ ಒದಗಿತೋ ಅದನ್ನು ಕುರಿತೇ ಪ್ರೊ|| ಕುಮಾರ್ ಬರೆದಿದ್ದಾರೆ. ಅವರು ಅದನ್ನು ತೋಚಿದಂತೆ ಗೀಚಿದ್ದೇನೆ ಅಂದುಬಿಡುತ್ತಾರೆ. ಅದು ಅವರ ವಿನಯವೂ ಹೌದು. ಆದರೆ ಈ 'ಕಂಡಿದ್ದು – ಕಾಡಿದ್ದು' ಸಜ್ಜನ ವಿದ್ಯಾವಂತನೊಬ್ಬನ ತತ್‌ಕ್ಷಣದ ನೋಟಗಳನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ.

ಬರವಣಿಗೆಯ ಕೌಶಲ, ಕಲಾತ್ಮಕತೆಗಳ ದೃಷ್ಟಿಯಿಂದ ಪ್ರೊ||ಕುಮಾರ್ ಹವ್ಯಾಸಿಯಷ್ಟೇ ಹೊರತು ವೃತ್ತಿವಂತರಲ್ಲ. ಆದರೆ ಆ ಹವ್ಯಾಸದಲ್ಲಿ ಒಂದು ಪ್ರಾಮಾಣಿಕ ತುಡಿತವಿದೆ, ಕಾಳಜಿಗಳಿವೆ, ಆರೋಗ್ಯಕರ ಅಭಿಪ್ರಾಯಗಳಿವೆ, ನೇರಾನೇರ ನಿರೂಪಣೆಯಿದೆ. ಬಹುಶಃ ಈ ಗುಣಗಳೇ ಈ ಲೇಖನಗಳನ್ನು ಖುಷಿಯಾಗಿ ಓದಿಸಿಕೊಳ್ಳುತ್ತವೆ.

# ಲೇಖಕರ ನುಡಿ

ನನ್ನ ಈ ಗೀಚುವಿಕೆಗೆ ಪೇಪರ್ ಪೆನ್ ಮೊದಲ ಸಲ ನೀಡಿ ಪ್ರೋತ್ಸಾಹಿಸಿದ್ದು ನನ್ನ ಗೆಳೆಯ 'ಕೊಳಲು' ಶ್ರೀಪಾದು. ಅವರು ಆರಂಭಿಸಿದ 'ಕೊಳಲು' ವಾರಪತ್ರಿಕೆಯಲ್ಲಿ ನನ್ನನ್ನು ಏನಾದರೂ ಬರೆದುಕೊಡಿ ಅಂತ ದುಂಬಾಲುಬಿದ್ದಾಗ ನನ್ನ ಮನಸ್ಸಿನಲ್ಲಿ, ನನಗೆ ಜೀವನಪೂರ್ತಿ ಅನ್ನನೀಡಿದ ಮಂಡ್ಯ ಜಿಲ್ಲೆಯ ಜನರ ಆಡುಭಾಷೆ ಕನ್ನಡದ ಶೈಲಿಯಲ್ಲಿ ಯಾಕೆ ಏನಾದರೂ ಬರೆಯಬಾರದು ಅನ್ನಿಸಿತು. ಸರಿ ಪೆನ್ ಕೈಯಲ್ಲಿ ಹಿಡಿದು ಅಂದಿನ ಕಾಲಘಟ್ಟದಲ್ಲಿ ನಡೆದ, ವಿವಿಧ ಮಾಧ್ಯಮಗಳಲ್ಲಿ ಬಿತ್ತರಿಸಲ್ಪಟ್ಟ ಸುತ್ತಮುತ್ತಲ ಘಟನೆಗಳನ್ನೇ ಆಧರಿಸಿ, ಸ್ವಲ್ಪ ವ್ಯಂಗ್ಯಸೇರಿಸಿ ಬರೆದುಕೊಡಲು ಪ್ರಾರಂಭಿಸಿದೆ. ನನ್ನ ಮೊದಲ ಗಮನ ಸೆಳೆದಿದ್ದು ಕರ್ನಾಟಕದವರೇ ಆಗಿರುವ, ಆದರೂ ಕಾವೇರಿ ವಿಷಯದಲ್ಲಿ ಮಗ್ಗುಲಮುಳ್ಳಾಗಿರುವ, ಇದುವರೆವಿಗೂ ತಮಿಳುನಾಡಿನ ಏಕೈಕ ಮಹಿಳಾ ಮುಖ್ಯಮಂತ್ರಿಯಾಗಿ ಮೆರೆದ'ಕುಮಾರಿ ಜಯಲಲಿತಾ ಉಪವಾಸ ಸತ್ಯಾಗ್ರಹ'. ಹೀಗೆ "ಆರ್ಯೆ" ಅನ್ನುವ ಗುಪ್ತನಾಮದಿಂದ 'ಸತ್ಯಾಗ್ರಹ-ಚಳುವಳಿ' ನನ್ನ ಮೊದಲ ಬರವಣಿಗೆಯಾಗಿ 1993 ರ ಜುಲೈ 29 ರ ಸಂಚಿಕೆಯಲ್ಲಿ ಪ್ರಕಟಗೊಂಡಿತು.

ನನ್ನ ಗೆಳೆಯ ನನಗಾಗೇ ಒಂದು 'ಬುರುಡೆ' ಎಂಬ ಅಂಕಣ ಇಟ್ಟು, ಅದರಲ್ಲಿ ನನಗೆ ತೋಚಿದ್ದನ್ನು ಬರೆಯಲು ಅವಕಾಶ ಮಾಡಿಕೊಟ್ಟುದರಿಂದ ಪ್ರತಿವಾರಕ್ಕೊಂದು ಐಟಂ ಹೊಂದಿಸಬೇಕಾಗಿಬಂತು. ಕಿವಿ ತೆರೆದಿಟ್ಟುಕೊಂಡು, ಕಣ್ಣಾಗಲಿಸಿ ನೋಡುತ್ತಾ, ವಿಷಯಗಳಿಗಾಗಿ ತಡಕಾಡುತ್ತಾ ನಡೆದೆ. ಒಂದರಮೇಲೆ ಒಂದರಂತೆ (29ರ ಜುಲೈ 1993 ರಿಂದ 10ರ [illegible] 1994 ವರೆಗೆ)ಒಟ್ಟು 30 ರಿಂದ 35 ಸಂಚಿಕೆಗಳಿಗೆ ಬರೆಯು[illegible] ನನ್ನ ಕೈಗೆ ಸೋಮಾರಿತನ ಬಡಿದುಕೊಂಡಿತೋ, ಅಥವಾ ನನ್ನ [illegible] ಬತ್ತಿಹೋಯಿತೋ ನನ್ನ ಅಂಕಣ 'ಬುರುಡೆ' ಟುಸ್ಸೆಂದು ಗಾಳಿ ಹೋದ ಬಲೂನಿನಂತೆ ಮುದುರಿಹೋಯಿತು.

ಅಂತೆಯೇ ಈ ಹೊತ್ತಿಗೆಯಲ್ಲಿನ ಮುಕ್ಕಾಲು ಪಾಲು ಲೇಖನಗಳು 'ಕೊಳಲು' ಶ್ರೀಪಾದುವಿಗೆ ಆಭಾರಿಯಾಗಿರುವಂತಹವು. ಇನ್ನು ಕೆಲವು ಲೇಖನಗಳು ಕಾಲೇಜಿನ ವಾರ್ಷಿಕ ಸಂಚಿಕೆಗಾಗಿ ಬರೆದುಕೊಟ್ಟಂತಹವು. ಮತ್ತೆರಡು ಲೇಖನಗಳು ವಿಶೇಷ ಸಂದರ್ಭಗಳಲ್ಲಿ ಹೊರತಂದ ಸ್ಮರಣ ಸಂಚಿಕೆಗಳಿಗಾಗಿ ಬರೆದಂತಹವು. ನಮ್ಮ ಅತ್ತೆಮಾವನವರ ಬಗೆಗೆ ಬರೆದ "ಬಿಳಿಗಿರಿ ಬನದಲ್ಲಿ ಪದ್ಮ–ಸೀತಾರಾಮ್ ದಂಪತಿಗಳ ಬದುಕು–ಬವಣೆ" "ಸಿಂಗಾರಿ" ಅನ್ನುವ 'ವೆಬ್ ಮ್ಯಾಗಜೀನ್' ನಲ್ಲಿ ಪ್ರಕಟವಾಯಿತು. ನನ್ನ 'ವಾಕಿಂಗ್ ನೋ ವಾಕಿಂಗ್' ರಾ.ಶಿ.ಯವರ ಮಗ ಶಿವಕುಮಾರ್ ನಡೆಸುತ್ತಿದ್ದ 'ಅಪರಂಜಿ' ಮಾಸಪತ್ರಿಕೆಯಲ್ಲಿ ಪ್ರಕಟಣೆ ಕಂಡಿತು.

ಈಗ್ಗೆ ಕೆಲವು ತಿಂಗಳ ಕೆಳಗೆ, ಮೈಸೂರಿನಲ್ಲಿ ಗೆಳೆಯರೊಬ್ಬರ ಪುಸ್ತಕ ಬಿಡುಗಡೆ ಸಮಾರಂಭವೊಂದರಲ್ಲಿ ಪ್ರೊಫೆಸರ್ ಶ್ರೀ ಹೆಚ್.ಎಲ್. ಕೇಶವಮೂರ್ತಿಗಳ ಭೇಟಿಯ ಸದಾವಕಾಶ ಒದಗಿಬಂತು. ಪರಸ್ಪರ ನಮಸ್ಕಾರ ವಿನಿಮಯದ ನಂತರ ಸಮಾರಂಭದ ಕೊನೆಯಲ್ಲಿ ಅವರ ಮಾತುಗಳಿಂದ ಖುಷಿಪಟ್ಟಿದ್ದ ನಾನು, ಅವರೊಂದಿಗೆ 'ಸಾರ್, ನಾನೂ ನಿಮ್ಮ ಹಾಸ್ಯಲೇಖನಗಳಿಂದ ಪ್ರೇರೇಪಣೆಗೊಂಡು ಕೆಲವು ಲೇಖನಗಳನ್ನು ಗೀಚಿದ್ದೇನೆ' ಅಂದೆ. ಅವರು ಒಡನೆಯೇ 'ಕುಮಾರ್, ಅವುಗಳನ್ನು ನನಗೆ ಕಳುಹಿಸಿಕೊಡಿ' ಅಂದುಬಿಡೋದೇ! ನನಗೋ ಆಶ್ಚರ್ಯ ಮತ್ತು ಸಂಕೋಚ ಎರಡೂ ಒಮ್ಮೆಗೇ ಆದುವು. ಅವರ ಬಳಿಯಿದ್ದ ಕಾಗದದ ಚೂರೊಂದರಲ್ಲಿ ತಮ್ಮ ಮನೆವಿಳಾಸ ಬರೆದೂಕೊಟ್ಟರು.

ಮತ್ತೆರಡು ದಿನ ಬಿಟ್ಟುಕೊಂಡು ಅವರೇ ನೀಡಿದ್ದ ಅಂಚೆವಿಳಾಸಕ್ಕೆ ನನ್ನೆರಡು ಕಿರು ಹೊತ್ತಿಗೆಗಳನ್ನು ಕುರಿಯರ್ ಮಾಡಿದೆ. ಸುಮಾರು ದಿನಗಳಾದರೂ ಪ್ರತ್ಯುತ್ತರ ಬರಲಿಲ್ಲ. ನನಗಾದರೋ ನನ್ನ ಅಂಚೆ ಅವರನ್ನು ತಲುಪಿದೆಯೋ ಇಲ್ಲವೋ ಎನ್ನುವುದೇ ಸಂದೇಹವಾಗತೊಡಗಿತು. ಅವರನ್ನು ಸಂಪರ್ಕಿಸಲು ಸಂಕೋಚ, ನನ್ನ ಮಂಡ್ಯ ಗೆಳೆಯರಮೂಲಕ ಅವರ ದೂರವಾಣಿ ಸಂಖ್ಯೆ ಪಡೆಯಲು ಪ್ರಯತ್ನಿಸಿದೆ. ಅದೂ ಸಫಲವಾಗಲಿಲ್ಲ.

ಇದ್ದಕ್ಕಿದ್ದಂತೆ ಒಂದು ದಿನ ಅಂಚೆಯಣ್ಣ ಮನೆಗೇಟಿಗೆ ಕವರೊಂದನ್ನು ಸಿಕ್ಕಿಸಿ ಹೋಗಿದ್ದ. ನಾನು ಕೆಲಸದ ಕಾರಣ ಹೊರಹೋಗಿದ್ದುದರಿಂದ, ನನ್ನ ಶ್ರೀಮತಿ ಅದನ್ನು ತೆಗೆದಿಟ್ಟಿದ್ದರು. ಮನೆಗೆ ವಾಪಸಾದಾಗ ಕವರನ್ನು ಕೈಗಿತ್ತರು. ಕವರು ಮೇಲಿನ ವಿಳಾಸನೋಡಿದರೆ, ನನ್ನ ಕಣ್ಣುಗಳನ್ನು ನನಗೆ ನಂಬಲಾಗಲಿಲ್ಲ; ಕಾರಣ ಆ ಪತ್ರ ಬಂದಿದ್ದು ಶ್ರೀ ಹೆಚ್.ಎಲ್.ಕೇಶವಮೂರ್ತಿಗಳಿಂದ! ಕುತೂಹಲ

ಮತ್ತೂ ಹೆಚ್ಚಿತು. ಕವರ್ ಸೈಜ್ ನೋಡಿದರೆ ನನ್ನ ಕಿರುಹೊತ್ತಿಗೆಗಳು ವಾಪಸಾದ ಹಾಗಿರಲಿಲ್ಲ. ಒಳಗೇನು ಬರೆದಿರುವರೋ ಅನ್ನೋ ಕುತೂಹಲ. ಪತ್ರ ಓದಲು ಪ್ರಾರಂಭಿಸಿದೆ, ಮೊದಲ ಸಾಲಿನಲ್ಲೇ ಒಂದು ಹೊಡೆತ! 'ಕುಮಾರ್, ನಿಮ್ಮ ಲೇಖನದ 'ಫಾಂಟ್‌ಗಳು' ತೀರ ಚಿಕ್ಕವಿವೆ.ಓದಲು ಈ ಮುದಿಕಣ್ಣುಗಳಿಗೆ ತ್ರಾಸದಾಯಕವಾಗಿವೆ'. ಶ್ರೀ ಕೇಶವಮೂರ್ತಿಗಳು ಅದನ್ನು ಕಷ್ಟಪಟ್ಟು ಓದಿ ತಮ್ಮ ಸರ್ಜರಿ (ವಿಮರ್ಶೆ)ಮಾಡಿದ್ದಾರೆ. ಅವರ ಸರ್ಜರಿಯಿಂದಲೇ ಅವರು ನಾನು ಬರೆದಿರುವ/ ಮುದ್ರಿಸಿರುವ ಪ್ರತಿಪದವನ್ನೂ ಎಷ್ಟು ಸೂಕ್ಷ್ಮವಾಗಿ ಗಮನಿಸಿದ್ದಾರೆ ಎನ್ನುವುದು ನನಗೆ ಹೆಮ್ಮೆಯ ವಿಷಯ. ಇದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲಲೇಬೇಕು. ಈ ಪುಸ್ತಕಕ್ಕೆ ಅಂದವಾದ ಮುನ್ನುಡಿ ಬರೆದುಕೊಟ್ಟ ಪ್ರೊ. ಎಂ. ಕೃಷ್ಣೇಗೌಡ, ಬೆನ್ನುಡಿ ಅನುಗ್ರಹಿಸಿದ ಪ್ರೊ. ಅ.ರಾ. ಮಿತ್ರ, ಪ್ರೊ. ಹೆಚ್. ಎಲ್. ಕೇಶವಮೂರ್ತಿ ಮತ್ತು ವ್ಯಂಗ್ಯ ಚಿತ್ರಕಾರ ಹಾಗೂ ಹಾಸ್ಯ ಬರಹಗಾರ ಶ್ರೀ ಜಿ.ವಿ. ಗಣೇಶಯ್ಯರವರಿಗೆ ನಾನು ಆಭಾರಿ. ಪುಸ್ತಕವನ್ನು ಪ್ರಕಟಿಸಿದ ದೀಪ್ತಿ ಬುಕ್ ಹೌಸ್, ಮೈಸೂರು ಇವರಿಗೆ ತುಂಬು ಹೃದಯದ ಕೃತಜ್ಞತೆಗಳು.

**ಕುಮಾರ್ ಆರ್. ಎ.**

# ಪರಿವಿಡಿ


| ಕ್ರ ಸಂಖ್ಯೆ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| 01 | ಗೋವಿಂದಾ, ಗೋವಿಂದಾ | 1–3 |
| 02 | ಈಂಗೊಂದು ಭೀಷ್ಮ ಕಥೆ | 4–5 |
| 03 | ಕೃಷ್ಣಸುಂದರಿ ಪ್ರತ್ಯಕ್ಷ | 6–7 |
| 04 | ನಾ ಮೆಚ್ಚಿದ ಜಾಹಿರಾತು | 8–11 |
| 05 | ಶಿಕ್ಷಣ ಬದಲಾವಣೆ | 12–14 |
| 06 | ಆ ದೇವ್ರಿಗೇ ಸಂಕಟ ಬಂದಾಗ | 15–16 |
| 07 | ಕಾಲಾಯ ತಸ್ಮೈ ನಮಃ | 17–19 |
| 08 | ಮುಖ(ಅವ)ಲಕ್ಷಣ | 20–25 |
| 09 | ಕನ್ನಡ ಭಾಷೇಲಾಗೋ ಆಭಾಸ | 26–27 |
| 10 | ಏಟಿಗೆ ಸಿಕ್ಕದವರು | 28–30 |
| 11 | ನಟನೆ – ಒಂದು ಹವ್ಯಾಸ | 31–33 |
| 12 | ಟೋಪಿ ಆಕ್ತಾರಪ್ಪೋ ಟೋಪಿ | 34–35 |
| 13 | ಪೆದ್ದಣ್ಣನ ಹಾಸ್ಯ ಪ್ರಸಂಗಗಳು – ವಿವಿಧ ಮೂಲಗಳಿಂದ ಕದ್ದಿದ್ದು | 36–41 |
| 14 | ಗಸ್ತುತಿರುಗಿ ಗನ್ನು ಹಿಡಿದರು | 42–43 |
| 15 | ಸಾವು ತಂದ ಪರದಾಟ | 44–46 |
| 16 | ಸಾವು ತಂದ ಪರದಾಟ – ಭಾಗ 2 | 47–50 |
| 17 | ನಿವೃತ್ತಿ | 51–54 |

| | | |
|---|---|---|
| 18 | ದಸರಾ ಬೇಕಾಗಿರೋದು ಯಾರಿಗೆ ಅಂದ್ಕೊಂಡಿದೀಯಾ | 55–56 |
| 19 | ಕಳೆದುಕೊಂಡ ನೋವು | 57–59 |
| 20 | ಐನಾತಿ ಮೈಗಳ್ಳರು | 60–63 |
| 21 | ಮೈಸೂರಿನಲ್ಲಿ ಮೊದಲ ಸಾಹಿತ್ಯದಾಸೋಹ | 64–70 |
| 22 | ಲೈವ್ ಫುಡ್ ಫ್ಯಾಷನ್ ಅಂದ್ರೆ | 71–72 |
| 23 | ಆಧಾರ್ ಎಂಬ ಮಂತ್ರದಂಡ | 73–75 |
| 24 | ಈ ಭಾರಿಯ ಗಣರಾಜ್ಯೋತ್ಸವ ಹೀಗಿತ್ತು | 76–77 |
| 25 | ಜಾಗ ಇದ್ದಲ್ಲೆಲ್ಲಾ ಸಸಿ ನಡ್ತೀವಿ | 78–79 |
| 26 | (ತಲೆ)ಹರಟೆ | 80–83 |
| 27 | ಈ ಜಗತ್ತಿನಲ್ಲಿ ಬಿಟ್ಟಿ ಎಂಬುದು ಯಾವುದೂ ಇಲ್ಲ | 84–87 |
| 28 | ಆಗಸ್ಟ್ 15ಕ್ಕೂ ಜನ್ವರಿ 26ಕ್ಕೂ ಯತ್ವಾಸ ಏನ್ಲಾ | 88–89 |
| 29 | ಎಚ್ಚರ ಗ್ರಾಹಕ ಎಚ್ಚರ | 90–92 |
| 30 | ಸೀರಿಯಲ್ ಎಂಬ ದುರಂತ | 93–96 |
| 31 | ಬುದ್ವಂತ ಎಮ್ಮೆ ಮಾಡ್ಕಂಡ್ ಎಡ್ತಿ ಕಟ್ಕೊಂಡವ್ನೆ | 97–98 |
| 32 | ಇನ್ನೊಂದು ಮುಖ | 99–102 |
| 33 | ಮನರಂಜನೆ – ಪರಿಮಾಣ, ಪರಿಣಾಮ | 103–107 |
| 34 | ಅವು ನಿಜವಾಗಿಯೂ ಮೂಢನಂಬಿಕೆಗಳಾ | 108–110 |
| 35 | ಅಂಗವೈಕಲ್ಯಕ್ಕೆ ಸವಾಲೆಸೆದ ಧೀರರು | 111–113 |
| 36 | ದೈತ್ಯ ಶಂಖು ಹುಳು | 114–116 |
| 37 | ಸ್ವಚ್ಛ ಭಾರತ್ ಉರುಫ್ ಸ್ವಚ್ಛ ಭಾರತ್ | 117–118 |
| 38 | ಕಮರಿದ ಕನಸು | 119–121 |
| 39 | ಸೀಮೆಣ್ಣೇನಾ ಸಿಲಿಂಡ್ರಾ | 122–123 |
| 40 | ಭಾಷಣ/ಬರೆಯುವ ಕಲೆ | 124–126 |
| 41 | ಅದು ಹೋಯ್ತು ಇದು ಬಂತು ಡುಂ ಡುಂ | 127–129 |
| 42 | ಶುಕವನ ದರ್ಶನ | 130–132 |
| 43 | ಮೊಲದ ಬೇಟೆ | 133–136 |

| | | |
|---|---|---|
| 44 | ಅನವಶ್ಯಕ ಸ್ಪರ್ಧೆ ಯಾಕೆ | 137–139 |
| 45 | ಆ ದೇಶದವ್ರು ಮೂರೇ ಸ್ಟೇಜ್ ಮಾಡಿದ್ರು | 140–141 |
| 46 | 90 ರೂ.ಗೆ ಪೇಟೇಲಿ ಮಾರೋ ಬೆಣ್ಣೆ ಮನೆಮುಂದೇ 60 ರೂ.ಗೆ | 142–143 |
| 47 | ಮಾರ್ಜಾಲ ಪುರಾಣಂ | 144–146 |
| 48 | ಚಪ್ಪಲಿಗಳು | 147–149 |
| 49 | ಭಾಷಾ ದುರಭಿಮಾನ | 150–152 |
| 50 | ಹೆಸರಿನಲ್ಲೇನಿದೆ | 153–157 |
| 51 | ಸಾಕ್ಷರದಾಟ ಆಡುಮಾ | 158–159 |
| 52 | ಕವಿಮಂ ಅಂದ್ರೆ ಏನ್ಲಾ ಸಿವಾ | 160–161 |
| 53 | ಕಂತ್ರಿ ಕ್ಲಬ್ ಸಾವಾಸ | 162–165 |
| 54 | ಭ್ಲಾಷಾ ವ್ಯಾಕರಣ | 166–167 |
| 55 | ರೆಕಾರ್ಡ್,, ರೆಕಾರ್ಡ್ | 168–169 |
| 56 | ವಾಕಿಂಗ್ ನೋ ವಾಕಿಂಗ್ | 170–175 |
| 57 | ಆನೆ ಬಂತು ಆನೆ | 176–177 |
| 58 | ತಲೆ ಕೆಡ್ಸೋ ವಿಜ್ಞಾನಿಗಳು | 178–179 |
| 59 | ಆ ಮೂರು ಘಟನೆಗಳು | 180–181 |
| 60 | ಟಮೇಟೋ ಬಿನೀಸು, ಸೌತೇಕಾಯ್ ತರಕಾರೀ | 182–185 |
| 61 | ಕಾಲೇಜಿನ ಆ ದಿನಗಳು | 186–194 |
| 62 | ಮೌನ ಕ್ರಾಂತಿ | 195–196 |
| 63 | ಹೊರಗಡೆ ತಿಂಡಿತಿನ್ನಲು ಹಾತೊರೆಯುವುದೇಕೆ | 197–199 |
| 64 | ನಾನು ಅವ(ನಾ/ಳಾ)ಗಿದ್ದರೆ | 200–202 |
| 65 | ಪದ್ಮ ಸೀತಾರಾಮ್ ದಂಪತಿಗಳ ಬದುಕು ಬವಣೆ | 203–208 |
| 66 | ಒಳಗಿನಿಂದ ರಕ್ತ ಸುರಿಯುತ್ತಿದೆ | 209–210 |

# 1. ಗೋವಿಂದಾ.... ಗೋವಿಂದಾ!

**ಗೋ**ವಿಂದಾ.... ಗೋವಿಂದಾ, ಏಡುಕೊಂಡಲವಾಡಾ, ಗೋವಿಂದಾ.. ಗೋವಿಂದಾ, ತಿರುಪತಿವೆಂಕಟರಮಣಾ, ತಿಮ್ಮಪ್ಪಾ ನಮ್ಮಪ್ಪಾ, ಕಾಪಾಡಪ್ಪ ಗೋವಿಂದಾ... ಗೋವಿಂದ ಇವು ಆಗಾಗ ದಕ್ಷಿಣದ ರಾಜ್ಯಗಳಲ್ಲಿ ಕೇಳಿಬರುವ ಸ್ಲೋಗನ್ನುಗಳು. ಅದರಲ್ಲೂ ಶ್ರಾವಣ ಶನಿವಾರಗಳಂದು ಇವು ಜಾಸ್ತಿ. ಇದರೊಟ್ಟಿಗೆ ನಾವು ಚಿಕ್ಕವರಿದ್ದಾಗ, ಶಾಲೆಗೆ ಹೋಗುವ ಮುಂಚೆ, ನಾಚಿಕೆಯಿಂದ, ಮನೆಯವರ ಆದೇಶದ ಮೇಲೆ ಮನೆ ಮನೆಗೂ ಹೋಗಿ ಬಾಗಿಲ ಮುಂದೆ ನಿಂತು 'ವೆಂಕಟೇಶಾಯ ಮಂಗಳಂ' ಅಂದ್ರೆ ಮನೆಯವರು ಹಿಡಿ ಬಿಕ್ಷೆ ಹಾಕುತ್ತಿದ್ದುದು ನೆನಪಿಗೆ ಬರುತ್ತದೆ ಅಲ್ಲವೇ? ಆದರೆ ಇಂದು ಅದು ಒಂದು ದಂದೆಂರೋ ಎಂಬಂತೆ ಆಗಿದೆ. ಶ್ರಾವಣಮಾಸದ ಶನಿವಾರಗಳಲ್ಲಿ ಹತ್ತಾರು ಮಕ್ಕಳು ಬೆಳ್ಳಂಬೆಳಿಗ್ಗೆ ಮನೆಮುಂದೆ ಒಂದೊಂದು ಜೋಳಿಗೆ ಹೆಗಲಿಗೆ ಏರಿಸಿಕೊಂಡು, ಕೈಯಲ್ಲಿ ಒಂದು ಚೊಂಬು ಹಿಡಿದುಕೊಂಡು ಜೋರುದನಿಯಲ್ಲಿ ಹೇಳುತ್ತಿರುವುದು "ಶ್ರೀರಾಮ ಗೋವಿಂದಾ, ಗೋವಿಂದ". ನನಗೋ ಪರಮಾಶ್ಚರ್ಯ! ಶ್ರೀರಾಮನಿಗೂ  ಗೋವಿಂದನಿಗೂ ಎತ್ತಣೆತ್ತಣ ಸಂಬಂಧವಯ್ಯಾ ಅಂತಾ. ನನಗೇನೂ ಹೊಳೆಯಲೂ ಇಲ್ಲ. ನನ್ನ ಮಡದಿಯ ಬಳಿ ಚರ್ಚಿಸಿದಾಗ ಅವಳು ವಿಶ್ಲೇಷಣೆ ಹೀಗಿತ್ತು. 'ಈ ಮಕ್ಕಳ ಬಾಯಲ್ಲಿ "ಶ್ರೀಮದ್ ರಮಾರಮಣ ಗೋವಿಂದಾ ಗೋವಿಂದ" ಹೋಗಿ 'ಶ್ರೀರಾಮ ಗೋವಿಂದಾ ಗೋವಿಂದ' ಆಗಿಹೋಗಿದೆ. ಮುಂಡೇವ್ಗಳ ನಾಲ್ಗೆ ಹೊರಳೊಲ್ಲ ನೋಡಿ' ಅಂದಾಗ, ನನಗೆ ಅರ್ಥವಾಯ್ತು ಈ ಅಪಭ್ರಂಶ ಪದಸಮೂಹ.

ಅಲ್ಲಾ ಇದ್ಯಾಕೆ ಈಗ ನೆನಪಿಗೆ ಬಂತು ಅಂತೀರಾ! ಈ ಕೆಳಗಿನ ಪ್ರಸಂಗ ಓದಿ.

ಲೇ ಎದ್ದೇಳ್ಲಾ, ಇನ್ನು ಏನ್ ದಬ್ಬಾಕೊಂಡು ಮಕಾಡೆ ಮಲಗಿದ್ದೀ? ಗೋವಿಂದಾ ಗೋವಿಂದಾ ತಿಮ್ಮಪ್ಪಾ ಅಂತಾ ಬಾಯಿ ಬಡ್ಕಂತಾ ಇದೀಯ? ನೀನು ಮನಗಿರೋದು ಹನ್ಕೆರೆ ಹಗ್ಗದ ಮಂಚದಮೇಲೆ, ತಿಮ್ಮಪ್ಪನ ಕೋಣೇಲಲ್ಲಾ. ಯಾರ್‍ಯಾರೋ ಎಂತೆಂತದೋ ಥ್ರಿಲಿಂಗ್ ಕನಸನ್ನು ಕಾಣ್ತಾರೆ. ನೀನೋಡಿದ್ರೆ ಆ ತಿಮ್ಮಪ್ಪನ ಕನಸು ಕಾಣ್ತಾ ಇದೀಯಲ್ಲಾ ಅಂತಾ ನಾ ಬಡಕೊಂತಾ ಇದ್ರೆ, ಮನಗಿದ್ದವನ್ದೇ ಬೇರೆ ರಾಗ.. ಲೋ ನಿಂಗೇನ್ಸಂತೋ ಧಾಡಿ! ಸಲ್ಪದರಲ್ಲೇ ತಪ್ಪಿಸ್ಬುಟ್ಯಲ್ಲೋ ದರ್ಸನದ ಪುಣ್ಯಾನಾ! ಇನ್ನೇನು ಗರ್ಭಗುಡಿ ಕಾಣ್ತಾಯಿತ್ತು. ಓಡೋಗಿ ಕೈ ಚಾಚಿದ್ರೆ ಕೈಗೆ ನೀರು ಅಕ್ತಿದ್ರು, ಅಷ್ಟ್ರಲ್ಲಿ ಎಬ್ಬಿಸ್ಬಿಟ್ಟೆ ಅಂತ ಪೇಚಾಡಿದ. ನಮ್ಮದೇವ್ರ ಬಗ್ಗೆ ಇಷ್ಟುಹಗುರ್‍ವಾಗಿ ಮಾತಾಡ್ಬೇಡ್ಲೇ ಮಂಗ್ಯಾ. ನೀನೇಳೋ ಥ್ರಿಲ್ಲಿಂಗೆಲ್ಲಾ ತಾತ್ಕಾಲಿಕ, ನಮ್ಮ ತಿಮ್ಮಪ್ಪ ಶಾಶ್ವತ ತಿಳ್ಕೋ. ಯಾವ್ದೇ ಮಿನಿಷ್ಟ್ರು, ಅಧಿಕಾರಿಗಳನ್ನು ಸುಲಭವಾಗಿ ಕಾಣಬಹುದು, ಆದ್ರೆ ವರ್ಷದ ಯಾವ ಕಾಲದಲ್ಲೇ ಆಗಲೀ, ನಮ್ಮ ತಿಮ್ಮಪ್ಪಂನಾ ಕಾಣ್ಬೇಕಾದ್ರೆ ಬೋ ಕಷ್ಟಪಡ್ಬೇಕು.ಹಿಂದ್ಕೆಲ್ಲಾ ಜನ ಎಲ್ಲೆಲ್ಲಿಂದಲೋ ನಡ್ಕೊಂಡು ತಿರುಪತೀ ತಿಮ್ಮಂಪ್ಪನ್ನ ದರ್ಸನ ಪಡೆಯೋಕೆ ಓಯ್ತಾ ಇದ್ರು, ಘಂಟೆಗಟ್ಟಲೇ ಕೀವಲ್ಲಿ ನಿಂತು ಧರ್ಮದರ್ಸನದ ಮೂಲ್ಕ ತಿಮ್ಮಪ್ಪನ ದರ್ಸನ ಪಡ್ದು ಪುಣ್ಯ ಗುಡ್ಡೆ ಆಕೊಳ್ತಾಯಿದ್ರು. ಈಚೆಗೆ ಆ ಘಂಟೆಗ್ಳು ಓಗಿ, ಜಿನಗಳಾಗ್ಬುಟ್ಟವೆ. ದುಡ್ಡಿದ್ದವ್ರ ಮಾತು ಬೇರೆ. ಕೀವೇ ಇಲ್ದೆ ಅವ್ರಿಗೆ ದರ್ಸನ ಆಯ್ತದೆ. ಜನ್ರಲ್ಲಿ ಭಕ್ತಿ ಉಕ್ಕಿಉಕ್ಕೀ ಅರಿಯೋಕ್ಸುರು ಆಗ್ಬುಟ್ಟದೆ. ತಿಮ್ಮಪ್ಪನ ಉಂಡಿನೂ ಅಂಗೇ ಭಕ್ತರ ದುಡ್ಡಿಂದ ಉಕ್ಕಿಉಕ್ಕಿ ಅರೀತಿದೆ. ಜನಾರ್ದನ ರೆಡ್ಡಿಗಾರಂತೂ ಎಷ್ಟೋ ಕೋಟಿ ರೂಪಾಯಿ ಬಾಳೋ ರತ್ನದ ಕಿರೀಟಾನೇ ಕೊಟ್‌ಬಿಟ್ಟು ಈಗ ಜೈಲ್ನಲ್ಲಿ ಕುಂತವ್ರೆ. ಈಗ ತಿರುಪತಿತನಕ ಬಸ್ಸಿನಲ್ಲೋ, ರೈಲಿನಲ್ಲೋ ಹೋಗಿ, ಅಲ್ಲೇ ಕೈಗೆ ಟೈಂಬೆಲ್ಟ್ ಕಟ್ಟಿಸ್ಕೊಂಡು ಓಗ್ಬೇಕು. ಕೆಲವರಂತೂ ನೇರವಾಗಿ ವಿಮಾನದಲ್ಲೇ ಬೆಟ್ಟದ ಮೇಲಿನ ಬೆಟ್ಟ ನಾರಾಯಣಗಿರೀಲೆ ಇಳ್ದು ಅಲ್ಲಿಂದ ಕಾರ್‍ನಲ್ಲೋ ಟ್ಯಾಕ್ಸಿಲೋ ತಿರುಮಲಕ್ಕೆ ಬರ್ತಾರೆ. ಇವರ್ಗೆಲ್ಲಾ ಸಿಗೋ ಪುಣ್ಯ ಅಷ್ಟಕ್ಕಷ್ಟೇಯಾ. ನಿಜವಾದ ಪುಣ್ಯ ಬೇಕು ಅನ್ನೋವ್ರು, ಧರ್ಮ ದರ್ಸನಕ್ಕೇ ಹೋಗ್ಬೇಕು. ಯಾಕಂದ್ರೆ, ಈ ಧರ್ಮದರ್ಸನದಲ್ಲಿ ದೇವ್ರನ್ನ ಕಾಣ್ಬೇಕಾದ್ರೆ 24 ಘಂಟೆ ಸಾಲ್ದು, ಇಡೀ ದಿನ ಕಾದು ಇನ್ನೇನು ದೇವರ ದರ್ಸನ ಸಿಗ್ತು ಅನ್ನೋ ಒತ್ಗೆ ಪದಾ ಪದಾ ಜರಗಂಡಿ ಅನ್ನೋ ಸೆಕ್ಯೂರಿಟಿ ರಾಗದೊಂದಿಗೆ ತಳ್ಳುವಿಕೆ.

ಈ ದೇವ್ರ ಜನರತ್ರ ತರೋದ್ಹೆಂಗೆ? ಜನರ್ಗೆ ದೇವ್ರದರ್ಸನದ ತೊಂದ್ರೆ ತಪ್ಸೋದೆಂಗೆ? ಇದರ ಬಗ್ಗೆ ಯಾರೂ ತಲೆ ಕೆಡಿಸ್ಕೊಳ್ಳೋದೆ ಇಲ್ವಲ್ಲ.

ಈಗ ಬೆಂಗಳೂರಲ್ಲೇ ತಿಮ್ಮಪ್ಪನ ಲಾಡು ಸಿಗೋಹಂಗೆ ಮಾಡಿದ್ದಾರಂತೆ. ತಿರುಪತಿ ದೇವರ ಬ್ರಾಂಚುಗಳನ್ನೇ ಬೇರೆಬೇರೆ ಕಡೆ ತೆರಿತಾ ಅವ್ರಂತೇ! ಆದ್ರೂ ಒರಿಜಿನಲ್ ದೇವ್ರನ್ನ ನೋಡ್ದಂಗಾಯ್ತದಾ? ಅದಕೇ ಇನ್ನೂ ಒಂದು ಕೈ ಮುಂದೆ ಓಗಿ, ತಿಮ್ಮಪ್ಪನ್ನೇ ಸಿಕ್ಕೋಹಂಗೆ ಮಾಡಿದ್ರೆ ಚಂದ ಇರ್ತದೆ ಅಲ್ವಾರಾ? ಅದೇನೋ ಹೋಲೋಗ್ರಾಂ ಬೀಮಿಂಗ್ ಅನ್ನೋ ಲೇಸರ್ ಟೆಕ್ನಿಕ್ ಉಪಯೋಗಿಸಿಕೊಂಡು ಒರಿಜಿನಲ್ ತಿಮ್ಮಪ್ಪನ್ನೇ ಆಕಾಶದಲ್ಲಿ ನಿಂತಂಗೆ ತೋರಿಸ್ಬೌದಂತೆ. ಆದ್ರೆ ಇಂಗ್ಮಾಡಿದ್ರೆ, ತಿಮ್ಮಪ್ಪನ್ ಕಲೆಕ್ಷನ್ ಡಲ್ ಆಗೋಯ್ತದೆ ಅನ್ನೋ ಎದರ್ಕೆ ಅದೆ. ಅದ್ಕೆ ಈಗಿರೋ ಸಿಸ್ಟಮ್ನ್ನೇ ಒಸಿ ಬದಲಾಯಿಸಿ ದರ್ಮದರ್ಸನ ಬೇಗಬೇಗ ಆಗೋ ಅಂಗೆ ಮಾಡಿದ್ರೆ, ಚಂದಾ ಅಲ್ವಾರಾ. ಧರ್ಮದರ್ಸನದ ಜನರನ್ನ ಒಂದು ಕನ್ವೇಯರ್ ಬೆಲ್ಟ್ ಮೇಲೆ ನಿಲ್ಸೋದು. ಒಂದು ಗುಂಡಿ ಒತ್ತಿದರೆ ಬೆಲ್ಟ್ ಮುಂದಕ್ಕೆ ಸಾಗ್ತದೆ. ಯಾರೂ ಯಾರನ್ನೂ ತಳ್ಬೇಕಾಗಿಲ್ಲ. ಬೆಲ್ಟು ದೇವರ್ ಮುಂದೆ ಹಾದು ಹೊರಟೋಯ್ತದೆ. ಜನಾ ಜಾಸ್ತಿ ಆದಾಗ ಸ್ಪೀಡ್ ಒಸಿ ಜಾಸ್ತಿ ಮಾಡ್ಬೇಕಾಗತ್ತೆ ಅಷ್ಟೆಕ್ಕ್ಯೂ ತಪ್ಪಿಸ್ಟಂಗೂ ಆಗೋದಿಲ್ಲ. ಎಂಗದೆ ನನ್ ಪಿಲಾನು?

## 2. ಈಂಗೊಂದು ಭೀಮ್ನಕಥೆ

ನಮ್ಮೈದಾ ಉಟ್ಟಿದ್ದೂ ಬೆಳ್ದಿದ್ದೂ ಎಲ್ಲಾ ಪಟ್ಣದಲ್ಲೇ ಕಪ್ಪಾ. ಎಷ್ಟೇಂತಾರಲ್ಲಾ ಆ ಎರ್ಡಕ್ಷರವಾ ಕಲ್ತು ಮೈಕೈ ನೋಯ್ದಂತಾ ಒಂದ್ಕೆಲ್ಸಾ ಇಡ್ಕೊಂಡೇಟ್ಗೆ ಒಂದೆಣ್ಣುಡ್ಗಿ ನಮ್ಸಾರ ಕಳ್ಕೊಂಡೋ. ವರ್ಸದೊಳ್ಗೆ ಒಂದು ತೆಳ್ಗೆ ಬೆಳ್ಗೆ ಇರೋ ಎಣ್ಣುಗಾನೂ ಆತು. ಬೋ ನಾಜೂಕಾಗಿ ಬೆಳ್ದ ಮಗಾನೂ ನಾಜೂಕಾಗಿತ್ತು, ಅದೇನೋ ಆರ್ತಿ ತಕ್ಕೊಂಡ್ರೆ ಉಸ್ನ.. .. ತೀರ್ಥ ತಕ್ಕೊಂಡ್ರೆ ಸೀತಾ ಅಂತಾರಲ್ಲಾ ಅಂಗೆ. ನಂಮಗ್ಗೂನೂ ಅಷ್ಟೇಯಾ. ಪೇಟೇಲೀ ಸೋಡಾ ಅಕ್ದನ್ನ, ನೀರ್ಸಾರು, ಮಟ್ಸಾತ್ ವಡೆ ಇಂತಾವ್ನ ತಿಂದ್ಕಂದು ಸೀದೋಗಿದ್ದ ಕನಪ್ಪ. ಆ ಮಗೀಗೂ ನಮ್ಮಳ್ಳೀವ್ರಿಗೆ ಕೊಡೋ ಅಂಗೆ ಇಟ್ಟು ಉಪ್ಪೆಸ್ರು ಕೊಡ್ವೆ ಅದೇನೋ ಮಾಗೀನೋ ಸುಡ್ಗಾಡೋ ಕೊಟ್ಟು ಬೆಳ್ಸವ್ರೆ, ಒಂದಪಾ ನಮ್ಮಟ್ಟೇಲಿ ಉಣ್ಣಾಕೆ ಮುದ್ದೆ ಇಕ್ಕಿದ್ಬೋಕನಪ್ಪಾ. ಆ ಮಗಾ ಅದ್ನೇ ಗಂಟ್ಲಲ್ಲೇ ಗಂಟ್ಗಟ್ಲೇ ಇಟ್ಕೊಂಡು ತಿನ್ನಾಕಾಗ್ದೇ ಒದ್ದಾಡ್ತಾ ಕೂತ್ಬಿಡ್ತು.. ಅದ್ರ ಕಸ್ಟ ನೋಡೋಕಾಗ್ದೆ ಒಸಿ ಅನ್ನ ಬೇಸಿ ಕೊಟ್ಟಿದ್ದಾತು.

ಒಂದ್ಕಿತಾ ಅದ್ಯಾವ್ದೋ ಆಟ್ದ ಪಾರ್ಕಿಗೆ ಎಡ್ತಿಮಗ್ಳೊಂದ್ಗೆ ಓಗಿದ್ನಂತೆಕಪ್ಪಾ, ಅಲ್ಲೊಂದ್ಕಡೆ ಅದೆಂತದೊ ಜರ್ರ್ನಿಂಗು ಅಂತ ನೇತಾಕಿದ್ರಂತೆ. ಅದೇಕಪ್ಪಾ ಎಲ್ಲು ಸರಪ್ಳೀಗೆ ಕಬ್ಬಿಣದ ಬಳೆ ಅಂಟ್ಸಿರ್ತಾರಲ್ಲ ಅದು. ಬ್ಯಾರೇವ್ರ ಮಕ್ಳು ಅದ್ರಲ್ಲಿ ನೇತಾಡ್ತಿದ್ನ ಕಂಡು ಕೂಸ್ಗೆ ಆಸೆ ಆಯ್ತಂತೆ. ಆದ್ರೆ ಎದರ್ಕೇನೋ ನಾಚ್ಕೇನೋ ಗೊತ್ತಿಲ್ಲ. ಒಂದೆಜ್ಜೆ ಮುಂದ್ಕಿಡ್ಲಿಲ್ಲಂತೆ. ಏನಾಮಾಡೋದೂ ಅನ್ಕೊಂತ್ಗೆ ನೆಪ್ಪಾಗಿದ್ದು ತೀರ್ಕೋಗಿರೋ ನಮ್ರಾಜ್ಯದಮಾಜಿ ಮುಕ್ಮಂತ್ರಿ ಗುಂಡೂ ದಾದಾ! ಅವರ್ದಪ್ಪಾ ವರ್ಸೆ ಅಂದ್ರೆ ಎಲ್ಲಾದಲ್ಲೂ ಒಂದು ಪೆಸಾಲಿಟಿ. ಬ್ಯಾರೇವ್ರತರಾ

ಎಲ್ಲಾದಕ್ಕೂ ಟೇಪ್ಕಟ್ಮಾಡಿ ಉದ್ಘಾಟ್ನೆ ಮಾಡ್ತಾ ಇರಲಿಲ್ಲ ಅವರು. ಆಟೋಟ ಉದ್ಘಾಟ್ನೆ ಅಂದ್ರೆ ಚಡ್ಡಿ ಆಕ್ಕೊಂಡು ತಾವೇ ಮೊದ್ಲು ಓಡೇ ಬುಡ್ತಿದ್ರು, ಬಸ್ಟಿಪೋ ಉದ್ಘಾಟ್ನೆ ಅಂದ್ರೆ ಬಸ್ ಓಡ್ಸೇಬುಡ್ತಿದ್ರು. ಇನ್ನು ಈಜುಕೊಳ ಉದಾಟ್ನೆ ಮಾಡ್ಬೇಕೂಂದ್ರೆ ಬಟ್ಟೇತೆಗೆದು ಬರೀ ಕಾಚಾದಲ್ಲೇ ನೀರೊಳಕ್ಕೆ ಡೈ ಒಡ್ದುಬುಡ್ತಿದ್ರು; ಅವ್ರ ಅದೃಷ್ಟ ಅವ್ರನ್ನ ಮಸಾನ ಉದ್ಘಾಟ್ನೆ ಮಾಡಾಕೆ ಯಾರೂ ಕರೀನಿಲ್ಲ ಅನ್ಸತ್ತದೆ. ಅಂಗೇ ಮಗೀಗೆ ಉಸ್ತಾಹ ಬರ್ಲಿ ಅಂತ ತಾನೇ ಆ ಜರಸ್ರಿಂಗ್ನ ಇಡ್ಕೊಂಬುಡ್ತೀನಿ ಅಂತ ಒಂದೇ ಏಟ್ಗೆ ನೆನ್ಗೂನ ಮೇಕೆ ಆರ್ದ್ರ, ರಿಂಗು ಕೈಗೆ ಸಿಕ್ನಿಲ್ಲ ಆದ್ರೂ, ಕಳಕ್ ಅಂತು.. ಸೊಂಟ, ದೊಪ್ಪಂತಾ ಕೆಳೀಕ್ ಬಿದ್ದ, ಕಸ್ಟಪಟ್ರೂ ಮ್ಯಾಕೇಳೋಕೋದ್ರೂ ಏಳೋ ಕಾಯ್ತಾಯಿಲ್ಲ, ಎಬ್ಸಿದ್ರೆ ನಿಂತ್ಕೊಳ್ಳೋಕಾಯ್ತಾಯಿಲ್ಲ, ಮೈಮಾತ್ರ ಕಮಾನಾಗಿ ಚೆಂಡಿನಂಗಾಗಿತ್ತು. ಸುತ್ಸೇರಿದ್ದನಾ "ನೀನೇನು ಎಳೇ ಉಡ್ಗ ಅಂದ್ಕೊಂಡ್ಬುಟ್ಯಾ, ಗ್ಯಾನ ಐತಾ ಅಂತೆಲ್ಲಾ ಸಾಕಷ್ಟುಗ್ದು ಆಟೋ ರಿಕ್ಸಾದಲ್ಲಿ ಮೂಳೆ ಡಾಕ್ಟರ್ತಾವ ಕರ್ಕೊಂಡೋಗೋಕೆ ಏಳಿದ್ರು, ಮೂಳೆ ಡಾಕ್ಟ್ರು ಒಂತಿಂಗ ಮಾತ್ರೆ ನುಂಗ್ಬೇಕು, ಬರೀ ನೆಲ್ದಮೇಲೆ ಮನೀಕೋಬೇಕು, ಆಸ್ಗೆ ಪತ್ಯಮಾಡ್ಬೇಕೂ, ಆಗ ಏನಾರ ವಾಸಿ ಆಗ್ಬೈದು; ಇಲ್ಲಾಂದ್ರೇ ಮರಳ್ಗೂಟೆ ಕಟ್ಟಿ ಎಳೀಬೇಕಾಯ್ತದೆ ಅಂತ ಅಂದ್ರಂತೆ! ಎಂಗದೇ ಈ ಭೀಮ್ನ ಕಥೆ?

# 3. ಕೃಷ್ಣ ಸುಂದರಿ ಪ್ರತ್ಯಕ್ಷ

ಆ ಕೃಷ್ಣ ಸುಂದರಿ ನನಗೆ ಅತ್ಯಂತ ಆಪ್ತಳಾಗಿದ್ದವಳು. ಯಾವಾಗಲೂ ನನ್ನ ಎದೆಯನ್ನೇ ಅಪ್ಪಿಕೊಂಡು ಇತರರಿಗೆ ಆಕ್ರಮಣಕ್ಕೆ ಅವಕಾಶವನ್ನೇ ಕೊಡುತ್ತಿರಲಿಲ್ಲ. ನನಗೆ ಬೇಕೆನಿಸಿದಾಗಲೆಲ್ಲಾ, ತನ್ನ ಇನಿದನಿಯಿಂದ ನನಗಿಷ್ಟವಾದ ಗಾನಸುಧೆಯನ್ನು ಹರಿಸಿ ನನ್ನ ಮನಸ್ಸನ್ನು ಪ್ರಸನ್ನಗೊಳಿಸುತ್ತಿದ್ದಳು. ನಾನು ಎಲ್ಲೇ ಹೋಗಲೀ, ಯಾರೊಂದಿಗೇ ಇರಲಿ, ಇವಳು ನನ್ನನ್ನು ಬಿಟ್ಟಿರುತ್ತಿರಲಿಲ್ಲ. ಇವಳನ್ನು ಸಿಂಗಪೂರಿಗೂ ಕರೆದುಕೊಂಡು ಹೋಗಿದ್ದೆ. ಇಂತಹ ಸುಂದರಿ ಇದ್ದಕ್ಕಿದ್ದಂತೆ ಮುನಿಸಿಕೊಂಡು ಮಾಯವಾದಳೆಂದರೆ ನನಗೆ ಹೇಗನ್ನಿಸಬೇಡ. ಮನಸ್ಸಿಗೆ ತುಂಬಾ ಬೇಜಾರಾಯಿತು. ಅವಳ ಮುನಿಸಿಗೆ ನಾನೇ ಪರೋಕ್ಷವಾಗಿ ಕಾರಣ. ಅವಳ ಜಾಗಕ್ಕೆ ಮತ್ತೊಬ್ಬ ಸವತಿಯನ್ನು ತಂದುಕೊಂಡು, ಅವಳ ಆಭರಣಗಳನ್ನೆಲ್ಲಾ ಇವಳಿಗೆ ತೊಡಿಸಿ ಅಲಂಕರಿಸಿದ್ದಕ್ಕೆ ಸಿಟ್ಟುಗೊಂಡಳೆಂದು ತೋರುತ್ತೆ. ಇವಳು ಭಾರತೀಯ ಸುಂದರಿಯಾದರೆ, ಅವಳೋ ಇವಳಿಗಿಂತ ದಷ್ಟಪುಷ್ಟವಾಗಿ ದೊಡ್ಡದೇಹಿ, ಜೊತೆಗೆ ಇವಳಿಗಿಂತ ಸಾಲಂಕೃತ ಸಿಂಗಪೂರಿ ಹೆಣ್ಣು. ಮಂಗಮನ ಇಂತಹವಳನ್ನು ಆಶಿಸದೇ ಇದ್ದೀತೇ? ತಕ್ಷಣ ಅವಳನ್ನು ಅಪ್ಪಿಕೊಳ್ಳಲು ಸಿದ್ಧನಾದೆ. ಇವಳಿಗೆ ನ್ಯಾಚುರಲಿ ಅಸೂಯೆ, ಸಂಕಟ ಉಂಟಾಗಿರಬೇಕು. ಸದ್ದಿಲ್ಲದೇ ಜಾಗ ಖಾಲಿ ಮಾಡಿಬಿಟ್ಟು ನನಗೆ ಸಂಕಟ ಉಂಟುಮಾಡಿದಳು. ಅವಳು ಇದ್ದಕ್ಕಿದ್ದಂತೆ ಕಾಣೆಯಾದುದು ನನಗೆ ಸರಿಕಾಣಲಿಲ್ಲ. ಅವಳನ್ನು ಎಲ್ಲ ಕಡೆ ಹುಡುಕಾಡಿದೆ, ಪ್ರಯೋಜನವಾಗಲಿಲ್ಲ. ಕೊನೆಗೆ ಅನಿವಾರ್ಯವಾಗಿ ಇವಳನ್ನೇ ಪ್ರೀತಿಸತೊಡಗಿದೆ. ಇವಳೂ ಅವಳಿಗಿಂತ ಹೆಚ್ಚಾಗಿ ನನ್ನನ್ನು

ಅಪ್ಪಿಕೊಂಡು ನನ್ನ ಸೇವೆಗೆತೊಡಗಿದುದರಿಂದ, ಅವಳನ್ನು ನಿಧಾನವಾಗಿ ಮರೆತೆ. ನನ್ನ ಜೊತೆ ಸಿಂಗಪೂರಿಗೆ ಬಂದಾಗಲೇ ಇವಳು ಕಳೆದುಹೋದುದರಿಂದ, ಅವಳನ್ನು ಹುಡುಕಲು ಮತ್ತೆ ಸಿಂಗಪೂರಿಗೆ ಹೋಗುವುದು ದುಸ್ಸಾಧ್ಯ ಅನ್ನಿಸಿತ್ತು. ಆದರೆ ಈಗ್ಗೆ ವಾರದ ಹಿಂದೆ ಅವಳೇ ಮತ್ತೆ ದಿಢೀರನೆ ಬೆಂಗಳೂರಿನಲ್ಲಿ ಪ್ರತ್ಯಕ್ಷವಾಗಿರುವಳೆಂಬ ಸುದ್ದಿ ಬರಬೇಕೇ?ನನಗೆ ತುಂಬಾ ಸಂತೋಷವಾಯಿತು. ಇವಳನ್ನು ಅಪ್ಪಿಕೊಂಡಿದ್ದರೂ, ಅವಳನ್ನೂ ಬಿಡಲು ಮನಸ್ಸೊಪ್ಪುತ್ತಿಲ್ಲ. ತಿಮ್ಮಪ್ಪನೇ ಶ್ರೀದೇವಿ,ಭೂದೇವಿ ಎಂಬ ಇಬ್ಬರು ಹೆಂಡಿರನ್ನೂ ತನ್ನೆದೆಯಲ್ಲಿ ಅಪ್ಪಿಕೊಂಡಿಟ್ಟಿರುವಾಗ, ನನಗೇಕೆ ಆಗಬಾರದು? ಅದನ್ನೇ ಮಾಡಲು ನಿರ್ಧರಿಸಿ, ಅವಳನ್ನು ಕರೆತರಲು ಬೆಂಗಳೂರಿಗೆ ಹೋಗುತ್ತಿದ್ದೇನೆ. ಅವಳಿಗೂ ಒಂದು ಸೂಕ್ತಸ್ಥಾನ ಕಲ್ಪಿಸಲು ಯೋಚಿಸಿದ್ದೇನೆ. ಅವಳು ಯಾರೆಂದು ಬಲ್ಲಿರಾ? ಅವಳೇ ನನ್ನ ಪ್ರೀತಿಯ ಕಪ್ಪುಸುಂದರಿ, ನನ್ನ ಇತ್ತೀಚಿನವರೆಗಿನ ಜೊತೆಗಾತಿ, ಸ್ಯಾಂಸಂಗ್ ಕಪ್ಪುಮೊಬೈಲ್!

## 4. ನಾ ಮೆಚ್ಚಿದ ಜಾಹಿರಾತು

ಜಾಹಿರಾತುಗಳು ದಿನನಿತ್ಯವೂ ನಮ್ಮನ್ನು ಮುತ್ತುತ್ತಿರುತ್ತವೆ. ಅವು ಎಲ್ಲವನ್ನೂ ಎಲ್ಲರನ್ನೂ ನುಂಗಿದೆ. ಪ್ರತಿಯೊಬ್ಬರೂ ಬೆಳಿಗ್ಗೆ ಎದ್ದ ಕ್ಷಣದಿಂದ ಮತ್ತೆ ರಾತ್ರಿ ಮಲಗುವವರೆಗೂ ಬಳಸುವ ಬಹುತೇಕ ವಸ್ತುಗಳು, ಸೇವೆಗಳು ಜಾಹಿರಾತಿನ ಪ್ರಭಾವದಿಂದಲೇ ಮಾರಾಟವಾದುವು. ಯಾವುದೇ ಪತ್ರಿಕೆ, ರೇಡಿಯೋ, ಚಲನಚಿತ್ರ, ದೂರದರ್ಶನ, ಜಾಹಿರಾತಿನಿಂದ ಮುಕ್ತವಾಗಿಲ್ಲ. ನಿಜ ಹೇಳಬೇಕೆಂದರೆ ಅವು ಬದುಕಿ ಉಸಿರಾಡುತ್ತಿರುವುದೇ ಈ ಜಾಹಿರಾತುದಾರರು ನೀಡುವ ಹಣದಿಂದ. ಅಂತೂ ಜಾಹಿರಾತು ಇವುಗಳಿಗೆ ಒಂದು ಪ್ರಧಾನ ಆದಾಯದ ಮೂಲ ಎನ್ನಿಸಿದೆ. ಜಾಹಿರಾತು ಎಂದರೇನೆ ಉತ್ಪ್ರೇಕ್ಷೆ, ಇರುವುದನ್ನು ಬೂತಗನ್ನಡಿಯಲ್ಲಿ ತೋರಿಸಿ, ಕೆಡುಕಿನ ಅಂಶಗಳನ್ನು ಪ್ರಸ್ತಾಪಮಾಡದೆ, ಸುಂದರ ಚಿತ್ರಗಳ ಹಾಗೂ ಪರಿಣಾಮಕಾರಿಯಾದ ಭಾಷೆ ಬಳಸಿ ಜಾಹಿರಾತುಗಳನ್ನು ತಯಾರಿಸಿಕೊಡಲು ವಿಶಿಷ್ಟ ಜಾಹಿರಾತುಸಂಸ್ಥೆಗಳೇ ಜನ್ಮತಾಳಿವೆ. ಒಂದು ತಮಾಷೆ ಉದಾಹರಿಸಬೇಕೆಂದರೆ, ಒಬ್ಬ ಮನೆ ಮಾಲೀಕ ತನ್ನ ಹಳೇ ಮನೆ ಬಗ್ಗೆ ಜಿಗುಪ್ಸೆಗೊಂಡು ಅದನ್ನು ಮಾರಿಬಿಡಲು ತೀರ್ಮಾನಿಸಿದ. ಅದರ ಬಗೆಗೆ ಒಂದು ಜಾಹೀರಾತು ಸಂಸ್ಥೆಯನ್ನು ಸಂಪರ್ಕಿಸಿ ಪತ್ರಿಕೆಗಳಲ್ಲಿ ಜಾಹಿರಾತು ನೀಡಲು ಒಪ್ಪಂದ ಮಾಡಿಕೊಂಡಿದ್ದನು. ಮಾರನೇ ದಿನ ಪತ್ರಿಕೆ ಬಿಡಿಸಿದಾಗ ಒಂದು ಮನೆಯ ಬಗೆಗಿನ ವಿವರ ಅತ್ಯಾಕರ್ಷಕವಾಗಿದ್ದು ಕೊನೆಯಲ್ಲಿ ಅದು ತನ್ನ ಮನೆಯದೇ ಆಗಿತ್ತು. ತನ್ನ ಮನೆಮಾರಾಟದ ಬಗೆಗೆ ಬಂದ ವಿವರಗಳನ್ನು ನೋಡಿದ ಮನೆಮಾಲೀಕ ಆ ಜಾಹಿರಾತಿನಿಂದ ಎಷ್ಟು ಪ್ರಭಾವಿತನಾದನೆಂದರೆ,

ತಾನು ಮಾರಬೇಕೆಂದಿದ್ದ ಮನೆ ಮಾರಾಟವನ್ನೇ ರದ್ದುಗೊಳಿಸಿದನು. ಪ್ರಾರಂಭದ ದಿನಗಳಲ್ಲಿ ಜಾಹಿರಾತು ಬರೀ ವಸ್ತುಗಳಿಗೇ ಸೀಮಿತವಾಗಿರುತ್ತಿತ್ತು. ನಂತರದ ದಿನಗಳಲ್ಲಿ ಸೇವೆಗಳೂ ಜಾಹಿರಾತಿನ ತೆಕ್ಕೆಗೆ ಬಿದ್ದವು. ಇಂದು ಜಾಹಿರಾತು ಆವರಿಸಿರುವ ಕ್ಷೇತ್ರಗಳನ್ನು ಈ ಕೆಳಕಾಣಿಸಿದಂತೆ ವ್ಯಾಖ್ಯಾನಿಸಬಹುದು. "ಜಾಹಿರಾತು ಸರ್ವಾಂತರ್ಯಾಮಿ; ಮೂಲತಃ ಸರಕು ಸೇವೆಗೆ ಮೀಸಲಾಗಿದ್ದ ಜಾಹಿರಾತು ಇಂದು ಜನನ, ಮರಣ, ಮದುವೆ, ನಿಶ್ಚಿತಾರ್ಥ, ವಿದೇಶ ಪ್ರಯಾಣ, ವಿದೇಶದಿಂದ ಸುರಕ್ಷಿತ ವಾಪಸಾತಿ, ದೇವರಿಗೆ ಹರಕೆ, ಹರಕೆ ತೀರಿಕೆ, ಚುನಾವಣೆ ಗೆಲುವು, ಸೋಲು, ಯಂತ್ರ, ಮಂತ್ರ, ತಂತ್ರ ಹೀಗೆ ಸಕಲವನ್ನೂ ಒಳಗೊಂಡಿದೆ." ಜಾಹಿರಾತು ಎಷ್ಟು ಅಧಿಕವಾಗಿದೆ ಎಂದರೆ ಇಂದು ವೃತ್ತಪತ್ರಿಕೆಗಳಲ್ಲಿ ಸುದ್ದಿಗಿಂತ ಹೆಚ್ಚುಪುಟಗಳನ್ನು ಆಕ್ರಮಿಸಿಕೊಳ್ಳುತ್ತಿದೆ; ಮ್ಯಾಗಜೀನಗಳಲ್ಲಂತೂ ಲೇಖನಗಳಿಗಿಂತ ಹೆಚ್ಚು ಪುಟಗಳು ಜಾಹಿರಾತಿಗೇ ಮೀಸಲಾಗಿರುತ್ತವೆ. ದೂರದರ್ಶನ ಧಾರಾವಾಹಿಗಳಲ್ಲಿ 10 ನಿಮಿಷ ಕಥೆ ತೋರಿಸಿದರೆ, 20 ನಿಮಿಷ ಜಾಹಿರಾತು ಪ್ರಸಾರವಾಗುತ್ತವೆ. ಒಟ್ಟಿನಲ್ಲಿ ಧಾರಾವಾಹಿ ತಯಾರಕ ಒಂದು ಘಂಟೆ ತೆಗೆದ ಧಾರಾವಾಹಿಯನ್ನು 5–6 ಕಂತುಗಳವರೆಗೆ ಎಳೆಯಬಹುದು. ಜಾಹಿರಾತುಗಳು ಎಷ್ಟು ಅಧಿಕವಾಗಿವೆ ಎಂದರೆ, ಟೀವಿ ನೋಡುಗರು ಅವು ಪ್ರಸಾರವಾಗುವಾಗ ಶಬ್ದವನ್ನೇ "ಮ್ಯೂಟ್"ಮಾಡುವಮಟ್ಟಿಗೆ ಹೋಗಿದ್ದಾರೆ. ಇನ್ನು ಪ್ರಿಂಟ್ ಮೀಡಿಯಾದಲ್ಲಂತೂ, ಜಾಹಿರಾತಿನ ಪುಟಗಳನ್ನು ನೋಡದೇ ತಿರುವಿಹಾಕುತ್ತಿದ್ದಾರೆ. ಚಲನಚಿತ್ರಗಳಲ್ಲಂತೂ ಮುಖ್ಯ ಸಿನಿಮಾ ಪ್ರಾರಂಭವಾದನಂತರವೇ ಥಿಯೇಟರಿಗೆ ಬರುವ ಮಂದಿ ಬಹಳ. ಇನ್ನು ಇಂಟರ್‌ವಲ್‌ನಲ್ಲಂತೂ ಜನ ಕಾಫಿಗೋ, ದೇಹಬಾಧೆ ತೀರಿಸುವುದಕ್ಕೋ ಕಾತುರರಾಗಿ ಜಾಹಿರಾತಿನಿಂದ ದೂರವೇ ಉಳಿಯುವ ಸಾಧ್ಯತೆ ಹೆಚ್ಚು ಕಂಡುಬರುತ್ತಿದೆ. ಆದರೂ ಅವುಗಳ ಕಡೆಗೆ ಗಮನ ಹರಿಸುವ ಮಂದಿ ಅಂದರೆ ಬಹುಶಃ ಆ ಜಾಹಿರಾತನ್ನು ನೀಡಿರುವವರು ಅಥವಾ ಸೃಷ್ಟಿಕರ್ತರೇ ಇರಬಹುದು. ಜಾಹಿರಾತುದಾರರೂ ಹೊಸ ಹೊಸ ಟೆಕ್ನಿಕ್‌ಗಳನ್ನು ಅಳವಡಿಸಿಕೊಂಡು, ಬಲವಂತವಾಗಿಯಾದರೂ ನೋಡುಗರ ಗಮನ ಸೆಳೆಯಲು ಪ್ರಯತ್ನಿಸುತ್ತಿರುತ್ತಾರೆ. ಧಾರವಾಹಿಗಳಲ್ಲಿ ದಿಢೀರಾಗಿ ಜಾಹಿರಾತು ಮಧ್ಯೆಮಧ್ಯೆ ತುರುಕುವುದು. ಮುಖ್ಯ ಸಿನಿಮಾವನ್ನೇ ಕತ್ತರಿಸಿ ಅದರಲ್ಲಿ ಜಾಹಿರಾತು ತೂರಿಸುವುದು ಇತ್ಯಾದಿ.

ಇಷ್ಟೆಲ್ಲ ಆದರೂ ಜಾಹಿರಾತು ತನ್ನ ಪ್ರಭಾವವನ್ನು ಎಲ್ಲರ ಮೇಲೂ ಬೀರಿದೆ. ಹಿಂದೆ ಜನ ವಸ್ತುವಿನ ಹೆಸರು ಹೇಳಿ ಅದನ್ನು ಕೊಡುವಂತೆ ವ್ಯಾಪಾರಿ ಗಾರರನ್ನು ಕೇಳುತ್ತಿದ್ದರು. ವ್ಯಾಪಾರಿ ತಾನು ತರಿಸಿರುವ ಆ

ಪದಾರ್ಥವನ್ನಷ್ಟೇ ಗ್ರಾಹಕರಿಗೆ ನೀಡುತ್ತಿದ್ದ. ಉದಾ: ಉಪ್ಪು, ತುಪ್ಪ, ಚಹಾ, ಕಾಫಿಪುಡಿ, ಬಾಲ್‌ಪೆನ್, ಇಂಕು, ಪೆನ್ಸಿಲ್, ರಬ್ಬರ್, ನೋಟ್‌ಬುಕ್ ಮುಂತಾದವು. ಆದರೆ ಇಂದು ಗ್ರಾಹಕನೇ ಸ್ಪಷ್ಟವಾಗಿ ನನಗೆ ಟಾಟಾ ಉಪ್ಪು ಕೊಡಿ, ನಂದಿನಿ ತುಪ್ಪ, ಬ್ರೂಕ್‌ಬಾಂಡ್ ರೆಡ್‌ಲೇಬಲ್ ಚಹಾ, ಕಾಫಿಡೇ ಕಾಫಿಪುಡಿ, ಶಿವಲಿಂಗಬೇಳೆ, ರೆನಾಲ್ಡ್ ಪೆನ್, ಕ್ವಿಂಕ್ ಇಂಕ್ ಹೀಗೆ ಬೇಡಿಕೆ ಸಲ್ಲಿಸುತ್ತಾನೆ. ಈ ರೀತಿಯ ಗ್ರಾಹಕ ಜಾಗೃತಿಗೆ/ತಿಳುವಳಿಕೆಗೆ ಕಾರಣ ಜಾಹಿರಾತು.

ಜಾಹಿರಾತಿನ ಆಯಸ್ಸು, ಪರಿಣಾಮ ಆಯ್ಕೆಮಾಡುವ ಮಾಧ್ಯಮವನ್ನು ಅವಲಂಬಿಸಿರುತ್ತದೆ. ಈಗ್ಗೆ 40–50 ವರ್ಷಗಳ ಹಿಂದೆ ಹೋದರೆ ಆಗ ಇದ್ದುದ್ದು ಪ್ರಿಂಟ್ ಮೀಡಿಯಾ, ರೇಡಿಯೋ ಜಾಹಿರಾತು ಮತ್ತು ಚಲನಚಿತ್ರ ಮಾತ್ರ. ಇಂದು ಟಿ ವಿ, ಕೇಬಲ್, ಮೊಬೈಲ್, ಪೋಸ್ಟರ್, ಮುಂತಾಗಿ ಅನೇಕ ಮಾಧ್ಯಮಗಳು ಸಿಗುತ್ತಿವೆ. ವಿಷಯ ಎಲ್ಲೆಲ್ಲೋ ಹೋಗುತ್ತಿದೆ. ನಾ ಹೇಳ ಹೊರಟಿರುವುದು ಒಂದು ಪರಿಣಾಮಕಾರಿ ಜಾಹಿರಾತಿನ ಬಗೆಗೆ. ಆಗ ಹೆಚ್ಚಾಗಿ ಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ ಜಾಹಿರಾತುಗಳು ಪ್ರಚಾರದಲ್ಲಿದ್ದ ಕಾಲ. ಜಾಹಿರಾತು ನೀಡುವವರಿಗೆ ಇದ್ದ ಅವಕಾಶಗಳು ಕಪ್ಪುಬಿಳುವು/ವರ್ಣ ಜಾಹಿರಾತುಗಳು, ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳು. ಅದರಲ್ಲೇ ಪರಿಣಾಮಕಾರಿಯಾದ ಜಾಹಿರಾತು ನೀಡಬೇಕಾಗುತ್ತಿತ್ತು. ಪರಿಣಾಮಕಾರಿಯಾದ ಜಾಹಿರಾತು ಎಂದರೆ ಆ ಜಾಹಿರಾತು ವಸ್ತುವಿನಬಗೆಗೆ ಮಾಹಿತಿನೀಡುತ್ತಲೇ, ಓದುಗನ/ನೋಡುಗನ ಗಮನವನ್ನು ತನ್ನಕಡೆಗೆ ಪ್ರೀತಿಯಿಂದಲೋ, ಭಯದಿಂದಲೋ ನೋಡುವಂತೆ ಮಾಡಿ, ಆ ಕೂಡಲೇ ಅಂಗಡಿಗೆ ಧಾವಿಸಿ ಆ ವಸ್ತುವನ್ನೋ, ಸೇವೆಯನ್ನೋ ಪಡೆದುಕೊಳ್ಳಲು ಮುಂದಾಗುವುದು. ಉದಾಹರಣೆಗೆ: 'ನಿಮ್ಮ ಒಡವೆ ವಸ್ತುಗಳನ್ನು ಕಳ್ಳರಿಂದ ರಕ್ಷಿಸಿಕೊಳ್ಳಬೇಕೆಂದರೆ ನಮ್ಮ ಕಂಪನಿಯ ಸೆಕ್ಯೂರಿಟಿ ಸಿಸ್ಟಂ, ಅಲಾರಂ ಅಳವಡಿಸಿ; ನಮ್ಮ ಕಂಪನಿ ಬೀಗವನ್ನೇ/ತಿಜೋರಿ ಬಳಸಿ' ಎಂಬ ಜಾಹಿರಾತು. 'ನಿಮ್ಮ ಮಡದಿಮಕ್ಕಳು ನಿಮ್ಮ ಸಾವಿನ ನಂತರ ನಿಮ್ಮನ್ನು ಬೈದುಕೊಳ್ಳಬಾರದೆಂದರೆ, ನಿಮ್ಮ ನಂತರವೂ ನೆಮ್ಮದಿಯಿಂದ ಸಂಸಾರ ಸಾಗುವಂತಾಗಬೇಕಾದರೆ, ನಮ್ಮ ಕಂಪನಿಯ ಜೀವವಿಮಾಪಾಲಿಸಿ ಕೊಂಡುಕೊಳ್ಳಿ' ಎನ್ನುವ ಜಾಹಿರಾತು. 'ನಿಮ್ಮ ವಿದ್ಯುತ್ ಉಪಕರಣಗಳು ಹೈ ವೋಲ್ಟೇಜ್ ವ್ಯತ್ಯಾಸದಿಂದ ಹಾಳಾಗದಿರಲು ನಮ್ಮ ಕಂಪನಿಯ ಸ್ಟೆಬಿಲೈಸರ್ ಕೊಂಡುಕೊಳ್ಳಿ' ಎನ್ನುವ ಜಾಹಿರಾತು ಮುಂತಾದವು.



ಈಗ ನಾನು ಹೇಳಹೊರಟಿರುವ ಜಾಹಿರಾತು ಇದೇ ಬಗೆಯದು. ಕಾರು ಅಪಘಾತದ ದೃಶ್ಯವನ್ನು ಕೇಂದ್ರವಾಗಿಸಿ ಕೊಂಡು ನ ಈ ಜಾಹಿರಾತು ರಚಿತವಾಗಿದೆ. ಜಾಹಿರಾತಿನ ತಲೆ ಬರಹದಲ್ಲಿ ಕಾಣಿಸುತ್ತದೆ: "ಪೆಟ್ರೋಲ್ ಹಾಕಿಸುವುದನ್ನು ಮರೆತರೆ ಕಾರು ನಿಂತುಹೋಗುತ್ತದೆ, ಆದರೆ ಬ್ರೇಕ್ ಫ್ಲುಯಿಡ್ ಹಾಕಿಸುವುದನ್ನು ಮರೆತರೆ, ಕಾರು ನಿಲ್ಲುವುದಿಲ್ಲ" ಜೊತೆಗೆ ಕಾರು ಅಪಘಾತದ ಚಿತ್ರ, ಈ ಹೇಳಿಕೆ ಹಾಗೂ ಚಿತ್ರ ನಮ್ಮನ್ನು ಎಚ್ಚರಿಸುತ್ತಿದೆ, ತಕ್ಷಣ ನಿಮ್ಮ ಕಾರಿನಬ್ರೇಕ್ ಫ್ಲುಯಿಡ್ ಲೆವೆಲನ್ನು ಚೆಕ್ ಮಾಡಲು ಪ್ರೇರೇಪಿಸುತ್ತದೆ. ನಂತರ ಜಾಹಿರಾತಿನಲ್ಲಿ ಯಾವ ಕಂಪನಿಯ ಬ್ರೇಕ್ ಫ್ಲುಯಿಡ್, ಬಳಸಬೇಕು ಎಂಬುದನ್ನು ವಿವರಿಸುತ್ತದೆ. ಯಾವುದೇ ಮುದ್ರಿತ ಜಾಹಿರಾತು ಪರಿಣಾಮಕಾರಿ ಆಗಬೇಕಾದರೆ ಅದು ತನ್ನಲ್ಲಿನ ಚಿತ್ರ, ತಲೆಬರಹ ಹಾಗೂ ಮಾಹಿತಿ ಒಂದಕ್ಕೊಂದು ಪೂರಕವಾಗಿರುವಂತೆ ಜೋಡಿಸಲ್ಪಟ್ಟಿರಬೇಕು

# 5. ಶಿಕ್ಷಣ – ಬದಲಾವಣೆ

ಇಂದಿನ ಶಿಕ್ಷಣ ಪದ್ಧತಿಯ ಬಗ್ಗೆ ಯುವಜನತೆ ವಿಶ್ವಾಸ ಕಳೆದುಕೊಂಡಿದೆ. ಯುವಜನತೆ ಮಾತ್ರವಲ್ಲ, ಉದ್ಯೋಗಪತಿಗಳೂ ಇಂದಿನ ವಿಶ್ವವಿದ್ಯಾನಿಲಯ ಪದವಿಗಳ ಬಗ್ಗೆ ಬೆಲೆನೀಡುತ್ತಿಲ್ಲ. ಉದ್ಯೋಗಾಕಾಂಕ್ಷಿಗಳನ್ನು ಆಯ್ಕೆಮಾಡುವ ಮೊದಲು, ತಮ್ಮದೇ ಆದ ಅರ್ಹತಾ ಪರೀಕ್ಷೆಗಳನ್ನು ನಡೆಸುತ್ತಿರುವುದು ಗಮನಿಸಬೇಕಾದ ಅಂಶ. ಉದ್ಯೋಗ ನೀಡುವ ಶಿಕ್ಷಣ ಇಂದಿನ ಅವಶ್ಯಕತೆ. ಇದಕ್ಕಾಗಿ ಪ್ರಸಕ್ತ ಶಿಕ್ಷಣ ಪದ್ಧತಿಯಲ್ಲಿ ಸುಧಾರಣೆಗಳ ಅವಶ್ಯಕತೆ ಇದೆ. ವಿಶ್ವವಿದ್ಯಾನಿಲಯ ಅನುದಾನ ಆಯೋಗವೂ ಸಹಾ ಈ ನಿಟ್ಟಿನಲ್ಲಿ ಹಲವಾರು ವರ್ಷಗಳಿಂದ ಶಿಕ್ಷಣ ಪದ್ಧತಿಯಲ್ಲಿ ಕೆಲವಷ್ಟನ್ನ ಪ್ರಾಯೋಗಿಕ/ ಕ್ಷೇತ್ರಕಾರ್ಯಗಳನ್ನು ಪಾಠಪ್ರವಚನದ ಒಂದು ಅಂಗವಾಗಿ ನಡೆಸಲು ಸಲಹೆ ಸೂಚನೆಗಳನ್ನು ನೀಡುತ್ತಾ, ಪ್ರೋತ್ಸಾಹಿಸುತ್ತಾ ಬಂದಿದೆ. ಶಿಕ್ಷಣ ಪದ್ಧತಿಯಲ್ಲಿ ಈ Flexibility ತರಲು ಶ್ರಮಿಸುತ್ತಿದೆ. ಬದಲಾಗದ ಸ್ಥಿತಿಯಿಂದ ಬದಲಾಗಬಹುದಾದ ಸ್ಥಿತಿಯೆಡೆಗೆ, ಅಂದರೆ, ವಿಜ್ಞಾನ ವಿದ್ಯಾರ್ಥಿ ಕಲಾವಿಷಯಗಳನ್ನು ಕಲಿಯಲು, ಹಾಗೆಯೇ ಕಲಾವಿದ್ಯಾರ್ಥಿ ವಾಣಿಜ್ಯ ವಿಷಯ ಅಧ್ಯಯನ ಮಾಡಲು, ವಾಣಿಜ್ಯ ವಿದ್ಯಾರ್ಥಿ ಕಲಾ ವಿಷಯ ಅರಿಯಲು ಅವಕಾಶ ಕಲ್ಪಿಸುವಂತೆ ಪ್ರೇರೇಪಿಸುತ್ತಿದೆ. ಒಟ್ಟಿನಲ್ಲಿ ಯಾರು ಏನನ್ನು ಬೇಕಾದರೂ ಅಧ್ಯಯನ ಮಾಡುವ ಅವಕಾಶ ಇರುವಂತಹ ಶಿಕ್ಷಣ ಪದ್ಧತಿ ಸಿ.ಬಿ.ಸಿ.ಎಸ್(Choice based Credit System) ಕಡೆಗೆ ಅದು ಒಲವು ತೋರಿದೆ. ಇದರೊಟ್ಟಿಗೆ ಇತ್ತೀಚೆಗೆ ಪದವಿಜೊತೆಜೊತೆಗೇ ಸರ್ಟಿಫಿಕೇಟ್, ಡಿಪ್ಲೋಮಾ, ಮುಂದುವರಿದ ಡಿಪ್ಲೋಮಾ ಪಡೆಯಲು

ಅವಕಾಶ ಒದಗಿಸಿದೆ. ಪದವಿಯ ಜೊತೆಗೆ, ಜೀವನಾವಶ್ಯಕ ವಿಷಯಗಳಲ್ಲಿ ಪ್ರಥಮ ವರ್ಷ ವ್ಯಾಸಂಗ ಮುಗಿಸಿದರೆ ಸರ್ಟಿಫಿಕೇಟ್, ಎರಡನೇ ವರ್ಷ ಮುಂದುವರೆಸಿ ಪೂರೈಸಿದರೆ ಡಿಪ್ಲೋಮಾ, ಮೂರನೇ ವರ್ಷವನ್ನೂ ಯಶಸ್ವಿಯಾಗಿ ಪೂರೈಸಿದರೆ Advanced Diploma ಪ್ರಮಾಣಪತ್ರ ಪಡೆಯಬಹುದಾಗಿದೆ. ಇದಕ್ಕಾಗಿ ಆಡಳಿತಮಂಡಳಿಗಳಿಗೆ ಆರ್ಥಿಕ ನೆರವನ್ನೂ ನೀಡಲು ವಿಶ್ವವಿದ್ಯಾನಿಲಯ ಅನುದಾನ ಆಯೋಗ ಮುಂದೆಬಂದಿದೆ. ಹಲವಾರು ಸಂಘ ಸಂಸ್ಥೆಗಳು, ಸರ್ಕಾರಿ ಅರೆಸರ್ಕಾರಿ ಸಂಘಟನೆಗಳು ತಮ್ಮದೇ ಆದ ರೀತಿಯಲ್ಲಿ ಉದ್ಯೋಗ ಅವಕಾಶ ಕಲ್ಪಿಸುವ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಾಬಂದಿವೆ. ಕೃಷಿಕ್ ಸರ್ವೋದಯ ಟ್ರಸ್ಟ್ ಸಹಾ ಈಗ್ಗೆ ಆರೇಳು ವರ್ಷಗಳಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಜಿಲ್ಲೆಯ ಹಲವಾರು ಯುವಕರು ಯವತಿಯರು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಯಶಸ್ಸನ್ನು ಸಾಧಿಸಿದ್ದಾರೆ. ಇತ್ತೀಚಿನ ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಕೆ.ಎ.ಎಸ್. ಪರೀಕ್ಷೆಯಲ್ಲಿ ವಸುಂಧರಾ ಆಯ್ಕೆಯಾಗಿರುತ್ತಾರೆ.

ತರಬೇತಿ ನೀಡುವುದರ ಜೊತೆಗೆ ಕೇಂದ್ರದ ಮತ್ತೊಂದು ಆಶಯ ವೃತ್ತಿ ಮಾರ್ಗದರ್ಶನ. ಈ ದಿಸೆಯಲ್ಲಿ ಈಗಾಗಲೇ ವೃತ್ತಿ ಮಾರ್ಗದರ್ಶನದ ಸುಮಾರು ಮುವತ್ತು ವಿವಿಧ ಚಾರ್ಟುಗಳನ್ನು ಸಿದ್ಧಪಡಿಸಲಾಗಿದೆ. ಇವುಗಳನ್ನು ಮಂಡ್ಯ ಜಿಲ್ಲೆಯ ಎಲ್ಲ ಶಾಲಾಕಾಲೇಜುಗಳಿಗೆ ಪುಕ್ಕಟೆಯಾಗಿ ವಿತರಿಸುವ ಯೋಜನೆ, ಯೋಚನೆ ಅದರದು. ಜಿಲ್ಲೆಯ ಎಲ್ಲ ಕಾಲೇಜುಗಳ ಪರಸ್ಪರ ಸಂಪರ್ಕಸೇತುವಾಗಿ ಕಾರ್ಯ ನಿರ್ವಹಿಸುತ್ತಾ ಯುವಜನರ ಉದ್ಯೋಗ ಆಶಯಗಳನ್ನು ಈಡೇರಿಸಿ, ತನ್ಮೂಲಕ ಜಿಲ್ಲೆಯನ್ನು ಶೈಕ್ಷಣಿಕವಾಗಿ, ಆರ್ಥಿಕವಾಗಿ ಶ್ರೀಮಂತಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಲು ಶ್ರಮಿಸುತ್ತಿದೆ. ಧಾರವಾಡದ (ಸೆಡಾಕ್) Centre for Development of Entrepreneurship ಸಂಸ್ಥೆ ಆಯ್ದ ಸ್ಥಳಗಳಲ್ಲಿ ಯುವಜನರಿಗಾಗಿ, ಊಟವಸತಿ ಸಹಿತ ಹಲವು ದಿವಸಗಳ ತರಬೇತಿ ಕಾರ್ಯಾಗಾರಗಳನ್ನು ನಡೆಸುತ್ತಾ ಬಂದಿದೆ. ಕಳೆದ ಶೈಕ್ಷಣಿಕ ವರ್ಷ, ಮಂಡ್ಯದ ಪಿ.ಇ.ಎಸ್. ವಿಜ್ಞಾನ ಕಾಲೇಜು, ಮಹಿಳೆಯರ ಸರ್ಕಾರಿ ಕಾಲೇಜುಗಳಲ್ಲಿ ಇಂತಹ ತಲಾ ಮೂರುದಿನಗಳ ಕಾರ್ಯಾಗಾರಗಳನ್ನು ನಡೆಸಿಕೊಟ್ಟು ವಿದ್ಯಾರ್ಥಿಗಳ ಮೆಚ್ಚಿಗೆಗೆ ಪಾತ್ರವಾಯಿತು. ಇದೇ ಮೇ ತಿಂಗಳ ಅಂತ್ಯದಲ್ಲಿ ವಿಜ್ಞಾನ ಮತ್ತು ಎಂಜಿನಿಯರಿಂಗ್ ಕಾಲೇಜುಗಳ ಅಧ್ಯಾಪಕರಿಗೆ ಒಟ್ಟು ಹನ್ನೆರಡು ದಿವಸಗಳ ಉದ್ಯಮಸಾಹಸಿ ಕಾರ್ಯಾಗಾರವನ್ನು ಊಟವಸತಿಸಹಿತ ಮೈಸೂರಿನಲ್ಲಿ ಆಯೋಜಿಸಲಾಗಿದೆ. ಪ್ರತಿ ಕಾಲೇಜನಿಂದ ಕೇವಲ ಇಬ್ಬರಿಗೆ ಮಾತ್ರ ಪ್ರವೇಶ

ಅವಕಾಶ ಕಲ್ಪಿಸಲಾಗಿದೆ. ಕಾರ್ಯಾಗಾರದ ಪ್ರವೇಶ ನೋಂದಣಿ ಒಬ್ಬರಿಗೆ ಐದುನೂರು ರೂ.ಗಳು. ಈ ಕಾರ್ಯಾಗಾರದ ಪ್ರಯೋಜನ ಪಡೆಯುವುದರ ಜೊತೆಗೆ ನಾವೂ ಸಹಾ ನಮ್ಮ ವಿದ್ಯಾರ್ಥಿಗಳಿಗೆ ಉತ್ತಮ ಹಾಗೂ ಪರಿಣಾಮಕಾರಿ ಮಾರ್ಗದರ್ಶನ ಮಾಡಲು ಶಕ್ತರಾಗೋಣ ಈಗ ನಾವು ನಮ್ಮ ಸಂಸ್ಥೆಗಳಲ್ಲಿ ಮಾಡಬೇಕಾದುದೇನು? ನಮ್ಮಲ್ಲಿನ ಅಧ್ಯಾಪಕವರ್ಗವನ್ನು ಈ ನಿಟ್ಟಿನಲ್ಲಿ ಸಜ್ಜುಗೊಳಿಸಿ ನಮ್ಮ ನಮ್ಮ ಸಂಸ್ಥೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಪ್ರಯತ್ನಿಸುವುದು. ಇದಕ್ಕಾಗಿ ನಮ್ಮ ಎಂದಿನ ಪಾಠಪ್ರವಚನ ವೇಳಾಪಟ್ಟಿಯಲ್ಲಿ ವಾರಕ್ಕೆ ಒಂದು ಘಂಟೆ ಮೀಸಲಿಡಲು ಶ್ರಮಿಸಬೇಕು. ಈ ಅವಧಿಯಲ್ಲಿ ಪಠ್ಯೇತರ ಜೀವನಾವಶ್ಯಕ (Life skills) ತರಗತಿಗಳನ್ನಾಗಲೀ, ವಿಶ್ವವಿದ್ಯಾನಿಲಯ ಅನುದಾನ ಆಯೋಗವೂ ಸೂಚಿಸಿರುವಂತಹ ಡಿಪ್ಲೋಮಾ ವಿಷಯಗಳನ್ನು ಕಲಿಸಲು ಪ್ರಯತ್ನಪಡಬೇಕು. ನಮ್ಮಲ್ಲಿನ ತರಬೇತಾದ ಅಧ್ಯಾಪಕರ ನೈಪುಣ್ಯವನ್ನು ಈ ಸಮಯದಲ್ಲಿ ಬಳಸಬೇಕು. ಕೃಷಿಕ್ ಸರ್ವೋದಯ ಟ್ರಸ್ಟ್ ಹಮ್ಮಿಕೊಂಡಿರುವ ಮಹತ್ವಾಕಾಂಕ್ಷಿ ಯೋಜನೆಯಾದ ಉದ್ಯೋಗಮೇಳದಲ್ಲಿ ನಮ್ಮ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಆಯ್ಕೆಯಾಗುವಂತೆ ತರಬೇತಿ ವ್ಯವಸ್ಥೆ ಮಾಡಬೇಕು.

# 6. ಆ ದೇವ್ರಿಗೇ ಸಂಕಟ ಬಂದಾಗ

ಸಂಕಟಬಂದಾಗ ವೆಂಕಟ್ರಮಣಾ ಅಂತಾರೆ ನಮ್ ಹಿರಿಯೋರು. ಹುಟ್ಸಿದ ದೇವ್ರು ಹುಲ್ಮೇಯಿಸ್ತಾನಾ ಅಂತಾನೂ ಇರ್‍ತಾರೆ. ಅಂದ್ರೆ ನಂ ತರದವ್ರ ತೊಂದ್ರೆಗಳ್ಗೆಲ್ಲಾ ಪರಿಹಾರಾ ಕೊಡೋ ಕೆಲ್ಸ ಆ ದೇವ್ರದ್ದು ಅಂದಹಾಗಾಯ್ತು. ಆದ್ರೆ ಆ ದೇವ್ರಿಗೇ ಸಂಕಟ ಬಂದ್ರೆ ಯಾರನ್ನ ಕೋರೋದು? ನೀವು ಕೇಳಿರಬಹುದು. ಇತ್ತೀಚೆಗೆ ಕರ್ನಾಟಕದ ಆರ್.ಟಿ.ಐ ಕಾರ್ಯಕರ್ತರೊಬ್ಬರು ತಿಮ್ಮಪ್ಪನಿಗೇ ನೋಟೀಸ್ ಕೊಟ್ಟಿದ್ದಾರೆ. ಅದೇ ತಿರುಪತಿ ವೆಂಕಟರಮಣನಿಗೆ! ಅವನು ಕುಬೇರನಿಂದ ಪಡೆದ ಸಾಲ ಎಷ್ಟು? ಪ್ರತಿವರ್ಷ ಕೋಟಿಕೋಟಿ ಕಾಣಿಕೆ ಪಡೆಯುವ ತಿಮ್ಮಪ್ಪ ಆ ಕುಬೇರನ ಸಾಲ ಇನ್ನೂ ತೀರಿಸಿಲ್ಲವಾ? ಇನ್ನೂ ಎಷ್ಟು ವರ್ಷ ಬೇಕು ಈ ಸಾಲ ತೀರುವಳಿಗೆ. ನಮ್ಮ ಮೀಟರ್ ಬಡ್ಡಿ ದಂದೆಯವರ ತರಹಾ ಸಾಲಕ್ಕಿಂತ ಬಡ್ಡಿ ಮೇಲೆ ಬಡ್ಡಿ ಹಾಕ್ತಾಯಿದಾನಾ ಆ ಕುಬೇರ! ಇತ್ಯಾದಿ. ಬಂತಲಪ್ಪಾ ಪೀಕಲಾಟ ಆ ದೇವನಿಗೆ.

ಅದು ಬಿಡಿ. ಈಗ ಆ ತಿಮ್ಮಪ್ಪನ ಆಡಳಿತಮಂಡಳಿಯವರು, ದೇಶ, ವಿದೇಶದ ಹಲವಾರು ಸ್ಥಳಗಳಲ್ಲಿ ಬ್ರಾಂಚ್ ತೆರೆಯಲು ಹೊರಟಿದ್ದಾರಂತೆ! ಹೀಗೆ ಹಲವಾರು ಬ್ರಾಂಚ್ ತೆರೆಯೋಬದಲು ಆ ಹಣವನ್ನು ಭಾರತದಲ್ಲಿ ಬಯಲುಮುಕ್ತ ಶೌಚಾಲಯಗಳನ್ನು ಕಟ್ಟಿಸಲು ಬಳಸಬಹುದೆಂಬುದು ಆ ಆರ್‌ಟಿಐ ಕಾರ್ಯಕರ್ತರ ವಾದ. ಒಪ್ಪಬಹುದಾದ ಸಲಹೆ ಅಲ್ವಾ.

ಬ್ರಮ್ಹ ಹುಟ್ಸೋ ದೇವ್ರು, ರಾಜಾಸ್ತಾನದ ಪುಷ್ಕರದಲ್ಲಿ ಅವನ್ಗೊಂದು ಗುಡಿ ಕಟ್ಸಿದ್ರು. ಮನೆ ಮಾಡ್ಕೊಂಡ್ಮೇಲೆ ಮಡದಿ

ಕರಸ್ಕೋಬೇಡ್ವಾ. ಅದ್ಕೆ ಬ್ರಮ್ಹಾನೂ ತನ್ನೆಡ್ತಿ ಸರಸೋತಿಗೆ ಏಳ್ಕಳ್‌ಸ್ದಾ. ಸರಸೋತಿ ಗಂಡನ್ತಾವ ಬರೋಕೆ ಬೋ ತಡ ಮಾಡಿದ್ಲು. ಬೇಸ್ರವಾದ ಬ್ರಮ್ಹ ಗಾಯಿತ್ರೀನ ಕಟ್ಕಂಡು ಮನೇಲಿಟ್ಕಂಡ, ಇದ್ರಾಗೇನೈತಪ್ಪಾ ತಪ್ಪು? ಸರಸೋತಿ ಲೇಟಾಗಿ ಬಂದ್ನೋಡಿದ್ಲು, ತನ್ಗಂಡ ಬೇರೊಬ್ಳೊಡ್ನೆ ಸಂಸಾರ ಮಾಡ್ತಾವ್ನೆ. ರೋಸೋಗಿ ಪಕ್ಕದ್ ಬೆಟ್ಟದಮೇಲೋಗಿನಿಂತ್ಕಂಡ್ಲು. ಜನಾ ಅಲ್ಲೂ ಒಂದ್ಗುಡಿ ಕಟ್ಟ್ಬಿದ್ರು.

ಅದ್ಯಾಕೊ ಜನ್ರಿಗೆ ಸರಸೋತಿ ಗುಡೀಗೆ ಓಗೋಕೆ ಬೇಸ್ರ ಬಂತೋ ಇನ್ಯಾವ ಕಾರ್ಣಕ್ಕೋ ಗುಡೀಗೆ ಸಂಪಾದ್ನೆ ಕಡ್ಮೆ ಆಗ್ತಾ ಬಂತು. ಸರಸೋತಿ ಪೂಜಾರಪ್ಪ ಉಪ್ವಾಸ ಸಾಯೋ ಅಂಗಾದ. ಬದ್ಕೋ ದಾರಿ ಯೋಚ್ನೆ ಮಾಡ್ದಾಗ ಕೈಗೆ ಸಿಕ್ತು ಭಾರತದ ಸಂವಿಧಾನ! ಜನಕ್ಕೆ ಬದ್ಕೋ ಅಕ್ಕು ಕೊಟ್ಟಿರೋದು ಈ ಸಂವಿಧಾನ. ಆಕ್ದಾ ಬ್ರಮ್ಹನ ಮೇಲೆ ಒಂದ್ಕೇಸಾ! ಜೀವನಾಂಸ ಕೊಡ್ಲಿ ಅಂತಾ. ಬಂತು ಬ್ರಮ್ಹನ್ಗೂ, ಅವ್ನ ಪೂಜಾರಪ್ಪಂಗೂ ಪೀಕ್ಲಾಟ; ಮೊದ್ಲ ಎಂಡ್ತಿ ಬದುಕಿರೋವಾಗ ಎರಡನೇ ಮದ್ವೆ ಮಾಡ್ಕಂಡ್ರೆ ಎಂಗಾಯ್ತದೆ ಊರ್ಜಿತ? ಕೊಡ್ಲಿ ಬ್ರಮ್ಹನ ಆದಾಯದಲ್ಲಿ ಒಂದ್ಪಾಲಾ ಅಂತ. ಈ ಕೇಸು ಇನ್ನೂ ಇತ್ಯರ್ಥ ಕಾಣ್ದೆ ಕೂತದೆ ಕೋರ್ಟ್ನಲ್ಲಿ. ಯಾರ್ಪರ ತೀರ್ಪು ಹೊರ್ಬರ್ತದೆ ನೋಡ್ಬೇಕು. ಓಗಿದ್ ಬರ್ಲಾ!

# 7. ಕಾಲಾಯ ತಸ್ಮೈ ನಮಃ

ಕಾಲ ಕೆಟ್ಟುಹೋಗಿದೆ ಅಂತ ನನಗನ್ನಿಸಿದೆ, ನೀವೇನಂತೀರಿ? ಹಿಂದೆ "ಪಶ್ಚಾತ್ತಾಪ ಅನ್ನೋ ಪ್ರೊಫೆಸರ್ ಹಿರಣ್ಣಯ್ಯನವರ ನಾಟಕವೊಂದನ್ನು ನೋಡಿದ್ದೆ. ಅದರಲ್ಲಿನ ಒಂದು ಸಂಭಾಷಣೆ ಹೀಗಿದೆ "ಕಾಲ ಕೆಟ್ಟೋಗೋಕ್ಕೇನು ನಾಯಿ ಬೆಕ್ಕಿನ ಮರಿ ಹಾಕ್ತದಾ, ಇಲ್ಲ ಬೆಕ್ಕು ನಾಯಿಮರಿ ಹಾಕ್ತದಾ? ಕಾಲ ಕೆಟ್ಟೋಗಿಲ್ಲ ಮಗಾ, ಕೆಟ್ಟೋಗಿರೋದು ನಾವು ನರಮನುಷ್ಯರು" ಅಂತ. ಆ ರೀತಿ ಯೋಚಿಸಿದರೆ ನಿಜ, ಕಾಲ ಎಂದೂ ಕೆಡುವುದಿಲ್ಲ, ಕೆಡಿಸುವವರು ಏನಿದ್ದರೂ ಎಂದಿದ್ದರೂ ನಾವೇ. ಆದರೂ ಈ ವಿಜ್ಞಾನಿಗಳು ಇದ್ದಾರಲ್ಲಾ, ಅವರಿಗೆ ಸುಮ್ಮನಿರೋಕ್ಕೇ ಆಗೋದಿಲ್ಲ, ಏನಾದರೂ ಹೊಸದು ಮಾಡಬೇಕು ಅಂತಾ ಪ್ರಯತ್ನಮಾಡ್ತಿರ್ತಾರೇ. ಕೃತಕ ಅಂಗಾಂಗಗಳನ್ನು ಸೃಷ್ಟಿಮಾಡೋದೂ, ಹುಲಿಸಿಂಹವನ್ನು ಕೂಡಿಸಿ "ಹುಸಿಂಹ" ಅಥವಾ "ಸಿಂಹುಲಿ", ಕತ್ತೆ ಕುದುರೆ ಕೂಡಿಸಿ "ಕದ್ರೆ" ಅಥ್ವಾ 'ಕುತ್ತೆ'ಸೃಷ್ಟಿಮಾಡೋದೂ ಹೀಗೆ. ಇತ್ತೀಚೆಗೆ ಒಬ್ಬ ವಿಜ್ಞಾನಿ ಕೃತಕ ಕಿವಿ ತಯಾರಿಸಿದರೆ, ಮತ್ತೊಬ್ಬ ಕೃತಕ ಹೃದಯ ತಯಾರಿಸಿದ. ಕೆಲವು ಜೀವನಕ್ಕೆ ಉಪಯುಕ್ತವಾದವುಗಳಾದರೆ, ಮತ್ತೆ ಕೆಲವು ಅಂತಹ ಉಪಯುಕ್ತ ಅನ್ನಿಸದು. ಒಬ್ಬ ಕಾಫಿ ಕುಡಿಯಿರಿ ಅಂದರೆ ಮತ್ತೊಬ್ಬ ಟೀ ಕುಡಿಯಿರಿ ಅನ್ನುತ್ತಾನೆ; ಒಬ್ಬ ಹಾಲುಕುಡಿಯುವುದು ಅನಿಷ್ಟ ಅಂದರೆ ಮತ್ತೊಬ್ಬ ಆಲ್ಕೋಹಾಲ್ ಕುಡಿಯುವುದೂ ಒಳ್ಳೆಯದೇ ಅನ್ನುತ್ತಾನೆ. ಈ ವಿಷಯ ಬಿಡಿ. ಕಾಲ ಬದಲಾಗಿದೆ ಅಂತ ನಾವು ಏಕೆ ಭಾವಿಸುತ್ತೇವೆ ಅನ್ನೋದಕ್ಕೆ ನನ್ನ ವಿಶ್ಲೇಷಣೆಯೇ ಬೇರೆ.

ಹಿಂದೆಲ್ಲಾ "ಲಕ್ಷಾಧೀಶ" ರೆಂದರೆ ಶ್ರೀಮಂತರು ಎನ್ನುತ್ತಿದ್ದರು. ಆದರೆ ಈ ಸಾಫ್ಟ್‌ವೇರ್ ಮಂದಿಯಿಂದ, ಇಂದು ಶ್ರೀಮಂತರೆನ್ನಿಸಿಕೊಳ್ಳಬೇಕೆಂದರೆ ಅವರು "ಕೋಟ್ಯಾಧೀಶ"ರೇ ಆಗಿರಬೇಕು. ಸತ್ತಾಗ ಉಟ್ಟಬಟ್ಟೆಯನ್ನೂ ಹೊತ್ತೊಯ್ಯಲಾರ-ದವನಿಗೆ ಇಷ್ಟೊಂದು ಸ್ತ್ರೀದಾಹ, ಭೂದಾಹ ಹಾಗೂ ದನದಾಹ ಏಕೋ ಗೊತ್ತಿಲ್ಲ! ಮನುಷ್ಯನಿಗೆ ಎರಡುಹೊತ್ತಿನ ಗಂಜಿಗೆ, ಉಡುವ ಬಟ್ಟೆಗೆ ಸಾಕು ಎನಿಸುವಷ್ಟೇ ಇದ್ದರೆ, ಅವನು ಸುಖಿ ಆಗಿರುತ್ತಾನೆ. ಅಗತ್ಯಕ್ಕಿಂತ ಹೆಚ್ಚಿಗೆ ಕೈನಲ್ಲಿ ಹಣಸೇರಿದರೆ, ಅವನು ವಿಲಾಸೀಜೀವನ ನಡೆಸಲು ಹೊರಡುತ್ತಾನೆ. ಮತ್ತೆ ಹಿರಣ್ಣಯ್ಯನ ಡಯಲಾಗ್ ನೆನಪಿಗೆ ಬರುತ್ತಾ ಇದೆ. 'ಸಂಸಾರಕ್ಕೆ ಸಂಬಳ, ಸುಖಕ್ಕೆ ಗಿಂಬಳ'! ಅವನನ್ನು ಕಂಡ, ಆದರೆ ಅಂತಹ ಸಂಪಾದನೆ ಇಲ್ಲದ ಮಂದಿ, ದರೋಡೆಕೋರರಾಗಿಯೋ, ಕಳ್ಳಕಾಕರಾಗಿಯೋ, ಅಕ್ರಮಮಾರ್ಗ ಹಿಡಿದೋ ಹಣಸಂಪಾದನೆಗೆ ತೊಡಗುತ್ತಾರೆ. ಇವಕ್ಕೆಲ್ಲ ಇರುವ ಒಂದು ಉಪಾಯ ಅಂದರೆ, ಮೊದಲು ಆಸ್ತಿಹಕ್ಕನ್ನು ರದ್ದುಗೊಳಿಸುವುದು; ಅದಕ್ಕೆಬದಲು ಅವಶ್ಯಕತೆ ಅನುಸರಿಸಿ, ಆಡಳಿತವೇ ಸೌಲತ್ತುಗಳನ್ನು ಅವರಿರುವಷ್ಟು ಕಾಲವೂ ಒದಗಿಸುವುದು. ಇದು ಕಮ್ಯೂನಿಸಂ. ನಿಜ ಹೇಳಬೇಕೆಂದರೆ, ನಿಮ್ಮ ಆಸ್ತಿ ನಿಮ್ಮದಲ್ಲ, ಅದನ್ನು ನಿಮ್ಮ ಜೀವಿತಾವಧಿಯಲ್ಲಿ ಉಪಯೋಗಿಸುವ ಹಕ್ಕುಮಾತ್ರ ನಿಮಗೆ ಸರ್ಕಾರ ಕೊಟ್ಟಿದೆ. ಆ ಬಳಸುವಹಕ್ಕನ್ನು ನೀವು ನಿಮ್ಮ ಮಕ್ಕಳಿಗೋ, ಸಂಬಂಧಿಗಳಿಗೋ ವರ್ಗಾಯಿಸಬಹುದು. ಉತ್ತರಾಧಿಕಾರಿಗಳು ಇಲ್ಲದಿದ್ದ ಸಂದರ್ಭದಲ್ಲಿ ಅದು ಸರ್ಕಾರದ ವಶಕ್ಕೆ ಹೋಗುತ್ತದೆ. ಇದು ನಿಮಗೆ ತಿಳಿಯದೇ?

"ಮಾತೃದೇವೋಭವ" "ಪಿತೃದೇವೋಭವ" ಅಂತ ಹೇಳಿಕೊಡುತ್ತಲೇ ಬೆಳೆಸಿದರು ನಮ್ಮ ತಂದೆತಾಯಂದಿರು.ಆದರೆ ಇಂದು ಎಷ್ಟು ಜನಾ ಈ ತತ್ವ ಪಾಲಿಸುತ್ತಿದ್ದಾರೆ? ಹಾಗೆ ಅವರು ಪಾಲಿಸುತ್ತಿದ್ದುದೇ ನಿಜವಾಗಿದ್ದರೆ, ಏಕೆ ಇಂದು ಇಷ್ಟೊಂದು "ವೃದ್ಧಾಶ್ರಮ"ಗಳು ಹುಟ್ಟಿಕೊಳ್ಳುತ್ತಿದ್ದವು? ಹೆಣ್ಣಿಗೆ ದೇವತೆ ಸ್ಥಾನ ನೀಡುತ್ತೇವೆನ್ನುವ ನಾವು ಇಂದು ಅವರನ್ನು ಹೇಗೆ ನಡೆಸಿಕೊಳ್ಳುತ್ತಿದ್ದೇವೆ? ಅವರನ್ನು ಮಾತೆತ್ತಿದರೆ "ಕ್ಷಮಯಾ ಧರಿತ್ರೀ" ಅಂತ ಹೇಳಿ, 'ನಿಮಗೆ ನಾವೇನು ಮಾಡಿದರೂ, ನೀವು ನಮ್ಮನ್ನು ಕ್ಷಮಿಸಬೇಕು ಎಂದು ಬಯಸುವ ನಾವು, ಅವರು ನಮ್ಮನ್ನು ಕ್ಷಮಿಸುವಂತೆ ನಡೆದುಕೊಳ್ಳುತ್ತಿದ್ದೇವೆಯೇ? ಎಲ್ಲ ಬರೀ ಪ್ರಶ್ನೆಗಳೇ, ಉತ್ತರವಿಲ್ಲದ ಪ್ರಶ್ನೆಗಳು. ಇದನ್ನು ಸರಿಪಡಿಸುವುದಾದರೂ ಹೇಗೆ? ಕೆಲವು ತಪ್ಪುಗಳನ್ನು ಸರಿಪಡಿಸಲು ಕಠಿಣ ಶಿಕ್ಷೆ ಅತ್ಯವಶ್ಯಕ ಅನ್ನಿಸುತ್ತದೆ. ಆದರೆ ಇಂದು ಶಿಕ್ಷೆ ಕೊಡುವುವಕ್ಕೆ ಸಾಧ್ಯವಿಲ್ಲ. ಶಿಕ್ಷಕರು, ತಪ್ಪುಮಾಡಿದ ವಿದ್ಯಾರ್ಥಿಗಳನ್ನು,

ತಂದೆತಾಯಿಯರು ತಮ್ಮದೇ ಮಕ್ಕಳನ್ನು ಬಡಿಯುವುದಿರಲಿ, ಗದರಿಸಿದರೂ ಅವರನ್ನು ಜೈಲಿಗಟ್ಟುವ ನಿಯಮಗಳು ಬರುತ್ತಿವೆ. ಜನರಲ್ಲಿ ನೈತಿಕತೆ ಏನಾಗಿದೆ? "ಯತ್ರ ನಾರ್ಯಂತು ಪೂಜ್ಯಂತೇ, ತತ್ರ ವಸತಿ ದೇವತಾಃ" ಅನ್ನುವ ದೇಶದಲ್ಲಿ ಇಂದು ತಂದೆ ಮಗಳಮೇಲೆ, ಅಣ್ಣ ತಂಗಿಯ ಮೇಲೆ ಅತ್ಯಾಚಾರ ಎಸಗುವುದು, 3 ವರ್ಷದ ಮಕ್ಕಳಿಂದ 70 ವರ್ಷದ ಮಹಿಳೆಯರತನಕ ಎಲ್ಲರಮೇಲೆ ಬಾಲಕರಿಂದ, ಮುದುಕರಿಂದ ಅತ್ಯಾಚಾರ ನಡೆಯುತ್ತಿದೆ. ಶಾಲೆಗಳಲ್ಲಿ ಶಿಕ್ಷಕರಿಂದ ಅತ್ಯಾಚಾರ ಪ್ರಕರಣಗಳು ದಿನಬೆಳಗಾದರೆ ಟಿವಿ ಚಾನಲ್‌ಗಳಲ್ಲಿ ಪ್ರಸಾರವಾಗುತ್ತಿವೆ. ದೇವರ ವಿಗ್ರಹಗಳನ್ನೇ ಕದಿಯುತ್ತಿದ್ದಾರೆ, ಹುಂಡಿಗಳನ್ನು ಒಡೆಯುವುದು, ದೇವಸ್ಥಾನ, ಪವಿತ್ರ ಸ್ಥಳಗಳನ್ನು ಅಪವಿತ್ರಗೊಳಿಸುವುದು ಸಾಮಾನ್ಯವಾಗಿದೆ.

ಇಂದಿನ ನೀತಿಪಾಠ ನೀನು ಇರಬೇಕಾದುದು ಮಹಾತ್ಮರ 3 ಮಂಗಗಳ ಹಾಗೆ "ಯಾರು ಹೇಗಾದರೂ ಹಾಳಾಗಲಿ, ನೋಡಿಯೂ ನೋಡದಂತಿರು, ಕೇಳಿಯೂ ಕೇಳಿಸದಂತಿರು, ಅಪ್ಪಿತಪ್ಪಿಯೂ ನಿನ್ನ ಬಾಯಿತೆರೆಯುವ ಸಾಹಸಕ್ಕೆ ಕೈಹಾಕಬೇಡ, ತಿದ್ದುವ ತಪ್ಪು ಎಂದೂ ಮಾಡದಿರು". ವಕೀಲರು ವೃತ್ತಿಧರ್ಮದ ಹೆಸರಿನಲ್ಲಿ ಖೂನಿಮಾಡಿದವರನ್ನು, ಅತ್ಯಾಚಾರಿಗಳನ್ನು ಶಿಕ್ಷೆಯಿಂದ ಪಾರುಮಾಡಲು ಸರ್ವ ಪ್ರಯತ್ನ ಮಾಡುತ್ತಿರುತ್ತಾರೆ. ಅಪ್ರಾಪ್ತನೆನ್ನುವ ಕಾರಣಕ್ಕಾಗಿ ಒಬ್ಬ ಅತ್ಯಾಚಾರಿಯನ್ನು ಶಿಕ್ಷೆಯಿಂದ ತಪ್ಪಿಸುವುದು ಎಷ್ಟು ಸಮಂಜಸ? ಅಂತಹ ಕೃತ್ಯ ಎಸಗುವವ ಯಾವ ದೃಷ್ಟಿಯಿಂದ, ಅಪ್ರಾಪ್ತ? ಇಂತಹವರಿಗೆ ಶಿಕ್ಷೆಯಲ್ಲಿ ರಿಯಾಯಿತಿತೋರಿದರೆ, ಮುಂದೆ ಇನ್ನಷ್ಟು ಮಂದಿ ಅಪ್ರಾಪ್ತರಿಗೆ ಅಥವಾ ಅಪ್ರಾಪ್ತರೆಂಬ ನಕಲಿ ಪ್ರಮಾಣಪತ್ರ ಸಲ್ಲಿ. ಇಂತಹ ನೀಚಕೃತ್ಯ ಎಸಗುವವರಿಗೆ ಉತ್ತೇಜಿಸಿದಂತೆ ಆಗುವುದಿಲ್ಲವೇ? ಎಲ್ಲರೂ ಯೋಚಿಸಬೇಕಾದ ವಿಷಯ ಇದು. ಕುಡಿದ ಮತ್ತಿನಲ್ಲಿ ಎಂತಹ ಕೃತ್ಯ ಎಸಗಿದರೂ, ಮಾಫಿ ಮಾಡಬಹುದೇ? ಇದೆಂತಾ ನೀತಿ? ಇನ್ನು ಕ್ರೂರ ಶಿಕ್ಷೆ ವಿಧಿಸಬೇಕೆಂದರೆ, ಮಾನವ ಹಕ್ಕುಗಳ ಸಂಸ್ಥೆಗಳು ದೊಡ್ಡ ಗಂಟಲು ತೆಗೆದು ಅದರ ಜಾರಿಯನ್ನು ತಡೆಯುತ್ತವೆ. ಪರೋಕ್ಷವಾಗಿ ತಪ್ಪು ಮಾಡಿದವರ ಬೆನ್ನಿಗೆ ನಿಲ್ಲುತ್ತವೆ. ಅದಕ್ಕೇ, ಕಾಲ ಕೆಟ್ಟು ಹೋಗಿದೆ ಅನ್ನುವ ಬದಲು ನಾವು ಕೆಟ್ಟುಹೋಗಿದ್ದೇವೆ ಅನ್ನೋಣವೇ? ! ಎಲ್ಲೋ ಯಾರೋ ಈ ಅಪ್ರಾಪ್ತ ಎನ್ನುವವರ ವಯಸ್ಸನ್ನು 18 ರಿಂದ 14ಕ್ಕೋ 12ಕ್ಕೋ ಇಳಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನೀವೇನಂತೀರಿ?

# 8. ಮುಖ(ಅವ)ಲಕ್ಷಣ:

ಅದೇನೋ ಗೊತ್ತಿಲ್ಲ. ನನಗೆ ಹಲವಾರು ಭಾರಿ ಈ ಅನುಭವ ಆಗಿದೆ. ಮೊದಲಿಗೆ ಯಾವುದಾದರೂ ಕಾರಣಕ್ಕಾಗಿ ಒಬ್ಬರು ಪರಿಚಯ ಬೆಳೆಸಿಕೊಳ್ಳುತ್ತಾರೆ. ಕೆಲವು ಸಮಯದನಂತರ ಸಾಲ ಕೇಳತೊಡಗುತ್ತಾರೆ. ಇಲ್ಲ ಅಂದರೆ ಬೇಸರಿಸುತ್ತಾರೆ, ಕೊಟ್ಟರೆ ವಸೂಲಿಮಾಡುವುದರಲ್ಲಿ ಬಲು ಕಷ್ಟ ಆಗುತ್ತದೆ. ಮೊದಲ ಅನುಭವ ಮಂಡ್ಯಕ್ಕೆ ಹೊಸದಾಗಿ ಹೋಗಿ ವಾಸಿಸತೊಡಗಿದಾಗ ಆಗಿದ್ದು. ನಾನು ಮೊದಲು ಮಂಡ್ಯದಲ್ಲಿ ಬಾಡಿಗೆ ಹಿಡಿದ ಮನೆಮಾಲೀಕನ ಮಗ ಅಶೋಕನೊಡನೆ ಸಂಜೆಹೊತ್ತು ಸಂಜಯ ವೃತ್ತದಲ್ಲಿ ಒಬ್ಬ ಪಾನೀಪೂರಿಮಾರುತ್ತಿದ್ದವನ ಬಳಿ ಮಸಾಲಪೂರಿ, ಪಾನೀಪೂರಿ ತಿನ್ನುತಿದ್ದೆವು. ರುಚಿ ಬಲುಚೆನ್ನಾಗಿತ್ತು. ಆಮೇಲೆ ಅದೇನೋ ಮೊಟ್ಟೆ ಅಂತ ಪೂರಿ ಒಳಗೆ ಆಲೂಗಡ್ಡೆ ಪಲ್ಯ ಹಾಕಿ, ಪಾನಿಯನ್ನು ಬೇರೆಬಟ್ಟಲಿನಲ್ಲಿ ಹಾಕಿಕೊಡುತ್ತಿದ್ದ. ಸೇಟು ಐಕಳು ದಹೀ ಪೂರಿ ಬೇಲ್ಪೂರಿ ಅಂತ ಇನ್ನೂ ಏನೇನೋ ಹೆಸರಿನ ಪೂರಿ ತಿನ್ನುತ್ತಿದ್ದರು. ಅವನ ಬಳಿ ಸಂಜೆ ಆಯಿತೆಂದರೆ ಪಾನೀಪೂರಿ ತಿನ್ನುವುದು ಒಂದು ಚಟವೇ ಆಯಿತು. ಮುಂದೆ ಸುಭಾಶ್‌ನಗರದ ಬಾಡಿಗೆಮನೆಗೆ ಶಿಫ್ಟ್ ಮಾಡಿದಾಗಲೂ ನನ್ನ ಶ್ರೀಮತಿಯೊಡನೆ ಆಗಾಗ ಅವನ ಗಾಡಿಕಡೆಗೇ ಪಾನೀಪೂರಿ ತಿನ್ನಲು ಹೋಗುತ್ತಿದ್ದೆವು. ಕೆಲಸಲ ಮನೆಮುಂದೆ ಕೂತಿರುವಾಗ ಆ ವ್ಯಕ್ತಿ ನಮ್ಮ ಮನೆಮುಂದಿನಿಂದ ಹೋಗುತ್ತಿದ್ದ. ಅವನ ಮನೆಯೂ ನಮ್ಮ ಮನೆಯ ರಸ್ತೆಯಿಂದ ಮೂರನೇ ರಸ್ತೆ ಆಗಿತ್ತು ಅನ್ನುವುದು ನಂತರ ಗೊತ್ತಾಯಿತು. ಹೋಗಿಬರುವಾಗಲೆಲ್ಲಾ ನಮಸ್ಕಾರ ಮಗುಳ್ನಗು ವಿನಿಮಯವಾಗುತ್ತಿತ್ತು.

ಒಂದು ದಿನ ಸಂಜೆ ಮನೆಮುಂದೆ ಕುಳಿತ್ತಿದ್ದೆ. ಆ ಆಸಾಮಿ ಹೋಗುತ್ತಿದ್ದವ 'ನಮಸ್ಕಾರ' ಅನ್ನುತ್ತಾ ದಢಕ್ಕಂತ ನನ್ನ ಬಳಿಬಂದು ಪಕ್ಕದಲ್ಲೇ ಕುಳಿತ. ಅದೂಇದೂ ಮಾತನಾಡುತ್ತಾ 'ಸಾರ್, ನಿಮ್ಮಿಂದ ಒಂದು ಚಿಕ್ಕಸಹಾಯ ಆಗಬೇಕಿದೆ' ಅಂತ ಪೀಠಿಕೆ ಹಾಕಿದ. ನಾನೂ ಕಾಲೇಜಿನಲ್ಲಿ ಪ್ರಾಧ್ಯಾಪಕ ಆಗಿದ್ದುದರಿಂದ, ಯಾರಾದರೂ ಮಕ್ಕಳಿಗೆ ಕಾಲೇಜಿನಲ್ಲಿ ಸೀಟುಕೊಡಿಸುವುದಕ್ಕಾಗಿಯೋ, ಮನೆಪಾಠ ಹೇಳಿಕೊಡು ಅಂತಲೋ ಕೇಳುತ್ತಾನೆಂದುಕೊಂಡೆ. ಆದರೆ ಆತನ ಮನದಲ್ಲಿದ್ದುದೇ ಬೇರೆ. ಸಧ್ಯದಲ್ಲಿ ಆತನ ಮಗಳ ಮದುವೆ ಗೊತ್ತಾಗಿರುವುದರಿಂದ, ಮನೆಗೆ ಸುಣ್ಣಬಣ್ಣಮಾಡಿಸ ಬೇಕಾಗಿದೆಯಂತೆ 'ಮದುವೆಗಾಗಿ ಅಲ್ಲದಿದ್ದರೂ ಮನೆ ಬಣ್ಣಮಾಡಿಸಲು ಒಂದೆರಡು ಸಾವಿರ ಕೊಡಿ, ಇನ್ನೊಂದು ತಿಂಗಳಲ್ಲಿ ತೀರಿಸಿಬಿಡುತ್ತೇನೆ' ಅಂದ. ನನಗೋ ಧರ್ಮಸಂಕಟ. ಅಷ್ಟೆಲ್ಲ ಹಣಕೊಡಲು ಆಗುವುದಿಲ್ಲ ಅಂತ ಹೇಳಿದೆ.

ಕೊನೆಗೆ 500 ರೂ. ಆದರೂ ಕೊಡಿ ಅಂತ ದುಂಬಾಲುಬಿದ್ದ. ವಿಧಿಯಿಲ್ಲದೇ ಮನೆಯೊಳಗಿನಿಂದ 500 ರೂ. ತಂದುಕೊಟ್ಟೆ. ನಮಸ್ಕಾರ ಮಾಡಿ ಹೋದವ, ತಿಂಗಳಾದರೂ ಹಣ ಹಿಂತಿರುಗಿಸುವವನಂತೆ ಕಾಣಲಿಲ್ಲ. ಸರಿ ಎರಡು ಮೂರು ಸಲ ಸಂಜೆ ಅವನ ಗಾಡಿಬಳಿಹೋಗಿ ಕೇಳಿದೆ. ಇನ್ನೂ ಅಷ್ಟು ಮಾರಾಟ ಆಗಿಲ್ಲ ಅಂದ. ಕೊನೆಕೊನೆಗೆ ಅವನು ನಗದುರೂಪದಲ್ಲಿ ಹಿಂತಿರುಗಿಸುವವನಲ್ಲ ಅಂತ ಗೊತ್ತಾದಮೇಲೆ, ವಾರಕ್ಕೆರಡು ಮೂರಾವರ್ತಿ ನನ್ನ ಶ್ರೀಮತಿಯನ್ನೂ ಕರೆದುಕೊಂಡುಹೋಗಿ, ಮಸಾಲಪೂರಿ, ಪಾನೀಪೂರಿ ತಿಂದು, ಅವನ ಸಾಲದ ಹಣ ವಜಾಮಾಡಿಕೊಂಡೆ ಅನ್ನಿ. ಇಂದಿಗೂ ಯಾವ ಊರಿನಲ್ಲೇ ಆಗಲೀ ಆ ವಾಸನೆ ಮೂಗಿಗೆ ಬಡಿದರೆ ಆ ಮಸಾಲ ಪೂರಿಯನ್ನೇ ತಿನ್ನಬೇಕೆನಿಸುತ್ತದೆ. ಮೈಸೂರಿನಲ್ಲೂ ಹಲವಾರುಕಡೆ ತಿಂದರೂ, ಒಂದು ಕಡೆಮಾತ್ರ ಆ ಮಂಡ್ಯ ಮಸಾಲ ಪರಿಮಳ ಮೂಗಿಗೆ ಬಡಿದಿತ್ತು. ಆಗಾಗ್ಗೆ ತಿನ್ನಲು ಹೋಗುವುದೂ ಉಂಟು.

ಸ್ವಂತ ಮನೆಮಾಡಿಕೊಂಡು ಮೈಸೂರಿಗೆ ಬಂದು ವಾಸಮಾಡುತ್ತಿದ್ದೆ. ನನ್ನ ಸಹೋದ್ಯೋಗಿ ಆಗಿದ್ದ ತುಂಗರವರೊಡನೆ, ಮಂಡ್ಯದಲ್ಲಿದ್ದಾಗ ಅವರ ಹೆಂಡತಿಯ ಕಡೆ ಸಂಬಂಧಿಯೊಬ್ಬರ ಹೋಟಲಿಗೆ ಹೋಗಿ ಆಗಾಗ ತಿಂಡಿತಿನ್ನುತ್ತಿದ್ದೆವು. ಮೈಸೂರಿಗೆ ಬಂದಮೇಲೆ ಒಮ್ಮೆ ತುಂಗರವರು ಮೈಸೂರಿಗೆ ಬಂದಿರುವ ವಿಷಯ ತಿಳಿಸಿದರು. ಅವರನ್ನು ಭೇಟಿಯಾಗಲು ಎಲ್ಲಿಗೆ ಬರಬೇಕೆಂದು ಕೇಳಿದ್ದಕ್ಕೆ ಅವರ ಸಂಬಂಧಿ ಈಗ ಮೈಸೂರಿನ ಆಂದೋಲನ ವೃತ್ತದ ಬಳಿ ಕ್ಯಾಂಟೀನ್

ಪ್ರಾರಂಭಿಸಿರುವ ವಿಷಯ ತಿಳಿಸಿ, ಅಲ್ಲಿಗೇ ಬರಲು ಹೇಳಿದರು. ಅವರು ತಿಳಿಸಿದಕಡೆಗೆ ಹೋಗಿ, ಅವರೊಡನೆ ತಿಂಡಿತಿಂದು, ಕಾಫಿಹೀರಿ ಕೆಲಸಮಯ ಕಳೆದುಬಂದೆ. ಸರಿ ಆ ಕಡೆ ಹೋದಾಗಲೆಲ್ಲಾ ಅವನ ಕ್ಯಾಂಟೀನಿಗೆ ಹೋಗುವುದು. ಮನೆಗೂ ತಿಂಡಿಕಟ್ಟಿಸಿಕೊಂಡುಬರುವುದು ಸಾಮಾನ್ಯವಾಯಿತು. ಮನೆಗೆ ನೆಂಟರುಬಂದಾಗಲೂ ಅದೇ ಕ್ಯಾಂಟೀನಿನಿಂದ ತಿಂಡಿ ತರುತ್ತಿದ್ದೆ. ಇತರರಿಗೆ ಬದಲು ಅವನಿಗೇ ವ್ಯಾಪಾರ ಕೊಡೋಣ ಅಂತ. ಅವನೂ ನಾನು ಹೋದಾಗ ಅರ್ಧಪ್ಲೇಟ್ ಪಲಾವ್, ಒಂದು ಅರ್ಧಲೋಟ ಕಾಫಿ ಹೀಗೆ ಪುಗಸಟ್ಟೆ ಕೊಡುತ್ತಿದ್ದ. ಬಾಯಿತುಂಬಾ 'ಮೇಸ್ಟ್ರೇ' ಅಂತಲೇ ಕರೆಯುತ್ತಿದ್ದ. ಹೀಗೇ ಕೆಲವು ತಿಂಗಳು ಕಳೆಯಿತು. ಒಂದು ದಿನ 'ಮೇಸ್ಟ್ರೇ, ಮೈಸೂರಿನಲ್ಲಿ ಒಂದು ಚಿಕ್ಕತಾರಸಿಮನೆ ನೋಡಿದ್ದೇನೆ. ನನ್ನಬಳಿ ಇರುವ ಹಣದೊಟ್ಟಿಗೆ, ಕೆಲವು ಕಡೆ ಕೈಸಾಲಕ್ಕೂ ಕೇಳಿಕೊಂಡಿದ್ದೇನೆ. ಅವರೂ ಕೊಡಲು ಒಪ್ಪಿರುತ್ತಾರೆ. ಆದರೆ ಬ್ಯಾಂಕಿಗೆ ಸ್ಟಾಂಪ್ ಪೇಪರ್, ಪ್ರೋಸೆಸಿಂಗ್ ಫೀ ಅಂತ 1,00,000 ರೂ ತಕ್ಷಣಕಟ್ಟಬೇಕಾಗಿದೆ. ಮಾವ(ತುಂಗ)ನವರೂ 50,000 ರೂ. ಕೊಡುತ್ತೇನೆ ಅಂದಿದ್ದಾರೆ. ನೀವು 50,000 ರೂ ಕೊಟ್ಟರೆ, ಮುಂದಿನವಾರ ಇನ್ನೊಬ್ಬರಿಂದ ಸಾಲ ಈಸಿಕೊಡುತ್ತೇನೆ' ಅಂದ. ಮತ್ತೆ ನನಗೆ ಧರ್ಮಸಂಕಟ. ಅವನ ಬಳಿ ಪುಗಸಟ್ಟೆ ಕಾಫಿ, ತಿಂಡಿ ತಿಂದಿದ್ದೇನೆ, ತುಂಗರ ಸಂಬಂಧಿ ಬೇರೆ, ಅವನು ಕೇಳಿದಷ್ಟು ಹಣವೂ ನನ್ನ ಬ್ಯಾಂಕು ಖಾತೆಯಲ್ಲಿತ್ತು. ಆದರೂ ಸಾಧ್ಯವಾದರೆ ಒಂದೆರಡು ದಿನದಲ್ಲಿ ಕೊಡುತ್ತೇನೆ ಅಂದು ಅಲ್ಲಿಂದ ಕಳಚಿಕೊಂಡೆ. ಮತ್ತೆ ಕೆಲದಿನ ಆ ಕಡೆ ತಲೆಹಾಕಲಿಲ್ಲ. ಒಮ್ಮೆ ಫೋನ್ ಸಹಾ ಮಾಡಿ 'ಏನ್ ಮೇಸ್ಟ್ರೆ, ಯಾಕೋ ಈ ನಡುವೆ ಕಾಣ್ತಾ ಇಲ್ವಲ್ಲಾ, ಆರೋಗ್ಯ ಸರಿಯಿಲ್ವಾ' ಅಂತ ವಿಚಾರಿಸಿದ. ನನ್ನ ಆರೋಗ್ಯ ಅಷ್ಟು ಚೆನ್ನಾಗಿಲ್ಲ, ಅಲ್ಲದೇ ನನ್ನ ಶ್ರೀಮತಿಗೂ ನಿನ್ನ ಕ್ಯಾಂಟೀನ್ ತಿಂಡಿ ಸರಿಹೋಗುತ್ತಿಲ್ಲ ಅಂತ ಹೇಳಿ ನುಣುಚಿಕೊಂಡೆ. ಮಾರನೇ ಬೆಳಗ್ಗೆ ನನ್ನ ಹೆಂಡತಿಗೆ ವಿಷಯತಿಳಿಸಿದೆ. ಅದಕ್ಕವಳು, ಪಾನೀಪೂರಿ ಪ್ರಸಂಗ ಜ್ಞಾಪಿಸಿಕೊಳ್ಳಿ ಅಂದಳು. ನನಗೂ ಸುಖಾಸುಮ್ಮನೆ ತೊಂದರೆ ಆಹ್ವಾನಿಸುವುದು ಬೇಡ ಅನ್ನುವುದು ಅರಿವಾಯಿತು. ಆದರೆ ಅವನೇ ಮನೆಗೆ ಬಂದು ಮುಂದೆನಿಂತುಬಿಟ್ಟ. ಆಗ ನನ್ನ ಶ್ರೀಮತಿಯೇ ಏನೋ ಸಬೂಬು ಹೇಳಿ ಸದ್ಯಕ್ಕೆ ಹಣಕೊಡಲು ಆಗುವುದಿಲ್ಲ 'ತಪ್ಪುತಿಳೀಬೇಡಿ ಆ ಹಣ ನನ್ನ ಮಗಳಿಗೆ ಕೊಡುವುದಾಗಿ ನಾನು ಮಾತುಕೊಟ್ಟುಬಿಟ್ಟಿದ್ದೇನೆ. ಅದು ತಿಳೀದೇ ಇವರು ನಿಮಗೆ ಕೊಡುವುದಾಗಿ ಹೇಳಿಬಿಟ್ಟಿದ್ದಾರೆ' ಅಂದುಬಿಟ್ಟಳು. ಮುಖಮುನಿಸಿಕೊಂಡು ಹೊರಟುಹೋದ. ಆದರೆ ಹೊಸಮನೆ ಗೃಹಪ್ರವೇಶಕ್ಕೆ ನನ್ನನ್ನೂ, ಕರೆದಿದ್ದ. ಹೋಗಿಬಂದಿದ್ದೆ. ಕೆಲದಿನಗಳನಂತರ ನನ್ನ ತಂಗಿಮನೆಗೆ

ಅದೇ ರಸ್ತೆಯಲ್ಲಿ ಹೋಗಬೇಕಾದಾಗ. ಅವನ ಕ್ಯಾಂಟೀನ್ ಇದ್ದ ಅಂಗಡಿ ಖಾಲಿಯಾಗಿತ್ತು. ಪಕ್ಕದಲ್ಲಿದ್ದ ನನ್ನ ಶ್ರೀಮತಿ, ನೋಡಿದಿರಾ, ಹಣ ಕೊಟ್ಟಿದ್ದರೇ, ಹಾಕುತ್ತಿದ್ದ ನಿಮಗೆ ಮೂರುನಾಮ ಅಂದು ಹಂಗಿಸಿದಳು. ಕೊನೆಗೆ ಗೊತ್ತಾಗಿದ್ದು, ಅವನು, ಕ್ಯಾಂಟೀನ್ ಖಾಲಿಮಾಡಿ ತಾನು ಕೊಂಡಿದ್ದ ಹೊಸಮನೆಯ ವೃತ್ತದಲ್ಲಿ ತಳ್ಳುವಗಾಡಿಯಲ್ಲಿ ಮನೆಕಟ್ಟುವ ಕೂಲಿ ಆಳುಗಳಿಗಾಗಿ ಅನ್ನ, ಸಾಂಬಾರ್ ಮಾರುತ್ತಿದ್ದಾನೆ ಅಂತ. ನನ್ನ ಹೆಂಡತಿಯ ಸಮಯಪ್ರಜ್ಞೆಯಿಂದ ಪಾರಾಗಿದ್ದೆ ಎರಡನೇ ಸಲ.

ಈಚೆಗೆ ನನ್ನ ಮನೆ ಇಂಟರ್‌ನೆಟ್ ಕೆಟ್ಟುಹೋಗಿತ್ತು. ಊರಿಗೊಬ್ಬಳೇ ಪದ್ಮಾವತಿ ಅನ್ನುವಹಾಗೆ ನಮ್ಮ ಏರಿಯಾದಲ್ಲಿ ಅದನ್ನು ಸರಿಪಡಿಸಲು ಇದ್ದವನು ಅವನೊಬ್ಬನೇ, ಅವನೇ ರಾಜು. ಈ ಹಿಂದೆಯೂ ಹಲವು ಸಲ ಇಂಟರ್‌ನೆಟ್ ಸರಿಮಾಡಿಕೊಟ್ಟಿದ್ದ. ಫೋನುಮಾಡಿ, ವಿಳಾಸ, ಹೆಸರು ಹೇಳಿದಾಕ್ಷಣ 'ಸಾರ್, ಮಂಡ್ಯಕುಮಾರ್ ಅಲ್ವಾ ಸಾರ್' ಅಂದು 10 ನಿಮಿಷದಲ್ಲಿ ಮನೆಮುಂದೆ ಹಾಜರಾದ. ಸ್ವಿಚ್ ಆನ್ ಮಾಡಿನೋಡಿದ ತಕ್ಷಣ 'ಸಾರ್ ಮೋಡಮ್‌ನಲ್ಲಿ ಲೈಟುಬರುತ್ತಿಲ್ಲ, ಮೋಡಮ್ ಬದಲಾಯಿಸಬೇಕು. ಈಗ ಡಿಪಾರ್ಟ್‌ಮೆಂಟನವರು, ಮೋಡಮ್ ಸಪ್ಲೈಮಾಡುತ್ತಿಲ್ಲ. ಅಲ್ಲದೇ ಈಗಿನ ಮೋಡಮ್‌ಗಳು 'ವೈಫೈ' ಆಗಿಯೇ ಬರುತ್ತದೆ. ಹೇಳಿದರೆ ತಂದುಹಾಕುತ್ತೇನೆ' ಅಂದ. ನನಗೋ ಹೊರಕ್ಕೆ ಹೋಗಿ ಅವನು ಹೇಳಿದ ಮೋಡಮ್ ತರುವುದು, ಅದು ಸರಿಯಿಲ್ಲ ಅಂತ ಅವನನ್ನುವುದು, ಈ ರಗಳೆಯೇ ಬೇಡ ಎಂದು ನೀನೇ ತಂದುಹಾಕಿಬಿಡು ಅಂದೆ. 'ದುಡ್ಡು ಸಾರ್' ಅಂತ ತಲೆಕೆರೆದ. ಎಷ್ಟು ಅಂದದಕ್ಕೆ 2,000ರೂ. ಆಗಬಹುದು ಅಂದ. ಮಾತನಾಡದೇ ಅವನೆದುರೇ ಬೀರುವಿನಿಂದ ಒಂದು ಕಟ್ಟು ನೋಟು ಹೊರತೆಗೆದು ಅದರಲ್ಲಿ 2000 ರೂ. ಕೈಗೆಕೊಟ್ಟೆ. ಸಂಜೆ ವೇಳೆಗೆ ತಂದು ಫಿಟ್‌ಮಾಡುತ್ತೇನೆ ಅಂದು ಹೋದವ ಎರಡುದಿವಸ ಆದರೂ ಪತ್ತೆಯಿಲ್ಲ. ಹತ್ತು ಸಲ ಫೋನು ಮಾಡಿದರೆ, ಒಂದುಸಲ ಆನಾಗ ಬರುತ್ತೇನೆ, ನಾಳೆ ಬೆಳಿಗ್ಗೆ ಬರುತ್ತೇನೆ ಅಂತ ಸತಾಯಿಸುತ್ತಿದ್ದ. ನನ್ನ ಶ್ರೀಮತಿಯೋ, ಮೊದಲೇ ಕಾಸು ಕೊಡಬಾರದಾಗಿತ್ತು ಅಂತ ಗೊಣಗುತ್ತಿದ್ದಳು. ನನಗೂ, ಅರೇ, ಇವನು ಮೋಸ ಮಾಡಿದರೆ, ಅಂತ ಒಳಗೇ ಅನ್ನಿಸುತ್ತಿತ್ತು. ಕೊನೆಗೆ ಹೆಂಡತಿಗೆ ನಾನು ಏನಾದರೂ ಉಪಾಯ ಮಾಡುತ್ತೇನೆ. ಸುಮ್ಮನಿರು ಅಂತ ಗದರಿದೆ. ಸಂಜೆ ದೂರವಾಣಿ ಕಛೇರಿಯಲ್ಲೇ ಕೆಲಸಮಾಡುತ್ತಲಿದ್ದ ನಮ್ಮ ಮನೆಯಿಂದ ಮೂರನೇ ಮನೆಯಲ್ಲಿದ್ದ ದಂಪತಿಗಳನ್ನು ಹುಡುಕಿಕೊಂಡು ಹೊರಟೆ. ಅವರ ಮನೆಯಲ್ಲಿ ಕಾರು ಇರಲಿಲ್ಲ.ಎಲ್ಲಿಗೋ ಹೊರಗೆ ಹೋಗಿದ್ದರೆಂದನಿಸುತ್ತದೆ. ಮತ್ತೆ ಒಳ್ಳೆದ

ಮನಸ್ಸಿನಿಂದಲೇ ಹೆಂಡತಿಯೊಡನೆ ಶಾಪಿಂಗ್‌ಮುಗಿಸಿ ವಾಪಸಾದ ನಂತರ, ಮತ್ತೆ ಅವರ ಮನೆಕಡೆಹೋದೆ ಅವರ ಮನೆಯಲ್ಲಿದ್ದ ನಾಯಿ ಕಾಲಿಂಗ್ ಬೆಲ್ ಮಾಡಿತು. ಗಂಡ ನಾಯಿಯನ್ನು ಕೆಳಬರದಂತೆ ಅಡ್ಡಹಾಕಿದರೆ, ಹೆಂಡತಿಬಂದು ಗೇಟ್‌ತೆರೆದರು. ಮನೆ ಒಳಹೋಗಿ ಅವರು ಕೊಟ್ಟ ಕಾಫಿ, ಕೋಡುಬಳೆ ತಿಂದು ನನ್ನ ಸಮಸ್ಯೆ ಹೇಳಿಕೊಂಡೆ. ಅವರು 'ಆ ರಾಜು ನಮ್ಮ ಇಲಾಖೆ ಪರವಾಗಿ ಔಟ್‌ಸೋರ್ಸ್ ಆಗಿರುವವನೇ ಮತ್ತು ಇರುವವನು ಅವನೊಬ್ಬನೇ. ನೀವು ನಮ್ಮ ಇಲಾಖೆಯ ಅತ್ಯುನ್ನತ ಅಧಿಕಾರಿಗಳಿಗೆ ಕಂಪ್ಲೇಂಟ್ ಕೊಟ್ಟರೂ, ಅವರು ಇವನಿಗೇ ಹೇಳುವುದು. ನಾವು ದಬಾಯಿಸಿ ಹೇಳುವಂತೆಯೂ ಇಲ್ಲ, ಬಿಟ್ಟುಹೋಗುತ್ತೇನೆ ಅನ್ನುತ್ತಾನೆ. ಹುಡುಗ ಒಳ್ಳೆಯವನು. ಪುರುಸೊತ್ತಿಲ್ಲದ ಹಾಗೆ ಕಂಪ್ಲೇಂಟುಗಳನ್ನು ಅಟೆಂಡ್ ಮಾಡಬೇಕಾಗಿರುತ್ತದೆ. ಹಾಗಾಗಿ ತಡವಾಗಿದೆ. ನಾವೇ ಕಳೆದವಾರ ಅವನ ಬಳಿ ಕೆಲಸವಮಾಡಿಸಿಕೊಳ್ಳಲು ಕಾಸುಕೊಟ್ಟು ಮೂರುದಿವಸ ಕಾಯಬೇಕಾಯಿತು. ನಾಳೆ ಅವನಿಗೆ ಫೋನ್‌ಮಾಡಿ ಹೇಳುತ್ತೇವೆ' ಅಂದರು. ನಿಶ್ಚಿಂತೆಯಿಂದ ಮನೆಗೆ ವಾಪಸಾದೆ. ಮಾರನೇ ಬೆಳಿಗ್ಗೆ ಅವನೇ ಫೋನ್‌ಮಾಡಿ ಮಧ್ಯಾಹ್ನ 2 ಘಂಟೆಗೆ ಬಂದುಬಿಡುತ್ತೇನೆ ಅಂದ. ಆದರೆ ಬಂದಿದ್ದು 4 ಘಂಟೆಗೆ. ಬಂದವನೇ 'ಏನ್ ಸಾರ್, ನಮ್ಮ ಮೇಡಂ ಮನೆಗೋಗಿದ್ದಿರಂತೆ, ಹೇಳಿದರು' ಅಂದ. 5 ನಿಮಿಷದಲ್ಲಿ ಮೋಡಮ್ ಬದಲಾಯಿಸಿ, ಅವನ ಫೀ ತೆಗೆದುಕೊಂಡು ಹೊರಟುಹೋದ. ನಂತರ ನಾನು ಇಂಟರ್‌ನೆಟ್ ಆನ್‌ಮಾಡಿದಾಗ ನನಗೆ ಗೊತ್ತಾಗಿದ್ದು, ಅದು 'ಓಪನ್ ಅಕ್ಸೆಸ್ ಅನಸೆಕ್ಯೂರ್ಡ್' ಆಗಿದೆ ಅಂತ. ನಾನು ಇಂಟರ್‌ನೆಟ್ ಆನ್ ಮಾಡಿದಾಗ ಅದರ ವ್ಯಾಪ್ತಿಪ್ರದೇಶದಲ್ಲಿರುವ ಯಾರುಬೇಕಾದರೂ ಲಾಗಿನ್ ಆಗಬಹುದು, ನನ್ನ ಮಾಹಿತಿ ಕದಿಯಬಹುದು ಇತ್ಯಾದಿ ಸಮಸ್ಯೆಗಳಿಗೆ ಒಡ್ಡಿಕೊಂಡಿದ್ದೆ, ಅದನ್ನು ಎದುರುಮನೆಯವರಿಂದ ಲಾಗಿನ್ ಮಾಡಿಸಿ ತಿಳಿದುಕೊಂಡೆ. ತಕ್ಷಣ ಅವನಿಗೆ ಫೋನ್ ಮಾಡಿ, ಬಂದು ಅದನ್ನು ಸೆಕ್ಯೂರ್ಡ್ ನೆಟ್‌ವರ್ಕ್ ಆಗಿ ಬದಲಿಸಲು ಕೋರಿದೆ. ಬರುತ್ತೇನೆ ಅಂದು ಫೋನಿಟ್ಟ, ಮಾರನೇ ಬೆಳಿಗ್ಗೆ ಮತ್ತೆ ಫೋನಾಯಿಸಿದೆ. 'ಸಾರ್ ನಿಮ್ಮನೆ ಕಡೇಗೇ ಹೊರಟಿದ್ದೆ, ಒಂದು ಸಹಾಯ ಆಗಬೇಕಿತ್ತು' ಅಂದ. ಮತ್ತೇನು ಗ್ರಹಚಾರವೋ ಅಂದುಕೊಂಡೆ. 10 ನಿಮಿಷದಲ್ಲಿ ಮನೆಮುಂದೆ ರಾಜು ಹಾಜರ್. ಬಂದವನೇ ನಾನು ಹೇಳಿದ ಕೆಲಸ ಮಾಡುತ್ತಲೇ, ಒಂದು ಪೀಠಿಕೆ ಮುಂದಿಟ್ಟ, 'ಸರ್ ಅರ್ಜೆಂಟಾಗಿ 4,000 ರೂ. ಬೇಕಾಗಿದೆ. ಮುಂದಿನ ವಾರವೇ ನನ್ನ ಜಿಪಿಎಫ್ ಹಣ ಬರುತ್ತೆ, ವಾಪಸುಕೊಟ್ಟುಬಿಡುತ್ತೇನೆ' ಅಂದ. ನಾನು ನೇರವಾಗಿ 'ನೋಡು ರಾಜು, ತಪ್ಪು ಭಾವಿಸಬೇಡ, ನಾನು ಪೆನ್ಷನ್‌ನಲ್ಲಿ ಜೀವನಸಾಗಿಸುತ್ತಿರುವವ.

ತಿಂಗಳ ಪೆನ್ಶನ್‌ನ್ನು ಎಲ್ಲ ಖರ್ಚುಗಳಿಗೂ ಸರಿಹೊಂದಿಸಬೇಕು. ಇಂತಹ ಖರ್ಚುಗಳು ಬಂದಾಗ ನನಗೇ ತೊಂದರೆ ಆಗುತ್ತದೆ. ಆದುದರಿಂದ ಹಣಕಾಸು ನೆರವು ಬಿಟ್ಟು ಬೇರೆ ಏನಾದರೂ ಕೇಳು, ಆಗುವುದಿದ್ದರೆ ಖಂಡಿತ ಮಾಡಿಕೊಡುತ್ತೇನೆ' ಅಂದೆ. ಏನೋ, ನಂಬಿಕೊಟ್ಟಿದ್ದರೆ ಚೆನ್ನಾಗಿತ್ತು ಅಂತ ಗೊಣಗಿಕೊಂಡು ಮನೆಗೆ ವಾಪಸಾದ. ಆಗ ನೆನಪಿಗೆ ಬಂದುದೇ 'ನಂಬಿಕೆಟ್ಟವರಿಲ್ಲವೋ' ಅನ್ನುವ ದಾಸವಾಣಿ ಆದರೆ ಬೇರೆಯೇ ಅರ್ಥದಲ್ಲಿ. ಈ ಸಲವಾದರೂ ಬುದ್ಧಿ ಬಂತಲ್ಲಾ ಅಂತ ಅಂದಳು ನನ್ನ ಹೆಂಡತಿ, ಬಾಗಿಲುಹಾಕುತ್ತಾ.

# 9. ಕನ್ನಡ ಭಾಷೇಲಾಗೋ ಆಭಾಸ

ವರ್ಷವರ್ಷವೂ ನಾವು ರಾಜ್ಯೋತ್ಸವಾನ ಯಾಕಾಚರಿಸ್ತಾ ಇದೀವಿ ನಿಮಗೆ ಗೊತ್ತಾ? ನಮಗ್ನಾವೇ ಕನ್ನಡಿಗರು ನಮ್ಭಾಸೆ ಕನ್ನಡಾ ಅಂತ ನಮಗೇ ಗೆಪ್ತಿ ಮಾಡ್ಕೋಳೋಕೆ. ಇವತ್ತು ಕನ್ನಡ ಬದುಕಿರೋದು ಎಲ್ಲಿ ಗೊತ್ತಾ? ನಮ್ಗಳ ಅಳ್ಳೀಗಳಲ್ಲಿ ಮಾತ್ರ. ಯಾಕೆ ಗೊತ್ತಾ? ಇನ್ನ್ಯಾಕೆ, ನಮಗೆ ಅದ್ ಬುಟ್ರೆ ಬೇರೆ ಭಾಸೆ ಬರೋದಿಲ್ಲ ಅದಕ್ಕೇ! ಆದ್ರೂ ನಮ್ಮುಡುಗ್ರು ಪೇಟೆ ಸಾವಾಸ ಮಾಡಿದ್ಮೇಕೆ ಅವ್ರ ಕನ್ನಡದಲ್ಲಿ ಅವರ್ಗೇ ಗೊತ್ತಿಲ್ದಂಗೆ, ಅಥವಾ ಸರ್ಯಾದ ಕನ್ನಡ ಪದ ಸಿಗ್ದೇನೋ ಬೇರೆ ಭಾಸೆ ಪದಗಳೇ ರಾರಾಜಿಸ್ತವೆ. ಪಾಪ, ಅವರ್ತಾನೆ ಏನ್ಮಾಡ್ತಾರೆ? ಈಗ್ನೋಡಿ, ನನಗೂ ಈ ಪೇಟೇವ್ರ ಸಾವಾಸವಾಡಿ ಎಷ್ಟೋ ಕನ್ನಡಪದಗೋಳು ಸಮಯಕ್ಸರಿಯಾಗಿ ಸಿಕ್ತಾನೆ ಇಲ್ಲ. ಕೆಲ್ವು ಸಲಾ ಕನ್ನಡದಾಗೆ ಮಾತಾಡಿದ್ರೆ ಇನ್ಸಲ್ಟಾಯ್ತದೆ ಅಂತಲೋ, ಅಥವಾ ನಮ್ಮ ಬೆಂಗಳೂರಂತಾ ಊರಲ್ಲಿ, ಆ ಜನ್ರಿಗೆ ಕನ್ನಡಾ ಕಲಿಸೋಕ್ಕಾಗಲ್ಲಾ ಅಂತಾಲೋ ಅವ್ರ ಭಾಸೇಲೇ ನಾವೂ ಮಾತಾಡೋಕೋಗಿ ಆಗೋ ಆಭಾಸದ ಕೆಲ್ವು ಸ್ಯಾಂಪಲ್ಲುಗಳು ಇಲ್ಲವೆ.

ಒಂದ್ಸಲಾ ಒಬ್ಬ ಕನ್ನಡ ಗೊತ್ತಿಲ್ದವ, ಸಾಬ್ರು ಅಂಗ್ಡಿಗೋಗಿ ಸಾಸ್ವೆ ಕೇಳವ್ನೆ. ಎಂಗೆಂಗೆ ಕೈ ತಿರುಗ್ಸಿ ತೋರ್ಸಿದ್ರೂ ಅವ್ನಿಗೆ ತಿಳೀನಿಲ್ಲ. ಸಾಬಿಗೆ ಕನ್ನಡ ಅರ್ಥ ಆಗೊಲ್ಲ, ಇವ್ನಿಗೆ ಹಿಂದಿ ಪೂರಾ ಬರೊಲ್ಲ. ನಾನೂ ಈವಯ್ಯನ ಕಥಕ್ಕಳಿ ನೋಡ್ತಾ ಮಜಾ ತಗೋತಾ ನಿಂತೆ. ಬಹಳ ಕಷ್ಟಪಟ್ಟು ಈ ಕನ್ನಡದವಾ ಏಳಿದ್ದೇನು ಗೊತ್ತಾ? "ಅದೇ ತೇಲ್ಮೆ ಆಕಿದ್ರೆ ಚಟಚಟಾ ಕರ್ತಾಹ್ಯೆನಾ ಅದು ದೇಬಾ!" ಅಂತೂ ಸಾಬೀಗೂ ಅದು ಗೊತ್ತಾತು. ಸಾಸಿವೆ ಕೊಟ್ಟಾ. ನೀನೇ ಏಳು,

ಹೇಳಿದವ್ನು ಜಾಣಾನಾ, ಕೇಳಿದವ್ನು ಜಾಣಾನಾ ಅಂತಾ !ಇನ್ನೊಂದಪಾ ಒಂದಾಪೀಸು, ಅದ್ರಾಗ ಒಬ್ಳು ಟೈಪಿಸ್ಟು, ಅದ್ಯಾವುದೋ ಪದಕ್ಕೆ ಅರ್ಥ ಗೊತ್ತಾಗ್ಲಿಲ್ಲಾ ಅಂತ ಅನ್ನಿಸ್ತೆ, ಅಲ್ಲೇ ನಿಂತಿದ್ ಜವಾನನ್ಗೆ ಪಕ್ಕದ್ರೂಮಿಂದ ಡಿಕ್ಷನರಿ ತಕಂಬಾ ಅಂದ್ಳಂತೆ. ಜವಾನ ಪಕ್ಕದ್ರೂಮಿನಲ್ಲಿದ್ದ ಗುಮಾಸ್ತನ ಹತ್ರ ಹೋಗಿ, ಟೈಪಿಸ್ಟಮ್ಮನಿಗೆ ಡೀಸೆಂಟ್ರ ಕೊಡಬೇಕಂತೆ ಅನ್ನೋದಾ! ಆ ಗುಮಾಸ್ತಂಗೆ ಮೊದಮೊದಲು ತಲೆ ಕೆಟ್ಟು ಕೊನೆಗೆ ಹಿಂದುಮುಂದು ವಿಚಾರಮಾಡಿ ಡಿಕ್ಷನರೀನೇ ಕೊಟ್ಟು ಕಳಿಸಿದನಂತೆ. ಒತ್ತಾರೆ ಒತ್ತಾರೇನೆ ಬೀಡಿ ತಕ್ಕೋಳೋಮಾ ಅಂತ ಮೂಲೆ ಸೆಟ್ಟಿತಾವ ಓಗಿದ್ದೆ. ಒಂದು ಚಿಲ್ಟಾರಿ ಬತ್ತು, ಸೆಟ್ಟೀಗೆ ಎರ್ಡು ಡಿಲ್ಸ್ ಕೊಡಿ ಅಂತು. ನನಗೋ ತಲೆಬುಡ ಅರ್ಥಆಗಲಿಲ್ಲ. ಆದ್ರೆ ಸೆಟ್ಟೀಗೆ ಇದು ಮಾಮೂಲಿ ಆದುದರಿಂದ ಹಣ ತಗೊಂಡು ವಿಲ್ಸ್ ಸಿಗರೇಟು ನೀಡಿದ ಹಾಗೇ ಸ್ನೇಇತನ ಔಷಧಿ ಅಂಗ್ಡೀಗ್ ಬಂದ ಮುದ್ಕಿ ಕೇಳಿದ್ದು 'ಗೊಬ್ಬೀ ಗುಳಿಗೆ'! ಅವನು ದಮ್ಮಿನಗುಳಿಗೆ ತೆಗೆದು ಕೊಟ್ಟ ಅನ್ನಿ, ಆದ್ರೂ ಇನ್ನೊಬ್ಬ ಅಂಗ್ಡೀವ್ನು ಫೆರಡಾಲ್ ಬದಲಿಗೆ ಫಾಲಿಡಾಲ್ ಕೊಟ್ನಂತೆ! ಅಂಗಾಗಿದ್ರೆ ಸರಿಕಪ್ಪಾ.

## 10. ಏಟಿಗೆ ಸಿಕ್ಕದವರು

ಕೆಲವಿರ್ತಾರೆ ನೋಡಿ, ಬಲೇ ಚಾಲಾಕಿ ಮನ್ಸರು. ಅವ್ರೇನೇ ಮಾಡ್ಲಿ ಅದ್ನೇ ಸಮರ್ಥಿಸಿಕೋತಾರೆ. ಅದು ಸರಿಯಿಲ್ಲಾಂದವ್ರನ್ನ ಒಪ್ಪೋಕೇ ಇಲ್ಲ. ತಪ್ಪೇ ಮಾಡಿದ್ರೂ ಅದ್ನೂ ಸರೀ ಅಮ್ತಾನೇ ವಾದಿಸ್ತಾರೆ. ಅಂತಾ ಕೆಲವ್ರ ಕಥೆ ಇಲ್ಲದೆ. ನಮ್ಕಂಟ್ರಾಕ್ಟರ್ ಯಾವೇಟ್ಗೂ ಸಿಕ್ಕಾಕ್ಕೋಳಾಕಿಲ್ಲಾಕಣಣ್ಣಾ. ತಾನ್ಮಾಡೋ ಕೆಲ್ಸದಾಗೆ ಯಾರೇ ಏನೇ ದೋಸ ತೋರ್ಸೋಕೋದ್ರೂ ಅದ್ಕೆ ಏನಾರ ಸಮ್ಜಾಯ್ಸಿ ಕೊಟ್ಟುಬುಡ್ತಾನೆ. ನಮ್ಮ ಒಸ್ಮನೆ ತಾರ್ಸಿ ಆಕಿಸ್ದಾಗ ಮ್ಯಾಗೆ ಕಟ್ಟಿದ ನೀರೆಲ್ಲಾ ಒಳ್ಗೆ ತೊಟ್ಟಿಕ್ತಾಯಿತ್ತು. "ಇದ್ಯಾಕಪ್ಪಾ ತಾರ್ಸಿ ಕೆಲ್ಸಾ ನೀರ್ತಡೆಯೋದಲ್ವಾ, ಇಲ್ನೋಡಿದ್ರೆ ಒಳ್ಗೇ ಓಟಲ್‌ದೋಸೇತೂತಲ್ಲಿ ಸಾಂಬಾರೆಲ್ಲ ಇಳಿಯೋ ಅಂಗೆ ನೀರು ಓಯ್ತಾ ಇದ್ಯಲ್ಲಾ ಅಂತ ಕೇಳಿದ್ರೆ ಅವನೇನೇಳ್ಬೇಕು? "ಸಾಮ್ಯೋರೇ ಈವತ್ತು ನೀರಿಳ್ದ್ರೇ ತಾನೇ ಒಳ್ಗಿನ ಸಿಮೆಂಟ್ ಗಟ್ಟಿ ಆಗೋದು. ಅದರ್ಬಗ್ಗೆ ನೀವೇನೂ ಡೋಂಟ್‌ವರಿ ಮಾಡ್ಕೋಬೇಡಿ" ಅನ್ನೋದಾ! ಇದಾದ ಮೂರ್ತಿಂಗ್ಳ್ಗೆ ನಮ್ಕಡೇವ್ರ ಇನ್ನೊಂದು ಮನೆ ತಾರ್ಸಿ ಆಕ್ಸಿದ್ರೂ, ಅಂಗೇ ವಾಕಿಂಗೋಗಿ ನೋಡ್ದ್ರೆ, ಒಂತೊಟ್ಟೂ ನೀರಿಳಿತಿರ್ಲಿಲ್ಲ. ಮಾರ್ನೇ ದಿನ ನಂಕಂಟ್ರಾಕ್ಟರ್ನ್ ಕರ್ಕೊಂಡೋಗಿ ಆ ತಾರ್ಸಿ ಯಾಕೆ ನೀರಿಳೀತಿಲ್ಲ ಅಂತ್ಕೇಳಿದ್ರೆ ಏನನ್ಬೇಕವ್ನು? "ಈ ತಾರ್ಸಿ ಒಂತೊಟ್ಟೂ ನೀರಿಲ್ದಂಗೆ ಎಲ್ಲಾ ನೀರ್ನೂ ಕುಡ್ಕೊಂಬುಟ್ಟದೆ, ಬಲ್ ಭರ್ಜರಿ ಕೆಲ್ಸ ಆಗದೆ" ಅನ್ನೋದಾ. ಇನ್ನು, ಗೋಡೇಲಿ ಬಿರ್ಕು ಕಾಣ್ತಾ ಐತಲ್ಲಾ ಅಂದ್ರೆ "ಅದು ಏರ್ಕ್ರಾಕೂ ಸೋಮಿ; ಕ್ರ್ಯಾಕು ಬಿಟ್ರೆ ಇರೋ ಸಿಮೆಂಟು ಇನ್ನೂ ಕಂಡಿದ್ದಿಲ್ಲ ಅಂತಾನೋ ನಿಮ್ ಕ್ಯೂರಿಂಗ್ ಸರಿಯಿಲ್ಲ ಸೋಮೀ" ಅಂತಾನೋ ಏಳಿ ನಮ್ಗೇ ಕ್ರ್ಯಾಕು ಇಡಿಸ್ತಾನೆ.

ನಮ್ಮಳ್ಳೀಲಿ ಒಬ್ಬ ಶಾಸ್ತ್ರ ಏಳೋ ಪೂಜಾರಿ ಇದ್ದ. ಯಾರೇನೇ ಕೇಳ್ಲೀ, ಮಾತಾಡ್ಲೇ. ತನ್ಮುಂದೆ ಮಡಿಕ್ಕಂಡಿದ್ದ ಒಂದು ಸಣ್‌ಕಲ್ಲ ತೆಗ್ದಿ ಮ್ಯಾಕಿಂದ ಎತ್ತಾಗ್ತಿದ್ನಂತೆ. ಕಾಣ್ಕೆ ಈಸ್ಕೊಂಡು ಓಗ್ವನ್ನಿ ಅಂತಿದ್ನಂತೆ. ಓದವ್ನು ಕೆಲ್ಸ ಆಯ್ತು ಅಂತ ಬಂದೇಳಿದ್ರೆ, "ತಾಯಿ ಏಳಿದ್ಲು, ಅವ್ರ ಕೆಲ್ಸ ಒಳ್ಳೇ ಊ ಎತ್ತಿದಷ್ಟು ಸುಲಭವಾಗಿ ಆಯ್ತದೆ" ಅಂತಿದ್ನಂತೆ; ಅಕಸ್ಮಾತ್ ಅವ್ನು ಕೆಲ್ಸಾ ಆಗ್ನಿಲ್ಲ ಅಂತ ಬಂದೇಳಿದ್ರೆ, "ತಾಯಿ ಏಳಿದ್ಲು, ಅವರ ಕೆಲ್ಸ ಎದೆಮೇಲೆ ಕಲ್ಲೆತ್ತಾಕ್ಕೊಂಡಷ್ಟು ಕಸ್ಟ ಆಯ್ತದೆ" ಅಂತಿದ್ನಂತೆ. ನಮ್ಮ ಮೇಸ್ಟ್ರುಗಳೂ ಇದೇ ಜಾತಿಗೇ ಸೇರಿದವ್ರು ಅಮ್ತಾ ಕಾಣತ್ತೆ. ವಿದ್ಯಾರ್ಥಿಗಳು ಪ್ರಶ್ನೆ ಕೇಳಿ ಅದ್ರ ಉತ್ರ ಇವ್ನಿಗ್ ಗೊತ್ತಿಲ್ಲದೇ ಇದ್ದಾಗ ಅತ್ವಾ ತಾವೇ ತಪ್ಪೇಳಿದ್ದನ್ನ ಯಾರಾದ್ರೂ ಕಂಡು ಇಡದ್ರೆ, "ಏಯ್, ತಲೆಹರಟೆ, ನಾನು ಹೇಳೋದನ್ನು ಮೊದ್ಲು ತಿಳ್ಕೋ" ಅಂತಾ ಬಾಯ್ಮುಚ್ಚಿಸ್ತಾರೆ. ಇನ್ನು ಪರೀಕ್ಷೆ ರಿಜಲ್ಟ್ ಚೆನ್ನಾಗಿ ಬಂದ್ರೆ "ನಾನು ಚೆನ್ನಾಗಿ ಪಾಠ ಮಾಡಿದ್ರಿಂದ ಇಂತ ರಿಜಲ್ಟ್ ಬಂದಿದೆ" ಅಂತ ಕೊಚ್ಕೋತಾರೆ ಅದೇ ಕಮ್ಮಿ ರಿಜಲ್ಟ್ ಬಂದಾಗ "ನಾವೆಷ್ಟೇ ಚೆನ್ನಾಗಿ ಪಾಠ-ಮಾಡಿದ್ರೂ, ಉಡುಗ್ರು ಪರೀಕ್ಷೇಲಿ ಚೆನ್ನಾಗಿ ಬರೀನಿಲ್ಲ, ನಾವೇನ್ಮಾಡಾಕಾಗುತ್ತೇ" ಅಂತಾ ನುಣುಚ್ಕೋತಾರೆ. ಇದೇ ರೀತಿ ನಮ್ಮ ವಿದ್ಯಾರ್ಥಿಗಳು ಪರೀಕ್ಷೇಲಿ ಫೇಲಾದಾಗ ಹೇಳೋ ಮಾಮೂಲಿ ಮಾತು. ಆ ಪೇಪರ್ ಸೆಟ್ಟರ್ ಔಟ್ ಆಫ್ ಸಿಲಬಸ್ ಕೊಶ್ಚನ್ ಕೊಟ್ಟಿಟ್ಟ ಅಥವಾ ಆ ವ್ಯಾಲ್ಯೂಯರ್‌ಗೆ ಸರಿಯಾಗಿ ವ್ಯಾಲ್ಯೂ ಮಾಡೋಕೇ ಬಂದಿಲ್ಲ!

ಈಗೆಲ್ಲಾ ''ಆರ್ಗ್ಯಾನಿಕ್'' ಹುಚ್ಚು ಮಂದಿಗೆ ಹಿಡಿದಿದೆ. ಎಲ್ಲರೂ ಆ ರೀತಿಯ ಮಾಲು ಮಾರೋ ಮಾಲುಗಳತ್ತ ಮುಖಮಾಡುತ್ತಿದ್ದಾರೆ. ಇದನ್ನು ತಿಳಿದ ವ್ಯಾಪಾರಿಗಳೂ ತಮ್ಮಲ್ಲಿರುವ ಐಟಂಗಳಿಗೇ 'ಆರ್ಗ್ಯಾನಿಕ್' ಲೇಬಲ್ ಅಂಟಿಸಿ ಒಂದಕ್ಕೆರಡು ಬೆಲೆಗೆ ಮಾರುತ್ತಿದ್ದಾರೆ. ಮನೇಮುಂದೆ ಕೇಜಿಗೆ 20 ರೂ.ಗೆ ಮಾರೋ ಬೂದುಕುಂಬಳಕಾಯಿಗೆ ಆರ್ಗ್ಯಾನಿಕ್ ಅಂಗಡಿಯಲ್ಲಿ ಕೇಜಿಗೆ 50 ರಿಂದ 60 ರೂ! ಆರ್ಗ್ಯಾನಿಕ್ ಅಕ್ಕಿಗೆ ಒಂದಂಗಡಿಯಲ್ಲಿ ಕೇಜಿಗೆ 40 ರೂ. ಇದ್ದರೆ ಮತ್ತೊಂದು ಅಂಗಡಿಯಲ್ಲಿ 55 ರೂ. ಮಂಡ್ಯದಲ್ಲಿ 82 ರೂ. ಎಂಗದೆ ಮಾಮೂಲಿ ಅಂಗಡಿಯಲ್ಲಿ ಮಾರೋ ಬೆಲ್ಲ ಕೇಜಿ 40 ರೂ ಇದ್ದರೆ, ಇವರ ಬಳಿ ಮಾರೋ ಬೆಲ್ಲಕ್ಕೆ ಕೇಜಿಗೆ 80 ರೂ. ಇದ್ಯಾಕೆ ಆ ಅಂಗಡಿಯಲ್ಲಿ ಇದೇ ಅಕ್ಕಿಯನ್ನು ಕಡಿಮೆ ಬೆಲೆಗೆ ಮಾರುತ್ತಿದ್ದಾರಲ್ಲಾ ಅಂತ ಕೇಳಿನೋಡಿ. ಅವರು ಕೊಡುವ ಉತ್ತರ: ಅವರದು ಆರ್ಗ್ಯಾನಿಕ್ ಅಲ್ಲಾ ಸಾರ್. ಸುಮ್ಮಸುಮ್ಮನೆ ಆರ್ಗ್ಯಾನಿಕ್ ಅನ್ನುತ್ತಾರೆ. ಯಾರು ಸತ್ಯ ಹೇಳುತ್ತಿದ್ದಾರೆ. ಯಾರು ಸುಳ್ಳು ಹೇಳುತ್ತಿದ್ದಾರೋ ಆ ಶಿವನೇ ಬಲ್ಲ!

ಇನ್ನು, ವ್ಯಾಪಾರ ಸಾಪಾರ ಮಾಡೋಮಂದಿ ಅತ್ರ ಇರೋ ಮಾಲೆಲ್ಲ "ಎ ಒನ್"! ಪಕ್ಕದಂಗಡೀಲಿ ಇದೇ ಐಟಂ ಕಡಿಮೆ ಬೆಲೇಗೆ ಸಿಗುತ್ತಲ್ರೀ ಅಂದ್ರೆ "ಅದು ಲೋ ಕ್ವಾಲಿಟೀ ಮಾಲೂ" ಅಂತಾರೆ. ಸೇಲ್ಸ್ ಟ್ಯಾಕ್ಸಿನವ್ರು ಬಂದು ನಿಮ್ಮ ಮಾಲು ಏ ಕ್ಲಾಸಿನದೇ ಅಂದ್ರೇ, "ಇಲ್ಲಾ ಇವೆಲ್ಲಾ ಸೆಕೆಂಡ್ಸ್ ಮಾಲು" ಅಂತೇಳ್ತಾರೆ. ಒಟ್ನಲ್ಲಿ ಇವರೆಲ್ಲಾ ಬಲೇ ಬುದ್ಧಿವಂತರು. ಕೈಮೈಗೆಲ್ಲಾ ಯಾವಾಗ್ಲೂ ಎಣ್ಣೆ ಸವರ್ಕೊಂಡ್ರೇ ಇರೋವ್ರೂ.

# 11. ನಟನೆ, ಒಂದು ಹವ್ಯಾಸ

ನಟನ ಕಲೆ ಎನ್ನುವುದು ಮನುಷ್ಯ ಸಹಜವಾದುದು. ಆಗತಾನೆ ಹುಟ್ಟಿದ ಕೂಸು ತನ್ನ ಇರುವಿಕೆಯನ್ನು ಸೂಚಿಸಲು ತನ್ನ ಅವಶ್ಯಕತೆಗಳನ್ನು ತಾಯಿಯ ಗಮನಕ್ಕೆ ತರಲು ಅಳುವುದು, ನಗುವುದು, ಕೈಕಾಲು ಜಾಡಿಸುವುದು ಬಾಯಿ ತೆರೆಯುವುದು ಮುಂತಾದ ಕ್ರಿಯೆಗಳ ಮೂಲಕ ಅಭಿವ್ಯಕ್ತಿಗೊಳಿಸುವುದನ್ನು ಗಮನಿಸಿದರೆ ಇವುಗಳನ್ನು ಇತರರು ಅನುಕರಿಸಿದರೆ, ಅದೇ ನಾಟಕವಾಗುವುದು. ಒಬ್ಬ ವ್ಯಕ್ತಿಯ ಹಾವಭಾವಗಳನ್ನು ಸೂಕ್ಷ್ಮವಾಗಿ ಅನುಕರಿಸುವುದೇ ನಾಟಕ. Under given circumstances what anyone is going to do? ಅನ್ನುವುದರ ಕಲ್ಪನೆಯೇ ನಾಟಕ. ಪ್ರತಿವ್ಯಕ್ತಿಯೂ ಪ್ರತಿಗಳಿಗೆಯೂ ಹಲವಾರು ಪಾತ್ರಗಳಲ್ಲಿ ಅಭಿನಯಿಸುತ್ತಿರುತ್ತಾನೆ. ಮನೆಯಲ್ಲಿ ಅಪ್ಪ/ಅಮ್ಮ, ಮಗ/ಮಗಳು, ಅತ್ತೆ/ಸೊಸೆ ಪಾತ್ರ; ಸಮಾಜದಲ್ಲಿ ಉದ್ಯೋಗಿ/ಉದ್ಯೋಗಪತಿ, ರಾಜಕಾರಣಿ/ಸನ್ಯಾಸಿ; ವೈದ್ಯ/ರೋಗಿ, ಕಳ್ಳ–ಪೋಲೀಸ್ ಇನ್ನೂ ಮುಂತಾದ ವಿವಿಧ ಪಾತ್ರ ನಿರ್ವಹಿಸುತ್ತಿರುತ್ತಾನೆ. ಒಂದು ಪ್ರಸಂಗದಲ್ಲಿನ ಪಾತ್ರವನ್ನು ಇನ್ನೊಂದು ಪ್ರಸಂಗದಲ್ಲಿ ನಿರ್ವಹಿಸಿದರೆ ಅನರ್ಹ, ಅಸಭ್ಯವಾಗುವುದು. ಮಾಡುವ ನಾಟಕದ ಜೊತೆಗೆ ಆಡುವ ನಾಟಕಗಳೇ ಬೇರೆ. ಇದಕ್ಕೆ ವಿಶೇಷ ಆಸಕ್ತಿ ಅವಶ್ಯಕ. ಇತರರ ಪಾತ್ರ ನಿರ್ವಹಣೆಗಾಗಿ ಸೂಕ್ಷ್ಮ ಅಧ್ಯಯನ, ತರಬೇತಿ ಅವಶ್ಯಕ. ಉತ್ತಮ ನಟನೆಗೆ ನಿರ್ದೇಶಕ ಕಾರಣ. ಕಾರ್ಯಾಗಾರದಲ್ಲಿ ನಿಷ್ಠೆಯಿಂದ ಅಭ್ಯಾಸ ಅವಶ್ಯಕ. ನಿಯಮಗಳ ಅನುಸರಣೆ ಕಡ್ಡಾಯ. ಒಂದು ರೀತಿ ಚಿಕ್ಕಮಕ್ಕಳಾಗಿದ್ದಾಗ ಆಡಿದ ಕೊಕ್ಕೊ ಆಟಕ್ಕೂ, ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡುವ

ಕೊಕ್ಕೊ ಆಟಕ್ಕೂ ಇರುವ ವ್ಯತ್ಯಾಸದಂತೆ. ನಾನು ಅನಿವಾರ್ಯವಲ್ಲದಿದ್ದರೂ, ನನ್ನ ಮಾಧ್ಯಮಿಕ ಶಾಲೆಯಲ್ಲಿ ಆಡಿಸಿದ ನಾಟಕವೊಂದರಲ್ಲಿ ಕೆಂಪುಸೀರೆ ಉಟ್ಟ ಕೆಂಪಿ, ಹೆಣ್ಣುವೇಷವೊಂದರಿಂದ ಕಲಾಪ್ರಪಂಚಕ್ಕೆ ಹವ್ಯಾಸಿಯಾಗಿ ಕಾಲಿಟ್ಟ ನೆನಪು. ಇಂದಿಗೂ ಅದೇ ಹವ್ಯಾಸ ಮುಂದುವರೆದಿದೆ. ಆದರೆ, ಅದರ ಮುಂದುವರಿಕೆ ಆದದ್ದು ಮಾತ್ರ ನನ್ನ ವಿದ್ಯಾಭ್ಯಾಸ ಮುಗಿದು ನಾನು ಅಧ್ಯಾಪಕನಾದನಂತರವಷ್ಟೆ. ಗೆಳೆಯ ಶಿವರಾಂ, ವೀರಪ್ಪ, ಮೋಹನ್ ರಾಜ್, ಜಯಪ್ರಕಾಶಗೌಡ ಕೆಲವು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ನಾಟಕ ತರಬೇತಿ ಶಿಬಿರ ನಡೆಸುವ ಸಾಹಸಮಾಡಿದಾಗ. ನಾಟಕ ಆಡುವ ಸಾಹಸಕ್ಕೆ ಮುನ್ನ ಇತರ ಕಡೆಗಳಿಂದ ಪ್ರಸಿದ್ಧವಾಗಿದ್ದ ಸಮುದಾಯ, ರಂಗಸಂಪದ, ನೀನಾಸಂ ತಂಡಗಳನ್ನುಕರೆಸಿ, ಅವರ ನಾಟಕಗಳನ್ನು ವ್ಯವಸ್ಥೆ ಮಾಡಿ ಇಲ್ಲಿನ ಜನರಿಗೆ ಪರಿಚಯಿಸುವ ಕಾರ್ಯಮಾಡಲಾಯಿತು. ನಂತರ ಎನ್.ಎಸ್.ಡಿ ಪದವೀಧರ ಶ್ರೀ ಅಶೋಕ್ ಬಾದರದಿನ್ನಿಯವರ ನಿರ್ದೇಶನದಲ್ಲಿ ಪಿ.ಲಂಕೇಶರ 'ಸಂಕ್ರಾಂತಿ' ಮತ್ತು ಎ.ಎಸ್.ಮೂರ್ತಿಯವರ 'ದನಿ ಇಲ್ಲದವರು' ನಾಟಕಗಳ ಕಲಿಕೆ ಮತ್ತು ಪ್ರದರ್ಶನ ಮಾಡಲಾಯಿತು. ಮಂಡ್ಯದ ಮಕ್ಕಳೂ ಬೆಂಗಳೂರಿಗರಂತೆ ನಾಟಕ ಮಾಡಬಲ್ಲರು ಎಂದು ಇಲ್ಲಿನ ಜನತೆಗೆ ತೋರಿಸಿಕೊಟ್ಟೆವು.. ದೊರೆತ ಉತ್ತೇಜನದಿಂದ ಹೊಸ ಹೊಸ ನಾಟಕಗಳನ್ನು ಕಲಿತು ಆಡುವ ಹುಮ್ಮಸ್ಸು ಎಲ್ಲರಲ್ಲೂ ತುಂಬಿಕೊಂಡಿತ್ತು. ಆ ಮೊದಲ ಪ್ರಯತ್ನದ ಫಲವೇ ಇಂದೂ ಚಲನಚಿತ್ರ ಕ್ಷೇತ್ರದಲ್ಲಿ ಮಿನುಗುತ್ತಿರುವ ಕೆಲವು ನಕ್ಷತ್ರಗಳು, ಮಂಡ್ಯ ರಮೇಶ್, ನೀನಾಸಂ ಅಶ್ವತ್ ಯಾಚೇನಹಳ್ಳಿ ಮತ್ತು ಶ್ರೀ ಲಕ್ಷ್ಮೀನರಸಿಂಹಶಾಸ್ತ್ರಿ. ರಮೇಶ್ ಮತ್ತು ಅಶ್ವತ್ ನಟರಾದರೆ, ಶಾಸ್ತ್ರಿ ಸಂಗೀತ ನಿರ್ದೇಶಕರಾಗಿ, ಹಿನ್ನೆಲೆ ಗಾಯಕರಾಗಿ ಮುನ್ನಡೆದಿದ್ದಾರೆ.

ನಾನಾದರೋ ಸಿಕ್ಕ ಸಣ್ಣ ಪುಟ್ಟ ಪಾತ್ರಗಳನ್ನು ನಿಷ್ಠೆಯಿಂದ ನಿರ್ವಹಿಸಿದ್ದೇನೆ. ಸಂಕ್ರಾಂತಿಯಲ್ಲಿ ಕೆಂಚನಾಗಿ, ಕಾಡಿನ ಮರಗಳಾಗಿ, ದನಿಯಿಲ್ಲದವರು ನಾಟಕದಲ್ಲಿ ಗುಂಪಿನ ಸದಸ್ಯನಾಗಿ, ಮೃಚ್ಛಕಟಿಕದಲ್ಲಿ ಶರ್ವಿಳಕ & ಕಳ್ಳನಾಗಿ, ಕುರಿದೊಡ್ಡಿ ಕುರುಕ್ಷೇತ್ರದಲ್ಲಿ ರಂಗಜ್ಜನಾಗಿ, ಜೂಲಿಯಸ್ ಸೀಸರ್‌ನಲ್ಲಿ ಕ್ಯಾಸ್ಕನಾಗಿ, ಸಾಯೋಜಾತ್ರೆಯಲ್ಲಿ ವೈದ್ಯನಾಗಿ, ನಟಿಸಿದ್ದೇನೆ. ಈ ಪಾತ್ರಗಳಲ್ಲಿ ಕುರಿದೊಡ್ಡಿಯ ರಂಗಜ್ಜನ ಪಾತ್ರ ನಿರ್ವಹಿಸುವಾಗ ನನ್ನ ಕಣ್ಣಲ್ಲಿ ತಾನೇತಾನಾಗಿ ಕಣ್ಣೀರು ಸುರಿದದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಕಳೆದ ವರ್ಷ ವಿದ್ಯಾರ್ಥಿಗಳೊಂದಿಗೆ ಸೇರಿ 'ರಕ್ತಾಕ್ಷಿ' ನಾಟಕದಲ್ಲಿ ಲಿಂಗಣ್ಣ ಮಂತ್ರಿ ಪಾತ್ರ ನಿರ್ವಹಿಸಿದರೆ, ಈಗ

'ತುಘಲಕ್'ನಲ್ಲಿ ಬರನಿ ಪಾತ್ರ, ಮುಂದೆ ಯಾವಾಗ? ಯಾವ ಪಾತ್ರವೋ? ಇದೇ ಕೊನೆಯೋ ಯಾರಿಗೆ ಗೊತ್ತು?

ಈ ನಾಟಕಗಳಲ್ಲಿ ಭಾಗವಹಿಸುತ್ತಿದ್ದ ಸಂದರ್ಭಗಳಲ್ಲಿ ಉಂಟಾದ ಕೆಲವು ಹಾಸ್ಯ ಸನ್ನಿವೇಶಗಳನ್ನು ತಮ್ಮೊಡನೆ ಹಂಚಿಕೊಳ್ಳಬಯಸುತ್ತೇನೆ. 'ಸಾಯೋ ಆಟ'ದ ರಾಜ ಬರುತ್ತಿರುತ್ತಾನೆ. ಅಗಸನ ಪಾತ್ರಧಾರಿಯೊಬ್ಬ ದಿಢೀರ್ ತಪ್ಪಿಸಿಕೊಂಡಿದ್ದ. ಅವನ ಪಾತ್ರವನ್ನು ಮಾಡಲು ಮತ್ತೊಬ್ಬ ಮೇಸ್ತ್ರಿಗೆ ಹೇಳಿದೆವು. ರಾಜನ ಎದುರಿಗೆ ಸಾಷ್ಟಾಂಗ ನಮಸ್ಕಾರ ಹಾಕು ಎಂದು ಹೇಳಿಕೊಟ್ಟೆವು. ಆಗಲೀ ಅಂದವನು ರಾಜ ಬಂದಾಗ ದಿಢೀರ್ ಎಂದು ಉದ್ದುದ್ದ ಮಕಾಡೆ ಮಲಗಿಬಿಟ್ಟವನು ಏಳಲೇ ಇಲ್ಲ! ನಾಟಕ ಮುಂದೆ ಸಾಗಲು ಅವನು ಏಳಬೇಕು. ಒಂದೆರಡು ನಿಮಿಷ ಎಲ್ಲರೂ ಅವಾಕ್ಕಾಗಿ ನಿಂತಿದ್ದೆವು. ಆಗ ಸಹನಟನೊಬ್ಬ ಅವನಬಳಿಸಾಗಿ, 'ಏಳಪ್ಪಾ, ದೊರೆಗೆ ಮುಂದೆ ಸಾಗಲು ಅನುಮತಿ ಕೊಡು', ಎನ್ನುತ್ತಾ ಅವನನ್ನು ಎಬ್ಬಿಸಿದಮೇಲೆ ನಾಟಕ ಮುಂದುವರೆಯಿತು. ಇನ್ನು 'ಕುರಿದೊಡ್ಡಿಕುರುಕ್ಷೇತ್ರ'ದಲ್ಲಿ 'ಕುರುಕ್ಷೇತ್ರ'ನಾಟಕ ಕಲಿಸುತ್ತಿದ್ದ ಮಾಸ್ಟರ್‌ಪಾತ್ರಧಾರಿ ಬಾಯಲ್ಲಿ 'ದ್ರೌಪತಿ' ಎಂದು ಹೇಳಿಸಲು ಪ್ರಯತ್ನಿಸುತ್ತಾನೆ. ಆದರೆ ಪಾತ್ರಧಾರಿ 'ದೌಪತ್ರಿ' ಅನ್ನುತ್ತಿರುತ್ತಾನೆ. ಆಗ ಮಾಸ್ಟರ್ ಅದನ್ನು ಸರಿಪಡಿಸಲು ಹೋಗಿ 'ದೌಪತ್ರಿ' ಅಲ್ಲಕಣೋ ಅದು 'ದೌಪ್ರತಿ' ಎಂದು ಉಚ್ಚರಿಸುತ್ತಾನೆ. ಇದು ಆಕಸ್ಮಿಕವಾಗಿ ಆಗಿದ್ದರೂ, ಆಗಿದ್ದಾದರೂ, ಅದು ಉಕ್ಕಿಸುವ ನಗುವಿಗಾಗಿ ನಿರ್ದೇಶಕರು ಈ ಸನ್ನಿವೇಶವನ್ನು ನಾಟಕದಲ್ಲಿ ಉಳಿಸಿಕೊಂಡರು. 'ಜ್ಯೂಲಿಯಸ್ ಸೀಸರ್' ನಾಟಕದ ಯುದ್ಧ ದೃಶ್ಯದಲ್ಲಿ ಸಾಯುತ್ತಾ ಕೆಳಗೆ ಬೀಳುವ ಸೈನಿಕ ಪಾತ್ರಧಾರಿಗಳು, ಮೇಲೆಹೋಗಿದ್ದ ಬಟ್ಟೆಗಳನ್ನು ಸರಿಪಡಿಸಿಕೊಳ್ಳುತ್ತಿದ್ದಾಗ, ನಿರ್ದೇಶಕರು ಸತ್ತವರಿಗೆಂತ ಮಾನಾಪಮಾನ ಇರುತ್ತೆ. ಪರದೆ ಬೀಳುವವರೆಗಾದರೂ ಸುಮ್ಮನೆ ಸಾಯಿರಯ್ಯಾ ಅಂತ ಕಿರುಚಿದ್ದುದು ಟ್ರ್ಯಾಜಿಡಿಯಲ್ಲೂ 'ಕಾಮಿಡಿ' ಅನ್ನಿಸುವುದಿಲ್ಲವೇ?

# 12. ಟೋಪಿ ಆಕ್ತಾರಪ್ಪೋ ಟೋಪಿ

ಟೋಪೀ ಆಕೋದೂ, ಆಕಸ್ಕೊಳ್ಳೋದೂ ಹಿಂದಿನಿಂದ ಬಂದ ಇಸ್ಯ ಕಲಾ. ಬುದ್ಧಿವಂತ್ರಾದೋರು ಪೆದ್ದರ್ಗೆ ಆವಾಗಾವಾಗ ಟೋಪಿ ಆಕ್ತಾನೇ ಇರ್ತಾರೆ. ಬೆಣ್ಣೆ ವಾರೋದೂ, ನೋಟು ಡಬಲ್ ಮಾಡೋದೂ, ಸೈಟ್ಕೊಡ್ಸೋದೂ, ಇಂಗೆ ಎಷ್ಟೋ ತರಾ. ಆದ್ರೆ ಟೋಪಿ ಆಕಸ್ಕೊಂಡೋರ್ಗೆ ತನ್ಗೆ ಇಂಥಾವ್ರು ಟೋಪಿ ಆಕುದ್ರು ಅನ್ನೋದು ಗೊತ್ತಾಗೊತ್ಗೆ ಬೋ ಲೇಟಾಗಿರ್ತದೆ.

ಈಚೀಚ್ಗೆ ಈ ಟೋಪಿ ಆಕೋರ್ ಬಗ್ಗೆ ಬೋ ಚರ್ಚೆ ನಡೀತಾ ಐತೆ. ಇದ್ರಾಗೆ ಜನ್ಗೋಳ್ ಜತೆ ಪೋಲೀಸ್ನೋರೂ, ಸರ್ಕಾರ್ನೋವ್ರೂ ಎಲ್ಲ ಸೇರ್ಕಂಡವ್ರೆ, ಊಂ.. 2 ತಿಂಗ್ಳು ಟೈಂ ಕೊಟ್ಟವ್ರೆ, ಆಮೇಕೆ ಇಂತದೇ ಎಲ್ಮೆಟ್ ಆಕ್ಕೋಬೇಕು, ಇಂಗೇ ಇರ್ಬೇಕು ಅಂತ ರೂಲೀಸು ಮಾಡೇಬುಟ್ಟವ್ರೆ, ರೇಡಿಯೋದಲ್ಲಿ, ಟೀವೀದಲ್ಲಿ ಪಳಿಕೆಗಳು ಕೊಡ್ತಾನೇ ಅವ್ರೆ. ನಮ್ಮುನ ಸುಮ್ನೆ ಬುಟ್ಟಾರಾ? ಎಲ್ಮೆಟ್ ಇರೋಧಿ ಸಮಿತಿ ಅಂತ ಮಾಡ್ಕೊಂಡು, ತಲೆ ನಮ್ದು, ನಿಮಗ್ಯಾಕ್ರೀ ಅದ್ರ ಉಸಾಬರೀ? ಬೇಕಾದ್ರೆ ಬಿಟ್ಟಿ ಎಲ್ಮೆಟ್ ಎಲ್ಲಾರ್ಗೂ ಅಂಚಿ ಆಮೇಕೆ ಮಾತಾಡಿ. ಮೊದ್ಲು ಪಾದಚಾರಿಗಳಿಗೆ ಅಂಚಿ, ಪಾಪ ಪುಟ್ಪಾತ್‌ನಲ್ಲಿ ನಡ್ಯೋಣಾ ಅಂದ್ರೆ ಅಲ್ಲಿ ತಾವಿಲ್ಲ; ಅದರಲ್ಲೂ ಈ ಗಾಡೀಗ್ಳು ರಸ್ತೆ ಬುಟ್ಬುಟ್ಟು ಪುಟ್ಪಾತ್ಮೇಲೇ ಓಡೋಕೆ ಇಸ್ಟಪಡ್ತವೆ. ಇದರಲ್ಲಿ ಡ್ರೈವರ್‌ಗಳ್ದೂ ಏನೂ ತಪ್ಪಿರೊಲ್ಲ ಬುಡಿ, ರಸ್ತೆತುಂಬ ಗುಂಡಿಗಳು, ಅಂಪ್ಸು, ತೆಗ್ದಿರೋ ಮ್ಯಾನ್ಹೋಲ್ಸು. ಇವುಗಳ್ನ ತಪ್ಪಿಸಿ ಓಗ್ಬೇಕೂಂದ್ರೆ ಇರೋದೇ ಪುಟ್ಪಾತು.

ಜನಾ ಎಲ್ಮೆಟ್ ಅಂದ್ರೆ ಸಾಕು ಏಳ್‌ಪುಟ್ಟದವ್ರ ತರಾ ಓಡೋಗೋದನ್ನು, ತಪ್ಪಿ, ಅದ್ನ ತಲೆಮೇಲಿನ ಚಿಪ್ಪಿ, ಕತ್ತಿ ಅಂಗೆಲ್ಲ

ಅನ್ಕೊಳ್ದೇ ಇರಂಗೆ ಅವ್ರ ಮನವೊಲ್ಸಿ ಜೀವದ ಬೆಲೆ ಎಷ್ಟು ಅನ್ನೋದ ಅವ್ರಿಗೆ ತಿಳ್ಸಿ, ಪುಗಸಟ್ಟೆ ಎಲ್ಮೆಟ್ ಕೊಟ್ರೆ ಅವರ್ಯಾಕಪ್ಪಾ ಬ್ಯಾಡಾ ಅಂತಾರೆ? ಲೋ ನಿಂಗಾ, ನಂದೇ ಬೇರೇತರಾ ಎದರ್ಕೆ ಕಲಾ. ಇವತ್ತಲ್ಲಾ ನಾಳೆ ಈ ಎಲ್ಮೆಟ್ರೂಲ್ಸು ಜಾರಿಗೆ ಬತ್ತು ಅನ್ಸು. ಆಗ ಎಲ್ಮೆಟ್ ಆಕ್ಕೊಳ್ದೇ ಇರೋವ್ರಿಗಿಂತ ಆಕ್ಕೊಂಡೋರ್ಗೆ ತೊಂದ್ರೆ ಜಾಸ್ತಿ ಆಗ್ಬೋದೂ.

ಎಲ್ಮೆಟ್ ಆಕ್ಕೊಂಡಿರೋವ್ರನ್ನ, ನಿಲ್ಸಿ, ಈ ಎಲ್ಮೆಟ್‌ಗೆ ಐಎಸ್ಐ ಗುರ್ತು ಎಲ್ಲೈತೆ? ಇದು ಯಾವಾಗ ತಯಾರ್ಸಿದ್ದು? ಯಾವ್ದೋ ಕಂತ್ರಿ ಎಲ್ಮೆಟ್ಟ್ಯಾಗೆ ನೀವೇ ಐಎಸ್ಐ ಸ್ಟಿಕರ್ ಯಾಕಂಟಿಸಿರ್ಬಾರ್ದು ಅಂತೆಲ್ಲ ಕೊಶ್ಚನ್ ಮಾಡ್ದ್ರೆ, ಆಗೇನ್ ಮಾಡೋದೂ ಸಿವಾ..ಎಂಗಸ್ರಂತೂ ತಮ್ಮ ತಲೆ ಸೈಜು, ಸ್ಟೈಲು, ಕಲರ್ ಇದಕ್ಕೆ ಸರಿ ಒಂದೋ ಎಲ್ಮೆಟ್ ಉಡುಕೋದ್ರಲ್ಲೇ ಸುಸ್ತಾಗೋಯ್ತಾರೆ

# 13. ಪೆದ್ದಣ್ಣನ ಹಾಸ್ಯ ಪ್ರಸಂಗಗಳು ವಿವಿಧ ಮೂಲಗಳಿಂದ ಕದ್ದಿದ್ದು

ಪಕ್ಕದೂರಿಗೆ ಕಾಲೇಜಿಗೆ ಹೋಗುವಾಗಲೆಲ್ಲಾ ಆಗಾಗ್ಗೇ ಈ ಪೆದ್ದಣ್ಣಗಳ ಭೇಟಿ ಆಕಸ್ಮಿಕವಾದರೂ ಸತ್ಯ. ಈ ಪೆದ್ದಣ್ಣಗಳು ಸರ್ದಾಜಿಗಳಾಗಿರೋದು ಸಾಮಾನ್ಯ. ಒಮ್ಮೆ ಹೀಗೆ ರೈಲ್ವೆಸ್ಟೇಷನ್ನಿಗೆ ಹೋಗುತ್ತಿರುವಾಗ ರಸ್ತೆಪಕ್ಕದಲ್ಲಿನ ಒಂದು ಕಲ್ಲು ಬೆಂಚಿನಮೇಲೆ ಒಬ್ಬ ಪೆದ್ದಣ್ಣ ಕುಳಿತು ಕನಸು ಕಾಣುತ್ತಿತ್ತು. ಅಂತೆಯೇ ಹಲವಾರು ಬೆಂಚುಗಳಮೇಲೆ ಇದೇ ರೀತಿ ಹಲವಾರು ಪೆದ್ದಣ್ಣಗಳು ಆಸೀನವಾಗಿದ್ದವು. ಗಸ್ತು ತಿರುಗುತ್ತಿದ್ದ ಒಬ್ಬ ಪೋಲೀಸಪ್ಪ, ಒಬ್ಬನ ಬಳಿಹೋಗಿ "ಆರ್ ಯು ರಿಲಾಕ್ಸಿಂಗ್?" ಅಂದದಕ್ಕೆ ಅವನು 'ನೋ,ನೋ ಐ ಯಾಮ್ ಬೂಟಾ ಸಿಂಗ್' ಅಂದನಂತೆ. ಆ ಪೋಲೀಸಪ್ಪ ಮತ್ತೊಂದು ಬೆಂಚಿನಬಳಿಸಾಗಿ ಅದೇ ಪ್ರಶ್ನೆಯನ್ನು ಆ ವ್ಯಕ್ತಿಗೂ ಕೇಳಿದನಂತೆ. ಅವನೂ ಸಹಾ 'ನೋ, ಐ ಯಾಮ್ ಮಿಕಾಸಿಂಗ್' ಅಂದನಂತೆ. ನನ್ನ ಜೊತೆ ಇದ್ದ ಪೆದ್ದಣ್ಣ, ತಾನೂ ಒಬ್ಬನ ಬಳಿಹೋಗಿ 'ಆರ್ ಯೂ ಗಬ್ಬರ್ ಸಿಂಗ್?' ಅಂದನಂತೆ. ಅವನು 'ನೋ ನೋ, ಐ ಯಾಮ್ ರಿಲಾಕ್ಸಿಂಗ್' ಅಂದನಂತೆ. ನನ್ನೊಡನೆ ಆಗ ಪೆದ್ದಣ್ಣ ಹೇಳಿನಕ್ಕಿದ್ದು "ನೋಡೋ ಆ ಪೋಲೀಸಪ್ಪನಿಗೆ ಗೊತ್ತಾಗ್ದೇ ಇರೋ ರಿಲಾಕ್ಸಿಂಗನ್ನು ನಾನು ಕಂಡುಹಿಡಿದೆ"

ಅಲ್ಲಿಂದ ರೇಲ್ವೆ ಸ್ಟೇಷನ್ನಿಗೆ ಹೋದರೆ, ಅಲ್ಲಿ ಜನಗಳ ಗೋಳಾಟ ಹೇಳತೀರದಾಗಿತ್ತು. ರೈಲುಹಳಿಗಳ ಮೇಲೆ ಹತ್ತಾರು ಹೆಣಗಳು. ಪ್ಲಾಟ್‌ಫಾರಂ ಮೇಲೆ ಒಬ್ಬನೇ ಒಬ್ಬ ಸರ್ದಾಜಿ ಪ್ಯಾಪುಮೋರೆ

ಹಾಕಿಕೊಂಡು ನಿಂತಿದ್ದ. ಅವನ ಬಳಿಹೋಗಿ, 'ಏನಾಯಿತು? ಯಾಕೆ ಹಳಿ ಮೇಲೆ ಇಷ್ಟೊಂದು ಹೆಣಗಳು ಬಿದ್ದಿವೆ? ಎಂದು ಕೇಳಿದೆ. ಅದಕ್ಕವನು ಬಿಕ್ಕುತ್ತಾ, ಅವರೆಲ್ಲಾ ನನ್ನ ಸಂಬಂಧೀಕರು. ಪಂಜಾಬಿನಿಂದ ಮೈಸೂರಿಗೆ ಅರಮನೆ ನೋಡಲು ಬಂದಿದ್ದರು. ಊರಿಗೆ ವಾಪಸಾಗುವಾಗ, ಸ್ಟೇಷನ್ನಿನ ಪ್ಲಾಟ್‌ಫಾರಂ ಮೇಲೆ ರೈಲಿಗಾಗಿ ಕಾದುನಿಂತಿದ್ದರು. ಆಗ ಧ್ವನಿವರ್ಧಕದಲ್ಲಿ ಸೂಚನೆ ಬಂತು. "ಪಂಜಾಬ್ ಜಾನೇವಾಲೀ ಗಾಡಿ ಅಬ್ ತೋಡೀಹೀ ದೇರ್‌ಮೇ ಏಕ್ ನಂಬರ್‌ಕಿ ಪ್ಲಾಟ್‌ಫಾರಂ ಪೆ ಆಯೇಗಿ". ಸೂಚನೆ ಕೇಳಿಸಿಕೊಂಡವರೇ ತಡಾ, ಎಲ್ಲರೂ ಹಳಿಯಮೇಲೆ ಜಿಗಿದುಬಿಟ್ಟರು, ರೈಲು ಹರಿದು ಹೆಣವಾಗಿ ಬಿಟ್ಟರು ಅಂತ ರೋಧಿಸತೊಡಗಿದ. ನಾನು ಅವನನ್ನು ಸಮಾಧಾನಪಡಿಸುತ್ತಾ, 'ಅಲ್ಲ ಕಣಯ್ಯಾ, ಅವರೆಲ್ಲ ಹಳಿಯಮೇಲೆ ಜಿಗಿದಾಗ ನೀನು ಯಾಕೆ ಇಲ್ಲಿ ನಿಂತಿದ್ದೆ?' ಅಂತ ಕೇಳಿದೆ. ಅದಕ್ಕವನು,' ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದುಕೊಂಡು ಹಳಿಮೇಲೇ ನಿಂತಿದ್ದೆ. ಸೂಚನೆ ಕೇಳಿಸಿಕೊಂಡವನೇ, ಸಾಯಬೇಕೆಂದು ಪ್ಲಾಟ್‌ಫಾರಂ ಮೇಲಕ್ಕೆ ಜಿಗಿದೆ' ಅನ್ನೋದೇ!

ಈ ಗಲಾಟೆಯೆಲ್ಲಾ ಮುಗಿದು ರೈಲು ಹೊರಟಾಗ, ನಾನು ಕುಳಿತ್ತಿದ್ದ ಸೀಟಿನ ಎದುರುಗಡೆ, ಮತ್ತೊಬ್ಬ ಪೆದ್ದಣ್ಣ ಪ್ರತ್ಯಕ್ಷವಾಗಬೇಕೇ! ಒಂದೆರಡು ನಿಲ್ದಾಣ ದಾಟಿದನಂತರ, ಟಿಕೇಟು ಚೆಕಿಂಗ್ ಇನ್ಸ್‌ಪೆಕ್ಟರ್ ಬಂದು ಎಲ್ಲರ ಬಳಿಯೂ ಹೋಗಿ, ಟಿಕೇಟ್ ತೋರಿಸಲು ಕೇಳುತ್ತಿದ್ದರು. ನಾನು ನನ್ನ ಬಳಿಯಿದ್ದ ತಿಂಗಳ ಪಾಸನ್ನು ತೋರಿಸಿದೆ. ಆ ಪೆದ್ದಣ್ಣ ಕೋಟಿನ ಎಲ್ಲಜೇಬುಗಳನ್ನೂ ಮುಟ್ಟಿಮುಟ್ಟಿ ನೋಡಿಕೊಂಡು,ಕೊನೆಗೆ ಪ್ಯಾಂಟು ಜೇಬಿನಿಂದ ಒಂದು ಟಿಕೇಟು ತೆಗೆದು ತೋರಿಸಿದ. ಸಧ್ಯ, ಟಿಕೇಟುಗಳು ಇವೆ, ಅವೂ ಇವೆಯಾ ಅಂದುನೋಡಿಕೊಂಡೆ' ಅನ್ನೋದೇ! ಇವನನ್ನು ತಮಾಷೆ ಮಾಡಬೇಕೆಂದು ಕೊಂಡ ಆ ಇನ್ಸ್‌ಪೆಕ್ಟರ್, 'ಏನೂ ಅಲ್ಲೂ ಟಿಕೇಟುಗಳು ಇವೆಯಾ?' ಎಂದು ಕೇಳಿದನು. ಅದಕ್ಕವನು ಅಕಸ್ಮಾತ್ ಈ ಟಿಕೇಟು ಕಳೆದುಹೋದರೆ, ಅಂತ ಇನ್ನೊಂದು ಟಿಕೇಟ್ ಖರೀದಿಸಿದ್ದೆ' ಅಂದನು.' ಆ ಟಿಕೇಟೂ ಕಳೆದುಹೋಗಿದ್ದರೆ, ಏನು ಮಾಡುತ್ತಿದ್ದೆ?' ಅಂದಿದಕ್ಕೆ 'ಅಷ್ಟು ಪೆದ್ದನಲ್ಲಾ ನಾನು ಸ್ವಾಮಿ, ಅದಕ್ಕೆಂದೇ, ಒಂದು ತಿಂಗಳ ಪಾಸನ್ನೂ, ಕೋಟಿನ ಒಳಜೇಬಿನಲ್ಲಿ ಭದ್ರವಾಗಿ ಇಟ್ಟುಕೊಂಡಿದ್ದೇನೆ' ಅನ್ನೋದೇ!

ನಮ್ಮ ಪೆದ್ದಣ್ಣ ಬಂದನೆಂದರೆ ಹತ್ತಡಿ ದೂರದಿಂದಲೇ ಸಿಗ್ನಲ್ ಬರುತ್ತಿತ್ತು. ಅದು ಸುವಾಸನೆಯಲ್ಲ, ದುರ್ವಾಸನೆ. ನನಗೂ ನಮ್ಮ ಗೆಳೆಯರಿಗೂ ಹೇಳಿಹೇಳಿ ಸಾಕಾಗಿಹೋಗಿತ್ತು, ಕಡೆಗೊಮ್ಮೆ ಫೈನಲ್ ವಾರ್ನಿಂಗ್ ಕೊಟ್ಟುಬಿಟ್ಟೆವು. 'ಪೆದ್ದಣ್ಣ,

ನೋಡು ನೀನು ನಾಳೆಯಿಂದ ಈ ಹಳೇ ಕಾಲುಚೀಲಗಳಿಗೆ ಬದಲಾಗಿ ಹೊಸ ಕಾಲುಚೀಲಗಳನ್ನು ಹಾಕಿಕೊಂಡೇ ಬರಬೇಕು. ಇಲ್ಲದಿದ್ದಲ್ಲಿ ನಮ್ಮ ಗ್ರೂಪ್‌ಗೆ ನಿನಗೆ ಪ್ರವೇಶ ಕ್ಯಾನ್ಸಲ್ ಮಾಡಿಬಿಡುತ್ತೇವೆ' ಅಂತ. ಅದಕ್ಕವನು, ಹಾಗೇ ಆಗಲಿ, ನಾನು ನಾಳೆಯಿಂದಲೇ ಹೊಸ ಕಾಲುಚೀಲ ಹಾಕಿಕೊಂಡು ಬರುತ್ತೇನೆ, ನನ್ನನ್ನು ದೂರ ಮಾಡಬೇಡಿ ಪ್ಲೀಸ್' ಅಂತ ಗೋಗರೆದ. ನಮಗೂ ಅವನನ್ನು ಹೊರಹಾಕಲು ಮನಸ್ಸಿರಲಿಲ್ಲ. ಮಾರನೇ ದಿನ ರೈಲಿಗೆ ಪೆದ್ದಣ್ಣ ನಗನಗುತ್ತಾ ಹಾಜರ್. ದುರ್ವಾಸನೆಯೇನೋ ಕಮ್ಮಿ ಆಗಿತ್ತು. ಆದರೆ ಪೂರ್ತಿ ಇಲ್ಲವಾಗಿರಲಿಲ್ಲ. ನಾವು, 'ಏನು ಪೆದ್ದಣ್ಣ, ನೀನು ಕಾಲುಚೀಲ ಬದಲಾಯಿಸಲಿಲ್ಲ ಅನ್ನಿಸುತ್ತೆ' ಅಂದಿದಕ್ಕೆ, ಅವನು ತನ್ನ ಕಾಲನ್ನೆತ್ತಿ, ಹೊಸ ಕಾಲುಚೀಲಗಳನ್ನು ತೋರಿಸಿದ. 'ಇದೇನೂ ಈ ಹೊಸ ಕಾಲುಚೀಲಗಳೇ ದುರ್ನಾತಬೀರುತ್ತಿವೆಯಲ್ಲಾ' ಅಂದುದಕ್ಕೆ ಪೆದ್ದಣ್ಣ, 'ನೀವುಗಳು ನನ್ನ ಮಾತನ್ನು ನಂಬುವುದಿಲ್ಲ ಅನ್ನುವುದು ಗೊತ್ತಿತ್ತು. ಅದಕ್ಕೆಂದೇ ಹಳೆಯ ಕಾಲುಚೀಲಗಳನ್ನು ಪ್ಯಾಂಟು ಜೇಬಿನಲ್ಲಿಟ್ಟುಕೊಂಡು ಬಂದಿದೀನಿ' ಅಂತ ಹೇಳುತ್ತಾ ತನ್ನ ಜೇಬಿನಿಂದ ಹಳೇ ಕಾಲುಚೀಲಗಳನ್ನು ಹೊರತೆಗೆದ. ಮೂರ್ಛೆಹೋಗುವ ಸರದಿ ನಮ್ಮದಾಗಿತ್ತು.

ರೈಲು ಗಡಗಡ ಹೋಗುತ್ತಿತ್ತು, ಇದ್ದಕ್ಕಿದ್ದಂತೆ ರೈಲು ಹಳಿಬಿಟ್ಟು ಧಡಧಡ ಚಲಿಸತೊಡಗಿತು. ಕೆಲವು ನಿಮಿಷಗಳ ನಂತರ ಮತ್ತೆ ಹಳಿಮೇಲೆ ಬಂದು ಓಡತೊಡಗಿತು. ಪ್ರಯಾಣಿಕರೆಲ್ಲಾ ಗಾಬರಿಯಿಂದ ರೈಲಿನ ಚೈನ್ ಎಳೆದು ಚಾಲಕನ ಬಳಿ ಕೂಗಾಡತೊಡಗಿದರು. ಚಾಲಕ ವಿವರಿಸುತ್ತಿದ್ದ, 'ಗಾಡಿ ಹಳಿಯಮೇಲೆ ಚಲಿಸುತ್ತಿತ್ತು. ಹಳಿಗಳ ಮಧ್ಯೆ ಒಬ್ಬ ನಿಂತುಬಿಟ್ಟಿದ್ದ.' ಆಗ ಪ್ರಯಾಣಿಕರೆಲ್ಲರೂ ಒಕ್ಕೊರಲಿನಿಂದ 'ಅಲ್ಲಯ್ಯಾ, ಒಬ್ಬ ಸಾಯುವವನನ್ನು ಉಳಿಸಲು, ನೂರಾರು ಜನರನ್ನು ಸಾಯಿಸಲು ಹೊರಟೆಯಾ?' ಅಂತ ದಬಾಯಿಸಲು ಆರಂಭಿಸಿದರು. ಆಗ ಆ ಚಾಲಕ ವಿವರಿಸಿದ್ದು "ನಾನೂ ಅದನ್ನೇ ಮಾಡಿದೆ. ಅವನನ್ನು ಸಾಯಿಸಲು ಗಾಡಿಯನ್ನು ಅವನ ಬಳಿಗೆ ಓಡಿಸಿದೆ. ಆದರೆ ಅವನು ಪಕ್ಕದ ಗದ್ದೆಗೆ ಜಿಗಿದು ಓಡಿಬಿಟ್ಟ. ಅವನನ್ನು ನಾನೂ ಹಿಂಬಾಲಿಸಿದೆ. ಅವನು ಕಾಣದಾದಾಗ ಮತ್ತೆ ಹಳಿಯಮೇಲೆ ವಾಪಸಾದೆ ಅನ್ನೋದೇ!

ನನ್ನ ಊರು ತಲುಪಿದೆ. ನನ್ನ ಹಿಂದೆಯೇ ಒಬ್ಬ ಪೆದ್ದಣ್ಣ ಬರುತ್ತಿತ್ತು. ರೇಲುವೆ ನಿಲ್ದಾಣದ ಗೇಟಿನಲ್ಲಿ ಮಾತ್ರ ಮತ್ತೊಬ್ಬ ಸರ್ದಾಜಿ ಪೆದ್ದಣ್ಣ ನಿಂತು ಟಿಕೇಟು ತೋರಿಸಲು ಕೇಳುತ್ತಿದ್ದ. ನಮಗಿಂತ ಮೊದಲು ನಿಂತಿದ್ದವ, 'ನಿನಗೆಷ್ಟು ಧೈರ್ಯ, ನನ್ನನ್ನೇ ಟಿಕೇಟು ಕೇಳುತ್ತೀಯಾ, ನಾನು ಯಾರೆಂದು ತಿಳಿದಿದ್ದೀಯಾ?

ನಾನು ಒಬ್ಬ ನೇತಾ' ಅಂದು ಕೂಗಾಡಿದ. ಗೇಟಿನಲ್ಲಿದ್ದವನು ಕೈಮುಗಿದು, ಹೊರಹೋಗಲು ಬಿಟ್ಟುಬಿಟ್ಟ. ನನ್ನ ಜೊತೆ ಬಂದಿದ್ದ ಪೆದ್ದಣ್ಣನ ತಲೆಯಲ್ಲಿ ಹೊಸ ಆಲೋಚನೆಯೊಂದು ಸುಳಿಯಿತು. ನಾನು ಯಾಕೆ ಟಿಕೇಟು ತೆಗೆದುಕೊಳ್ಳಬೇಕು? ಮುಂದಿನ ಸಲ ನಾನೂ ಟಿಕೇಟು ತೆಗೆದುಕೊಳ್ಳದೇ ಬಂದು, ಇದೇ ರೀತಿ ದಬಾಯಿಸಿಕೊಂಡು ಹೊರಹೋಗುತ್ತೇನೆ ಅಂದುಕೊಂಡ. ಮತ್ತೆರಡು ಮೂರು ದಿನಗಳಲ್ಲೇ, ಆ ಸಂದರ್ಭ ಬಂದುಬಿಟ್ಟಿತು. ಅದೇ ಪೆದ್ದಣ್ಣ, ನಾನು ಒಂದೇ ರೈಲಿನಲ್ಲಿ ಊರಿಗೆ ಹೋಗುತ್ತಿದ್ದೆವು. ಅವನ ಅದೃಷ್ಟವೋ ಏನೋ, ರೈಲಿನಲ್ಲಿ ಆ ದಿನ ಯಾವುದೇ ಚೆಕಿಂಗ್ ನಡೆಯಲಿಲ್ಲ. ಅದರೆ ನಿಲ್ದಾಣದ ಗೇಟಿನಲ್ಲಿ ಮಾತ್ರ ಅದೇ ಸರ್ದಾಜಿ ಪೆದ್ದಣ ನಿಂತು ಟಿಕೇಟು ತೋರಿಸಲು ಕೇಳುತ್ತಿದ್ದ. ಈಗ ನನ್ನ ಜೊತೆ ಇದ್ದ ಪೆದ್ದಣ್ಣ, ಇಲ್ಲದ ಧೈರ್ಯ ತಂದುಕೊಂಡು ಗೇಟಿನ ಬಳಿಸಾಗಿದ. ಎಲ್ಲರನ್ನೂ ಕೇಳುವಂತೆ ಈ ಪೆದ್ದಣ್ಣನನ್ನೂ ಟಿಕೇಟ್ ತೋರಿಸಲು ಗೇಟ್ ಇನ್ಸ್‌ಪೆಕ್ಟರ್ ಕೇಳಿದ. ನಮ್ಮ ಪೆದ್ದಣ್ಣ ಧೈರ್ಯದಿಂದ, 'ನಾನು ಯಾರೆಂದು ಕೊಂಡೆ, ನನ್ನನ್ನೇ ಟಿಕೇಟು ಕೇಳುತ್ತೀಯಾ? ನಾನೂ ಒಬ್ಬ ನೇತಾ' ಅಂದುಬಿಟ್ಟ, ಅವನು ತಬ್ಬಿಬ್ಬಾಗಿ, ನಂತರ ಸಾವರಿಸಿಕೊಂಡು, 'ಆಪ್ ನೇತಾ ಹೈ? ಆಪ್‌ಕಾ ನಾಮ್ ಕ್ಯಾ ಹೈ? ಅಂತ ಕೇಳಿಬಿಟ್ಟ, ನಮ್ಮ ಪೆದ್ದಣ್ಣ, ಈ ಕೌಂಟರ್ ಪ್ರಶ್ನೆ ಎದುರುನೋಡಿರಲಿಲ್ಲ. ಬಾಯಿ ಒಣಗಿದಂತೆ ಆಯಿತು, ಕೈಕಾಲು ನಡುಗಲು ಶುರುವಾಯಿತು. ಆದರೂ ಸ್ವಲ್ಪ ತಲೆ ಓಡಿಸಿದ, ನೆನಪಿಗೆ ಯಾರ ಹೆಸರೂ ಬರುತ್ತಿಲ್ಲ. ಕೊನೆಗೊಮ್ಮೆ ನೆನಪಿಗೆ ಬಂದ ಹೆಸರೊಂದನ್ನು ಒಂದೇ ಉಸಿರಿಗೆ"ಇಂದಿರಾ ಗಾಂಧಿ" ಅಂತ ಹೇಳಿ ಕಣ್ಣುಮುಚ್ಚಿಕೊಂಡು ನಿಂತುಬಿಟ್ಟ, ಕಣ್ಣುಬಿಟ್ಟವನಿಗೆ ಕೆಳಗೆ ತನ್ನ ಕಾಲುಹಿಡಿದುಕೊಂಡು ಬಿದ್ದಿದ್ದ ಆ ಗೇಟ್ ಇನ್ಸ್‌ಪೆಕ್ಟರ್, ಇವನಿಗೋ ಆಶ್ಚರ್ಯ, ಅವನನ್ನು ಎಬ್ಬಿಸಿದಾಗ ಅವನ ಉವಾಚ: "ನಾಮ್‌ತೊ ಸುನಾತ, ಮಗರ್, ದೆಖಾ ನಹೀ ತಾ, ಆಜ್ ಆಪ್‌ಕಾ ದರ್ಶನ ಭಾಗ್ಯ ಮಿಲಾ" ಅಂತ ಹೇಳಿ ಗೌರವದಿಂದ ಹೊರಹೋಗಲು ಅನುಮತಿಸಿದ.

ಇಬ್ಬರು ಪೆದ್ದಣ್ಣಗಳೊಮ್ಮೆ ಬೆಂಗಳೂರಿಗೆ ಪ್ರವಾಸಕ್ಕಾಗಿ ಹೋಗಿದ್ದಾಗ ವಿಧಾನಸೌಧದ ಬಳಿಬಂದರು. ಅದರ ಪಕ್ಕದಲ್ಲೇ ಇದ್ದ ವಿಕಾಸಸೌಧ ಮಂತ್ರದ 'ಎಸ್ಸೆಂ' ಕಾಲದಲ್ಲಿ ಕಟ್ಟಿಸಿದ್ದು ಅಂತ ಗೊತ್ತಾಯಿತು. ಸರಿ ಒಂದೇ ಊರಿಗೆ ಎರಡೆರಡು ವಿಧಾನಸೌಧ ಯಾಕೆ? ನಮ್ಮೂರಿಗೆ ಇದನ್ನು ತಳ್ಳಿಕೊಂಡು ಹೋಗಿಬಿಡಲು ಆಲೋಚಿಸಿದರು. ಆಲೋಚನೆ ಬಂದದ್ದೇ ತಡ, ಕಾರ್ಯಾಚರಣೆಗೆ

ಇಳಿದೇಬಿಟ್ಟರು. ಇಬ್ಬರೂ ಒಂದು ಸುತ್ತುಬಂದು ಕಟ್ಟಡದ ಪಕ್ಕಕ್ಕೆ ಬಂದರು. ಕಟ್ಟಡವನ್ನು ತಳ್ಳಲು ಪ್ರಾರಂಭಮಾಡಿದರು. ಮೈ ಬೆವರತೊಡಗಿತು, ಕಾಲು ಜಾರತೊಡಗಿತು. ಚಪ್ಪಲಿ ಕಳಚಿ ಹಿಂದೆ ಇಟ್ಟರು. ಶರಟು, ಬನಿಯನ್ನು ಬಿಚ್ಚಿಟ್ಟರು. ಮತ್ತೆ ತಳ್ಳಾಟ ಶುರುಮಾಡಿದರು. ಕಾಲಿನ ಸರಾಗಚಲನೆಗೆ ತೊಡಕೆನ್ನಿಸಿದಾಗ ಪ್ಯಾಂಟನ್ನೂ ಬಿಚ್ಚಿಟ್ಟರು. ಮತ್ತೆ ತಳ್ಳುವ ಪ್ರಯತ್ನ ಮುಂದುವರೆಸಿದರು. ಕೆಲಸಮಯದ ನಂತರ, ಎಷ್ಟು ದೂರ ತಳ್ಳಿದ್ದೇವೆ ಎಂದು ತಿಳಿದುಕೊಳ್ಳಲು ಹಿಂದೆ ತಿರುಗಿ ನೋಡಿದರು, ಅವರ ಚಪ್ಪಲಿ, ಶರಟು, ಪ್ಯಾಂಟುಗಳು ಕಾಣುತ್ತಿರಲಿಲ್ಲ. ಸಮಾಧಾನವಾಯಿತು. 'ಸಾಕಷ್ಟು ದೂರ ಸೌಧವನ್ನು ತಳ್ಳಿಕೊಂಡು ಬಂದಿದ್ದೇವೆ, ನಮ್ಮೂರಿಗೆ ವಿಕಾಸಸೌಧವನ್ನು ತಳ್ಳಿಕೊಂಡು ಹೋಗೇಬಿಡುತ್ತೇವೆ' ಅಂದು ಸಮಾಧಾನ ಮಾಡಿಕೊಂಡರು ಈ ಐಕ್ಳುಗಳು.

ಒಮ್ಮೆ ನಮ್ಮ ಪೆದ್ದಣ್ಣನಿಗೆ 'ಕೌನ್ ಬನೇಗಾ ಕರೋಡ್‌ಪತಿ' ಗೆ ಹೋಗೋ ಅವಕಾಶ ಸಿಕ್ಕಿಬಿಟ್ಟಿತು. ಅಮಿತಾಬ್ ಮುಂದೆ ಕುಳಿತುಕೊಳ್ಳುವ ಅವಕಾಶ ತನಗೆ ದೊರೆತುದಕ್ಕೆ ಅವನ ಖುಷಿಗೆ ಪಾರವೇ ಇಲ್ಲ. ಸರಿ ನಿಗದಿತ ದಿನದಂದು ಹೊಸ ಬಟ್ಟೆ ಹೊಲಿಸಿಕೊಂಡು ಸ್ಪರ್ಧೆಗೆ ಹಾಜರಾದ. ಬಿಸಿಕುರ್ಚಿ(ಹಾಟ್ ಸೀಟ್)ಮೇಲೆ ಕುಳಿತಾಗ ಝಗಮಗಿಸುವ ಲೈಟುಗಳು, ಕಿವಿಗಡಚಿಕ್ಕುವ ಚಪ್ಪಾಳೆ (ಅಮಿತಾಬ್ ಬಂದಾಗ) ಎಲ್ಲ ನೋಡಿ ತಲೆಂಯೆಲ್ಲಾ ಖಾಲಿ ಖಾಲಿಯಾದಂತೆನಿಸಿತು. ಪ್ರಶ್ನೆ ಉತ್ತರ ಪ್ರಾರಂಭವಾಯಿತು. ಮೊದಲನೇ ಪ್ರಶ್ನೆ: ಆಪ್‌ಕಾ ನಾಮ್(ನಿಮ್ಮ ಹೆಸರು)? ತಟ್ಟಂತ ಉತ್ತರ ಹೇಳಿದ; 'ಪೆದ್ದಣ್ಣ. 'ಬಿಲ್‌ಕುಲ್ ಸಹೀ ಜವಾಬ್; ಆಪ್ ಏಕ್ ಹಜಾರ್ ಜೀತ್‌ಗಯೆ' ಅಂದ ಅಮಿತಾಬ್. ಎರಡನೇ ಪ್ರಶ್ನೆ: ಆಪ್ ಕಾ ಷಹರ್(ನಿಮ್ಮ ಊರು)? ಅದಕ್ಕೂ ಉತ್ತರ ಕರೆಕ್ಟ್. 'ದೋ ಹಜಾರ್ ಜೀತ್‌ಗಯೆ'. ಮೂರನೇ ಪ್ರಶ್ನೆ: ಆಪ್‌ಕಾ ಬಾಪ್‌ಕಾ ನಾಮ್ (ನಿಮ್ಮ ತಂದೆಯವರ ಹೆಸರೇನು)?' ತಲೆ ಗಿರ್ರೆಂದಿತು. ತಾಯಿ ಹೆಸರು ಕೇಳಿದ್ದರೆ ಉತ್ತರ ಸರಿಯಾಗಿ ಕೊಡಬಹುದಿತ್ತು, ಆದರೆ ತಂದೆ ಹೆಸರು? ಹೊಳೆಯಲಿಲ್ಲ. ಉತ್ತರ ಗೊತ್ತಾಗದಿದ್ದಾಗ ಇತರರು 'ಆಪ್ಷನ್' ಅಂತ ಕೇಳುತ್ತಿದ್ದುದನ್ನು ನೋಡಿದ್ದ, ತಕ್ಷಣ 'ಆಪ್ಷನ್' ಅಂದ. ಅಮಿತಾಬನೂ ಇವನಿಂದ ಉತ್ತರ ಹೊರಡಿಸಲು ಸುಲಭವಾಗಲೀ ಅಂದುಕೊಂಡು: "ಆಪ್ಷನ್ 1 – ಕಪ್ಪಣ್ಣ; ಆಪ್ಷನ್ 2 ಕಪ್ಪಣ್ಣ; ಆಪ್ಷನ್ 3 – ಕಪ್ಪಣ್ಣ; ಆಪ್ಷನ್ 4– ಕಪ್ಪಣ್ಣ" ಇದರಲ್ಲಿ ಯಾವುದು ಸರಿ? ಅಂದರು. ಇವನಿಗೋ ಪೂರಾ ಕನ್ಫ್ಯೂಶನ್ ಆಯಿತು. 'ಆಡಿಯನ್ಸ್ ಪೋಲ್' ಅಂದ. ಒಬ್ಬೊಬ್ಬರು ಒಂದೊಂದು ಸಂಖ್ಯೆ ಸೂಚಿಸಿದರು. ಕನ್ಫ್ಯೂಶನ್ ಇನ್ನೂ

ಹೆಚ್ಚಾಯಿತು. ಒಂದು ಕ್ಷಣ ಬಿಟ್ಟು ಈ 4 ಆಪ್ಷನ್‌ಗಳಲ್ಲಿ 2 ತಪ್ಪು ಉತ್ತರಗಳನ್ನು ತೆಗೆದುಬಿಡಿ ಅಂತ ಗೋಗರೆದ ನಮ್ಮ ಪೆದ್ದಣ್ಣ. ಸರಿ, ಅಮಿತಾಬ್ '2 ತಪ್ಪು ಉತ್ತರಗಳನ್ನು ಕೈಬಿಡಿ' ಎಂದು ಆದೇಶಿಸಿದರು. ಆಪ್ಷನ್2 & ಆಪ್ಷನ್3 ಕಾಣೆಯಾಯಿತು. ಉಳಿದುದು "ಆಪ್ಷನ್1 'ಕಪ್ಪಣ್ಣ & "ಆಪ್ಷನ್4 ಕಪ್ಪಣ್ಣ '. ನಮ್ಮ ಪೆದ್ದಣ್ಣನ ಕನ್ಫ್ಯೂಷನ್ ಇನ್ನೂ ಮುಕ್ತಾಯವಾಗಲಿಲ್ಲ. ಅಮಿತಾಬನಿಗೆ "ಫೋನ್ ಎ ಫ್ರೆಂಡ್" ಅಂದ. ಸರಿ ಇವನ ಫ್ರೆಂಡ್ ಮರುಳನಿಗೆ ಕರೆಹೋಯಿತು. ಅಮಿತಾಬ ಮರುಳನಿಗೆ 'ಆಪ್ ಕೆ ದೋಸ್ತ್ ಪೆದ್ದನ್ನ ಹಾಟ್ ಸೀಟ್‌ಪೆ ಹೈ. ಆಪ್‌ಕಿ ಮದದ್‌ಚಾಹ್‌ತೇ ಹೈ. ಆಪ್‌ಕೋ ಸಾಟ್ ಸೆಕೆಂಡ್ ಮಿಲ್ತಾ ಹೈ' ಅಂದ. ಮರುಳನಿಗೆ ಅಮಿತಾಬನ ಧ್ವನಿ ಕೇಳಿದ್ದೇ ಖುಷಿ. ಲೋಕವನ್ನೇ ಮರೆತ. ಈ ಮಧ್ಯೆ ಪೆದ್ದಣ್ಣ, ಮರುಳನಿಗೆ 'ಹಲೋ ಮಿತ್ರಾ, ನನ್ನ ಮುಂದೆ 2 ಉತ್ತರಗಳಿವೆ; ಇದರಲ್ಲಿ ನನ್ನಪ್ಪನ ಹೆಸರು ಯಾವುದು? ಅಂದ. ಮರುಳ ಮಾತ್ರ ಉತ್ತರಿಸದೇ, ಅಮಿತಾಬನ ಚಿತ್ರ ಮನದಲ್ಲೇ ಕಲ್ಪಿಸಿಕೊಂಡು ಕೂತಿದ್ದ.. ಪೆದ್ದಣ್ಣನನ್ನೇ ಅಮಿತಾಬನಿಗೂ ಎಷ್ಟು ಅಂತರ ಇದೆ ಎಂದು ಕೇಳುತ್ತಿದ್ದಂತೆ 60 ಸೆಕೆಂಡುಗಳು ಮುಗಿದುಹೋದವು. ತಲೆ ಮತ್ತೆ ಖಾಲಿಯಾದಂತಾಯಿತು. ತಲೆ ಹಿಡಿದುಕೊಂಡು ಅವನೇ ಹಾಟ್ ಸೀಟಿನಿಂದ ಕೆಳಗಿಳಿದು, ಮನೆಕಡೆ ಓಡಿಹೋದ.

ನಮ್ಮ ಪೆದ್ದಣ್ಣನಿಗೆ ಪ್ಯಾರಿಸ್‌ಗೆ ಹೋಗುವ ಅವಕಾಶ ಪ್ರಾಪ್ತಿಯಾಗಿತ್ತು. ತನ್ನೊಡನೆ ನಾಲ್ಕಾರು ಸ್ನೇಹಿತರನ್ನು ಸೇರಿಸಿಕೊಂಡು ಹೊರಟೇಬಿಟ್ಟ. ಐಫೆಲ್ ಟವರ್ ತುದಿಗೇರಿಯೂಬಿಟ್ಟ. ಅಲ್ಲಿಂದ ಪ್ಯಾರಿಸ್ ನಾಲ್ಕೂಕಡೆ ಕಾಣುತ್ತಿತ್ತು. ತನ್ನ ಬೈನಾಕ್ಯುಲರ್ ಮೂಲಕ ನೋಡಿದರೆ, ಇನ್ನೂ ಚೆನ್ನಾಗಿ ಕಾಣುತ್ತಿತ್ತು. ಹಾಗೇ ಎಲ್ಲ ಕಡೆ ನೋಡುನೋಡುತ್ತಾ ಕೆಳಗಡೆ ದೃಷ್ಟಿ ಹರಿಸಿದ. ಏನಾಶ್ಚರ್ಯ!, ತನ್ನ ಶಾಲಾ ಸಹಪಾಠಿ ತಿಮ್ಮಣ್ಣ ಕೆಳಗೆ ನಿಂತಿದ್ದಾನೆ. ತನ್ನ ಜೊತೆಗಾರರಿಗೆ ತಿಮ್ಮಣ್ಣನನ್ನು ತೋರಿಸಿದ. ಅವರೆಲ್ಲರೂ ಜೋರಾಗಿ 'ತಿಮ್ಮಣ್ಣ, ತಿಮ್ಮಣ್ಣ' ಅಂತ ಕಿರುಚಿದರು. ಆದರೂ ತಿಮ್ಮಣ್ಣನ ಕಿವಿತಮಟೆಗೆ ಅವರ ಅರಚುವಿಕೆ ತಾಗಲಿಲ್ಲ. ಆಗ ಹೊಳೆಯಿತು ಬ್ರಿಲಿಯಂಟ್ ಐಡಿಯಾ ನಮ್ಮ ಪೆದ್ದಣ್ಣನಿಗೆ. ತನ್ನ ಬೈನಾಕ್ಯುಲರ್ ಕಣ್ಣಿಗೆ ಸಿಕ್ಕಿಸಿಕೊಂಡು ನೋಡಿದ. ತಿಮ್ಮಣ್ಣ ಕೈಗೆಟಕುವ ಅಳತೆಯಲ್ಲೇ ನಿಂತಿದ್ದಾನೆ. ಇನ್ಯಾಕೇ ಅರಚಬೇಕು. ಪಿಸುದನಿಯಲ್ಲೇ 'ತಿಮ್ಮಣ್ಣಾ' ಅನ್ನುತ್ತಾ ಕೈಸನ್ನೆ ಮಾಡಿಕರೆವ ನಮ್ಮ ಪೆದ್ದಣ್ಣ!

# 14. ಗಸ್ತು ತಿರುಗಿ ಗನ್ನು ಹಿಡಿದರು

ಗಸ್ತು ತಿರುಗಿ ಸುದ್ದಿ ಮಾಡಿದ್ದ ಕುವೆಂಪುನಗ್ರದ ಮಂದಿ ಸುಸ್ತಾಗಿ ಮಲಕ್ಕಂಬುಟ್ರು ಅಂತಿದ್ರೆ, ತಕಳಪ್ಪ ತುಪಾಕಿ ಆರ್ಸೋದ ಕಲ್ತು ಬಂದವ್ರೆ. ಮಿಕ್ಕವ್ರಿಗೂ ಕಲ್ಸಾಕೆ ಸುರು ಅಚ್ಕಂಡವ್ರಂತೆ. ಅಂತೂ ಕೆಲವು ಐನಾತಿ ಐಕ್ಳು ಈ ನಗರ್ದಾಗೆ ಸೇರ್ಕೊಂಡು ಏನಾರ ಒಸ್ದು ಐಡಿಯಾ ಆಕಿ ಸುದ್ದಿಮಾಡ್ತಾಯಿರ್ತಾರೆ ಕಣಪ್ಪ. ಅಂದಂಗೆ ನೀನೇಳು ಈ ಕುಯೆಂಪು ನಗ್ರ ಎಲ್ಲೈತಣ್ಣೋ? ಒಂದ್ಕಿತಾ ಓಗ್ಬರೋಮ ಅಲ್ಲಿಗೆ ಅಂತಾಯಿದೀನಿ. ಓ ಅದಾ ಅಲ್ಗೆ ದಾರಿ ಏಳೋದೇ ಬೋ ಕಷ್ಟ ಕಣಣ್ಣಾ. ಆದ್ರೂ ಎಲ್ಲಾ ದಾರೀನೂ ದಿಲ್ಲೀಗೆ ಅಂತಾರಲ್ಲಾ ಅಂಗೆ ಇಲ್ಗೂ ಅತ್ತಾರು ದಾರಿಗ್ಳು. ಒಂದ್ಕಿತ ಯಾರೋ ಏಳಿದ್ರು ಅಂತ ಅಂಗೇ ಹೊಸಳ್ಳಿ ಮುಂದ್ಕಿರೋ, ಆ ಉಡ್ಕೋ ಮನೆಗಳ ಮಗ್ಲಲ್ಲೇ ಉಡುಕ್ತಾ ಓದ್ರೆ ಸಿಕ್ಕೇ ಬುಡ್ತದೆ ಈ ಕುವೆಂಪುನಗರ; ಕೆಲವರ ಬಾಯಲ್ಲಿನ ಕುಯೆಂಪು ನಗ್ರ, ಇನ್ಕೆಲವರ ಯಾಕೆ ನಮ್ಮ ಮುನ್ಸಿಪಾಲ್ಟಿ ಮಂದಿ ಬಾಯ್ಲೇ ಏಳಿದ್ರೆ 'ಪುಯೆಂಪು ನಗ್ರ', ನಮ್ದೇಶ್ದ ತಮಾಸಿ ನೀ ಕಾಣ್ಯಾ. ನಗ್ರಗಳಿದ್ರೆ ದಾರಿಗಳಿಲ್ಲ, ದಾರಿಗಳಿರೋ ಕಡೆ ನಗ್ರಗಳಿಲ್ಲ; ಆಫೀಸಿದ್ರೆ ಜನಗಳು ಇಲ್ಲ, ಜನಗಳು ಇದ್ರೆ ಆಫೀಸರ್ರೇ ಇಲ್ಲ.

ಅದ್ಯಾಕೋ ಈಚ್ಗೆ ನಮ್ಸರ್ಕಾರ್ದ ಕಣ್ಣು ಪಾಪದ ಮಾಸ್ತರ್ಗಳ ಮೇಲ್ಬಿದ್ದದಂತೆ, ಮಾರಿಕಣ್ಣು ಓತದ್ಮೇಲೆ ಬಿದ್ದಂಗೆ. ಈ ಮುದಿ ಮಾಸ್ತರ್ಗಳ ಕೆಲ್ಸ ಎಚ್ಮಾಡವ್ರಂತೆ. ಅಲ್ಲಾ ಒಸಾ ಮಸೀನ್ಗು ಅಳೇ ಮಸೀನ್‌ಗೂ ಒಂದೇಯಾ! ಲೋಕ್ದಾಗೆಲ್ಲಾ ಅಳೇ ಮಸೀನ್ಗೆ ಕಡಿಮೆ ಕೆಲ್ಸ ಕೊಟ್ರೆ, ಇಲ್ಲಿ ಮಾತ್ರ 'ರೂಲೀಸೆಲ್ಲಾ ಉಲ್ಟ ಒಡ್ದೈತೆ ಅಂಗೇ ಈ ಮಾಸ್ತರ್ಗಳ್ಕತೆ ಎಕ್ಕುಟ್ಟೋಗೈತೆ' ಅಂತಾ ಈ ಅಳೇ ತುಕ್ಕಿಡಿದಿರೋ ಮುದಿ

ಮಾಸ್ತರುಗಳೆಲ್ಲಾ ಕೂಗ್ಕೊಂಡ್ರೆ, ನಮ್ಮೆಲ್ಲಕ್ಕೆ ಕತ್ರಿ ಆಕ್ತ್ರಲ್ಲಪ್ಪ ಅಂತ ಪಾರ್ಟ್ ಟೈಂ ಮಾಸ್ತರುಗಳು ಬೊಬ್ಬೆ ಆಕ್ತಾವ್ರೆ, ಇದ್ಕೇನಾ ಪರಿಹಾರಾ ?

ಓದ್ವಾರಾ ಎಂಸಿ. ರಸ್ತ್ಯಾಗೆ ಇದ್ದೆಕಪ್ಪಾ. ಅದೇನೋ ಕಾಲೇಜ್ನಾಗೆ ಭಾಸಣ ಐತೆ ಅಂದ್ರು. ಇಣ್ಕಿ ನೋಡ್ತಾ ಅಂತೊಳಕ್ಕೋಗಿ ನೋಡ್ತ್ರೆ ಒಳ್ಗೆ ಬ್ರಿಟೀಷ್ರು ಭಾರ್ತ ಬುಟ್ಬುಟ್ ತೊಲ್ಗಿದ ಬಗ್ಗೆ ಭೀಕರ್ವಾಗಿ ಭಾಸ್ನ ನಡೀತಿತ್ತು. ಉಡುಗ್ರು ಮಾತ್ರ ಒರಕ್ಕೋಡೊಗ್ತಾಯಿದ್ರು, ಕೆಲ ಮಾಸ್ತರುಗಳು ಅವರ್ನ ಅಡ್ಡಾಕ್ಕೊಂಡು ಒಳ್ಕೆ ದಬ್ತಾಯಿದ್ರು. ನನ್ನನ್ನೋಡಿದೊಬ್ಬ ಹೈದ ನಿಂತ್ಕೋಬೇಡ ಓಡ್ಲೇ ಅಂದದ್ಕೇ ಕಾಂಪೌಂಡ್ ಹಾರೋಕ್ಹೋಗಿ ಕಾಲ್ಮುರ್ಕಂಡೆ ಕಪ್ಪಾ.

## 15. ಸಾವು ತಂದ ಪರದಾಟ:

ಆ ಮಹಿಳೆ 88 ವರ್ಷಗಳ ತುಂಬು ಜೀವನ ಕಂಡಿದ್ದವಳು. ಮಿತಭಾಷಿ, ಗಟ್ಟಿಮುಟ್ಟಾದ ಹೆಂಗಸು. ಹತ್ತಾರು ವರ್ಷ ಪತಿ ಹಾಸಿಗೆಹಿಡಿದಾಗ ಎಲ್ಲ ರೀತಿಯ ಸೇವೆ ಮಾಡಿದ್ದವಳು. ಉಳಿದ ಜೀವಿತದ ಅವಧಿಯನ್ನು ಮಕ್ಕಳ ಮನೆಗಳಲ್ಲಿ ಕಳೆಯುತ್ತಿದ್ದಳು. ಇದ್ದಕ್ಕಿದ್ದಂತೆ ಒಂದು ದಿನ ದಿಢೀರೆಂದು ಎದೆನೋವು ಕಾಣಿಸಿಕೊಂಡಿತು. ಹಿಂದೆಯೂ ಕಾಣಿಸಿಕೊಂಡಿರಬಹುದು, ಯಾರೊಂದಿಗೂ ಹೇಳಿಕೊಂಡವಳಲ್ಲ. ಮಕ್ಕಳಿಗೆ ಗೊತ್ತೂ ಆಗಿರಲಿಲ್ಲ. ಆ ದಿನ ಬೆಳಿಗ್ಗೆ ಎದ್ದಾಗ ಮಾತು ತೀರ ಮೆದುವಾಗಿತ್ತು, ಆಹಾರ ತಿನ್ನಲು ಕಷ್ಟವಾಗುತ್ತಿತ್ತು. ಜೊತೆಗಿದ್ದ ಮಗ ಹತ್ತಿರದ ಸಂಬಂಧಿಗಳಿಗೆ ತಿಳಿಸಿ, ಆಸ್ಪತ್ರೆಗೆ ಸಾಗಿಸುವ ಪ್ರಯತ್ನ ಮಾಡುತ್ತಿದ್ದ. ಮಗಳು ಅಳಿಯ ಹೋಗುವವೇಳೆಗೆ ತಿಂದಿದ್ದೆಲ್ಲವನ್ನೂ ವಾಂತಿಮಾಡಿಕೊಂಡು ಪೂರಾಸುಸ್ತಾಗಿದ್ದರಂತೆ. ಪ್ರಜ್ಞೆತಪ್ಪಿತ್ತಂತೆ. ಅವರನ್ನು ಹತ್ತಿರದ ಆಸ್ಪತ್ರೆಗೆ ಸೇರಿಸಲು ಕರೆದುಕೊಂಡು ಹೋಗುವುದೆಂತು? ಇದ್ದದ್ದು ಎರಡನೇ ಮಹಡಿಯ ಮೇಲೆ. ಅವರಿಗೋ ನಡೆದುಕೊಂಡು ಹೋಗಲು ಆಗುತ್ತಿರಲಿಲ್ಲ. ಅಲ್ಲಿಂದ ಇಳಿಸಲು ಪಡಬಾರದ ಪಾಡು ಪಡಬೇಕಾಯಿತು. ಅಂಬುಲೆನ್ಸ್‌ಗೆ ಫೋನ್ ಮಾಡಿ ಅನ್ನುವ ಸಲಹೆ ಬಂತು. ಮೊದಲಿಗೆ '108'ಕ್ಕೆ ಫೋನಾಯಿಸಲಾಯಿತು. ಕೆಲಕಾಲ ತೆಗೆದುಕೊಳ್ಳಲೇ ಇಲ್ಲ. ಆಮೇಲೆ ಎತ್ತಿಕೊಂಡವರು ನಮ್ಮ ಅಂಬುಲೆನ್ಸ್ 10 ಕಿ.ಮೀ. ದೂರದಲ್ಲಿದೆ ಇನ್ನು ಒಂದು ಘಂಟೆ ನಂತರ ಬರುತ್ತೇವೆ. ನಂತರ ಮಿಶನ್ ಆಸ್ಪತ್ರೆ ಅಂಬುಲೆನ್ಸ್‌ಗೆ ಕರೆಮಾಡಲಾಯಿತು. ಅವರ ಅಂಬುಲೆನ್ಸ್ ಕೆಟ್ಟುನಿಂತಿದೆ ಎಂಬ ಮಾಹಿತಿ ಬಂತು. ಅಲ್ಲಿಂದ

ಕಾಮಾಕ್ಷಿ ಆಸ್ಪತ್ರೆಗೆ ಫೋನ್‌ಮಾಡಲಾಯಿತು. ಅವರ ಅಂಬುಲೆನ್ಸ್ ಇನ್ನೆಲ್ಲಿಗೋ ಹೋಗಿದೆ ಎಂದು ತಿಳಿದುಬಂತು. 'ಬಿಎಂ ಆಸ್ಪತ್ರೆಯವರ ಡ್ರೈವರ್ ರಜೆಯಲ್ಲಿದ್ದಾನೆ' ಅಂದರು. 'ಸಂಜೀವಿನಿ' ಗೆ ಕರೆಮಾಡಿ ಅನ್ನುವ ಸಲಹೆ ಬಂತು. ಅಲ್ಲಿಗೆ ಕರೆಮಾಡುವ ವೇಳೆಗೆ '108'ರಿಂದಲೇ ಕರೆಬಂದಿತು. "ಇನ್ನೊಂದು ಅಂಬುಲೆನ್ಸ್ ರೆಡಿಯಿದೆ. ಇನ್ನು ಹತ್ತುನಿಮಿಷಗಳಲ್ಲಿ ಮನೆಬಳಿಬರುತ್ತೇವೆ". ಅಂತೂ ಇಂತೂ ಮನೆಮುಂದೆ ಅಂಬುಲೆನ್ಸ್ ಬರುವವೇಳೆಗೆ ಒಂದು ಘಂಟೆ ಕಳೆದುಹೋಗಿತ್ತು. ಅದು ಅಮೂಲ್ಯ ಸಮಯವೇ ಆಗಿದ್ದಿರಬಹುದೋ ಏನೋ ಗೊತ್ತಿಲ್ಲ.

ಇನ್ನು ಅವರನ್ನು ಕೆಳಕ್ಕಿಳಿಸಲು ಸ್ಟ್ರೆಚರ್ ತರಲು ಮಹಡಿಮೆಟ್ಟಲು ತೀರಕಿರಿದಾಗಿತ್ತು. ಆದುದರಿಂದ ಅವರನ್ನು ಒಂದು ಬೆಡ್‌ಶೀಟ್ ಹಾಸಿಕೊಂಡು, ಅದರಮೇಲೆ ಮಲಗಿಸಿಕೊಂಡು ಇಬ್ಬರು ಒಬ್ಬೊಬ್ಬರು ಒಂದೊಂದು ತುದಿಹಿಡಿದುಕೊಂಡು ಕೆಳಕ್ಕೆತ್ತಿಕೊಂಡು ತಂದು ಅಂಬುಲೆನ್ಸ್‌ನಲ್ಲಿ ಮಲಗಿಸಲಾಯಿತು. ಆ ಡ್ರೈವರ್ ನೋಡುತ್ತಲೇ 'ಸಾರ್, ಇವರು ಹೋಗಿ ಬಿಟ್ಟಿದ್ದಾರೆ' ಅಂದು ತನ್ನ ವರದಿ ನೀಡಿಯೇಬಿಟ್ಟ. ಆದರೆ 'ಆ ಮಾತನ್ನು ಹೇಳಬೇಕಾದವರು ಡಾಕ್ಟರ್. ಆದುದರಿಂದ 'ಮೊದಲು ಆಸ್ಪತ್ರೆಗೆ ಸಾಗಿಸಪ್ಪ' ಅಂದು ವಿನಂತಿಸಲಾಯಿತು. ಸರಿ ಯಾವ ಆಸ್ಪತ್ರೆಗೆ? ಅನ್ನುವ ಪ್ರಶ್ನೆ ಎದುರಾಯಿತು. 'ಕೆ.ಆರ್.ಆಸ್ಪತ್ರೆಗೆ' ಅಂದ ಅಂಬುಲೆನ್ಸ್ ಡ್ರೈವರ್. 'ಅಷ್ಟು ದೂರ ಬೇಡಪ್ಪ, ಈಗಾಗಲೇ ಲೇಟ್ ಆಗಿದೆ' ಅಂದರು ಮನೆಯವರು. ಕೊನೆಗೆ ಹತ್ತಿರವಿದ್ದ ಖಾಸಗೀ ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗಲಾಯಿತು. ಮತ್ತೆ ಅಲ್ಲಿ ಓಡಿಬಂದ ಆಸ್ಪತ್ರೆ ಅಟೆಂಡರ್‌ದೂ, ಅದೇರಾಗ, 'ಇದು ಬಾಡಿ ಸಾರ್' ಅನ್ನೋದೇ! 'ಏನಾದರೂ ಆಗಲಿ, ಅದನ್ನು ಡಾಕ್ಟರ್ ನೋಡಿದಮೇಲೇ ನಿರ್ಧರಿಸಲಿ' ಅಂದು 'ಮೊದಲು ಒಳಗೆಕರೆದುಕೊಂಡು ಹೋಗಪ್ಪ' ಅಂತ ಗೋಗರೆದರು. ಮೊದಲು ಬಂದ ಲೇಡಿ ಜ್ಯೂನಿಯರ್ ಡಾಕ್ಟರ್ ಸಹಾ 'ಇವರು ಬದುಕಿಲ್ಲ' ಅನ್ನುವ ತೀರ್ಮಾನಕೊಟ್ಟಳು. 'ಹಾಗಾದರೆ "ಬ್ರಾಟ್ ಡೆಡ್" ಅನ್ನುವ ಸರ್ಟಿಫಿಕೇಟ್ ಕೊಟ್ಟುಬಿಡಿ' ಅಂದರು ಮನೆಯವರು. ಅದು ಹೇಗೆ ಸಾಧ್ಯ? ನಮ್ಮ ಆಸ್ಪತ್ರೆಯಲ್ಲಿ ಯಾವುದೇ ಟ್ರೀಟ್‌ಮೆಂಟ್ ತೆಗೆದುಕೊಂಡಿಲ್ಲ, ಮೊದಲಿಗೆ ಇಲ್ಲಿಗೆ ಅಡ್ಮಿಟ್ಟೇ ಆಗಿಲ್ಲ' ಅಂತೆಲ್ಲ ಗೊಣಗಿಕೊಂಡು ಅಲ್ಲಿಂದ ಮೆಲ್ಲಗೆ ಕಾಲ್ಕೆಗೆದರು. 'ಆಸ್ಪತ್ರೆಗೀಸ್ಪತ್ರೆ ಯಾವುದೂ ಬೇಡಾ ಸಾರ್. ನೇರ ಸ್ಮಶಾನಕ್ಕೆ ಸಾಗಿಸಿಬಿಡಿ ಸಾರ್. ಮನೆಯಲ್ಲೇ ತೀರಿಹೋದರು ಅಂದರಾಯಿತು' ಅನ್ನುತ್ತಾನೆ ಆ ಅಂಬುಲೆನ್ಸ್ ಡ್ರೈವರ್! ಸರಿ ಹೇಗೋ ಮಾಡಿ ಅಲ್ಲಿನ ಸ್ವಾಗತಕಾರಿಣಿ ಬಳಿಸಾಗಿ 'ಇಲ್ಲಿನ ಮುಖ್ಯಸ್ಥರು

ಎಲ್ಲಿಸಿಗುತ್ತಾರೆ? ಅಂದುದಕ್ಕೆ ಒಂದು ಕಡೆ ಕೈತೋರಿಸಿ, ಮೊಬೈಲ್ ಕಿವಿಗೆ ಸಿಕ್ಕಿಸಿಕೊಂಡು ಮಾತನಾಡತೊಡಗಿದರು. ರೋಗಿಯ ಕಡೆಯವರು ಮುಖ್ಯಸ್ಥರನ್ನು ಕರೆತಂದಾಗ ಅಲ್ಲಿದ್ದ ವ್ಯಕಿಯೊಬ್ಬ, ಆ ಮುಖ್ಯಸ್ಥರಿಗೆ 'ಸಾರ್ 108ರ ಪೇಶೆಂಟ್ ಡೆತ್ ಆಗಿದೆ' ಅಂದುದಕ್ಕೆ ಆ ವೈದ್ಯ ದಢದಢ 108ನೇ ವಾರ್ಡಿನ ಕಡೆಗೇ 'ಅಲ್ಲಿ ನನ್ನ ಪೇಶಂಟ್ ಯಾರೂ ಇರಲಿಲ್ಲ' ಅಂದುಕೊಂಡು 'ಬರುತ್ತೇನೆ ತಡೆಯಿರಿ' ಎನ್ನುತ್ತಾ ಓಡತೊಡಗಿದ. ಆಗ ಪೇಶಂಟ್ ಕಡೆಯವರು 'ಸಾರ್ ಅದು 108ನೇ ವಾರ್ಡಲ್ಲ, 108 ಅಂಬುಲೆನ್ಸ್‌ನಲ್ಲಿ ತಂದ ಪೇಶಂಟ್' ಅಂತ ತಿದ್ದಿಹೇಳಿದರು. ಆಗ ವೈದ್ಯ ಆ 108 ಅಂದಿದ್ದ ಆಸ್ಪತ್ರೆವ್ಯಕ್ತಿಯನ್ನು ತಾರಾಮಾರಾ ಬಯ್ಯುತ್ತಾ ಇವರ ಬಳಿಬಂದು 'ಏನು ಬೇಕು?' ಅಂದು ವಿಚಾರಿಸಿದರು. ಇವರು ಪ್ರಜ್ಞೆತಪ್ಪಿದ್ದಾರೆ, ಇವರನ್ನು ಪರೀಕ್ಷಿಸಿ, ಇವರು ತೀರಿಕೊಂಡಿದ್ದರೆ, 'ಬ್ರಾಟ್ ಡೆಡ್' ಅನ್ನೋ ಸರ್ಟಿಫಿಕೇಟ್ ಕೊಡಿ' ಅಂದು ಯಾಚಿಸಿದರು. ಹೇಗೋ ಆ ರೋಗಿಯಮನೆಯವರಿಗೆ ಆ ವೈದ್ಯ ಪರಿಚಯಸ್ಥನಾದುದರಿಂದ ತಾಪತ್ರಯ ಕಡಿಮೆಯಾಯಿತು. ರೋಗಿಯನ್ನು ಪರೀಕ್ಷಿಸಿದ ಡಾಕ್ಟರ್, ಅವರು ಹೋಗಿ ಆಗಲೇ ಒಂದು ಘಂಟೆ ಮೇಲಾಗಿದೆ. 'ಒಂದು ಸರ್ಟಿಫಿಕೇಟ್ ಕೊಟ್ಟು ಕಳಿಸ್ರೀ' ಅಂತ ಸ್ವಾಗತಕಾರಿಣಿಗೆ ತಿಳಿಸಿ, ಆ ವೈದ್ಯಮಹಾಶಯ ಅಲ್ಲಿಂದ ಮಾಯವಾದ. ಅಂತೂ ಇಂತೂ ಒಂದು 'ಡೆತ್ ಸರ್ಟಿಫಿಕೇಟ್' ಪಡೆದುದಾಯಿತು.

'ಸರಿ, ಮನೆಗೆ ವಾಪಸು ಕರೆದುಕೊಂಡು ನಡಿಯಪ್ಪ' ಅಂದರೆ, 'ಸಾರ್, ನಾವು ಬರೀ ಆಸ್ಪತ್ರೆಗೆ ರೋಗಿಗಳನ್ನು ಮಾತ್ರ ಸಾಗಿಸುತ್ತೇವೆ, ಬಾಡಿಗಳನ್ನು ಸಾಗಿಸುವಂತಿಲ್ಲ' ಅಂತ ತರಲೆಶುರುಮಾಡಿದ. ಅವನನ್ನು ಹೇಗಾದರೂ ಒಪ್ಪಿಸ ಬೇಕಾಗಿತ್ತು. ಕೊನೆಗೆ ತಲೆಕೆರೆದುಕೊಂಡ ಆತ, 'ಸ್ವಲ್ಪ ನಮ್ಮನ್ನು ಗಮನಿಸಿಕೊಳ್ಳಿ ಸಾರ್'. ಕಾಣಿಕೆಸಲ್ಲಿಸಲು ಒಪ್ಪಿಕೊಂಡಮೇಲೆ ಮತ್ತೆ ಮನೆಕಡೆ ನಿಜವಾದ ಅಂತಿಮಯಾತ್ರೆಯ ಮೊದಲ(ಬಾಡಿ)ಪಯಣ ಆರಂಭವಾಯಿತು. ಸತ್ತವರು ಹಾಯಾಗಿ ಸತ್ತಿರುತ್ತಾರೆ, ಆದರೆ ಬದುಕಿರುವವರು ಪಡಬೇಕಾದ ಸಂಕಟ ಅಷ್ಟಿಷ್ಟಲ್ಲ ಅಲ್ಲವಾ?

## 16. ಸಾವು ತಂದ ಪರದಾಟ – ಭಾಗ 2 (ಆದ ಅನುಭವ)

ಅಂತೂ ಇಂತೂ ಸತ್ತವರ ಅಂತಿಮ ಪಯಣ ಆರಂಭವಾಯಿತು ಅಂದೆನಲ್ಲ, ಆಗ ಶುರುವಾಗಿತ್ತು ಮತ್ತೊಂದು ಸುತ್ತಿನ ಪರದಾಟ. ನರ್ಸಿಂಗ್ ಹೋಂನವರು ಕೊಟ್ಟ ಡೆತ್ ಸರ್ಟಿಫಿಕೇಟ್ ಹಿಡಿದು ಅಡ್ವಾನ್ಸಾಗಿ ಒಂದು ಪಾರ್ಟಿ ಹೊರಟಿದ್ದು ಚಿರ ಶಾಂತಿಧಾಮಕ್ಕೆ, ಅರ್ಥಾತ್ ಸ್ಮಶಾನಕ್ಕೆ. ಹೆಣ ಸುಡುವ ಸಂಸ್ಕಾರಕ್ಕೆ ಬುಕಿಂಗ್ ಮಾಡಿಸಲು. ಅದೇನು ಸುಲಭದ ಕೆಲಸ ಅಂದುಕೊಂಡಿರಾ. ಅಲ್ಲೂ ಬೇಕು ಇನ್ಫ್ಲುಯೆನ್ಸ್! ಅದಾಗಲೇ ನಾಲ್ಕಾರು ಹೆಣಗಳು ಕ್ಯೂನಲ್ಲಿದ್ದವು.

ಯಾವ ರೀತಿ ಸುಡಬೇಕು ಎನ್ನುವುದರಿಂದ ಪ್ರಾರಂಭವಾಗುತ್ತದೆ ನಮ್ಮ ಜಿಜ್ಞಾಸೆ, ಸೌದೆಯಲ್ಲಿ ಸುಡುವುದೋ, ಕರೆಂಟಿನಲ್ಲಿ ಸುಡುವುದೋ ಅಥವಾ ಗ್ಯಾಸ್‌ನಲ್ಲಿ ಸುಡುವುದೋ ಇದರ ನಿರ್ಧಾರವಾಗಬೇಕು. ಕೆಲವೊಮ್ಮೆ ಕರೆಂಟ್ ಕೈಕೊಟ್ಟರೆ, ಕೆಲವೊಮ್ಮೆ ಗ್ಯಾಸ್ ಶಾರ್ಟೇಜ್. ಇವೆರಡೂ ನಂಬಲರ್ಹವಾದುದಲ್ಲವೆಂದರೆ ನಮಗಿರುವುದು ಇನ್ನೊಂದೇ ದಾರಿ ಸೌದೆಯಲ್ಲಿ ಸುಡುವುದು. ಕೆಲವೊಮ್ಮೆ ಇಂಟರ್ನಲ್ ಅಗ್ರಿಮೆಂಟ್ ಸಹಾ ಆಗಿರುತ್ತದಂತೆ. ಎಲ್ಲರೂ ಬದುಕಬೇಕಲ್ಲವೇ, ಆದುದರಿಂದ ಸೌದೆಯವರಿಗೆ ಕೆಲವು ಕಾಂಟ್ರಾಕ್ಟ್ ಸಿಗುವಂತೆ ಮಾಡಲು ಗ್ಯಾಸ್ ಶಾರ್ಟೇಜ್ ಸೃಷ್ಟಿಸಲಾಗುತ್ತದೆ. ಮತ್ತೆ ಕೆಲವೊಮ್ಮೆ ಕರೆಂಟೇ ಇರುವುದಿಲ್ಲ. ಆದರೆ ಸಂಸ್ಕಾರ ಮಾಡಲು ಬಂದವರಿಗೆ ಹೊಟ್ಟೆ ಹಸಿದಿರುವುದರಿಂದ, ಹೇಗಾದರೂ ಮಾಡಿ, ಕೇಳಿದಷ್ಟು ಹಣಕೊಟ್ಟು ಆ ಶವವನ್ನು ದಹನಮಾಡಿಸಿದರೆ ಸಾಕು ಎನ್ನುವಂತಾಗಿರುತ್ತದೆ. ಯಾವನು ಎಷ್ಟು ದೊಡ್ಡವನೇ ಆಗಿರಲಿ, ಸತ್ತನಂತರ ಅವನು ಬರೀ

'ಹೆಣ'. ಎಷ್ಟು ಬೇಗ ಅದನ್ನು ಸುಟ್ಟೋ, ಹೂಳಿಯೋ ಕಥೆ ಮುಗಿಸಿದರೆ ಅಷ್ಟೇ ಸಾಕು. ಇಂತಹ ಪರಿಸ್ಥಿತಿಯಲ್ಲಿ ಆದಷ್ಟು ಪೀಕುವಂತೆ ಮಾಡುವುದು ಪುರೋಹಿತರು, ಅಥವಾ ಶವ ಸಂಸ್ಕಾರದ ಏಜಂಟರು. ಅವರು ಶವ ಹೊತ್ತವರು ಅವರಿಗೆ ಕೊಡಿ ಐದುನೂರು; ಇವರು ಶವ ಕಾರಿಗಿಟ್ಟವರು ಅವರಿಗೆ ಕೊಡಿ ಐದುನೂರು; ಇವರು ವ್ಯಾನಿನ ಡ್ರೈವರ್ ಇವರಿಗೆ ಕೊಡಿ ಐದುನೂರು; ಇವರು ಸೌದೆ ಒಟ್ಟಿದವರು ಅಥವಾ ಗ್ಯಾಸ್ ಸಿಲಿಂಡರ್ ಜೋಡಿಸಿದವರು, ಸ್ವಿಚ್ ಹಾಕಿದವರು. ಇವರು ಅಸ್ತಿ ಸಂಚಯ ಮಾಡುವವರು ಹೀಗೇ ನಾನಾ ಹೆಸರುಗಳಿಂದ ವಸೂಲಿ ನಡೆಯುತ್ತದೆ. ಇತ್ತೀಚೆಗೆ ತೀರಿಕೊಂಡವನ ಕಡೆಯವರೊಬ್ಬರು ಹೇಳಿದಂತೆ ಒಂದು ಶವ ಸಂಸ್ಕಾರಕ್ಕೆ ತಗುಲಿದ ಒಟ್ಟು ಖರ್ಚು ಬರೋಬ್ಬರಿ 7,500 ರೂ.ಗಳು. ಇದು ಪೀಸ್ ಕಾಂಟ್ರಾಕ್ಟ್ ಕೇಸ್. ಅದೇ ಹೋಲ್‌ಸೇಲ್ ಕಾಂಟ್ರಾಕ್ಟ್‌ದಾರರೂ ಇದ್ದಾರೆ. ಅವರು ಹೇಳಿದ ಹಣ ಪೀಕಿದರೆ, ಹೆಣವನ್ನು ವ್ಯಾನಿನಲ್ಲಿ ಸಾಗಿಸಿ, ಅದರ ದಹನಕಾರ್ಯಮಾಡಿ, ಕ್ರಿಯಾಕರ್ಮಗಳನ್ನು, 13ನೇ ದಿನದವರೆಗೆ ಮುಗಿಸಿಕೊಡುತ್ತಾರೆ. ಅದರ ಬಿಲ್ ಅವರವರ ಅಂತಸ್ತಿಗೆ ತಕ್ಕಂತಿರುತ್ತದೆ. ಅದೇ ಹತ್ತು ವರ್ಷಗಳ ಹಿಂದೆ ಮಾಡಿದ ಅಂತ್ಯ ಸಂಸ್ಕಾರಕ್ಕೆ ತಗುಲಿದ್ದ ಖರ್ಚು ಬರೀ 750 ರೂ.ಗಳು. ಹತ್ತು ವರ್ಷಗಳಲ್ಲಿ ಹತ್ತರಷ್ಟು ಬೆಲೆಯೇರಿಕೆ!

ಇನ್ನು ಶವಸಂಸ್ಕಾರದ ನಂತರ ಅವನು ಕೊಡುವ ಸರ್ಟಿಫಿಕೇಟ್ ಹಿಡಿದು ಓಡಬೇಕು ಮುನಿಸಿಪಾಲಿಟಿಗೆ, ಅಫಿಶಿಯಲ್ ಡೆತ್ ಸರ್ಟಿಫಿಕೇಟ್ ಪಡೆಯಲು. ಅದಕ್ಕಾಗಿ ಕನಿಷ್ಠ ಒಂದು ವಾರಕಾಲ ಅಲೆದಾಡಬೇಕು. ಅದರಲ್ಲೂ ಕ್ಲರ್ಕ್‌ಗೆ, ಕಂಪ್ಯೂಟರ್ ಆಪರೇಟರ್‌ಗೆ ಕೈಬೆಚ್ಚಗೆ ಮಾಡಬೇಕು. ಎಲ್ಲ ಮುಗಿಸಿ ಮುಗಸಟ್ಟೆ ಪ್ರತಿಗಳನ್ನು ಪಡೆಯಬಹುದು. ಎಕ್ಸ್ಟ್ರಾ ಕಾಪಿಗಳು ಬೇಕೆಂದರೆ, ಅದಕ್ಕೆ ಅಫಿಶಿಯಲ್ಲಾಗಿ ಕಟ್ಟಬೇಕು ಸಪರೇಟಾದ ಫೀ.ಈಸರ್ಟಿಫಿಕೇಟುಗಳಲ್ಲಿನ ವಿವರಗಳಿಗೆ ನೀವೇ ಜವಾಬ್ದಾರರು.. ಅದರಲ್ಲೇನಾದರೂ ತಪ್ಪಾದರೆ, ಮತ್ತೆ ದಂಡಯಾತ್ರೆ ನಡೆಸಬೇಕು. ತಪ್ಪೆಲ್ಲಾಗಿದೆ ಎಂದು ತಲಾಶ್ ಮಾಡಿ, ಮೂಲ ದಾಖಲಾತಿಗಳಲ್ಲೆಲ್ಲಾ ಬದಲಾವಣೆಮಾಡಿಸಬೇಕು. ಆ ತಪ್ಪು ನಿಮ್ಮ ಪ್ರಥಮ ಡೆತ್ ಸರ್ಟಿಫಿಕೇಟ್ ಕೊಟ್ಟ ನರ್ಸಿಂಗ್ ಹೋಂದಾಗಿರಬಹುದು; ಸ್ಮಶಾನದ ರಿಜಿಸ್ಟರಿನಲ್ಲಿ ಬರೆದವನದೋ, ಬರೆಸಿದವನದೋ ಆಗಿರಬಹುದು ಅಥವಾ ಮುನಿಸಿಪಾಲಿಟಿ ಕಛೇರಿಯ ಕಂಪ್ಯೂಟರ್ ಆಪರೇಟರ್‌ದಾಗಿರಬಹುದು. ಎಲ್ಲರೂ ತಪ್ಪು ಹೊರಿಸುವುದು ನಮ್ಮ ಮೇಲೇ.

ಆಯಿತು ಶವಸಂಸ್ಕಾರ, ಹಸಿವಿನಿಂದ ಮನೆಗೆ ಬಂದು, ಯಾರೋ ಸ್ನೇಹಿತರೋ, ದೂರದ ನೆಂಟರೋ ಕಳುಹಿಸಿದ ಅನ್ನ, ಸಾರು, ಮನಸ್ಸಿಲ್ಲದ ಮನಸ್ಸಿನಿಂದ ಹೊಟ್ಟೆಗಿಳಿಸುತ್ತಿರುವಾಗ ಬಡಿಸುವವರು ಇನ್ನೂ ಸ್ವಲ್ಪ ಚಟ್ನಿ ಬೇಕಾ, ಇನ್ನೊಂದು ಚಮಚ ತುಪ್ಪ ಹಾಕಲಾ ಅಂದಾಗ ಏನ್ನನ್ನಿಸಬೇಡ. ನಮಗೆ ದುಃಖವಾದರೂ, ಆ ಬಡಿಸುವ ಕೇಟರರ್‌ಗೆ ಹೊಟ್ಟೆತುಂಬ ಬಡಿಸುವ ಇಚ್ಛೆ. ಬರುವ ಕೋಪ, ದುಃಖ ಎಲ್ಲವನ್ನೂ ನುಂಗಿಕೊಂಡು ಕೈತೊಳೆದುಬರಲು ಹೊರಹೊರಟೆ.

ಇಷ್ಟಕ್ಕೇ ಮುಗಿಯಿತೇ, ಊಹೂಂ, ಅಗೋ ಬಂದರು ಪುರೋಹಿತರು. ನೋಡಪ್ಪಾ ಸತ್ತವರಿಗೆ ಸ್ವರ್ಗಕಾಣಿಸಬೇಕಾದುದು ನಿನ್ನ ಕರ್ತವ್ಯ. ನಾಳೆಬೆಳಿಗ್ಗೆ ಒದ್ದೆಬಟ್ಟೆಯಲ್ಲಿಯೇ ಹೋಗಿ ಅಸ್ಥಿಸಂಚಯ ಮಾಡಿಬರಬೇಕು. ಅಲ್ಲಿಂದಾಚೆಗೆ ಮೂರನೇ ದಿನದಿಂದ ಅಸ್ಥಿವಿಸರ್ಜನೆ, ಶಿಲಾದರ್ಶನ, ಪಿಂಡಪ್ರಧಾನ ಹೀಗೇ ಮುಂದುವರೆಸಿ, ಹತ್ತನೇ, ಹನ್ನೊಂದನೇ, ಹನ್ನೆರಡನೇ & ಹದಿಮೂರನೇ ದಿನದ ವೈಕುಂಠ ಸಮಾರಾಧನೆ ಕೆಲಸ ಮಾಡಿಮುಗಿಸಿದರೆ ಮೊದಲ ಹಂತದ ವೈಕುಂಠ ಪ್ರವೇಶ. ಪ್ರತಿದಿನ ಬಗೆಬಗೆಯ ಭಕ್ಷ್ಯ, ಸತ್ತವನಿಗೆ ಸಂತಾಪವೋ, ಬದುಕಿದವರಿಗೆ ಸಂತರ್ಪಣೆಯೋ ಗೊತ್ತಾಗುವುದಿಲ್ಲ. ಹದಿಮೂರನೇ ದಿನವಂತೂ ಅದು ಒಂದು ರೀತಿಯ ಮದುವೆಮನೆ ಊಟವೋ ಹಬ್ಬದೂಟವೋ! ಒಟ್ಟಿನಲ್ಲಿ ಭರ್ಜರಿ ಭೂರಿ ಭೋಜನ. ಒಬ್ಬರ ಮುಖದಲ್ಲಿಯೂ ದುಃಖದ ಲವಲೇಶ ಕಳೆಯೂ ಗೋಚರಿಸುವುದಿಲ್ಲ. ಕೇಕೆಹಾಕುತ್ತಾ, ಭರ್ಜರಿ ದಿರಿಸುಗಳನ್ನು ತೊಟ್ಟು ಸಂಭ್ರಮಿಸುವವರೇ ಎಲ್ಲರೂ, ತನ್ನ ಪತಿಯನ್ನು ಕಳೆದುಕೊಂಡ ಪತ್ನಿ ಅಥವಾ ಪತ್ನಿಯನ್ನು ಕಳೆದುಕೊಂಡ ಪತಿಯನ್ನು ಹೊರತುಪಡಿಸಿ! ತಿನ್ನುವವರಂತೂ ಇನ್ನೆರಡು ವಡೆಹಾಕಿ, ಕಜ್ಜಾಯ, ರವೆ ಉಂಡೆ, ಲಾಡು ಕೈಗೂ ಕೊಡಿ ಅಂತ ಬಾರಿಸಿದ್ದೂ ಬಾರಿಸಿದ್ದೇ. ನನ್ನೆದುರಿಗೆ ಕುಳಿತಿದ್ದೊಬ್ಬರು 6 ವಡೆ ಹಾಕಿಸಿಕೊಂಡು ತಿಂದರು. ಹೊಟ್ಟೆಭರ್ತಿ ಉಂಡನಂತರ ಕೆಲವರಿಗಂತೂ ಮೇಲಕ್ಕೇಳಲಿಕ್ಕೂ ಆಗದೇ ಮತ್ತೊಬ್ಬರು ಕೈಹಿಡಿದು ಎಬ್ಬಿಸಬೇಕಾಗಿತ್ತು.

ನನಗನ್ನಿಸಿದ್ದು ಇವರೇನು ಬ್ರಾಮ್ಹಣಾರ್ತಕ್ಕೆ ಬಂದವರಾ ಅಥವಾ ಇವರಿಗೆ ಮೊದಲು ತಿಂದವರದು ಬ್ರಾಮ್ಹಣಾರ್ತವಾ ಅನ್ನುವ ಸಂಶಯ ಬರತೊಡಗಿತು. ನಂತರ ಪ್ರತಿ ತಿಂಗಳು ಮಾಸಿಕದ ಹೆಸರಿನಲ್ಲಿ ಅದೇ ವಡೆ, ಪಾಯಸ, ಕಜ್ಜಾಯ ವಗ್ಯೆರೆ ಸಮಾರಾಧನೆ. ಸತ್ತ ವರ್ಷದವರೆವಿಗೂ ಯಾವುದೇ ಹಬ್ಬಾಚರಣೆ

ಇಲ್ಲವೆಂದು ಹೇಳಿದ್ದರೂ, ಈ ಮಾಸಿಕ 'ತಿಥಿ' ಯಾವ ಹಬ್ಬದಾಚರಣೆಗೆ ಕಡಿಮೆಯಾಗಿರುತ್ತದೆ? ವರ್ಷಾಂತ್ಯದ ವರ್ಷಾಬ್ಧಿಕ ಆಗುವವರೆಗೆ ಒಂಚೂರು ಲೋಪವಾಗದಂತೆ ದಾನ ಧರ್ಮ ಮಾಡಿದರೆ ಮಾತ್ರ ಪ್ರೇತಕ್ಕೆ ಮುಕ್ತಿ ಎಂಬ ಪುರೋಹಿತರ ಎಚ್ಚರಿಕೆಹಿತನುಡಿ. ಹೀಗೆ ದೊಡ್ಡ ಪಟ್ಟಿಯೇ ಕೈಸೇರುತ್ತದೆ. ಅಲ್ಲಿಗೆ ಕಳೆದುಕೊಂಡವರಪರದಾಟ ಒಂದು ವರ್ಷವಾಗುವವರೆಗೂ ಮುಂದುವರೆಯುತ್ತದೆ.

# 17. ನಿವೃತ್ತಿ

ಮನೆಗೆ ಬಂದ ಅಪ್ಪನ ಕೈಯಲ್ಲಿ ಒಂದು ಶಾಲು, ಕತ್ತಿನಲ್ಲಿ ಹಾರ, ಜೊತೆಗೆ ಒಂದು ಸ್ವೀಟ್ ಬಾಕ್ಸ್. ಬಂದವನೇ ಸುಸ್ತಾಗಿ ಸೋಫಾಮೇಲೆ ಕೂತು, 'ಒಂದು ಗ್ಲಾಸ್ ನೀರು ಕೊಡ್ತೀಯಾ ಕುಡಿಯಲಿಕ್ಕೆ' ಅಂತ ಹೆಂಡತಿಯನ್ನು ಕೇಳಿದ. ಮಗಳ ದೃಷ್ಟಿ ಅಪ್ಪನ ಕೈನಲ್ಲಿದ್ದ ಸ್ವೀಟ್ ಬಾಕ್ಸ್, ಅಪ್ಪನ ಕತ್ತಿನಲ್ಲಿದ್ದ ಹಾರ, ಹೊದ್ದುಕೊಂಡಿದ್ದ ಶಾಲು ಮೇಲೇ ನೆಟ್ಟಿತ್ತು 'ಆಯ್ತು ಕಣೇ ನನ್ನ ಸರ್ವೀಸು ಇಂದಿಗೆ ಕೊನೆ. ನಾಳೆಯಿಂದ ನಾನು ನಿವೃತ್ತ' ಅನ್ನುತ್ತಾ ನೀರುಕುಡಿದ. ಮಗಳಿಗೆ ತಿನ್ನಲು ಸ್ವೀಟ್ ಬಾಕ್ಸ್ ಕೈಗೆ ಸಿಕ್ಕಿದ್ದೇ ತಡಾ, ಗಬಗಬ ಪ್ಯಾಕೇಟ್ ಹರಿದು, ಒಳಗಿದ್ದ ಸ್ವೀಟ್ ತಿನ್ನತೊಡಗಿದಳು. ಸಾಕಷ್ಟು ತಿಂದಮೇಲೆ, ಅಮ್ಮನ ಕಡೆ ತಿರುಗಿ, 'ಅಮ್ಮಾ ನಿವೃತ್ತಿ ಅಂದರೇನಮ್ಮ?' ಅಂದಳು. ಅದಕ್ಕೆ ಅಮ್ಮ "ಅದು ಸರ್ಕಾರಿ ಕೆಲಸದಲ್ಲಿರುವವರಿಗೆ 60 ವರ್ಷ ಆದಮೇಲೆ, ನೀವು ಇನ್ನುಮೇಲೆ ಕೆಲಸಮಾಡಲಿಕ್ಕೆ ನಾಲಾಯಕ್ಕು, ಮನೇಲಿ ಕುಳಿತು, ಬೇರೆಯವರು ತಂದುಹಾಕಿದ್ದನ್ನು ತಿಂದುಕೊಂಡು, ಆರಾಮವಾಗಿರಿ'ಎಂದು ಕಳಿಸಿದ್ದು ಎಂದು ವಿವರಣೆ ನೀಡಿದಳು.ಆದರೆ ಖಾಸಗಿ ಕ್ಷೇತ್ರದಲ್ಲಿರುವವರಿಗೆ ಇನ್ನೊಂದು ಐದು–ಹತ್ತು ವರ್ಷ ಅವಕಾಶ ಅದೂ ಅವರು ದೈಹಿಕವಾಗಿ, ಮಾನಸಿಕವಾಗಿ ಸರಿಯಾಗಿದ್ದರೆ ಇರುತ್ತೆ" ಅಂದಳು. ಅದಕ್ಕೆ ಮಗಳು 'ಅಮ್ಮಾ ನಿನಗೆ ನಿವೃತ್ತಿ ಇಲ್ಲವಾ?' ಅಂದು ಮತ್ತೆ ಕೇಳಿದಳು. ಆಗ ಅಮ್ಮ 'ನಮಗೆಲ್ಲಮ್ಮ ನಿವೃತ್ತಿ? ಅದು ನಮಗಿಲ್ಲಮ್ಮ' ಅಂದಳು.

ಅರ್ಥವಾಗಲಿಲ್ಲವೆಂದು ತಲೆ ಅಲ್ಲಾಡಿಸಿದಳು ಮಗಳು. ನೋಡು ಮಗಳೇ. ಈ ನಿವೃತ್ತಿ ಆದನಂತರ ಗಂಡಸರು. ಬರೀ ನಿದ್ದೆಮಾಡುವುದು.

ಊಟ,ತಿಂಡಿ ತಿನ್ನುವುದು, ಹೆಂಡಂದಿರಿಗೆ ಆರ್ಡರ್ ಮಾಡಿ ತರಿಸಿ ತಿನ್ನುವುದು, ಟೀವಿನೋಡುವುದು, ಪೇಪರ್ ಮೊದಲ ಪುಟದ ಮೊದಲ ಅಕ್ಷರದಿಂದ ಕೊನೆಪುಟದ ಕೊನೆ ಅಕ್ಷರದವರೆಗೆ ಓದುವುದು, ಇನ್ನು ಸಂಜೆ ಆಯಿತೆಂದರೆ ತಮ್ಮ ಹಳೆಯ ಗೆಳೆಯರನ್ನು ಹುಡುಕಿಕೊಂಡು ಬಾರಿಗೋ, ಪಾರ್ಕಿಗೋ, ಬಸ್‌ಸ್ಟಾಪಿಗೋ ಇಲ್ಲ ಕ್ಲಬ್ಬಿಗೋ ಹೋಗುವುದು ತಮ್ಮ ದೈನಂದಿನ ದಿನಚರಿ ಮಾಡಿಕೊಳ್ಳುತ್ತಾರೆ. ಇನ್ನು ಕೆಲವರು ತಮ್ಮ ತಾಪತ್ರಯ ಇನ್ನೂ ತೀರದಿದ್ದಲ್ಲಿ, ಮತ್ತೆ ಎಲ್ಲಾದರೂ ಪಾರ್ಟ್ ಟೈಂ ಕೆಲಸ ಹುಡುಕಿಕೊಳ್ಳುತ್ತಾರೆ. ಕೆಲವರಿಗೆ ಕೆಲಸಮಾಡುವ ತೆವಲು, ಕೈ ತುಂಬ ಪೆನ್ಷನ್ ಬರುತ್ತಿದ್ದರೂ, ಇನ್ನೂ ಸಂಪಾದನೆ ಮಾಡುವ ಬಗೆಗೆ ಯೋಚಿಸುತ್ತಿರುತ್ತಾರೆ. ಕೆಲವರು ಇದಕ್ಕೆ ಅಪವಾದ ಅನ್ನುವಂತೆ, ಏನೂ ಮಾಡದೇ ಇದ್ದುದರಲ್ಲಿ ತೃಪ್ತಿಪಟ್ಟುಕೊಂಡು, ತೆಪ್ಪಗೆ ತಮ್ಮ ಜೀವ ಸವೆಸಲು ತೊಡಗುತ್ತಾರೆ.' ಅಂದಳು.

ಆದೇ ಹೆಂಗಸಾದರೆ ಒಳಗೆ ಹಾಗೂ ಹೊರಗೆ ಎರಡೂ ಕಡೆ ದುಡಿಯ-ಬೇಕು. ಹೊರಗಿನ ಕೆಲಸದಿಂದ ನಿವೃತ್ತಿ ದೊರೆಯಬಹುದೇ ವಿನಹ, ಒಳಗಿನ ದುಡಿಮೆ ಸಾಯುವವರೆಗೆ ನಿಲ್ಲುವುದಿಲ್ಲ. ಚಿಕ್ಕವರಾಗಿದ್ದಾಗಿನಿಂದ ಹೆಣ್ಣುಮಕ್ಕಳಿಗೆ ಮನೆಕೆಲಸ ಮಾಡು, ಅಮ್ಮನಿಗೆ ಸಹಾಯಮಾಡು ಅನ್ನುತ್ತಲೇ ಅವರ ಜೀವನಪ್ರಾರಂಭವಾಗುತ್ತದೆ.

ಅವರಿಗೆ ಮನಸ್ಸಿಲ್ಲದಿದ್ದರೂ, ಮುಂದೆ ನೀನು ಮದುವೆಯಾಗಿ ಹೋದಾಗ ಅನುಕೂಲವಾಗುತ್ತದೆ ಎಂದು ಹೇಳಿ ಒಪ್ಪಿಸುತ್ತಾರೆ. ಶಾಲೆಗೆ ಹೋಗುವ ಮುನ್ನ, ಶಾಲೆಯಿಂದ ಮನೆಗೆ ವಾಪಸಾದ ಕೂಡಲೇ, ಆಟ, ಪಾಠ ಎಲ್ಲಕ್ಕಿಂತಮುಂಚೆ, ಮನೆ ಕೆಲಸ ಮೊದಲು, ನಂತರ ಮಿಕ್ಕೆಲ್ಲ. ಇನ್ನು ಓದುಮುಗಿಸಿ ಒಂದು ಪದವಿ ಪಡೆದರೆ, ಇಂದಿನ ಹೆಣ್ಣುಮಕ್ಕಳಿಗೆ, ತಾವು ಓದಿದ ವಿದ್ಯೆಯನ್ನು ಸದುಪಯೋಗಪಡಿಸಿಕೊಳ್ಳುವ ತವಕ. ಅದಕ್ಕಾಗಿ ಅವರು ಯಾವುದಾದರೂ ಕೆಲಸದ ಹುಡುಕಾಟ ನಡೆಸುತ್ತಾರೆ. ಕೆಲಸ ಸಿಕ್ಕಿತೆಂದರೆ, ತಮ್ಮ ಸ್ವಂತ ದುಡಿಮೆ, ಸಂಪಾದನೆ, ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಹಟ,ಚಟ. ಹಾಗೂ ಹೀಗೂ ಎರಡು ಮೂರು ವರ್ಷಗಳ ಕೆಲಸ ಮಾಡುವವೇಳೆಗೆ ತಂದೆತಾಯಿ ಮಗಳಿಗೆ ಒಂದು ಗಂಡುಹುಡುಕಿ ಮದುವೆ ಮಾಡುವ ತವಕದಲ್ಲಿರುತ್ತಾರೆ. ಕೊನೆಗೆ ಒಂದು ಮದುವೆಮಾಡಿಮುಗಿಸಿಬಿಟ್ಟರೆ ತಮ್ಮ ತಲೆಮೇಲಿನ ಹೊರೆ ಇಳಿಸಿಕೊಂಡಂತಾಗುತ್ತದೆ, ತಮಗೇನಾದರೂ ಆದರೆ ಮಗಳಿಗೂ ಒಂದು ಆಸರೆ ದೊರಕಿಸಿಕೊಡುವ ಆಸೆ. ಮೊದಮೊದಲಿಗೆ ಹೊಸದಾಗಿ ಮದುವೆ ಆದ ಜೋಡಿಗೆ

ಸ್ವರ್ಗಕ್ಕೆ ಎರಡೇ ಗೇಣು ಎನ್ನುವಂತಿರುತ್ತದೆ ಜೀವನ. ಮೋಜು, ಮಸ್ತಿ, ಊಟ ಎಲ್ಲ ಹೊರಗೇ ಆಗುತ್ತಿರುತ್ತದೆ. ಆದರೆ ಎಷ್ಟು ದಿವಸ? ಒಂದಲ್ಲ ಒಂದು ದಿನ ಶುರುವಾಗುತ್ತದೆ, ಮನೆಯಲ್ಲೇ ಅಡುಗೆ ಬೇಯಿಸುವ ಕಾಯಕ. ಆಗ ಹೊರಗಿನ ದುಡಿಮೆ ಬಿಡಬೇಕು, ಅಥವಾ ಒಳಗಿನ ಕೆಲಸದೊಂದಿಗೆ ಹೊರಗಿನ ಕೆಲಸವನ್ನೂ ನಿಭಾಯಿಸಬೇಕು. ಮಕ್ಕಳಾದರೆ ಅವರನ್ನು ನೋಡಿಕೊಳ್ಳಲು 'ಡೇ ಕೇರ್' ಬೇಬಿಸಿಟ್ಟಿಂಗ್‌ಗೆ ಸಾವಿರಾರು ರೂಪಾಯಿ ಸುರಿಯಬೇಕು. ಕೆಲವು ಕಡೆ ಮಕ್ಕಳಿಗೆ ಅವರು ನಿದ್ದೆ/ಮತ್ತು ಬರುವ ಔಷಧಿ/ಮಾತ್ರೆ ನುಂಗಿಸಿ ಮಲಗಿಸಿಬಿಡುತ್ತಾರೆ ಎಂಬ ದೂರೂ ಇದೆ. ವಿಧಿಯಿಲ್ಲದವರು ಈ ಸೋರ್ಸಿನ ಮೊರೆ ಹೋಗುತ್ತಾರೆ. ಇನ್ನು, ಮನೆಯಲ್ಲಿ ಮುದಿತಂದೆತಾಯಿ ಇದ್ದರೆ, ಮಗುವನ್ನು ನೋಡಿಕೊಳ್ಳುವ ಹೊಣೆಯನ್ನು ಅವರ ಹೆಗಲಿಗೆ ವರ್ಗಾಯಿಸಿ ದಂಪತಿಗಳಿಬ್ಬರೂ ದುಡಿಯಲು ಹೋಗುವ ಸಾಧ್ಯತೆಯಿರುತ್ತದೆ.

ಒಟ್ಟಿನಲ್ಲಿ ಹೆಚ್ಚು ಮಂದಿ ಹೆಂಗಸರಿಗೆ ಅಡುಗೆಯೆಂಬ ದೈನಂದಿನ ಕಾಯಕದಿಂದ ಸಾಯುವವರೆಗೆ ಮುಕ್ತಿಯಿಲ್ಲ. ಬೆಳಗಾದರೆ ನಾಳೆ ಏನು ತಿಂಡಿ, ಊಟ ತಯಾರಿಸಿ ಹೊಂದಿಸುವುದು, ಇದು ಬಹುಪಾಲು ಮಡದಿಯರ, ತಾಯಂದಿರ ತಲೆನೋವು. ಮನೆಮಂದಿಗೆ ಮಾತ್ರ ತಮ್ಮ ಮಡದಿ, ತಮಗೆ ದಿನನಿತ್ಯ ಹೊಸಹೊಸ ಅಡುಗೆ ಮಾಡಿಬಡಿಸಬೇಕೆಂಬ ಬಯಕೆ. ಆದರೆ ಹೆಂಗಸರಿಗೆ, ಏನೋ ಒಂದು ಹೊತ್ತುಹೊತ್ತಿಗೆ ಮಾಡಿಮುಗಿಸಿದರೆ ಸಾಕು ಅನ್ನಿಸುತ್ತಿರುತ್ತದೆ. ಯಾವಾಗಪ್ಪಾ, ನಮ್ಮ ಈ ದುಡಿಮೆಗೆ ಮುಕ್ತಿ? ಯಾವಾಗ ನಮಗೆ ನಿವೃತ್ತಿ? ಇದು ಎಲ್ಲ ಹೆಂಗಳೆಯರ ಪ್ರಾರ್ಥನೆ, ಆ ಭಗವಂತನಿಗೆ. ಆದರೆ ಅದು ಸಾಧ್ಯವಾಗುವುದು, ಅವರಿಗೆ ನಿಜವಾಗಲೂ 'ನಿವೃತ್ತಿ' ಸಿಗುವುದು ಅವರು ತೀರಿಕೊಂಡ ದಿನದಂದೇ.

ಈ ಸಂದರ್ಭದಲ್ಲಿ ನಾನು ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ಓದಿದ ಒಂದು ನಗೆಹನಿ ನೆನಪಿಗೆ ಬರುತ್ತಿದೆ. ಮನೆಯವರು ಮಾಡಿಕಳುಹಿಸುತ್ತಿದ್ದ ಒಂದೇ ರೀತಿಯ ಅಡುಗೆ ತಿನ್ನುತ್ತಿದ್ದ ಮೂವರು ತಮ್ಮತಮ್ಮಲ್ಲೇ ಮಾತಾಡಿಕೊಂಡಿದ್ದು "ನಾಳೆಯೂ ಇದೇ ಅಡುಗೆ ಮಾಡಿಕಳುಹಿಸಿದರೆ, ನಾವು ಆತ್ಮಹತ್ಯೆ ಮಾಡಿಕೊಳ್ಳೋಣ" ಮಾರನೇ ದಿನ ಮೂವರೂ ಮಹಡಿಯಿಂದ ಹಾರಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರ ಹೆಂಡಂದಿರು ಕಛೇರಿಗೆ ಬಂದು ವಿಚಾರಿಸಿದಾಗ, ಸಹೋದ್ಯೋಗಿಗಳು ಹೇಳಿದ್ದು: 'ನೀವು ಒಂದೇ ರೀತಿಯ ಅಡುಗೆ ಮಾಡಿಕೊಟ್ಟಿದ್ದೇ ಅವರ ಆತ್ಮಹತ್ಯೆಗೆ ಕಾರಣವಾಯಿತು' ಎಂದರು.

ಅದಕ್ಕೆ ಮೊದಲನೆಯವನ ಹೆಂಡತಿ 'ಅವರು ನನಗೆ ಆ ವಿಷಯವನ್ನು ಎಂದೂ ಹೇಳಿರಲಿಲ್ಲ; ಹೇಳಿದ್ದರೆ ಬೇರೆ ಮಾಡಿಕೊಡುತ್ತಿದ್ದೆ' ಎಂದಳು. ಎರಡನೆಯವನ ಹೆಂಡತಿ: ಛೇ, ಇಷ್ಟಕ್ಕೆಲ್ಲಾ, ಆತ್ಮಹತ್ಯೆ ಮಾಡಿಕೊಳ್ಳುವುದೇ, ಅದು ಅವರ ಮುಠ್ಠಾಳತನ' ಎನ್ನೋದೇ! ಮೂರನೆಯವಳ ಉತ್ತರ ಇನ್ನೂ ವಿಚಿತ್ರ, ವಿಶಿಷ್ಟವಾಗಿತ್ತು: 'ಅವರು ಅವರ ಬುತ್ತಿಯನ್ನು, ತಾವೇ ಸಿದ್ಧಪಡಿಸಿಕೊಂಡು ಹೋಗುತ್ತಿದ್ದರು; ಬೇಜಾರಾಗಿದ್ದರೆ, ಅದು ನನಗೆ ಮಾತ್ರ' ಅನ್ನೋದೇ!

## 18. ದಸರಾ ಬೇಕಾಗಿರೋದು ಯಾರಿಗೆ ಅಂದ್ಕೊಂಡಿದೀಯಾ?

ಇಸ್ಕೋಲ್ಗೆ ರಜಾ ಬಂತೂಂತ ಮಕ್ಕಳನ್ನ ಕರಕೊಂಡು ಅಳ್ಳೀಗ್ಬಂದವ್ನೆ ನಂಉಡ್ಗಾ! ಇದ್ಯಾಕ್ಲಾ ಈ ಪೇಟೇಲಿ ಉಟ್ಟಿದ್ದಕ್ಕಿಗೆ ದಸ್ರಾ ಎಜಿಮಿಸನ್. ಕಾಸ್ಬಂಗ್ಲೆ ತೋರ್ಸೋದ್ಬುಟ್ಬುಟ್ಟು ಇಲ್ಲಿಗೆ ಕರ್ಕಂಡ್ಬಂದಿದೀ ಅಂದಿದ್ಕೆ, ಅಪ್ಪೋ ಅಲ್ಲೇನಿದ್ದಾದು ನೋಡೋಕೆ, ಸುಮ್ಮುಂಕೆ ಕಾಸ್ಕೋಳುಸ್ಕೋಳೋದಷ್ಟೇಯಾ. ಎಜಿಮಿಸನ್‌ನಲ್ಲಿ ಇನ್ನೂ, ಸರ್ಕಾರಿ ಮಳಿಗೆಗಳೇ ಎದ್ದಿಲ್ದೇ ಇರೋವಾಗ ಖಾಸ್ಗೀವ್ರುದು ಏಳ್ತಾವಾ? ಎಲ್ನೋಡ್ದ್ರೂ ಜನ್ಗಳಿಗಿಂತಾ ಪೋಲೀಸ್ನೋರೇ ಎಚ್ಚಾಗಿ ಕಾಣ್ತಾರೆ. ದಸ್ರಾ ಬೇಕಾಗಿರೋದು ಯಾರ್ಗೆ ಅಂದ್ಕೊಂಡಿದೀಯಾ. ಜನಗಳ್ಗಾ? ಖಂಡಿತಾ ಅಲ್ಲ.. ಅದು ಬೇಕಾಗಿರೋದು ಸಮ್ತಿ ಅಧ್ಯಕ್ಷರಿಗೆ. ಸದಸ್ಯರಿಗೆ ಮತ್ತು ಕಂಟ್ರಾಕ್ಟರುಗಳಿಗೆ. "ಎಲ್ಲೋ ಯಾರೋ ಸಾವ್ರಾರು ಸಂಖೇಲಿ ಸತ್ರೆ ದಸ್ರಾ ನಿಲ್ಸೋಕಾಯ್ತದಾ?" ಅಂತ ಅರಸ್ರು ಏಳಿರೋದು ನೀ ಓದ್ಲಿಲ್ವಾ? ನಮ್ಮ ಮೊಯ್ಲಿವ್ರು ಸ್ಟಾಲ್ ಬೇಗ ಆಕಿ ಅಂದ್ರೆ ಸ್ಟಾಲ್ ಆಕೋವ್ರಿಗೇ ಆಸಕ್ತಿ ಕಮ್ಮಿ ಅನಿಸೊಲ್ವಾ? ಈ ಏಳ್ಕೆಗ್ಳಲ್ಲಿರೋ ಆಸಕ್ತಿ ಕೆಲ್ಸದ್ಮೂಪಕ್ಕೆ ಇಳ್ಸೋದ್ಯಾವ್ಕಾಲಕ್ಕೋ ಕಾದ್ನೋಡ್ಬೇಕು. ದಸ್ರಾ ಮಾಡ್ಲೇಬೇಡಿ ಅಂತಾ ಜನ ಬೊಬ್ಬೆ ಆಕಿದ್ದಕ್ಕೆ ಸರ್ಕಾರ ಸರಳ್ವಾಗಿ ದಸ್ರಾ ಮಾಡ್ತೀವಿ ಅಂತೇಳ್ತು. ಅಂದ್ರೆ ಮೂವತ್ತೈದೇ ಲಕ್ಷದಲ್ಲಿ ಸರಳ್ವಾಗಿ ಊರ್ಗೆಲ್ಲಾ ದೀಪಾಲಂಕಾರ ಮಾಡಿ, ಸರಳ್ವಾಗಿ ಜಂಬೂ ಸವಾರಿ ಮುಗಿಸಿ, ಬನ್ನಿಮಂಟಪದಲ್ಲಿ ಸರಳ್ವಾಗೇ ಟಾರ್ಚ್‌ಲೈಟ್ ಪೆರೇಡು, ಸರಳ್ವಾಗಿ ಎಲ್ಲಾ ಸರ್ಕಾರಿ ಕಟ್ಟಡಗಳಿಗೆ ಸುಣ್ಣಬಣ್ಣ. 25 ರಿಂದ 30 ಟ್ಯಾಬ್ಲೋಗಳು, ಸರಳವಾಗಿ ಎಜಿಮಿಸನು, ಬೇರೆ ಊರಗಳಿಂದ ತಂದ ಊ ಕುಂಡಗಳ ಊತೋಟ, ಇನ್ನೂ ಏನೇನೋ, ಒಟ್ನಲ್ಲಿ ಸರಳವಾಗಿ ನಡೆಸಿತು.

ಇನ್ನು, ಆ ಕಾಸ್ಪಂಗ್ಲೆ ಅಂದ್ರೆ ಝೂ ಗಾರ್ಡನ ಅದ್ರ ಕತೇನೆ ಬೇರೆತರಾ. ಖಾಲಿ ಬಿದ್ದಿರೋ ಬೋನುಗಳು, ಅರ್ಧ ಒಟ್ಟೆ ತುಂಬಿರೋ ಪ್ರಾಣಿಗಳು. .. ಎಟ್ ಸಿಟೆರಾ! ಅಯ್ಯೋ ಅಯ್ಯೋ ಬಡ್ಡಿ ಹೈದನೇ ಬುಟ್ರೆ ಬಾಯದೇ ಅಂಥ ಒಳ್ಳೇ ಬ್ರೇಕಿಲ್ಲದ ಲಾರಿ ಅಂಗೆ ಸುರು ಅಚ್ಕಂಡ್ತೀಯಾ? ಬೇರೇವ್ರು ಸುಮ್ಕೆ ಬುಟ್ಟಾರೇನ್ಲಾ ನಿನ್ನ? ನಿನ್ನಂಥವ್ರಿಗೆ ನೆಪ್ಪಮಾಡ್ಕಂಡೇ ಇರ್ಬೇಕು ಇಂದ್ರಮ್ಮನವ್ರು ಹಕ್ಕಿನ ಜೊತೆಗೆ ಕರ್ತವ್ಯಗಳ್ನೂ ಸೇರ್ಸಿರೋದು ಸಂವಿಧಾನದೊಳ್ಗೆ. ಅಲ್ಕಣೋ ಏನೇ ಏಳಿದ್ರೂ ಪಾಲೀಸ್ಮಾಡಿರೋ ಅಂಗೆ ಏಳ್ಬೇಕು. ಜನಾ ತೆಪ್ಪರ್ಥ ಮಾಡ್ಕೋಳೋದೇ ಜಾಸ್ತಿ ಈ ಕಾಲ್ದಾಗೆ. ಈಗ ನಿನ್ನು ಬಿಸಿರಕ್ತಾ ಎಗ್ರಾಡ್ತೀಯಾ. ಒಸಿ ಕಾಲ ಆದ್ರೆ ನಮ್ಮಂಗೆ ಬಾಯಿದ್ರೂ ದನಿಯಿಲ್ಲದವನಾಗಿ, ಬಲವಿದ್ರೂ ನಪುಂಸಕನಾಗಿ ಇರೋದ್ಕಲೀಬೇಕಾಯ್ತದೆ. ಬದುಕ್ಬೇಕಾದ್ರೆ ಉಸಾರಾಗಿರ್ಬೇಕು, ಉಸಾರಾಗ್ಮಾತಾಡ್ಬೇಕು ಮಗಾ, ನಿಂಗೋಸ್ಕರಾ ಅಲ್ದಿದ್ರೂ ನಿನ್ನೆಡ್ತಿಮಕ್ಳಿಗಾಗಿ, ನೆಪ್ತಿ ಮಡಿಕ್ಕೋ ಈ ಮುದ್ಕನ್ಮಾತಾ !

# 19. ಕಳೆದುಕೊಂಡನೋವು

ನಿಮಗೆ ಇದು ತಿಳಿದಿರಬಹುದು. ರೈಲುಹಳಿಗಳ ಅಕ್ಕಪಕ್ಕಗಳಲ್ಲಿ ಮನೆಕಟ್ಟಿಸಿ ಕೊಂಡವರಿಗೆ ಮೊದಲ ಕೆಲತಿಂಗಳ ಕಾಲ ಸರಿಯಾಗಿ ರಾತ್ರಿ ನಿದ್ದೆಬರುವುದಿಲ್ಲ. ಏಕೆಂದರೆ ಇನ್ನೇನು ನಿದ್ದೆಬರುತ್ತಿದೆ ಎನ್ನುವ ಕ್ಷಣದಲ್ಲಿ ಗಡಗಡ ಎನ್ನುವ ರೈಲುಗಳು ಹಳಿಗಳಮೇಲೆ ಚಲಿಸುವ ಶಬ್ದ. ಆದರೆ ಬರುಬರುತ್ತಾ ಇದು ಅಭ್ಯಾಸವಾಗಿಬಿಡುತ್ತೆ ಅನ್ನಿ. ಕೊನೆಕೊನೆಗೆ ಆ ಶಬ್ದ ಒಂದು ರೀತಿಯ ಜೋಗುಳವಿದ್ದಂತೆ ಆಗಿಬಿಟ್ಟು, ರೈಲು ಚಲಿಸದ ದಿವಸ ರಾತ್ರಿ ನಿದ್ದೆಯೇ ಬರದೇಹೋಗಬಹುದು. ಇದೇ ರೀತಿ ನಾಯಿ ಸಾಕುವ ಮಂದಿ, ಅವರ ಅಕ್ಕಪಕ್ಕದ ಮನೆಯವರದೂ ಸಹಾ. ಮೊದಮೊದಲಿಗೆ ಅದು ಅಸಹನೀಯ ಎನಿಸಿದರೂ, ಸ್ವಲ್ಪವೇ ದಿನಗಳಲ್ಲಿ ಅದಕ್ಕೆ ಅಡ್ಜಸ್ಟ್ ಆಗಿಬಿಟ್ಟಿರುತ್ತೇವೆ. ಎಲ್ಲೋ ಕೆಲವು ದೇಶಗಳಲ್ಲಿ ಪಕ್ಕದ ಮನೆನಾಯಿ ಬೊಗಳುವಿಕೆಯಿಂದ ನಮ್ಮ ನೆಮ್ಮದಿಗೆ ಭಂಗ ಬಂದಿದೆ ಎಂದು ನ್ಯಾಯಾಲಯಗಳಲ್ಲಿ ದಾವೆ ಹೂಡಬಹುದು. ಆದರೆ ನಮ್ಮ ಇಂಡಿಯಾ ದೇಶದಲ್ಲಿ ಅಂತಹ ವರ್ತನೆಗಳು ಬಲು ಅಪರೂಪವೆಂದೇ ಹೇಳಬಹುದು. ಏಕೆಂದರೆ ನಮ್ಮಂತಹ ಸಹಿಷ್ಣುಗಳು ನಿಮಗೆ ಬೇರೆಲ್ಲೂ ಸಿಗುವುದಿಲ್ಲ. ನಮ್ಮ ಪುಣ್ಯ, ನಮ್ಮ ವಾಸಸ್ಥಳಗಳಲ್ಲಿ ಇನ್ನೂ ಕಾಡುಪ್ರಾಣಿಗಳಾದ ಹುಲಿ, ಸಿಂಹ ಸಾಕಲು ಅನುಮತಿ ಸಿಕ್ಕಿಲ್ಲ. ನಗರಪ್ರದೇಶಗಳಲ್ಲಿ ಹಸು, ಎಮ್ಮೆಗಳ ಸಾಕಾಣಿಕೆಗಳಿಗೂ ನಿರ್ಬಂಧಗಳನ್ನು ಹೇರಲಾಗಿದೆ. ನಾ ಹೇಳಹೊರಟಿರುವುದು ಈ 'ಶಬ್ದ'ದ ಬಗೆಗಲ್ಲ. ಬದಲಿಗೆ 'ನಿಶಬ್ದ'ದ ಬಗೆಗೆ. ಅದೇನೆಂದು ಮುಂದೆ ನಿಮಗೇ ತಿಳಿಯುವುದು.

ಆ ಮನೆಯಲ್ಲಿ ಮನೆಯಮುಂದೆ ಯಾರೇ ಓಡಾಡಿದರೂ ಜೋರಾದ ನಾಯಿಬೊಗಳುವಿಕೆ ಕೇಳಿಸಿಕೊಳ್ಳುವುದು ಸರ್ವೇಸಾಮಾನ್ಯ. ಆ ಮನೆಗೆ ಬಂದವರು 'ಕಾಲಿಂಗ್ ಬೆಲ್' ಮಾಡಲೇ ಬೇಕಿಲ್ಲ. ಅವರ ಮನೆಮುಂದೆ ಬಂದ ತಕ್ಷಣ ಮನೆಯವರಿಗೆ 'ಸಿಗ್ನಲ್'ಹೋಗಿಬಿಡುತ್ತದೆ, ಅವರ ಮನೆನಾಯಿ ಬೊಗಳುವಿಕೆಯಿಂದ. ಅದು ಹಗಲಾಗಲೀ, ನಡುರಾತ್ರಿ ಆಗಿರಲಿ. ಇಂತಹ ಮನೆಯಲ್ಲಿ ಈಗ ನಿಶಬ್ದ. ಮನೆಮಂದಿಯೆಲ್ಲಾ ಮೌನ. ಎಲ್ಲೆಲ್ಲೂ ನೀರವತೆ. ಅದಕ್ಕೆ ಕಾರಣ ಏನೆಂದು ಬಲ್ಲಿರಾ! ಮನೆಯವರ ಮನದಾಳದ ಮಾತು ಇಲ್ಲಿದೆ, ನನ್ನ ಕಲ್ಪನೆಯಲ್ಲಿ, ಓದಿಕೊಳ್ಳಿ.

ಇಂದಿನ ದಿನ ನನ್ನ ಜನ್ಮದಲ್ಲಿ ಮರೆಯಲಾರದ ದಿನ. ಈ ದಿನ ನನಗೆ ತೀರ ಆಪ್ತರಾಗಿದ್ದವರೊಬ್ಬರನ್ನು ನಾನು ಕಳೆದುಕೊಂಡೆ. ಕಳೆದ ಹತ್ತಾರು ವರ್ಷಗಳಿಂದ ನನ್ನ ಮಗಳಂತೆ ಸಾಕಿದ್ದ ನನ್ನ ಮನೆ ಪೊಮೆರಿಯನ್ನನ್ನು ಮನೆಯಿಂದ ಮನಸ್ಸಿಲ್ಲದ ಮನಸ್ಸಿನಿಂದ ಬೀಳ್ಕೊಟ್ಟಿದ್ದು ಇಂದೇ. ಅದಕ್ಕೆ ಕಾರಣ ಆ ವೈದ್ಯ ಮಹಾಶಯನ ಪ್ರಿಸ್ಕ್ರಿಪ್ಷನ್! ನಾನು ನೆಮ್ಮದಿಯಿಂದ ಇರಬೇಕಾದರೆ ನನ್ನ ನಾಯಿಯಿಂದ ಬೇರ್ಪಡಬೇಕಾದ ಅನಿವಾರ್ಯತೆ ಇದೆಯಂತೆ. ನನ್ನೊಡನೆ ನೇರವಾಗಿ ಹೇಳದಿದ್ದರೂ, ನನ್ನ ಮಗಳು ಅಳಿಯನ ಬಳಿ ಹೇಳಿಕಳುಹಿಸಿದ್ದನಂತೆ ಆ ವೈದ್ಯ. ನನಗೆ ನೆಮ್ಮದಿ, ಶಾಂತಿ ದೊರೆಯಬೇಕು, ಸಂತೋಷ, ಉನ್ಮಾದ, ದುಃಖ ಯಾವುದೂ ತಾಗಬಾರದಂತೆ. ಅದಾಗಬೇಕಾದರೆ ನನಗೆ 'ನಿಶ್ಶಬ್ದ' ಅತ್ಯಗತ್ಯ. ಹೀಗಾಗಿ ಸದಾ ಬೊಗಳಿ, ನಮ್ಮ ಮನೆಯ ಮುಂದೆ ಹಾದುಹೋಗುವ ಅಪರಿಚಿತರ ಬಗೆಗೆ ನಮ್ಮ ಗಮನ ಸೆಳೆಯಲು ಎಚ್ಚರಿಸುತ್ತಿದ್ದ ನನ್ನ ನಾಯಿಯ ಬೊಗಳುವಿಕೆಯೇ ನನ್ನ ತಲೆನೋವಿಗೆ ಪ್ರಮುಖ ಕಾರಣವೆಂಬ ಮಹಾನ್ ಸಂಶೋಧನೆಗೈದಿದ್ದ ಆ ವೈದ್ಯ ಮಹಾಶಯ. ನಾನು ಬೇಡವೆಂದರೂ ಇತರರು ಬಿಡಬೇಕಲ್ಲ. ನನಗೆ ನಿಜವಾಗಲೂ ದುಃಖ ಆದುದೇ ಈ ನಾಯಿ, ಛೇ ಅದು ನಾಯಿಯಲ್ಲ, ನನ್ನ ಸಾಕುಮಗಳು, ಅದನ್ನು ನನ್ನಿಂದ ಬೇರ್ಪಡಿಸಿ ದಾಗ. ಅದು ಇವರಿಗ್ಯಾರಿಗೂ ಯಾಕೆ ಅರ್ಥವಾಗುವುದಿಲ್ಲ.

ಇಂದು ನನ್ನ ಮುದ್ದಿನ ಪೊಮೆರಿಯನ್ ನಾಯಿಯನ್ನು ಯಾರೋ ಫಾರಂಹೌಸಿನವರು ಬಂದು ಕರೆದುಕೊಂಡು ಹೋಗುತ್ತಾರಂತೆ. ಅದಕ್ಕಾಗಿ ಬೆಳಗ್ಗಿನಿಂದಲೇ ಅದರ ಮುಂದೆ ಕುಳಿತು ಅದಕ್ಕೆ 'ಧರಣಿ ಮಂಡಲದ' ಗೋವು ತನ್ನ ಕರುವನ್ನು ಬಿಟ್ಟು ಹುಲಿಯ ಬಾಯಿಗೆ ಆಹಾರವಾಗುವ ಕ್ಷಣ ಸಾಕಾರವಾದಂತಹ ವೇದನೆಯ ಅನುಭವ. "ಬಂದೆ ಬಂದರೆ ಒದೆಯಬೇಡಿ.

ಮುಂದೆಬಂದರೆ ಹಾಯಬೇಡಿ, ಕಂದ ನಿಮ್ಮವನೆಂದು ಕಾಣಿರಿ ನನ್ನ ಈ ಕರುವನು" ಎಂದು 'ತಬ್ಬಲಿಯು ನೀನಾದೆ ಮಗಳೇ' ಎಂದು ಕಣ್ಣೀರಿಡುತ್ತಾ, ಗಂಡನಮನೆಗೆ ಹೋಗುವ ಮುನ್ನ ಮಗಳಿಗೆ ಮಾರ್ಗದರ್ಶನ ನೀಡುವಂತೆ 'ಹೋದೆಡೆಯಲ್ಲಿ ನೀ ಹೀಗಿರಬೇಕು ಮಗಳೇ, ಗಂಡನ ತಂದೆತಾಯಿಯರಲ್ಲಿ ನಮ್ಮನ್ನು ಕಾಣು, ಗಂಡನ ಅಕ್ಕತಂಗಿಯರನ್ನು, ಅಣ್ಣ ತಮ್ಮಂದಿರನು ನಿನ್ನವರೆಂದೇ ತಿಳಿ' ಎಂದು ಅದಕ್ಕೆ ಬುದ್ಧಿವಾದ ಹೇಳುವುದಕ್ಕೆ ಸಮಯವೇ ಸಾಲುತ್ತಿಲ್ಲ. ಹೋದಮನೆಯಲ್ಲಿ ನೀನು ಹೀಗಿರಬೇಕು, ಹಾಗಿರಬೇಕು ಎಂದು ಹೇಳುತ್ತಿದ್ದಂತೆ, ಅದನ್ನು/ಅವಳನ್ನು ಕರೆದುಕೊಂಡು ಹೋಗುವವರು ಬರುವ ಸಮಯ ಬುಲೆಟ್ ರೈಲಿನ ವೇಗದಲ್ಲಿ ಹತ್ತಿರವಾಗುತ್ತಿದೆ, ಹಾಳಾದ ಸಮಯ ಯಾಕಿಷ್ಟು ವೇಗವಾಗಿ ಸರಿಯುತ್ತಿದೆಯೋ, ನನ್ನ ನನ್ನ ಮುದ್ದಿನ ನಾಯಿಯ ಸಂಬಂಧ ಇಷ್ಟು ಬೇಗ ಕಡಿದುಹೋಗುತ್ತಿದೆಯಲ್ಲಾ ಎನ್ನುವ ಸಂಕಟ ಯಾರಬಳಿಯಲ್ಲಿ ಹಂಚಿಕೊಳ್ಳಲಿ? ಏನು ಮಾಡಿದರೂ ಈ ಯುದ್ಧದಲ್ಲಿ ನನ್ನದು ಸೋಲುವ ಪಾತ್ರವೇ. ನೀನಿಲ್ಲದ ಬದುಕಿಗೆ ಹೊಂದಿಕೊಳ್ಳಲು, ನನಗೆ ನಾನೇ ಸಮಾಧಾನಪಟ್ಟುಕೊಳ್ಳಲು ಇನ್ನು ಎಷ್ಟು ದಿನ ಅವಶ್ಯಕವೋ ನನಗೆ ತಿಳಿಯದಾಗಿದೆ. ಇಂತಹ ಮನ ಕಲಕುವ ಘಟನೆ ನಿಮ್ಮಲ್ಲಿಯೂ ಅನೇಕರಿಗೆ ಆಗಿರಬಹುದಲ್ಲವೇ?

# 20. ಐನಾತಿ ಮೈಗಳ್ಳರು

ನಾವು ಕಾಣುವ ಮಂದಿಯಲ್ಲಿ ಕೆಲವರು ಯಾವುದೇ ಪ್ರತಿಪಲಾಪೇಕ್ಷೆಯಿಲ್ಲದೇ ಕೆಲಸಗಳನ್ನು ನಿರ್ವಂಚನೆಯಿಂದ ನಿರ್ವಹಿಸುತ್ತಾರೆ. ಅವರಿಂದ ಸೇವೆ ಮಾಡಿಸಿಕೊಂಡವರೂ, ಅದಕ್ಕೆ ಯಾವುದೇ ಬೆಲೆ ಕಟ್ಟುವುದಿಲ್ಲ. ಇದು ತಾಯಿ ಮಗುವಿನ ಆರೈಕೆಯಲ್ಲಿ, ಗಂಡಹೆಂಡತಿ ಸಂಬಂಧದಲ್ಲಿ ಕಂಡುಬರುತ್ತದೆ. ಆದರೆ ಎಲ್ಲಿ ಕೆಲಸ ಪ್ರತಿಫಲಾಪೇಕ್ಷೆಯಿಂದ ಮಾಡಲ್ಪಡುತ್ತದೋ ಅಲ್ಲಿ ಕಡಿಮೆ ಕೆಲಸ, ಹೆಚ್ಚು ಆದಾಯ ತತ್ವ ಅನ್ವಯಿಸತೊಡಗುತ್ತದೆ. ಅದು ಯಾವ ಕ್ಷೇತ್ರದಲ್ಲೇ ಆಗಿರಲಿ. ಈ ಕೆಳಗಿನ ಪ್ರಸಂಗಗಳನ್ನು ಗಮನಿಸಿ.

ಒಬ್ಬ ಅಧ್ಯಾಪಕನಾಗಿ ನೇಮಿಸಲ್ಪಟ್ಟನಂತರ ಕಾಯದೆ ಪ್ರಕಾರ ಅವನು ವಾರಕ್ಕೆ ಇಷ್ಟು ಘಂಟೆಗಳ ಕಾಲ ಸಂಸ್ಥೆಯಲ್ಲಿ ಹಾಜರಿರಬೇಕು; ವಾರಕ್ಕೆ ಇಷ್ಟು ತರಗತಿಗಳನ್ನು ತೆಗೆದುಕೊಳ್ಳಬೇಕು ಎಂಬೆಲ್ಲ ನಿಯಮಗಳಿರುತ್ತವೆ. ನಿಯಮವೇನೋ ಇರುತ್ತವೆ; ಆದರೆ ಅವುಗಳ ಪಾಲನೆ ಎಷ್ಟರಮಟ್ಟಿಗೆ ಆಗುತ್ತದೆ? ಮೊದಲಿಗೆ ಈ ಸಮಯಪಾಲನೆ ಹ್ಯಾಗೆ ಆಗುತ್ತದೆ ನೋಡೋಣ. ಪ್ರೌಢಶಾಲಾ ಮಟ್ಟದವರೆಗೆ ಎಲ್ಲ ಉಪಾಧ್ಯಾಯರೂ ಬೆಳಿಗ್ಗೆ ಶಾಲೆ ಪ್ರಾರಂಭ ಸಮಯದಲ್ಲಿ ಹಾಜರಿದ್ದು ವಿದ್ಯಾರ್ಥಿಗಳೊಟ್ಟಿಗೆ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುತ್ತಾರೆ. ಬೆಳಗಿನಿಂದ ಶಾಲೆ ಮುಗಿಯುವವರೆಗೂ, ಶಾಲಾ ಆವರಣದಲ್ಲೇ ಇದ್ದು ತರಗತಿಗಳಲ್ಲಿ ಪಾಠ, ಮಕ್ಕಳಿಗೆ ಆಟ, ವರ್ಕ್‌ಬುಕ್ ಕರೆಕ್ಷನ್ ಮುಂತಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.

ಆದರೆ ಅದು ಪದವಿ ತರಗತಿಯಿರುವ ಕಾಲೇಜಾದರೆ, ಅಲ್ಲಿನ ನಿಯಮಗಳ ಪ್ರಕಾರ ಪ್ರತಿಯೊಬ್ಬ ಅಧ್ಯಾಪಕನೂ ವಾರದಲ್ಲಿ ಕನಿಷ್ಠ 40 ಘಂಟೆಗಳ ಕಾಲ ಕಾಲೇಜಿನ ಆವರಣದಲ್ಲಿರಬೇಕು, ದಿನಕ್ಕೆ 3–4 ಘಂಟೆಗಳ ರೀತಿ ವಾರದಲ್ಲಿ 16 ರಿಂದ 18 ಘಂಟೆಗಳ ಪಾಠ ನಡೆಸಬೇಕು ಎನ್ನುತ್ತದೆ ಕಾನೂನು. ಸಾಮಾನ್ಯವಾಗಿ ವಿಜ್ಞಾನ ಅಧ್ಯಾಪಕರಾದರೆ, ಥಿಯರಿ ಮತ್ತು ಪ್ರಾಯೋಗಿಕ ತರಗತಿಗಳು ಎಂದು ಅಷ್ಟು ಅವಧಿ ಕಾಲೇಜಿನಲ್ಲಿರುತ್ತಾರೆ. ಆದರೆ ವಿಜ್ಞಾನೇತರ ಅಧ್ಯಾಪಕರು ಪ್ರತಿದಿನ 2 ಅಥವಾ 3 ಘಂಟೆಗಳ ಬೋಧನಾ ಅವಧಿಬಿಟ್ಟು ಉಳಿದ ಅವಧಿಗಳಲ್ಲಿ ಕಾಲೇಜಿನಲ್ಲಿ ಕಂಡು ಬರುವುದು ಅಪರೂಪ. ಕೆಲವರಂತೂ ತಮಗೆ ಅನುಕೂಲಕರವಾಗುವಂತೆ ಎಲ್ಲ 3 ಘಂಟೆಗಳ ಪ್ರವಚನವನ್ನೂ ಒಟ್ಟಿಗೆ ಮುಗಿಸಿ, ಹೊರಟುಹೋಗುತ್ತಾರೆ. ಅವರನ್ನು ಕಾಲೇಜಿನ ಆವರಣದಲ್ಲಿರುವಂತೆ ಮಾಡಲು ಕಾಲೇಜು ಶಿಕ್ಷಣ ಇಲಾಖೆ ಪ್ರತಿ ಅಧ್ಯಾಪಕನೂ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಎರಡು ಹೊತ್ತು ಕಾಲೇಜಿನ ಹಾಜರಿಪುಸ್ತಕದಲ್ಲಿ ಸಹಿ ಮಾಡಬೇಕೆಂಬ ನಿಯಮವನ್ನು ಜಾರಿಗೆತಂದಿತು. ಆಗ ಈ ಅಧ್ಯಾಪಕರು ಬೆಳಿಗ್ಗೆ ಬಂದು ಹಾಜರಾತಿ ಪುಸ್ತಕದಲ್ಲಿ ಎರಡೂ ಸಹಿಗಳನ್ನೂ ಮಾಡಿಮುಗಿಸುವ ಸಾಧ್ಯತೆಯಿದೆ. ಎರಡು ಪ್ರತ್ಯೇಕ ರಿಜಿಸ್ಟರ್ ಇಟ್ಟದ್ದರೆ, ತಮ್ಮ ಖಾಸಗಿಕೆಲಸಗಳನ್ನು ಮುಗಿಸಿಕೊಂಡನಂತರ, ಸಂಜೆ ಮತ್ತೆ ಬಂದು, ಸಹಿಹಾಕಿ ಹೋಗಬಹುದು. ರಿಜಿಸ್ಟರಿನಲ್ಲಿ ಸಹಿಮಾಡಿದ ಸಮಯ ನಮೂದಾಗುವುದಿಲ್ಲವಾದುದರಿಂದ, ಈ ರೀತಿ ದುರುಪಯೋಗ ಆಗುತ್ತದೆ. ಇದನ್ನೂ ತಪ್ಪಿಸಲು, ಬಯೋ–ಮೆಟ್ರಿಕ್ ಸಹಿಯನ್ನು ಜಾರಿಗೆ ತರಲು, ಇಲಾಖೆ ಸೂಚಿಸಿತು. ಅದರಲ್ಲಿ ಕಾಲೇಜಿಗೆ ಅಥವಾ ಕಛೇರಿಗೆ ಬಂದಾಗ, ಹೊರಹೋದಾಗ ಅಲ್ಲಿ ತಮ್ಮ ಹೆಬ್ಬೆಟ್ಟನ್ನಿಟ್ಟರೆ, ಅವರು ಹೆಬ್ಬೆಟ್ಟನ್ನಿಟ್ಟ ಸಮಯವೂ ದಾಖಲಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಕೆಲವರು, ನಮ್ಮ ಹೆಬ್ಬೆಟ್ಟನ್ನು ಯಂತ್ರ ದಾಖಲಿಸುತ್ತಿಲ್ಲ ಅನ್ನುವ ಸಬೂಬುಕೂಡ ಮುಂದೊಡ್ಡುತ್ತಾರೆ. ಸಮಯ ದಾಖಲಿಸದೇ ಇರಬಹುದು ತರಗತಿಯಲ್ಲಿ ಇವರು ಏನು ಪಾಠ ಮಾಡಿರುತ್ತಾರೋ ಅದನ್ನು 'ವರ್ಕ್ ಬುಕ್; ನಲ್ಲಿ ಆಯಾ ದಿನವೇ ಬರೆದಿಡಲು ಸೂಚನೆ ಬಂದರೂ, ವರ್ಷದ ಕೊನೆಯಲ್ಲಿ ಒಮ್ಮೆಗೇ ಬರೆದಿಡುವಂತಹ ಆಸಾಮಿಗಳೂ ಇರುತ್ತಾರೆ. ಈ ರೀತಿ ಇವರಲ್ಲಿ ಶಿಸ್ತು ಮೂಡಿಸಲು ಅವರು ಕ್ರಮಗಳನ್ನು ತೆಗೆದುಕೊಳ್ಳುತ್ತಲೇ ಇದ್ದರೆ, ಇಂತಹ ಮೈಗಳ್ಳರು ಅದರಿಂದ ತಪ್ಪಿಸಿಕೊಳ್ಳುವ ದಾರಿಗಳನ್ನು ಕಂಡುಕೊಳ್ಳುತ್ತಿದ್ದಾರೆ.

ಮೇಲೆ ಹೇಳಿದ ಕಾಲೇಜು ಅಧ್ಯಾಪಕರ ಮೈಗಳ್ಳತನ, ಹಲವಾರು ಸರ್ಕಾರಿ ಕಛೇರಿ ನೌಕರರಲ್ಲೂ ಕಂಡುಬರುತ್ತದೆ. ಮೊದಲೆಲ್ಲ ನಿಗದಿತ ಸಮಯಕ್ಕೆ ಕಛೇರಿ ಪ್ರವೇಶಿಸಿ, ದಾಖಲಾತಿಮಾಡಿ, ತಮ್ಮ ಸೀಟಿನ ಚೇರಿಗೆ ಕೋಟನ್ನೋ, ಬ್ಯಾಗನ್ನೋ

ತಗುಲಿಸಿಬಿಟ್ಟು, ಎಲ್ಲೆಲ್ಲೋ ಓಡಾಡಿಕೊಂಡಿರುತ್ತಿದ್ದುದು ಸಾಮಾನ್ಯ ಸಂಗತಿಯಾಗಿತ್ತು. ಸರ್ಕಾರಿ ಕಛೇರಿ ಬಾಬುಗಳ (ಗುಮಾಸ್ತರ) ದಿನಚರಿ ಹೀಗಿರುತ್ತಿತ್ತು. ಬೆಳಿಗ್ಗೆ 10 ಘಂಟೆಗೆ ಕಛೇರಿಗೆ ಹಾಜರಾಗಿ, ತಮ್ಮ ಪ್ರತಿನಿಧಿಯಾಗಿ ಬ್ಯಾಗನ್ನೋ, ಕೋಟನ್ನೋ ಕುರ್ಚಿಗೆ ತಗಲಿಸಿ, ಒಂದು ರೌಂಡು ಕಾಫಿ ಕುಡಿದು ಬರಲು ಸಹೋದ್ಯೋಗಿಗಳೊಂದಿಗೆ ಹೋಗಿ, ಸುಮಾರು ಅರ್ಧದಿಂದ ಒಂದು ಘಂಟೆಬಿಟ್ಟು ತಮ್ಮ ಸ್ಥಾನಕ್ಕೆ ಬರುವುದು. ಮತ್ತೆ 12ಘಂಟೆಗೆ ಮತ್ತೊಮ್ಮೆ ಕಾಫಿಗೆ ಹೋಗಿಬರುವುದು. 1 ಘಂಟೆ ವೇಳೆಗೆ ಕಡತ ಮುಚ್ಚಿಟ್ಟು 1–30ಕ್ಕೆ ಊಟಕ್ಕೆತೆರಳುವುದು. ಮತ್ತೆ 2–30ಕ್ಕೆ ತಮ್ಮ ಸ್ಥಾನಕ್ಕೆ ವಾಪಸು. 3–30ಕ್ಕೆ ಮತ್ತೆ ಕಾಫಿ. 4 ರಿಂದ 5 ಘಂಟೆವರೆಗೆ ಕೆಲಸ. ಕಡತ ಮುಚ್ಚಿಟ್ಟು 5–30ಕ್ಕೆ ಕಛೇರಿಯಿಂದ ನಿರ್ಗಮನ. ಹೀಗಾಗಿ ಕೆಲವು ಖಾಸಗೀ ಕಂಪನಿಗಳಲ್ಲಿ ಅವರು ಕುಳಿತಲ್ಲಿಗೇ ಕಾಫಿ ಸಪ್ಲೈ ಮಾಡಿಬಿಡುತ್ತಾರೆ.

ಇನ್ನು ಕೆಲವು ಕಾರ್ಖಾನೆ ಕಾರ್ಮಿಕರ ಕೈಚಳಕದ ಬಗೆಗೆ ನಾನು ಕೇಳಿದ ಪ್ರಸಂಗ ಹೀಗಿದೆ. ಒಂದು ತಯಾರಿಕಾ ಯಂತ್ರದಬಾಯಿಗೆ ಕಚ್ಚಾವಸ್ತುವನ್ನು ಹಾಕಿದರೆ, ಅದು ಹಲವಾರು ಹಂತಗಳಲ್ಲಿ ಅದನ್ನು ಸಂಸ್ಕರಿಸಿ, ಬದಲಾವಣೆಮಾಡಿ ಸಿದ್ಧವಸ್ತು ಹೊರಗೆ ನೀಡುತ್ತದೆ. ಕೆಲವು ಮೈಗಳ್ಳ ಕಾರ್ಮಿಕರು ಕಚ್ಚಾವಸ್ತು ಯಂತ್ರದ ಬಾಯಿಯಲ್ಲಿ ಹಾಕಿ, ಅದು ಮುಂದಿನ ಹಂತಕ್ಕೆ ಹೋಗುವ ದಾರಿಯಲ್ಲಿ ಏನೋ ತೊಡಕನ್ನಿಟ್ಟು ಯಂತ್ರ ಚಲಿಸುತ್ತಿದ್ದರೂ, ಸಿದ್ಧವಸ್ತು ತಯಾರಾಗುವುದೇ ಇಲ್ಲ. ಯಜಮಾನನಿಗೆ ಮಾತ್ರ ಯಂತ್ರ ಕಾರ್ಯ ನಿರ್ವಹಿಸುತ್ತಿರುವ ಸದ್ದು ಮಾತ್ರ ಕೇಳಿಸುತ್ತಿರುತ್ತದೆ. ಇನ್ನು ಕೆಲವು ಸಲ ದಿನಗೂಲಿಗೆ ನೇಮಿಸಲ್ಪಟ್ಟವರು, ಬೇಕಂತಲೇ ನಿಧಾನಗತಿ ಅನುಸರಿಸಿ, ಮೂರುದಿನದ ಕೆಲಸವನ್ನು ಆರುದಿವಸಗಳವರೆಗೆ ಎಳೆದು, ತಮ್ಮ ಕೂಲಿ ಹೆಚ್ಚುಮಾಡಿಕೊಳ್ಳುವುದು; ಕೇಳಿದಷ್ಟು ಕೂಲಿ ಕೊಡದವರಬಳಿ ಬೇಕೆಂತಲೇ ಅವಶ್ಯಕತೆಗಿಂತ ಹೆಚ್ಚಿನ ವಸ್ತುಗಳನ್ನು ತರಿಸಿ ಹಾಳುಮಾಡುವುದು ಮುಂತಾದ ಅವ್ಯವಹಾರಗಳಲ್ಲಿ ತೊಡಗಿರುವುದು ಕಂಡುಬರುತ್ತದೆ.

ಮನೆಕೆಲಸಕ್ಕೆ ಸೇರಿಸಿಕೊಂಡವರ ಕಥೆ ಇನ್ನೊಂದು ರೀತಿಯದು. ಕೆಲಸಕ್ಕೆ ಸೇರುವಾಗ ಎಲ್ಲದಕ್ಕೂ ತಲೆ ಅಲ್ಲಾಡಿಸಿ ಸಮ್ಮತಿಸಿ, ಅದಕ್ಕೆ ಸರಿಯಾಗಿ ಕೂಲಿ ನಿಗದಿಪಡಿಸಿಕೊಂಡು, ಮೊದಲು ಕೆಲದಿವಸ ಚೆನ್ನಾಗಿಯೇ ಕೆಲಸ ಮಾಡುತ್ತಾರೆ. ದಿನ ಕಳೆದಂತೆ ಅವರಕೆಲಸದ ಸ್ಪೀಡ್ ಯಂತ್ರಕ್ಕಿಂತ ಅತಿವೇಗವಾಗುತ್ತದೆ. ಮನೆ ಗುಡಿಸುವುದು, ನೆಲ ಒರಸುವುದು ಮುಂತಾದ ಕೆಲಸಗಳನ್ನು ಅವರು ಮಾಡುವ ರೀತಿಯನ್ನು ನೋಡಿಯೇ ತಿಳಿಯಬೇಕು. ಒಂದು ಬೇಸಿನಲ್ಲಿ ಬಿಂದಿಗೆಯಿಂದ ಆರು

ಅಡಿ ಪ್ರದೇಶವನ್ನು ಒರೆಸಿಬಿಡುತ್ತಾರೆ.ಗುಡಿಸಿದ ಕಸ ಮೇಜು, ಸೋಫಾ ಅಡಿಗೆ ಸೇರಿ ಬಿಡುತ್ತದೆ. ಯಾವತ್ತಾದರೂ ಅವುಗಳನ್ನು ಪಕ್ಕಕ್ಕೆ ಸರಿಸಿದಾಗ, ಅವರ ಕಾರ್ಯವೈಖರಿ ತಿಳಿಯುತ್ತದೆ. ನಾವು ವಹಿಸಿದ ಕೆಲಸಗಳನ್ನು ಹೀಗೆ ಮುಗಿಸಿದರೂ, ನಮ್ಮಿಂದ ಅವರ ಕೆಲಸದ ಸೆಕ್ಯೂರಿಟಿ ಚೆನ್ನಾಗೇ ಮಾಡಿಕೊಂಡಿರುತ್ತಾರೆ. ಏನಾದರೂ ಕಾರಣನೀಡಿ ಹಲವಾರು ಸಾವಿರ ರೂ.ಗಳ ಮುಂಗಡಪಡೆದಿರುತ್ತಾರೆ. ಹೀಗಾಗಿ ಅವರನ್ನು ಕೆಲಸದಿಂದ ಅವರ ಮುಂಗಡ ತೀರುವವರೆಗೂ ತೆಗೆದುಹಾಕುವಂತೆಯೂ ಇರುವುದಿಲ್ಲ. ಹಾಗೇನಾದರೂ ತೆಗೆದರೆ, ನಮಗೇ ಲಾಸ್! ನೀವಾಗಿಯೇ ಊರಿಗೆ ಹೋಗಿದ್ದರೂ ಸರಿಯೇ, ಅವರೇ ಕೆಲಸಕ್ಕೆ ತಪ್ಪಿಸಿಕೊಂಡಿದ್ದರೂ, ಅವರ ಸಂಬಳ ಕಡಿತಗೊಳಿಸಬಾರದು. ಇದೂ ಒಂದು ಅಲಿಖಿತ ಕರಾರು. ಈ ರೀತಿ ಏನುಮಾಡಿದರೂ, ತೊಂದರೆ ನಮಗೇ.

ಇನ್ನು, ವಿದ್ಯುತ್/ವಿದ್ಯುನ್ಮಾನ ಉಪಕರಣ ರಿಪೇರಿ ವಿಷಯದಲ್ಲಿ ಆ ನಿಪುಣರದೇ ಅಂತಿಮ ತೀರ್ಮಾನ. ನಿಮ್ಮ ವಾಹನವೋ,ಉಪಕರಣವೋ ಕೆಟ್ಟಿತೆಂದರೆ, ನಿಮ್ಮ ಗ್ರಹಚಾರ ಕೆಟ್ಟಿತೆಂದೇ ತಿಳಿಯಬೇಕು. ಅದರಲ್ಲಿ ಏನಾಗಿದೆ? ಯಾವಯಾವ ಭಾಗಗಳನ್ನು ಬದಲಿಸಬೇಕು? ಈ ವಿಷಯಗಳ ಬಗೆಗೆ ಅವರು ಹೇಳಿದ್ದೇ ವೇದವಾಕ್ಯ. ರಿಪೇರಿ ಮಾಡಿಕೊಟ್ಟ ಉಪಕರಣಕ್ಕೆ ತಗುಲಿದ ಖರ್ಚಿನ ಬಗೆಗೆ ಒಂದು ಬಿಳಿಹಾಳೆಯಲ್ಲಿ ಹತ್ತಾರು ಐಟಂಗಳ ಪಟ್ಟಿ ಬರೆದುಕೊಡುತ್ತಾರೆ ಇದು ನಮಗೆ ಅರ್ಥವಾಗುವುದೇ ಇಲ್ಲ. ಒಟ್ಟಿನಲ್ಲಿ ಅಂತಿಮ ಮೊತ್ತವನ್ನು ಚುಕ್ತಾಮಾಡುವುದೊಂದೇ ಉಳಿದಿರುವ ದಾರಿ! ಇನ್ನು, ಈ ಟೈಲರುಗಳ ಟೆಕ್ನಿಕ್ ಏನು ಗೊತ್ತಾ? ಯಾರೇ ಏನೇ ಹೊಲಿದುಕೊಡುವಂತೆ ಹೇಳಿದರೂ ಇಲ್ಲ ಅನ್ನುವುದಿಲ್ಲ. ಅವರು ಹೇಳಿದ ದಿನದಂದು ನಮ್ಮ ಆದೇಶವನ್ನು ಪೂರೈಸಿಕೊಡುವುದೇ ಅಪರೂಪ! ಅವರು ಮೊದಲು ಮಾಡುವ ಕೆಲಸ ಅಂದರೆ, ಕೊಟ್ಟ ಬಟ್ಟೆಯನ್ನು ಕಟ್‌ಮಾಡಿಡುವುದು. ಅದನ್ನು ವಾಪಸು ತೆಗೆದು ಕೊಂಡು ಹೋಗದಿರಲೆಂದು, ಅವರು ಹೀಗೆಮಾಡುತ್ತಾರೆ ಅನ್ನಿಸುತ್ತದೆ. ಒಮ್ಮೆಯಂತೂ ಒಬ್ಬ ಟೈಲರನಿಗೆ ನಾನೇ ಒಂದು ಶರ್ಟು ಹೊಲೆದುಕೊಡಲು ಕೊಟ್ಟಿದ್ದೆ. ಹೇಳಿದ ದಿನದಂದು ಹೋಗಿ ಕೇಳಿದರೆ, 'ಸಾರ್, ಕಾಲರ್ ರೆಡಿಯಾಗಿದೆ' ಅಂದ. ಅದು ರೆಡಿಮೇಡ್ ಐಟಂ ಅನ್ನುವುದು ನಂತರ ನನಗೆ ಗೊತ್ತಾಯಿತು.

ಈ ರೀತಿ ಮೋಸಗೊಳ್ಳಬಾರದೆಂದರೆ ಇರುವುದು ಒಂದು ಮಾರ್ಗ : ಅದು ಎಲ್ಲ ವಿಷಯಗಳ ಬಗೆಗೆ ತಿಳಿದುಕೊಂಡಿರುವುದು, ಅಂದರೆ 'ಸಕಲಕಲಾ ವಲ್ಲಭನ್' ಆಗುವುದು. ಇದು ಎಲ್ಲರಿಗೂ ಸಾಧ್ಯವೇ ?

# 21. ಮೈಸೂರಿನಲ್ಲಿ ಮೊದಲ ಸಾಹಿತ್ಯ ದಾಸೋಹ

ನವಂಬರ್ 15, 2015 ಮೊತ್ತಮೊದಲ ಸಲ ಮೈಸೂರಿನ ವಿವೇಕಾನಂದ ನಗರದಲ್ಲಿನ ಮನೆಯೊಂದರಲ್ಲಿ 'ಸಾಹಿತ್ಯ ದಾಸೋಹ' ನಡೆಸಲಾಗುತ್ತದೆ ಎಂಬ ಸಂಗತಿ ನನ್ನ ಕಿವಿಗೆ ಹಾಕಿದವನು ನನ್ನ ಬಾಲ್ಯದ ಗೆಳೆಯ ಕೃಷ್ಣಸುಬ್ಬರಾವ್. ನಾನು ಬಳಸಬಾರದೆಂದು ಬಿಟ್ಟಿರುವ 'ಕೃಷ್ಣ ಸುಂದರಿ'ಗೆ ಕರೆಮಾಡಲು ಪ್ರಯತ್ನಿಸಿ ಸೋತ ಕೃಷ್ಣ ಕೊನೆಗೆ ಒಂದು ಸಂದೇಶವೆಸೆದು ಸುಮ್ಮನಾಗಿದ್ದ.

ಜೀವಂತವಾಗಿದ್ದರೂ ನಾನು ಆ ಜಂಗಮವಾಣಿಯನ್ನು ಕರೆಮಾಡಲು ಬಳಸದೇ ಮ್ಯೂಸಿಕ್ ಪ್ಲೇಯರ್ ಆಗಿ ಬಳಸುತ್ತಿದ್ದೆ. 'ಸ್ಲೋ ಡೆತ್' ಅನ್ನುವಂತೆ ಅದಕ್ಕೆ ಕರೆನ್ಸಿಯನ್ನೂ ಹಾಕಿಸದೆ ಇಟ್ಟು ಯಾರಾದರೂ ಅಪರೂಪಕ್ಕೆ ಆ ನಂಬರಿಗೆ ಕರೆಮಾಡಿದಾಗ ನನ್ನ ಇತರ ಸಂಖ್ಯೆಗಳನ್ನು ಕೊಟ್ಟು ಕರೆಮಾಡಲು ವಿನಂತಿಸುತ್ತಿದ್ದೆ. ಇತ್ತೀಚೆಗೆ ಸಂಬಂಧೀಕರ ಮನೆ ಕಾರ್ಯಕ್ರಮದಲ್ಲಿ ಅದು ಹೇಗೋ ನನಗೇ ಗೊತ್ತಾಗದ ರೀತಿಯಲ್ಲಿ ನನ್ನ ಅಳಿಯನ ಕಾರು ಸೇರಿ ಬೆಂಗಳೂರಿಗೆ ಪ್ರಯಾಣಬೆಳೆಸಿತ್ತು. ಬಳಸದೇ ಇದ್ದರೂ ಅದು ಕಾಣದಾದಾಗ ತುಡಿತ ಹೆಚ್ಚಾಗಿ ಅರ್ಧರ್ಧ ಘಂಟೆಗಳಿಗೊಮ್ಮೆ ಆ ನಂಬರಿಗೆ ಕರೆಮಾಡುತ್ತಿದ್ದೆ. ಯಾರೂ ಕುಳಿತಿರದ ಕಾರಿನಲ್ಲಿ ಅವಿತಿಟ್ಟುಕೊಂಡ ಆ ಮೊಬೈಲ್‌ಗೆ ಕರೆಹೋದರೂ ಅದರ ಗಮ್ಯಸ್ಥಾನ ಪತ್ತೆ ಆಗಿರಲಿಲ್ಲ. ಕೊನೆಗೊಮ್ಮೆ ನನ್ನ ಅಳಿಯ ಮಗಳು ಬೆಂಗಳೂರಿಗೆ ಹೋಗುತ್ತಿರುವಾಗ ನನ್ನ ಕರೆಗೆ ಅದು ಸ್ಪಂದಿಸಿದೆ. ತಕ್ಷಣ ನನ್ನ ಮಗಳು 'ಅರೇ ಅಪ್ಪನ ಮೊಬೈಲ್ ಇಲ್ಲಿ ಹೇಗೆ ರಿಂಗಣಿಸುತ್ತಿದೆ' ಎಂದು ನೋಡಿದಾಗ ಡ್ರೈವರ್ ಸೀಟಿನ ಹಿಂದಿನ ಪ್ಯಾಕೆಟ್ಟಿನಲ್ಲಿ ಆ ಶಬ್ದ ಕೇಳಿಬರುತ್ತಿರುವುದು ತಿಳಿದಿದೆ.

ಫೋನೆತ್ತಿಕೊಂಡ ಮಗಳು 'ಅಪ್ಪಾ, ನಿನ್ನ ಮೊಬೈಲ್ ಇಲ್ಲಿದೆ' ಎಂದಾಗ ನನಗೂ ಸಮಾಧಾನವಾಯಿತು. ಮತ್ತೆ ಅದು ನನ್ನ ಕೈಸೇರಲು ಒಂದು ವಾರವೇ ಆಯಿತು. ನಾನು ನನ್ನ ಮಗಳಿಗೆ ಅದಕ್ಕೆ ಬರುವ 'ಕಾಲ್'ಗಳನ್ನು ನನ್ನ ಇತರೆ ಮೊಬೈಲಿಗೆ ಡೈವರ್ಟ್ ಮಾಡಲು ತಿಳಿಸಿದ್ದೆ. ಅವಳು ಹಾಗೆ ಮಾಡಿದ್ದರೂ ಅದು ಡೈವರ್ಟ್ ಆಗುತ್ತಿರಲಿಲ್ಲ. ಕರೆಮಾಡಿದವರಿಗೆ 'ಸ್ವಲ್ಪ ತಡೆಯಿರಿ, ನಿಮ್ಮ ಕಾಲ್ ಡೈವರ್ಟ್ ಆಗುತ್ತಿದೆ' ಎಂದು ತಿಳಿಸಿದರೂ ಅದು ಈ ಮೊಬೈಲಿಗೆ ತಲುಪುತ್ತಿರಲಿಲ್ಲ. ಹೀಗಾಗಿ ನನ್ನ ಮಿತ್ರ ಎಷ್ಟೇ ಸಲ ಪ್ರಯತ್ನಿಸಿದರೂ ಅದು ನನಗೆ ತಿಳಿದಿರಲಿಲ್ಲ. ವಾರದ ಬಳಿಕ ಅದು ನನ್ನ ಕೈ ಸೇರಿದಾಗ ಮೆಸೇಜ್ ಬಂದಿರುವುದು ತಿಳಿದು, ತೆರೆದಾಗ ನನ್ನ ಮಿತ್ರ 'ನಿನ್ನನ್ನು ಸಂಪರ್ಕಿಸಲು ಮಾಡಿದ ಪ್ರಯತ್ನ ಸಫಲವಾಗಿಲ್ಲ, ನನಗೆ ಕರೆಮಾಡು' ಎಂದು ಬರೆದಿದ್ದ ಸಂದೇಶ ನೋಡಿದೆ. ಅವನಿಗೆ ಕರೆಮಾಡಿ ನಡೆದ ಕಥೆ ಹೇಳಿದಾಗ 'ನಿನಗೆ ಒಂದು ಪೋಸ್ಟ್ ಕಾರ್ಡ್ ಬರೆದು ರೆಡಿಮಾಡಿದ್ದೇನೆ. ಇಲ್ಲೇ ಓದಿಬಿಡಲಾ ಅಥವಾ ಪೋಸ್ಟ್ ಮಾಡಲಾ' ಎಂದ. 'ಬರೆದುದಂತೂ ಆಗಿದೆ, ಪೋಸ್ಟ್ ಮಾಡಿಬಿಡು' ಎಂದೆ. ಆ ಪತ್ರ ಇನ್ನೂ ನನ್ನ ಕೈ ಸೇರಿಲ್ಲ. ಹೀಗಿದೆ ನಮ್ಮ ಪೋಸ್ಟಲ್ ಸರ್ವೀಸ್. ಸಂಕ್ಷಿಪ್ತವಾಗಿ ಅವನು ಹೇಳಿದುದೆಂದರೆ "ಇದೇ 15 ರಂದು ಮೈಸೂರಿನಲ್ಲಿ ನಿಮ್ಮ ಮನೆಯ ಹತ್ತಿರದಲ್ಲೇ 'ಸಾಹಿತ್ಯ ದಾಸೋಹ' ಎಂಬ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಇದರಲ್ಲಿ ಹವ್ಯಾಸಿ ಬರಹಗಾರರು ತಮ್ಮ ಹರಟೆ, ಕಥೆ, ಕಾವ್ಯ, ಪ್ರಹಸನ, ಜೋಕುಗಳು ಹೀಗೆ ತಮಗೆ ಬಂದ ವಿಷಯಗಳನ್ನು ಬಂದವರೊಂದಿಗೆ ಹಂಚಿಕೊಳ್ಳಲಿದ್ದಾರೆ. ನಾವು ಬೆಂಗಳೂರಿನಲ್ಲಿ ಕಳೆದ 120 ತಿಂಗಳುಗಳಿಂದ ಪ್ರತಿತಿಂಗಳೂ ಒಬ್ಬೊಬ್ಬರ ಮನೆಯಲ್ಲೋ ಅವರು ಏರ್ಪಡಿಸಿದ ಮತ್ಯಾವುದಾದರೂ ಸ್ಥಳದಲ್ಲಿ ಎರಡು ಮೂರು ಘಂಟೆಗಳ ಕಾಲ ಸೇರಿ, ಕೊನೆಯಲ್ಲಿ ಊಟಹಾಕಿ ಈ ಸಾಹಿತ್ಯ ದಾಸೋಹ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದೇವೆ. ಇದೇ ಮೊದಲ ಸಲ ಮೈಸೂರಿನಲ್ಲಿ ಈ ಕಾರ್ಯಕ್ರಮವನ್ನು ನಮ್ಮ ಅದರಲ್ಲೂ ನಮ್ಮೊಡನೆ ಮಿಡಲ್ ಸ್ಕೂಲ್‌ಮೇಟಾಗಿದ್ದ ಆನಂದ ಎಂಬುವರ ಮನೆಯಲ್ಲಿ ನಡೆಸುತ್ತಿದ್ದಾರೆ. ನೀನೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು" ಎಂದ. ಸಧ್ಯ ಕಾರ್ಯಕ್ರಮ ಮುಗಿಯುವ ಮುನ್ನವೇ ನನ್ನ ಮೊಬೈಲ್ ನನ್ನ ಕೈಸೇರಿ, ನಿನ್ನ ಮೆಸೇಜ್ ನನ್ನ ಕಣ್ಣಿಗೆ ಬಿದ್ದುದು ಒಳ್ಳೆಯದೇ ಆಯಿತು ಎಂದೆ. ಆನಂದನೂ ಸಹಾ ನನಗೆ ಹಿಂದಿನ ರಾತ್ರಿಯೇ ಕೃಷ್ಣನ ಬಳಿಯಿಂದ ನನ್ನ ಮೊಬೈಲ್ ನಂಬರ್ ಪಡೆದು ಫೋನ್ ಮಾಡಿ ಮನೆವಿಳಾಸ ಮಾಹಿತಿ ನೀಡಿದ್ದ. ಕೃಷ್ಣನೊಡನೆ ಮಾತನಾಡಿದ ಮರುದಿನವೇ ನನ್ನ ಮಾಧ್ಯಮಿಕ ಶಾಲೆಯ ಸಹಪಾಠಿ ಆನಂದನ ಮನೆ ಹುಡುಕಿ

ಹೊರಟೆ. ನಾನೆಣಿಸಿದುದಕ್ಕಿಂತ ಹತ್ತಿರದಲ್ಲೇ ಇತ್ತು ಅವನ ಮನೆ. ಮನೆಯ ಹಿಂದಿನ ಬೀದಿಯ ಕೊನೆಯಲ್ಲಿ ನಿಂತು ಅವನ ನಂಬರಿಗೆ ಫೋನ್ ಮಾಡಿದಾಗ 'ಇಲ್ಲೇ ನೀರಿನ ಬಿಲ್ ಕಟ್ಟಲು ಬಂದಿದ್ದೇನೆ. ಇನ್ನು ಐದು ನಿಮಿಷದಲ್ಲಿ ಬರುತ್ತೇನೆ' ಎಂದ. ತಮಾಷೆಯೆಂದರೆ ನಾನೂ ಆಗಷ್ಟೇ ನೀರಿನ ಬಿಲ್ ಪಾವತಿಸಿ ಅಲ್ಲಿಂದ ಹೊರಟುಬಂದಿದ್ದೆ. ನಾನು ಅವನನ್ನು, ಅವನು ನನ್ನನ್ನು ಸುಮಾರು 40 ವರ್ಷಗಳಿಂದ ನೋಡಿರಲಿಲ್ಲ. ಹೇಳಿದಂತೆ 5 ನಿಮಿಷಗಳಲ್ಲಿ ಸ್ಕೂಟರಿನಲ್ಲಿ ತಲೆಗೆ ಹೆಲ್ಮೆಟ್ ಧರಿಸಿದ್ದ ವ್ಯಕ್ತಿಯೊಂದು ಬಂದು ಪ್ರಶ್ನಾರ್ಥಕವಾಗಿ ತಲೆ ಅಲ್ಲಾಡಿಸಿತು, ನಾನು ಪ್ರತಿಕ್ರಿಯಿಸಿದೆ. ಹೆಲ್ಮೆಟ್ ತೆಗೆದತಕ್ಷಣ ಅವನ ಕಣ್ಣುಗಳಿಂದ ಅವನನ್ನು ನಾನು ನೋಡಿದ್ದೇನೆ ಎಂದು ಅನ್ನಿಸಿತು.

ಅಂದು ಮಾಧ್ಯಮಿಕ ಶಾಲೆಯ ಆನಂದನ ಮುಖ ಮುಂದೆಬಂದಿತು. ನಂತರ ಅಲ್ಲೇ ಹತ್ತಿರದಲ್ಲಿದ್ದ ಅವರ ಮನೆಗೆ ಕರೆದುಕೊಂಡುಹೋಗಿ ಮಡದಿಗೆ ಪರಿಚಯಿಸಿದ. ನಮ್ಮಂತೆಯೇ ಮಕ್ಕಳು ಹೊರದೇಶದಲ್ಲೋ, ಪರವೂರಿನಲ್ಲೋಕೆಲಸ ಮಾಡುತ್ತಿದ್ದು, ಮುದುಕ ಮುದುಕಿ ಮನೆಯಲ್ಲಿರುವುದು ಕಂಡುಬಂತು. ಕೆಲವು ನಿಮಿಷ ಮಾತನಾಡಿ ಮುಂದೆ ಕಾರ್ಯಕ್ರಮದಂದು ಭೇಟಿಯಾಗುವುದಾಗಿ ತಿಳಿಸಿ ವಾಪಸಾದೆ. ಅವನು ಪೋಸ್ಟ್ ಮಾಡಿದ ಕಾರ್ಡಿನ ದಾರಿ ಕಾಯುತ್ತಿದ್ದೇನೆ. ಅದು ಕಾರ್ಯಕ್ರಮ ಮುಗಿಯುವ ಮುನ್ನ ನನ್ನ ಕೈಸೇರಬಹುದೆಂಬ ಆಶಯದೊಡನೆ. ನನ್ನ ಪುಣ್ಯ ಎಂಬಂತೆ ಕೃಷ್ಣ ಪೋಸ್ಟ್‌ಮಾಡಿದ ಕಾರ್ಡು ಇದೇ 12ರಂದು ತಲುಪಿ ಕಾರ್ಯಕ್ರಮದ ವಿವರ ವಿಷದವಾಯಿತು. ಈ ಹಿಂದೆ ಮಂಡ್ಯದ ಶಾಲೆಯೊಂದು ಸ್ವಾತಂತ್ರ್ಯೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿ ದಿನಾಂಕ 10 ರಂದು ಪೋಸ್ಟ್‌ಮಾಡಿದ ಪತ್ರಿಕೆ ನನ್ನ ಕೈ ತಲುಪಿದ್ದು ದಿನಾಂಕ 18ರಂದು, ಅಂದರೆ ಕಾರ್ಯಕ್ರಮ ಮುಗಿದು 3 ದಿನಗಳ ನಂತರ. ಹೇಗಿದೆ ನಮ್ಮ ಅಂಚೆ ಇಲಾಖೆ ಸೇವೆ.

ಇನ್ನು ಕಾರ್ಯಕ್ರಮ ನಡೆದನಂತರದ ಅನುಭವ. ಸುಮಾರು 8–30 ಘಂಟೆಗೆ ಕೃಷ್ಣ ನನಗೆ ಫೋನ್‌ಮಾಡಿ 'ಈಗತಾನೇ ನಾನು ಬರುತ್ತಿರುವ ರೈಲು ಮಂಡ್ಯ ಬಿಟ್ಟಿದೆ. ಸಭೆ ಪ್ರಾರಂಭವಾಗಲು ಇನ್ನೂ ಸಾಕಷ್ಟು ಸಮಯ ಇರುವುದರಿಂದ ನಾವು ಮೊದಲೇ ಭೇಟಿಯಾಗಬಹುದು, ಎಲ್ಲಿ ಭೇಟಿಯಾಗೋಣ' ಅಂದ. ನಾನು ಲೆಖ್ಖಹಾಕಿಕೊಂಡು 'ನಿಲ್ದಾಣಕ್ಕೆ ಬರಲು ಇನ್ನೂ ಮುಕ್ಕಾಲು ಘಂಟೆ ಬೇಕು ಆದುದರಿಂದ ರೈಲ್ವೆ ಸ್ಟೇಷನ್ನಿಗೆ ಬರುತ್ತೇನೆ, ಅಲ್ಲಿಂದ ಮನೆಗೇಬಂದುಬಿಡು' ಎಂದೆ. ಕಾಲುಘಂಟೆ ನಂತರ ಮನೆಯಿಂದ ಹೊರಟೆ. ಕಾರನ್ನು ರೈಲ್ವೇನಿಲ್ದಾಣದ

ಬಳಿ ನಿಲ್ಲಿಸಿಕೊಂಡು ಕಾಯುತ್ತಿದ್ದೆ. ಸಮಯ ಕಳೆದರೂ ಇವನ ದರ್ಶನವಾಗಲಿಲ್ಲ. ಅವನಿಗೇ ಫೋನ್ ಮಾಡಿದಾಗ 'ಶ್ರೀರಂಗಪಟ್ಟಣದಲ್ಲಿ ಸಿಗ್ನಲ್ ಗಾಗಿ ಕಾಯುತ್ತಾ ನಿಂತುಬಿಟ್ಟಿದೆ. ಇನ್ನೂ ಕಾಲು ಘಂಟೆಕಾಲಬೇಕಾಗುತ್ತೆ' ಎಂದ.ಕಾರಿಗೆ 500 ರೂ. ಬೆಲೆಯ ಪೆಟ್ರೋಲ್ ಹಾಕಿಸಿಕೊಂಡು ಹೋಗಿಬಂದುದಕ್ಕೆ ಒಂದ್ಹತ್ತು ನಿಮಿಷವಾಯಿತು. ಮತ್ತೆ ರೈಲ್ವೆ ಸ್ಟೇಷನ್‌ಗೆ ಹೊಂದಿಕೊಂಡಂತೆ ಪ್ರಾರಂಭವಾಗಿರುವ "ಅಡ್ಯಾರ್ ಆನಂದ ಭವನ್" ಮುಂಭಾಗ ನಿಲ್ಲಿಸಿಕೊಂಡು ಕಾಯತೊಡಗಿದೆ. ಅಂತೂ ಇಂತೂ ಪ್ರತ್ಯಕ್ಷನಾದ ಕೃಷ್ಣನನ್ನು ಕರೆದುಕೊಂಡು ಮನೆಗೆ ಬಂದು, ತಿಂಡಿಮುಗಿಸಿ ಕಾರ್ಯಕ್ರಮ ನಡೆಸಲು ಉದ್ದೇಶಿಸಿದ್ದ 'ವಿವೇಕಾನಂದ ಕೇಂದ್ರ ಗ್ರಂಥಾಲಯ' ಕಟ್ಟಡ ತಲುಪಿದೆವು. ಅಲ್ಲಾಗಲೇ ಹೊಸದಾಗಿ ಪರಿಚಿತನಾದ ಹಳೆಯ ಗೆಳೆಯ ಎಂ.ಆರ್.ಆನಂದ & ಮನೆಯವರು ಸ್ವಾಗತಿಸಿದರು. ಮೂಲತಃ ಬ್ಯಾಂಕಿನ ಅಧಿಕಾರಿಗಳೇ ಸ್ಥಾಪಿಸಿಕೊಂಡಿದ್ದುದರಿಂದ ಹೆಚ್ಚಿನ ಸಾಹಿತ್ಯ ದಾಸೋಹಿಗಳು ಬ್ಯಾಂಕಿನವರೇ ಆಗಿದ್ದರು. ಇನ್ನೂ ಹಲವಾರು ಮಂದಿ ನನಗೆ ಪರಿಚಯವಿಲ್ಲದವರು ಸೇರಿದ್ದರು.

ಕೃಷ್ಣ ಅವರಲ್ಲಿ ಕೆಲವರನ್ನು ಮಾತನಾಡಿಸಿದ. ನಾನು ಮೊದಲ ಸಲ ಆನಂದನನ್ನು (ಸಲುಗೆಗಾಗಿ ಏಕವಚನ ಬಳಸಿದ್ದೇನೆ) ಕಂಡಾಗ ಅವನು ನೀಡಿದ್ದ 'ಸಾಹಿತ್ಯ ಮಕರಂದ' ದಲ್ಲಿ ಲೇಖನ ಬರೆದಿದ್ದ ಕೆಲವು ಮುಖಗಳು ಕಂಡವು. ಶ್ರೀ ಬಿ.ಎಸ್.ಚಂದ್ರಶೇಖರ್, ಎಸ್.ಸೀತಾರಾಂ ಮುಂತಾಗಿ ಹತ್ತಿಪ್ಪತು ಮಂದಿ ಇದ್ದರು. ಹೆಚ್ಚಿನವರು ವೃತ್ತಿಯಿಂದ ನಿವೃತ್ತರಾದನಂತರ ಸಾಹಿತ್ಯ ಕ್ಷೇತ್ರಕ್ಕೆ ಧುಮುಕಿದವರು. ಚಂದ್ರಶೇಖರ್ ಬಂದವರೇ 'ನಾವು ಮೊದಲೇ ನಿರ್ಧರಿಸಿರುವಂತೆ ಸರಿಯಾಗಿ 11 ಘಂಟೆಗೆ ಕಾರ್ಯಕ್ರಮ ಶುರುಮಾಡಿಬಿಡೋಣ. ನಮ್ಮ ಈ ಕಾರ್ಯಕ್ರಮದಲ್ಲಿ ಸಮಯಪಾಲನೆ ಬಹಳ ಮುಖ್ಯ. ಲೇಟು ಮಾಡಿದರೆ ಕೊನೆಗೊಳ್ಳುವುದೂ ತಡವಾಗುತ್ತದೆ, ಮತ್ತೆ ಬೆಂಗಳೂರಿಗೆ ವಾಪಸಾಗುವವರಿಗೆ ತೊಂದರೆ ಆಗುತ್ತದೆ. ಮೊದಲ ಕಾರ್ಯಕ್ರಮವಾದುದರಿಂದ ಮೈಸೂರು ಮತ್ತು ಬೆಂಗಳೂರಿನ ಸಾಹಿತ್ಯ ದಾಸೋಹಿಗಳ ಸಮ್ಮಿಲನ ಇಲ್ಲಿದೆ. ಪ್ರತಿಯೊಬ್ಬರಿಗೂ ಸಾಮಾನ್ಯವಾಗಿ ಹತ್ತು ನಿಮಿಷ ಕಾಲಾವಧಿ ನೀಡುವುದು ನಮ್ಮ ಪದ್ಧತಿ. ಆದರೆ ಪಾಲ್ಗೊಳ್ಳುವವರ ಸಂಖ್ಯೆ ಹೆಚ್ಚಿನ್ನಿಸುತ್ತಿರುವುದರಿಂದ ಅದನ್ನು 8 ನಿಮಿಷಕ್ಕೆ ಇಳಿಸುವುದು ಸೂಕ್ತ. ಮುಂಬರುವ ಸಾಹಿತ್ಯ ದಾಸೋಹಗಳಲ್ಲಿ ಬರೀ ಮೈಸೂರಿಗರೇ ಹೆಚ್ಚಿರುವುದರಿಂದ ಸಮಯ ಹಿಗ್ಗಿಸುವುದು ನಿಮಗೇ ಬಿಡುತ್ತೇವೆ' ಮೈಸೂರಿಗರಿಗೆ ಆದ್ಯತೆ ನೀಡೋಣ', ಎಂದೆಲ್ಲ ಸೂಚನೆಕೊಟ್ಟರು. ಅಂತೂ

ಇಂತೂ ಊಟದ ಸಮಯ ಹತ್ತಿರವಾಗುವವೇಳೆಗೆ ಸುಮಾರು 50 ಮಂದಿ ಸೇರಿದ್ದರು. ಹೊಟ್ಟೆಗೆ ಹಿಟ್ಟು & ಮಸ್ತಿಷ್ಕಕ್ಕೆ ಮೃಷ್ಟಾನ್ನ ಎನ್ನುವಂತಹ ಕಾರ್ಯಕ್ರಮ ಸರಿಯಾಗಿ 11 ಘಂಟೆಗೆ ಶ್ರೀಮತಿ ಮಾಲತಿ ಶ್ರೀನಿವಾಸನ್ ರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸೇರಿದ್ದವರಲ್ಲಿ ಹೆಚ್ಚಿನವರು ಕವಿಗಳೇ ಆಗಿದ್ದರು. ಬಹುಶಃ ಅದು ಆಯೋಜಕರ ಆಂತರಿಕ ಇಚ್ಛೆ ಆಗಿದ್ದರೂ ಆಗಿರಬಹುದು. ಮರಿಕವಿಗಳು, ಹಿರಿಕವಿಗಳು ಎಲ್ಲರನ್ನೂ ಮೇಲುಕೀಳೆಂಬ ಬೇಧವಿಲ್ಲದೇ ಒಂದೆಡೆ ಸೇರಿಸುವ ಸಾಹಸ ಮಾಡಿರುದು ಈ 'ಸಾಹಿತ್ಯ ದಾಸೋಹ'ದ ಹೆಗ್ಗಳಿಕೆ. ಸಭೆ ಮುಗಿದು ವಾಪಸಾಗುವಾಗ ಕೃಷ್ಣ ಮತ್ತೊಬ್ಬರೊಡನೆ ಮಾತನಾಡುತ್ತಿದ್ದಾಗ ಆಡಿದ ಮಾತು ಅದನ್ನು ಸೂಚಿಸುತ್ತಿತ್ತು. ಕವಿತೆ ಸುಲಭ ಮತ್ತು ಸಮಯ ಉಳಿಸುವಂತಹುದು. ಕಥೆಗೆ ಬೇಕಾಗುವಷ್ಟು ಕಾನ್ಸೆಂಟ್ರೇಶನ್ ಕವಿತೆಗೆ ಬೇಕಾಗುವುದಿಲ್ಲ. ಒಂದೆರಡು ವಾಕ್ಯ ಮಿಸ್ ಮಾಡಿದರೆ ಕಥೆ ಅರ್ಥವಾಗುವುದಿಲ್ಲ ಈ ರೀತಿ ಮುಂದುವರೆದಿತ್ತು ಅವರ ನಡುವಿನ ಸಂಭಾಷಣೆ. ಏನೇ ಆಗಲೀ, ಕಾರ್ಯಕ್ರಮ ವಿನೂತನ ಅನುಭವ ನೀಡಿತು. ಸೇರಿದ್ದ 50 ಮಂದಿಯಲ್ಲಿ 25 – 26 ಮಂದಿ ತಮ್ಮ ಕವನಗಳನ್ನು ಕೆಲವರು ಕಥೆಗಳನ್ನು(?) ಓದಿದರೆ, ಒಬ್ಬರು ತಮ್ಮ 'ಪ್ರಯಾಸಾನುಭವ' ವನ್ನು ಮಂಡಿಸಿದರು.

ಶ್ರೀಮತಿ ಪದ್ಮ ಪ್ರಭಾಕರ್‌ರವರು ಸೊಗಸಾಗಿ ಕುಮಾರವ್ಯಾಸ ಭಾರತದ ಮೊದಲ ಒಂದೆರಡು ಪದ್ಯಗಳನ್ನು ಸುಶ್ರಾವ್ಯವಾಗಿ ಹಾಡಿ ಮನರಂಜಿಸಿದರು ನಂತರ ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ಚಂದ್ರಶೇಖರ್ ಮತ್ತು ಇತರರ ಒತ್ತಾಯದ ಮೇರೆ ಮತ್ತೆ ಕೊನೆಯ ಒಂದೆರಡು ಪದ್ಯಗಳನ್ನೂ ಹಾಡಿದರು. ಒಂದೂವರೆಗೆ ಭೋಜನ ವಿರಾಮ ಗಡದ್ದಾಗಿತ್ತು. ಹೋಳಿಗೆ ಬಿಸಿಬೇಳೇಬಾತ್, ಉಪ್ಪಿನ ಕಾಯಿ, ಕೋಸಂಬರಿ, ಮೊಸರನ್ನ ತಿಂದನಂತರದ ಅವಧಿ ಹೇಗಿರುವುದೋ ನಿದ್ರಿಸುವವರಿಗೆ ಜೋಗುಳ ಹಾಡಿದಂತೆಯೋ, ಅವರ ನಿದ್ದೆಯನ್ನು ಹಾಳುಗೆಡವಿ ಬಡಿದೆಚ್ಚರಿಸುವಂತಿರುವುದೋ ಎನ್ನುವ ಕುತೂಹಲದಲ್ಲಿ ನಾನಿದ್ದೆ. ಆದರೆ ಅಂತಹ ಬೋರು ಎನ್ನಿಸಲಿಲ್ಲ. ವಿ. ನಾರಾಯಣರಾವ್ ರವರ ರೈತರ ಬಗೆಗಿನ ಕವನ ಹಾಗೂ ಇತರ ಕವನಗಳಂತೂ ನಿಜಕ್ಕೂ ಮುದುಡುತ್ತಿದ್ದ ಚೇತನವನ್ನು ಜಾಗೃತಗೊಳಿಸಿತು. ಶ್ರೀಕಂಠ ಗುಂಡಪ್ಪನವರ ಭಾವಪೂರ್ಣ ಹನಿಗಳು ಬಹಳ ಚೆಸಿಯಾಗಿದ್ದವು. ಅದರಲ್ಲೂ 'ಕವನ ಹೇಗಿರಬೇಕು' ಎಂಬ ವಿಷಯವಾಗಿ ಉಪನ್ಯಾಸ ನೀಡಿದ ಪ್ರಕಾಂಡಪಂಡಿತರೊಬ್ಬರು ಕವನ ಬರೆಯುವುದು ಅಷ್ಟು ಸುಲಭವಲ್ಲ, ಪ್ರಾಸಕ್ಕಾಗಿಯೇ ಕವನ ರಚಿಸಬಾರದು ಎಂದು ಮುಂತಾಗಿ ಉಪದೇಶ

ನೀಡಿ, ನವಕವಿಗಳ ಉತ್ಸಾಹಕ್ಕೆ ತಣ್ಣೀರನ್ನೇ ಎರಚಿದರು ಎನ್ನಿಸಿತು. ತಮ್ಮ ಪುಟ್ಟ ಭಾಷಣ ಮುಗಿದ ತಕ್ಷಣ ತಮ್ಮ ಪ್ರಕಟಣೆಗಳ ಮಾರಾಟ ಪ್ರಾರಂಭಿಸಿ, ಕೆಲಕಾಲದ ನಂತರ ಸೆಲ್ಫೀ ತೆಗೆಸಿಕೊಂಡು ನಿರ್ಗಮಿಸಿಯೇಬಿಟ್ಟುದು ಸರಿಕಾಣಲಿಲ್ಲ. ಸಭಾ ಮರ್ಯಾದೆಯ ಬಗೆಗೆ ಇನ್ನೂ ತಿಳುವಳಿಕೆಬೇಕಾಗಿದೆ ಎನ್ನಿಸಿತು.ತಮ್ಮ ಕಥೆಯನ್ನೋ ಕವನವನ್ನೋ ಓದಿಮುಗಿಸಿಬಿಟ್ಟರೆ ಮುಗಿಯಿತು ಎಂದು ಭಾವಿಸಿ ಇತರರು ತಮ್ಮ ಬರಹಗಳನ್ನು ಪ್ರಸ್ತುತಪಡಿಸುವಿಕೆಯನ್ನೂ ಗಮನಿಸದೆ, ಇತರರೊಡನೆ ದೊಡ್ಡ(?)ದನಿಯಲ್ಲಿ ಸಂಭಾಷಣೆಯಲ್ಲಿ ತೊಡಗುವುದು ಮುಂತಾದವು ಓದುತ್ತಿರುವವರಿಗೆ ಕಿರಿಕಿರಿ ನಿರಾಸೆಯುಂಟುಮಾಡುತ್ತದೆ ಎಂಬ ಸಾಮಾನ್ಯ ತಿಳುವಳಿಕೆಯೂ ಇಲ್ಲದುದು ಸಖೇದಾಶ್ಚರ್ಯ ತಂದಿತು. ತಮ್ಮ ಮೊಬೈಲನ್ನು ಸೈಲಂಟ್‌ಮೋಡಿನಲ್ಲಿಡಬೇಕೆಂಬ ಸರಳ ನಿಯಮವೂ ಕೆಲವರಿಗೆ ತಿಳಿದಿರುವುದಿಲ್ಲ. ಒಂದು ಚೇತೋಹಾರಿ ಸಂಗತಿ ಎಂದರೆ ಮುಂದಿನ ನಾಲ್ಕು ತಿಂಗಳ ಕಾರ್ಯಕ್ರಮಕ್ಕೆ ಆಯೋಜಕರು ತಾವಾಗಿಯೇ ಮುಂದೆಬಂದುದು ಒಂದು ಸಂತಸ. ನನ್ನ ಗೆಳೆಯ ಕೃಷ್ಣ ಮಂಡಿಸಿದ ಗರಮಾಗರಂ ಕಡಲೇ ಪುರಿ ಹರಟೆ ಶ್ಲಾಘನೆಗಳಿಸಿದರೆ, ನನ್ನ ಲೇಖನ ಗಮನದಿಂದ ತಪ್ಪಿಸಿಕೊಂಡುದು ನನಗೆ ಸ್ವಲ್ಪ ಬೇಸರದ ಸಂಗತಿ. 'ಮರಕ್ಕಿಂತ ಮರ ದೊಡ್ಡದು' ಎನ್ನುವಂತೆ ಅಲ್ಲಿ ಸೇರಿದ್ದವರ ಸಾಹಿತ್ಯ ಕೃಷಿ ಗಮನಿಸಿದಾಗ ನಾವೇನು ಮಹಾ ಎನ್ನುವ ಭಾವನೆ ಮೂಡಿದುದರಲ್ಲಿ ಆಶ್ಚರ್ಯವಿಲ್ಲ. 70ನೇ ವರ್ಷದಲ್ಲಿ ನಿವೃತ್ತಿನಂತರ ಎಂ.ಎ (ಕನ್ನಡ) ಮಾಡಿಕೊಂಡವರು, ದಿವಂಗತ ಎಚ್ಚೆಸ್ಕೆಯವರೊಡನೆ ಒಡನಾಟ ನಡೆಸಿದ ಬ್ಯಾಂಕು ಅಧಿಕಾರಿಗಳು, ಎರಡೆರಡು ಸ್ನಾತಕ ಪದವಿಗಳನ್ನು ಪಡೆದವರು ಮುಂತಾದವರು. ಸಮಯ ಮಧ್ಯಾಹ್ನ 3 ರ ಗಡಿ ದಾಟುತ್ತಿದ್ದಂತೆ ಸಾಹಿತ್ಯಾಭಿಮಾನಿಗಳ ಆಸಕ್ತಿ ಕುಂಟುತ್ತಾ ಸಂಖ್ಯೆ ಕಡಿಮೆಯಾಗುತ್ತಾ ಬಂತು. ಮಧ್ಯೆ ಮಧ್ಯೆ ಅವರಿವರ ಪರಿಚಯ ಮಾಡಿಕೊಡುತ್ತಿದ್ದ ಶ್ರೀ ರಂಗನಾಥ್ ಉರುಫ್ ರಂಗಣ್ಣ ಮೊದಲ ಸಲ ಪರಿಚಿತರಾದರು. ಕೊನೆಗೆ ಶ್ರೀ ಚಂದ್ರಶೇಖರ್‌ರವರ ಮುಕ್ತಾಯದ ನುಡಿಗಳನ್ನಾಲಿಸಲೂ ಜನರಿಲ್ಲದಂತಾಗುವ ಪರಿಸ್ಥಿತಿಯನ್ನು ಶ್ರೀ ಶ್ರೀಕಂಠಗುಂಡಪ್ಪ ಹೊರಹೋಗಲು ಸಿದ್ಧರಾಗಿದ್ದ ನಾಲ್ಕಾರು ಮಂದಿಯನ್ನು ಗದರಿ ಕೂಡಿಸಿದರು. ಹಾಜರಿದ್ದ ಹತ್ತು ಮಂದಿಗೇ ಅವರವರು ಮಂಡಿಸಿದ್ದ ಕವನ, ಕಥೆ, ಹರಟೆಗಳ ಬಗೆಗೆ ಸಂಕ್ಷಿಪ್ತವಾಗಿ ವಿಶ್ಲೇಷಣೆಯನ್ನು ಮಾಡಿಮುಗಿಸಿದರು ಶ್ರೀ ಚಂದ್ರಶೇಖರ್. ಕೊನೆಗೂ ನನ್ನ ಕಥೆಯ ಬಗೆಗಿನ ವಿಶ್ಲೇಷಣೆ ಬರದಿದ್ದಾಗ ನಾನೇ ಅಲ್ಲಿಂದ ಹೊರಡುವಾಗ ಸಿದ್ಧಪಡಿಸಿದ್ದ ಪ್ರತಿಯನ್ನು ಶ್ರೀ ಚಂದ್ರಶೇಖರರ ಕೈಗೆ ತುರುಕಿ, ಮತ್ತೊಮ್ಮೆ ಓದಿನೋಡಿ ಎಂದು ಹೊರಬಂದೆ. ಒಂದು ರೀತಿಯಲ್ಲಿ

ಈ 'ಸಾಹಿತ್ಯ ದಾಸೋಹ' ಪುಸ್ತಕ ಪ್ರಕಟಿಸಿರುವವರಿಗೆ ತಮ್ಮ ಪ್ರಕಟಣೆಗಳ ಪ್ರಚಾರಕ್ಕಾಗಿ ಒಂದು ಉತ್ತಮ ವೇದಿಕೆ ಎನ್ನಿಸಿದುದರಲ್ಲಿ ಆಶ್ಚರ್ಯವಿಲ್ಲ. ಮೊದಲ ಭೇಟಿಯಾದುದರಿಂದ ಕೆಲವರ ಹೆಸರುಗಳು ಮಾತ್ರ ನೆನಪಿನಲ್ಲಿದೆ.

ಮಾರನೇ ಬೆಳಿಗ್ಗೆ ಕೃಷ್ಣ ಫೋನಾಯಿಸಿ ಶ್ರೀ ಚಂದ್ರಶೇಖರ್ ನಿನ್ನ ಬರಹಗಳನ್ನು ಓದಿ ನಿನಗೆ ಮೆಸೇಜ್ ಕಳುಹಿಸಿದ್ದಾರೆ ಎಂದು ತಿಳಿಸಿದ. ಆದರೆ ಆ ಮೆಸೇಜ್ ಬರಲೇ ಇಲ್ಲ. ಅದು ಎಂತಹ ಮೆಸೇಜ್ ಇರಬಹುದು ಎಂಬ ಗೊಂದಲದಲ್ಲಿ ನಾನಿದ್ದಾಗ, ಸ್ವತಃ ಚಂದ್ರಶೇಖರ್ ಅವರೇ ಫೋನ್ ಮಾಡಿ 'ಮೆಸೇಜ್ ಮಾಡಲು ಪ್ರಯತ್ನಿಸಿದೆ, ಆದರೂ ಅದು ತಮಗೆ ತಲುಪುತ್ತಿಲ್ಲ' ಎಂದು ನನ್ನ ಬರಹದ ಬಗೆಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ನಾನು ನನಗೆ ತೋಚಿದಂತೆ 'ಸಾಹಿತ್ಯ ದಾಸೋಹ'ದ ಬಗೆಗೆ ಬರೆದಿದ್ದ ಬರಹದ ಪೂರ್ವಾರ್ಧವನ್ನು ಓದಿದ್ದ ಶ್ರೀ ಚಂದ್ರಶೇಖರ್‌ರವರು ಉತ್ತರಾರ್ಧದ ಬಗೆಗಿನ ತಮ್ಮ ಕುತೂಹಲ ವ್ಯಕ್ತಪಡಿಸಿ ಪೂರ್ಣಪಾಠವನ್ನು ಕಳುಹಿಸಿಕೊಡಿ ಎಂದೂ ಸೂಚಿಸಿದರು. ನಾನಂತೂ ಮುಂದಿನ ತಿಂಗಳ 'ಸಾಹಿತ್ಯ ದಾಸೋಹ' ಎಲ್ಲಿ ಎಂಬ ಬಗೆಗೆ ಕುತೂಹಲ ತಳೆದಿದ್ದೇನೆ.

(ವಿ.ಸೂ: ಈ ಬರಹದಲ್ಲಿ ಯಾರ ಮನಸ್ಸಿಗಾದರೂ ನೋವುಂಟುಮಾಡಿದ್ದರೆ ಕ್ಷಮೆಯಿರಲಿ.)

# 22. ಲೈವ್ ಫುಡ್ ಫ್ಯಾಸನ್ ಅಂದ್ರೆ ....

ಈ ಮೂರ್ನೇ ತರಹದ್ ವಿಜ್ಞಾನಿಗಳ ಬಗ್ಗೆ ಏಳೋದ್ನೆ ಮರ್ತುಬಿಟ್ಟಿದ್ದೆ, ಅವ್ರು ಬಲೇ ಭಯಂಕರ ಪ್ರಯೋಗಗಳನ್ನು ಮಾಡ್ತಾ ಇರ್ತಾರೆ. ನಮ್ಮ ಕಲಿತ ಎಂಗಸ್ರತರಾ ಒಸರುಚಿಮಾಡಿ ಗಂಡಂದಿರಿಗೆ ಬಲವಂತವಾಗಿ ತಿನ್ನಿಸಿ  ಶಭಾಸ್‌ಗಿರೀನೂ ಬಲವಂತವಾಗಿ ಪಡ್ಕೊಳ್ತಾರಲ್ಲಾ ಹಾಗೆ. ನಮುಗ್ಬೇಕಾದ ಆಹಾರಾನ ಅದ್ರಲ್ಲಿನ ನೀರ್ನಂಸಾನೆಲ್ಲಾ ತೆಗ್ದುಹಾಕಿ, ರಟ್ಟಿನತರಾ ಮಾಡಿ ಮಾರ್ತಾರಂತೆ. ಯಾರಿಗೆ ಒಟ್ಟೆ ಅಸಿವಾಯ್ತದೋ ಅವ್ರು, ಒಂಚೂರು ಆಹಾರ್ದರಟ್ಟನ್ನು ಬಾಯೊಳಗೆ ಹಾಕ್ಕೊಂಡು, ಒಂದು ತಂಬಿಗೆ ನೀರು ಹುಯ್ಕೊಂಡ್ಬುಟ್ರೆ, ಒಟ್ಟೆ ಒಳ್ಗೆ ಅದು ಅರಳಿ, ಒಟ್ಟೆ ತುಂಬ್ದಂಗಾಯ್ತದಂತೆ. ಚಿಕ್ಕಕ್ಕಿಗೆ ಚಿಕ್ಬೂರು, ದೊಡ್ಡೋರಿಗೆ ದೊಡ್ಬೂರು. ಆ ರಟ್ಟಿನಾಹಾರ್ದಾಗೆ ಎಲ್ಲ ಇಟಮಿನ್ನುಗಳನ್ನೂ, ಪ್ರೋಟೀನುಗಳನ್ನೂ ಸೇರಿಸವ್ರಂತೆ. ಊಟ, ತಿಂಡಿ ಅಳಸೋಗೋ ಗೋಜೇ ಇರೊಲ್ಲ ಅಲ್ವಾ ?  ಇತ್ತೀಚೆಗೆ ವಿದೇಶಗಳಲ್ಲಿ ಒಂದು ಒಸತರಾ ಊಟದ ಪದ್ಧತಿ ಫ್ಯಾಸನ್ನಾಗಿದೆಯಂತೆ. ಮಾಂಸ ಮಡ್ಡಿ ತಿನ್ನೋವರಿಗಂತೂ ಹಬ್ಬದೂಟ; ಸಣ್ಣಣ್ಣ ಉಳುಗಳ್ನ ಜೀವಂತವಾಗಿ ಗಾಜಿನ ಜಾಡಿಗಳಲ್ಲಿ ಇಟ್ಟಿರ್ತಾರಂತೆ. ನೀವು ಯಾವ ಜಾಡಿಕಡೆ ಕೈತೋರಿಸ್ತೀರೋ, ಆ ಜಾಡಿಯಲ್ಲಿರುವ ಉಳುಗಳ್ನ ನಿಮ್ಮೆದ್ರಿಗೇ ಉರಿದು ಉಪ್ಪುಖಾರ ಹಾಕಿ ತಿಂಡಿ ತಟ್ಟೆ ತುಂಬಾ ಕೊಡ್ತಾರಂತೆ. ಸೊಳ್ಳೆ, ನೊಣ, ತಿಗ್ಣೆ, ಜಿಗ್ಣೆ, ಜಿರ್ಲೆ ತರ್ಲೆ ಇನ್ನೂ ಮುಂತಾದ ಉಳುಗಳ್ನ ಅದ್ರಲ್ಲಿ ಆಕಿರ್ತಾರಂತೆ. ಕೋಸಂಬ್ರೀನೋ, ಚಟ್ನೀನೋ ಮಾಡ್ಕೋಬೌದಂತೆ. ಮೊದ್ಮೊದ್ಲು ತಿನ್ನೋಕೆ ಮುಜುಗರ ಅನ್ನಿಸಿದರೂ, ಅಭ್ಯಾಸ ಆದ್ಮೇಕೆ ತುಂಬ ಮಜಾ ಕೊಡ್ತದಂತೆ.

'ಲೈವ್ ಫುಡ್ ಪ್ಯಾಸನ್' ಅಂದ್ರೆ ಜೀವಂತ ದೊಡ್ಡೊಡ್ ಪ್ರಾಣಿಗಳ್ನ ಮತ್ತರೋ ಔಷಧಿಕೊಟ್ಟು ಮಸಗ್ಸಿರ್ತಾರಂತೆ. ನೀವು ಗಾಜಿನ ತೊಟ್ಟೀಲಿರೋ ಪ್ರಾಣಿಗಳ ಕಡೆ ಕೈ ತೋರ್ಸಿದ್ರೆ, ಅವನ್ನು ತಟ್ಟೇಮೇಲೆ ಕುಂಡಿಸ್ಕೊಂಡ್ಬಂದು, ನಿಮ್ಮೆದುರ್ಗೆ ಟೇಬಲ್ ಮೇಲೆ ಒಲೆ ಹಚ್ಚಿ, ಅಲ್ಲೇ ಅವುಗಳ ತಲೆ, ಕಾಲು, ನಾಲ್ಗೆ, ಗುರ್ದಾ,ಎದೆ ಕಡಿದು ಬೇಯ್ಸಿ ತಿನ್ನೋಕೊಡ್ತಾರಂತೆ ! ನಮ್ ಘುಟ್ಪಾತ್ ಕ್ಯಾಂಟೀನ್‌ನಾಗೆ ಬಿಸಿಬಿಸಿ ಇಡ್ಲಿ, ವಡೆ, ಚಿತ್ರಾನ್ನ ಮಾಡಿಕೊಟ್ಟಹಾಗೆ. ನಿಜ್ವಾಗ್ಲೂ ನಾವೆಷ್ಟು ಮುಂದ್ವರ್ದಿದ್ದೀವಲ್ವಾ, ಈ ತರಹದ ಪ್ರಾಣಿಗಳ ಪ್ರಾಣ ತೆಗೆಯೋದ್ರಲ್ಲಿ ?

## 23. ಆಧಾರ್ ಎಂಬ ಮಂತ್ರದಂಡ:

ಯುಪಿಎ ಸರ್ಕಾರದ ಅವಧಿಯಲ್ಲಿ ನಂದನ್ ನಿಲೇಕಣಿ ನೇತೃತ್ವದಲ್ಲಿ ರೂಪಿತವಾದ ಮಂತ್ರದಂಡವೇ 'ಆಧಾರ್'. ಆದರೆ ಅದರ ಜಾರಿಗೊಳಿಸುವಲ್ಲಿ ಮಾತ್ರ ನಾವು ಉದ್ದೇಶಪೂರ್ವಕವಾಗಿ ಎಡವಿದ್ದೇವೆ. ಎಲ್ಲ ರೀತಿಯ ಭ್ರಷ್ಟಾಚಾರಗಳನ್ನೂ ನಿಯಂತ್ರಿಸಿ, ಶುದ್ಧ ಭಾರತವನ್ನು ನಿರ್ಮಿಸಲು ಹಾಲಿ ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಎನ್‌ಡಿಎ ಸರ್ಕಾರವೂ ಆದಷ್ಟು ಮಟ್ಟಿಗೆ ಈ ಆಧಾರ್ ಅನ್ನು ಬಳಕೆಮಾಡಿಕೊಳ್ಳುತ್ತಲಿದೆ. ಇದು ಒಂದು ಒಳ್ಳೆಯ ಬೆಳವಣಿಗೆ. ಹುಟ್ಟಿದ ಪ್ರತಿ ಮಗುವಿಗೂ ಕಡ್ಡಾಯವಾಗಿ ಆಧಾರ್ ಮಾಡಿಸಬೇಕು. ಶಾಲೆಗೆ ಸೇರಿಸುವುದರಿಂದ ಹಿಡಿದು ಅಂತಿಮವಾಗಿ ಸತ್ತಾಗ ಸಂಸ್ಕಾರ ಮಾಡುವವರೆಗೂ ಆ ಆಧಾರ್ ಸಂಬಂಧ ಕಲ್ಪಿಸಬೇಕು. ಆಧಾರ್ ಕಾರ್ಡ್ ಮಾಡುವಾಗ ಪ್ರತಿಯೊಬ್ಬ ವ್ಯಕ್ತಿಯ ಎಲ್ಲ ಹತ್ತು ಕೈ ಬೆರಳುಗಳ ಮತ್ತು ಕಣ್ಣಿನ ಛಾಯಾಪ್ರತಿಯನ್ನು ಪಡೆದಿರುವುದರಿಂದ, ಮುಂದೆ ಅಂತಹವರು ಯಾವುದೇ ಅಪರಾಧ ಕ್ರಿಯೆಯಲ್ಲಿ ತೊಡಗುವುದರಿಂದ ತಪ್ಪಿಸಬಹುದು. ಏಕೆಂದರೆ ಅಪರಾಧ ಎಸಗಿದವನ ಬೆರಳಚ್ಚು ಈಗಾಗಲೇ ಸಂಗ್ರಹಿಸಲ್ಪಟ್ಟಿರುವುದರಿಂದ ಅವನನ್ನು ಕೂಡಲೇ ಪತ್ತೆಹಚ್ಚಬಹುದಾಗಿದೆ. ಈ ರೀತಿ ಅಪರಾಧ ಪ್ರವೃತ್ತಿಯನ್ನು ತಡೆಯಲು ಈ ಆಧಾರ್ ಸಹಕಾರಿಯಾಗಿದೆ. ಬರೀ 'ಆಧಾರ್' ಬಳಸಿ ಯಾವರೀತಿ ಭ್ರಷ್ಟಾಚಾರ ನಿಯಂತ್ರಿಸಬಹುದು ಎಂಬ ಬಗ್ಗೆ ಒಂದು ಉದಾಹರಣೆ. ಪ್ರತಿ ಪ್ರಜೆಗೂ ಕಡ್ಡಾಯವಾಗಿ 'ಆಧಾರ' ಬಳಸಿ ಅವನ ಹೆಸರಿನಲ್ಲಿರುವ ಹೊಲಿಯ ಜಮೀನು, ಸ್ಥಿರ ಆಸ್ತಿ ಬಗೆಗೆ ಮಾಹಿತಿಯನ್ನು ಸಬ್ ರಿಜಿಸ್ಟ್ರಾರ್ ಕಛೇರಿಯಿಂದ ಪಡೆದು ಅದಕ್ಕೆ

ಆಧಾರ್ ಲಿಂಕ್ ಮಾಡಬೇಕು; ಅಂತೆಯೇ ಪಟ್ಟಣಗಳಲ್ಲಿ ಕಾರ್ಮಿಕರಾಗಿರುವವರ ಬಗೆಗೆ ಮಾಹಿತಿ ಸಂಗ್ರಹಿಸಿ, ಅದಕ್ಕೂ 'ಆಧಾರ್' ಲಿಂಕ್ ಮಾಡಿದರೆ, ಆಟೋಮೇಟಿಕ್ಕಾಗಿ ಅವರು ಪಟ್ಟಣವಾಸಿಗಳೇ, ಗ್ರಾಮಸ್ಥರೇ ಎನ್ನುವ ಬಗೆಗೆ ಸಮಗ್ರ ಮಾಹಿತಿ ಲಬ್ಯವಾಗುತ್ತದೆ. ಇದರಿಂದ ಪಟ್ಟದಲ್ಲಿ ಕೆಲಸದಲ್ಲೋ, ರಾಜಕೀಯದಲ್ಲೋ ಇದ್ದು ವರ್ಷಕ್ಕೆ ಒಮ್ಮೆಯೋ, ಐದು ವರ್ಷಕ್ಕೆ ಒಮ್ಮೆಯೋ ಹಳ್ಳಿಗೆ ಹೋಗಿ ಮತಚಲಾಯಿಸಿ 'ಗ್ರಾಮಸ್ಥ' ಎಂದು ಬಿಂಬಿಸೋವರ ನಿಜಬಣ್ಣ ಬಯಲಾಗುತ್ತೆ. ಅಂತೆಯೇ ಈ ಕಪ್ಪುಹಣ ಸಂಗ್ರಹವನ್ನು ತಡೆಯಲು ಈ 'ಆಧಾರ'ನ್ನು ಒಂದು ಪರಿಣಾಮಕಾರಿ ಆಧಾರ ಒದಗಿಸಿದಂತಾಗುತ್ತದೆ.

ಇನ್ನು ಸಂಬಳ ಸವಲತ್ತುಗಳ ವಿಚಾರ. ಯಾವುದೇ ಮೂಲದಿಂದ ಆದಾಯ ನೀಡಬೇಕಾದರೂ ಅದನ್ನು ಆಧಾರ್ ಸಂಖ್ಯೆಗೆ ಲಿಂಕ್ ಮಾಡಬೇಕು. ಸ್ಥಿರ ಆಸ್ತಿ, ಐಷಾರಾಮಿ ವಸ್ತುಗಳ ಖರೀದಿಗೂ ಆಧಾರ್ ಸಂಬಂಧ ಕಲ್ಪಿಸಿದರೆ ಬೇನಾಮಿ ವ್ಯವಹಾರಗಳಿಗೆ ಸಾಕಷ್ಟು ಕಡಿವಾಣ ಹಾಕಿದಂತಾಗುತ್ತದೆ. ಕಾರ್ಖಾನೆಗಳಲ್ಲಿ ಕಛೇರಿಗಳಲ್ಲಿ ಸಂಬಳ ವಿತರಿಸುವಾಗ ಚೆಕ್ಕಿನ ರೂಪದಲ್ಲೋ, ನೇರವಾಗಿ ಬ್ಯಾಂಕಿನ ಖಾತೆಗೆ ವರ್ಗಾವಣೆ ಮಾಡುವ ಪದ್ಧತಿ ಕಡ್ಡಾಯವಾಗಿ ಜಾರಿಗೆ ತರಬೇಕು. ಕಂಪನಿಗಳು ಲಾಭಾಂಶ ವಿತರಣೆಮಾಡುವಾಗಲೂ ಆಧಾರ್ ಲಿಂಕ್ ಮಾಡುವುದರಿಂದ ವರ್ಷದಲ್ಲಿ ಒಬ್ಬ ವ್ಯಕ್ತಿ ಯಾವಯಾವ ಮೂಲಗಳಿಂದ ಆದಾಯ ಗಳಿಸಿರುತ್ತಾನೆ ಎಂಬ ವಿಷಯ ಸುಲಭ ವಾಗಿ ಕ್ರೋಢೀಕರಿಸಬಹುದಾಗಿದೆ.

ಮತ ಹಾಕಲು ವೋಟರ್ ಐಡಿ ಜೊತೆಗೆ ಆಧಾರ್ ಸಂಖ್ಯೆಯನ್ನು ಜೋಡಿಸಿ, ಸಬ್ಸಿಡಿಗಳನ್ನು ಪಡೆಯಲು ಆಧಾರ್ ಲಿಂಕಿಸಿ; ಕೆಲಸಕ್ಕೆ ತೆಗೆದುಕೊಳ್ಳುವಾಗ ಆಧಾರ್ ಜೋಡಿಸಿ. ಯಾವುದೇ ಸಾರಿಗೆಯಲ್ಲಿ ಪ್ರಯಾಣದ ಟಿಕೇಟನ್ನು ಪಡೆಯುವಾಗ, ಪಾಸ್‌ಪೋರ್ಟ್, ವೀಸಾ ನೀಡುವಾಗ ಆಧಾರ್ ಜೋಡಿಸಿ. ಡ್ರೈವಿಂಗ್ ಲೈಸನ್ಸ್ ನೀಡುವಾಗ ಆಧಾರ್ ಸಂಖ್ಯೆ ನಮೂದಿಸಿ. ಸಬ್ಸಿಡಿಗಳನ್ನು ಪಡೆಯಲು ಆಧಾರ್ ಲಿಂಕಿಸಿ; ಕೆಲಸಕ್ಕೆ ತೆಗೆದುಕೊಳ್ಳುವಾಗ ಆಧಾರ್ ಜೋಡಿಸಿ. ಯಾವುದೇ ಸಾರಿಗೆಯಲ್ಲಿ ಪ್ರಯಾಣದ ಟಿಕೇಟನ್ನು ಪಡೆಯುವಾಗ, ಪಾಸ್‌ಪೋರ್ಟ್, ವೀಸಾ ನೀಡುವಾಗ ಆಧಾರ್ ಜೋಡಿಸಿ. ಡ್ರೈವಿಂಗ್ ಲೈಸನ್ಸ್ ನೀಡುವಾಗ ಆಧಾರ್ ಸಂಖ್ಯೆ ನಮೂದಿಸಿ.

ಆಧಾರ್‌ನ ಹಾಲಿ ಕೆಲವು ದೋಷಗಳನ್ನು ತೆಗೆದುಹಾಕುವುದರಿಂದ ತೆರಿಗೆಗಳ್ಳತನದ ವಿರುದ್ಧ ಅದು ಒಂದು ಪ್ರಭಲ ಅಸ್ತ್ರವಾಗಿ ಪರಿಣಮಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಮೊದಲನೆಯದಾಗಿ ಜನ್ಮದಿನಾಂಕದ ವಿಚಾರ.

ವ್ಯಕ್ತಿಯ ಜನ್ಮ ದಿನಾಂಕವನ್ನು ಪೂರ್ಣವಾಗಿ ನಮೂದಿಸದೇ ಬರೀ ಜನ್ಮ ವರ್ಷ ದಾಖಿಲಾಗುತ್ತಿರುವ ವಿಚಾರ. ಇದರ ಬದಲು ಪೂರ್ಣ ಜನ್ಮ ದಿನ, ತಿಂಗಳು ಮತ್ತು ವರ್ಷ ದಾಖಲುಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು. ಎರಡನೆಯದಾಗಿ ಆಧಾರ್ ಕಾರ್ಡ್ ನೀಡುವ ಮೊದಲು ಆ ವ್ಯಕ್ತಿ ನಿಜವಾಗಿ ತಿಳಿಸಿರುವ ಸ್ಥಳದಲ್ಲಿ ವಾಸವಾಗಿರುವನೇ ಇಲ್ಲವೇ ಎನ್ನುವುದನ್ನು ಖಚಿತಪಡಿಸಿ ಕೊಳ್ಳಬೇಕು. ತಾತ್ಕಾಲಿಕ ವಸತಿ ಹೊಂದಿರುವವರಿಗೆ ಆಧಾರ್ ಕಾರ್ಡ್ ನೀಡಿದರೆ ಅದಕ್ಕೆ ಅವರ ಖಾಯಂ ನಿವಾಸದ ಮಾಹಿತಿಯೂ ಸೇರ್ಪಡೆಯಾಗಬೇಕು. ಮೂರನೆಯದಾಗಿ ಭಾರತೀಯರಲ್ಲದವರಿಗೆ ಆಧಾರ್ ನೀಡಬಾರದು. ಇಂದು ಬಾಂಗ್ಲಾ ದೇಶೀಯರು, ಪಾಕೀಸ್ತಾನಿಗಳು, ಸಿಂಹಳೀಯ ತಮಿಳರು ಮುಂತಾದವರೆಲ್ಲರಿಗೂ ಆಧಾರ್ ನೀಡಿರುವ ಉದಾಹರಣೆಗಳು ನಮ್ಮ ಮುಂದಿವೆ. ಇದರಿಂದ ಭಾರತೀಯರಿಗೆ ಸಿಗಬೇಕಾದ ಸವಲತ್ತುಗಳು ಪರದೇಶೀಯರ ಪಾಲಾಗುವ ಸಾಧ್ಯತೆಗಳಿರುತ್ತವೆ.

ಹಾಲಿ ನರೇಂದ್ರಮೋದಿ ಸರ್ಕಾರ ನಿಧಾನವಾಗಿಯಾದರೂ ಆಧಾರ್ ಮಹತ್ವವನ್ನು ಅರಿತುಕೊಂಡು, ಅದನ್ನು ಹಲವಾರು ಯೋಜನೆಗಳಲ್ಲಿ ಜಾರಿಗೆ ತರಲು ಉತ್ಸುಕತೆಯನ್ನು ತೋರುತ್ತಿರುವುದು ಸ್ವಾಗತಾರ್ಹ ಸಂಗತಿ. ಈ ದಿಸೆಯಲ್ಲಿ ನ್ಯಾಯಾಲಯಗಳು ಅಡ್ಡಗಾಲು ಹಾಕದೇ ತಮ್ಮ ಬೆಂಬಲವನ್ನೂ ನೀಡಿದರೆ ಅದು ಒಂದು ಯಶಸ್ವೀ ಯೋಜನೆ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಚುನಾವಣೆಗಳಲ್ಲಿ ಮತದ ಬ್ಯಾಂಕಿಗಾಗಿ ನಕಲಿ ಆಧಾರ್ ನೀಡಿಸುವುದು ಮುಂತಾದ ಕ್ರಿಯೆಗಳನ್ನು ಪತ್ತೆಹಚ್ಚಿ ಮಟ್ಟಹಾಕಿದಲ್ಲಿ 'ಆಧಾರ್' ನಿಜಕ್ಕೂ ಒಳ್ಳೇ ಆಧಾರವಾಗುವುದು ಖಚಿತ.

## 24. ಈ ಭಾರಿ ಗಣರಾಜ್ಯೋತ್ಸವ ಹೀಗಿತ್ತು.

ಜನವರಿ 26ನೇ ತಾರೀಖು ದೇಶದ ಎಲ್ಲ ಕಡೇನೂ ಗಣರಾಜ್ಯೋತ್ಸವ ಆಚರಿಸೋ ಹಂಗೇ ನಮ್ಮ ಮಂಡ್ಯದಲ್ಲೂ ಆಚರಿಸಿದ್ರು. ಆದ್ರೆ ಇಲ್ಲೀದೇ ಒಂದು ಸ್ಪೆಸಾಲಿಟಿ. ಪ್ರತಿ ವರ್ಷ ಸ್ಟೇಡಿಯಂನಲ್ಲಿ ಬಾವ್ಟ ಹಾರಿಸಿದ್ರೆ, ಈ ವರ್ಷ ಸ್ಟೇಡಿಯಂ ತುಂಬಾ ಚಪ್ರದ ಕೆಲ್ಸ ನಡಿಸ್ತಾಯಿದ್ರು, ನಾವೇನೋ ಇನ್ ಡೋರ್ ಬಾವ್ಟ ಪ್ರೋಗ್ರಾಂ ಇರ್ಬೋದೂ ಅನ್ಕೊಂಡ್ರೆ, ಅಲ್ಲ, ಅದು ಯಾವ್ದೋ ಖಾಸ್ಗಿಪಾರ್ಟಿಫಂಕ್ಷನ್ನು ಮಾಡೋಕಂತೆ.ಆದ್ದರಿಂದ ಬಾವ್ಟ ಹಾರ್ಸೋ ಕಾರ್ಯಕ್ರಮವನ್ನೇ ಪೋಲೀಸ್‌ಪೆರೇಡ್‌ಗ್ರೌಂಡಿಗೆ ವರ್ಗಾಯಿಸ ಲಾಯಿತು. ಅಲ್ಲೋ ಪೆರೇಡಿಗೇ ಜಾಗಸಾಲೋಕಿಲ್ಲ, ಇನ್ನು ಈ ಪಬ್ಲಿಕ್ ಪಂಕ್ಷನ್ ಅಂದ್ರೆ ಸುಮ್ಕೇನಾ. ಸ್ಕೂಲ್ ಮಕ್ಕಳ್ದು ಮಾಸ್‌ಡ್ರಿಲ್ ಮಾಡ್ಲೋಕೆ ಜಾಗ ಸಾಲ್ತಾಯಿರಲಿಲ್ಲ. ನೋಡೋವರಿಗೆ ಜಾಗ ಕಡಿಮೆ ಮಾಡಿ ಮಕ್ಕಳ್ ಮಾತ್ರ ಗ್ರೌಂಡಿನಲ್ಲಿರೋಹಂಗಾಯ್ತು. ಇನ್ನು ಸಂಜೆ ಮುಂದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಮಾಮೂಲಾಗಿ ಬಳಸ್ತಾಯಿದ್ದ ರೈತ ಸಭಾಂಗಣದ್ದು ಅದೇ ಕೇಸೇಯಾ! ಯಾರೋ ಬುಕ್ಮಾಡಿದ್ದರಂತೆ. ಆಗ ತಲೆ ಕೆರಕೊಂಡ ಇಲಾಖೆ ಅಧಿಕಾರಿಗಳು ಕಲಾಮಂದಿರಕ್ಕೂ, ಗುರುಭವನಕ್ಕೂ ಅಲೆದಾಡಿ ಕೊನೆಗೆ ಚೌಡಯ್ಯನವರ ವಿವೇಕಾನಂದ ಮಂದಿರಕ್ಕೆ ಫೇರಾಯಿಸಿದರು.

ಇದರಿಂದ ರೋಸೋದ ಅಧಿಕಾರಿಗಳು ಇನ್ಮುಂದ್ಕೆ ಸರ್ಕಾರೀ ಸಮಾರಂಭಗಳು ಇರೋಜಿನ ಯಾರೂ ಸಭಾಂಗಣವನ್ನಾಗಲೀ, ಸ್ಟೇಡಿಯಂ ಆಗಲೀ ಖಾಸಗಿಯವರಿಗೆ ಬಾಡಿಗೆಗೆ ಕೋಡೋಕ್ಮುಂಚೆ ನಮ್ಮನ್ನ ಕೇಳ್ಬೇ ಕೊಡಕೂಡದೆಂಬ ಸೈಲೆಂಟ್ ಠರಾವು

ಪಾಸುಮಾಡಿಕೊಂಡರಂತೆ! ಅಂದು ಸಂಜೆ ರೈತ ಸಭಾಂಗಣದಲ್ಲಿ ಗೆಳೆಯರ ಬಳಗದವರು ಭಾವಗೀತೆ ಕಾಂಪಿಟಸನ್ನು ನಡೆಸಿ ಬ್ಹೌಮಾನ ಸಮಾರಂಭ ಮಡಗಿಕೊಂಡವ್ರೆ. ಪರಊರಿಂದ ಬರಬೇಕಾದ ಅತಿಥಿಗಳು ಕೈಕೊಟ್ಟಿದ್ದರಿಂದ ಲೋಕಲ್ ಅತಿಥಿ ಹಿಡಿದು ಭಾಸ್ನ ಕುಟ್ಟಿಸಿದರು. ಆ ಅತಿಥಿಯೋ ಭಾವಗೀತೆ, ಭಾವ, ಗೀತೆ, ಗೀತೇಲಿ ಆ ಕವಿ ಇಟ್ಟಿರೋ ಒಳರ್ಥ ಹೊರರ್ಥ ಇನ್ನೂ ಏನೇನೋ ಹೇಳಿ ಮಿದುಳೊಳಕ್ಕೆ ಕೈ ಇಳಿಸಿಬಿಟ್ಟರು. ಈ ಭೀಕರ ಭಾಷ್ಣ ಕೇಳಿದ ಸಭಿಕರು ಕೆಲವರು ಗೊರಕೆ ಸುರುಅಚ್ಕೊಂಡ್ರೆ, ಮತ್ತೆ ಬೇರೇ ಊರಿಂದ ಬಂದವ್ರು ಬಹುಮಾನಕ್ಕೂ ಕಾಯದೇ ಬಸ್ಸು ಹತ್ತಿದರು. ಅಂತೂ ಹಾಡೋಕ್ಕೇ ಬಂದಿದ್ದವರು ತಾವು ಹಾಡೋಕ್ಮುಂಚೆ ಕವಿಯ ಯಾವ ಭಾವ ಹಿಡ್ಕೋಬೇಕು, ಯಾವ್ದನ್ನು ಬಿಡಬೇಕೂ ಅನ್ನೋ ಗೊಂದಲಕ್ಕೆ ಬಿದ್ದು, ಇನ್ನುಮುಂದೆ ಹಾಡೋದ್ನೇ ನಿಲ್ಸೋ ನಿರ್ಧಾರ ಕೈಗೊಂಡರು ಅನ್ಸತ್ತೆ. ಇಂಗೆ ಒಂದೇ ಜಿನ ಎರಡ್ಮೂರು ಕಾರ್ಯಕ್ರಮ ಮಡಗಿದ್ರೆ, ಜನ ಯಾವುದನ್ನ ನೋಡೋದೂ, ಯಾವುದನ್ನ ಬಿಡೋದೂ. ಅದಕ್ಹೋದ್ರೆ ಇದಿಲ್ಲ, ಇದಕ್ಬಂದ್ರೆ ಅದಿಲ್ಲ. ಇನ್ನು ಸಂಜೆ ಗಣರಾಜ್ಯೋತ್ಸವ ಕಾರ್ಯಕ್ರಮ ಕೊಡ್ಬೇಕಾಗಿದ್ದ ಮಕ್ಕಳು ಎಲ್ಲಿಗೋಗ್ಬೇಕೂ ಅನ್ನೋದು ಗೊತ್ತಾಗ್ದೆ ಕಲಾಮಂದಿರಕ್ಕೂ, ಗುರುಭವನಕ್ಕೂ ಓಡಾಡಿ ವಿವೇಕಾನಂದ ಮಂದಿರ ಎಲ್ಲಿದೆ ಅನ್ನೋದು ತಿಳೀದೆ, ರಸ್ತೇಲಿ ತ್ರಿಸಂಕು ಹಾಗೆ ನಿಂತಿದ್ದವು. ವಿವೇಕಾನಂದ ಮಂದಿರದಲ್ಲಿ ಅಧಿಕಾರಿಗ್ಳು ಅವರ ಮಕ್ಳು ಕ್ಯಾಸೆಟ್ಹಾಕೊಂಡು ಕುಣಿದು ಕುಂತಿದ್ದವರನ್ನೂ ಕುಪ್ಪಳಿಸೋ ಅಂಗೆ ಮಾಡಿದ್ರು ಅಂತ ಮಾರನೇ ದಿನ ಪೇಪರ್ನಲ್ಲಿ ನೋಡಿದ್ದು ನ್ಯೂಸು. ಇಷ್ಟೆಲ್ಲಾ ಗೊಂದಲದಲ್ಲಿ ಮಕ್ಕಳಿಗೆ ಸರ್ಟಿಫಿಕೇಟ್ ಕೊಡೋದೂ ಮರೆತೋಯ್ತು, ಅಧಿಕಾರಿಗಳಿಗೆ. ಮಾರ್ನೇ ದಿನ ಕಾಲೇಜಿನಲ್ಲಿ ಸರ್ಟಿಫಿಕೇಟ್ ಈಸ್ಕೊಳ್ಳೀ ಅಂತ ಕೊನೇಲಿ ಅನೌನ್ಸ್ ಮಾಡಿದ್ರೂ ಅದು ಹೆಚ್ಚಿನವರಿಗೆ ಕೇಳಿಸ್ಲೇಇಲ್ಲ. ಒಂದು ವಾರವಾದ್ರೂ ಮಕ್ಕಳು ಅವರ ಪೋಷಕರು, ಸರ್ಟಿಫಿಕೇಟ್ ಉಡ್ಕೊಂಡು ಅಲ್ಲಿದ್ದೇ ಅಲ್ಲಿದ್ದು, ಸುಸ್ತಾಗಿದ್ದೇ ಸುಸ್ತಾಗಿದ್ದು. ಇಂತಾ ಅಧ್ವಾನದ ಸಮಾರಂಭ ನಿಮ್ಮೂರಲ್ಲಾಗಿತ್ತಾ?

## 25. ಜಾಗ ಇದ್ದಲ್ಲೆಲ್ಲಾ ಸಸಿ ನೆಡ್ತೀವಿ

ಮೊನ್ನೆ ನಮ್ಮೇರಿಯಾದಾಗೆ ಹತ್ತದಿನ್ನೈದು ಜನಾ ಒಚ್ಕೋರಿಂದಾ ಗುಂಡಿ ಒಡ್ಕೊಂಡ್ ಓಯ್ತಾಯಿದ್ರು. ಇದ್ಯಾಕ್ರಲಾ ಮಗಾ ಅಂತ್ಕೇಳಿದ್ರೂ ಉತ್ರಾ ಕೊಡೋಕ್ಕೂ ಪುರ್ರೊತ್ತಿಲ್ದವ್ರಂಗೆ ತಲೆ ಎತ್ತದೆ ಅಗೀತಾನೇ ಇದ್ರು, ಸುಂಸುಮ್ಕೆ ನಂ ಟೈಂ ವೇಸ್ಟ್ ಮಾಡ್ಬೇಡಾ ಕಣಪ್ಪೋ, ನಾವು ಕೋಟಿ ಸಸಿ ನಡೋ ಮಂದಿಗಾಗಿ, ಗುಂಡಿ ಒಡೀತಾ ಇದೀವಿ. ಎಲ್ಲೆಲ್ಲಿ ಖಾಲಿ ಜಾಗ ಕಾಣ್ತದೋ ಅಲ್ಲೆಲ್ಲಾ ಗುಂಡಿ ಒಡೀರಿ ಅಂತ ನಮ್ಮೆಜಮಾನ್ರು ಏಳವ್ರೆ, ಅಂಗೆ ನಾವು ಗುಂಡಿ ಒಡಿದ್ರೆ ತಾನೆ ನಮ್ ಜೀವ್ನ ಸಾಗೋದು; ಈ ಮಂದೀ ಕೋಟಿ ಸಸಿ ನೆಡೊಕಾಗೋದು, ಮಂತ್ರಿಗ್ಳು ತಮ್ಮ ಮಾತ ಉಳಿಸ್ಕಾಳಕ್ಕಾಗಾದು ಅಂತ ಕಿರ್ಲಿದ.

ಅಲ್ಲಾಕಪ್ಪಾ, ಒದ್ಸರೀನೂ ಇಂಗೇ ಗುಂಡಿ ತೋಡಿದ್ರಿ, ಸಸೀನೂ ನಟ್ಟಿದ್ರಿ, ಆಮೇಕೆ ಒಂದಪಾನೂ ಈ ಕಡೆ ತಲೆ ಆಕ್ಲಿಲ್ಲ, ನೆಟ್ಟಿದ್ ಸಸಿ ತಲೆ ಎತ್ಲಿಲ್ಲ. ಆ ಸಸೀನೆ ಸರ್ಯಾಗಿ ಉಳ್ಸಿದ್ರೆ ಅದೇ ಈಟೊತ್ಗೆ ಆಳುದ್ದದ ಮರ್ವಾಯ್ತಿರಲಿಲ್ವ ಅಂತ ರೇಗಿದೆ. ಅದಕ್ಕವನು ರೀ ನಿಮಗೇನು ಬೇರೆ ಕೇಮೆ ಇಲ್ವ, ಒಳ್ಳೇ ಕಾಲೇಜ್ಮಕ್ಳು ಅದೇನೋ ಎನ್.ಎಸ್.ಎಸ್. ಕ್ಯಾಂಪಂತ ಅಳ್ಳೀಗಳ್ಗೆ ಓಗಿ, ಬೀದಿ ಗುಡ್ಸಿ, ಬಚ್ಚಲ್ತೊಳೆದು ಬರ್ತೀವಿ ಕಣ್ರಪ್ಪಾ ಅಂದ್ರೆ, ಮತ್ಯಾವಾಗ ಬತ್ತೀರಿ, ಮುಂದೆ ಕಸ ಬಾಚಾಕೆ! ಅಂದಂಗೆ ಏಳ್ತೀರಲ್ರೀ. ಅದೆಲ್ಲಾ ನಿಮ್ಕೆಲ್ಸ, ನಮ್ಕೆಲ್ಸ ಅಲ್ಲ. ನಮ್ಕೇನಿದ್ರೂ ಗುಂಡಿ ಒಡ್ಯೋದು, ಸಸಿ ನೆಡೋದು, ಅದರ ಲೆಕ್ಕ ಕೊಟ್ಟು ಕೂಲಿ ಪಡ್ಯೋದು ಅಷ್ಟೇಯಾ ಅಂದ, ಮುಖಕ್ಕೆ ಹೊಡೆದಂತೆ. ಒಂದ್ಕಡೆ ಸರ್ಕಾರ ಗಿಡ ನೆಡಿ ಗಿಡ ನೆಡಿ, ಮನೆ ಮುಂದೊಂದು ಗಿಡ ನೆಡಿ, ಮನೆ ಹಿಂದೊಂದ್ ಗಿಡ ನೆಡಿ ಅಂತ ಎಲ್ಲಾ ಮಾಧ್ಯಮಗಳಲ್ಲಿ

ಹಾಡ್ಕೇಳಿಸ್ತಿರ್ತದೆ. ಮರ ಬೆಳ್ಸಿ, ಮರ ಉಳ್ಸಿ ಅಂತ ಬೊಬ್ಬೆ ಹಾಕ್ತದೆ. ಇನ್ನೊಂದ್ಕಡೆ, ಬೆಳೆದಿರೋ ಮರಗಳ್ನ ರಸ್ತೆ ಅಗ್ಲಿಸಬೇಕು ಅಂತಾನೋ ಲೈಟ್ಕಂತೀಗೆ ಅಡ್ಡಬಂದದೆ ಅಂತಾನೋ, ಕಾರ್ ಪಾರ್ಕಿಂಗಿಗಾಗೋ ಹಿಂಗೆ ಯಾವ್ಯಾವ್ದೋ ಕಾರ್ಣ ಕೊಟ್ಟು ಕೊಡ್ಲಿಹಾಕಿ ಕೆಡವ್ತಿರ್ತದೆ. ಪ್ರತಿಭಟನೆ ಮಾಡೋವ್ರ ಬಾಯ್ಮುಚ್ಚಾಕೆ ಒಂದು ದೊಡ್ಡ ಮರ ಕಡಿದಿದ್ ತಪ್ಪಿಗೆ ಪ್ರಾಯಶ್ಚಿತ್ತ ಅಂತ ಪಕ್ಕದಲ್ಲೇ ಒಂದು ಸಣ್ಣ ಸಸಿ ನೆಟ್ಬಿಡೋದೂ ಉಂಟು. ಒಂದ್ಮರಾ ಓಯ್ತು, ಒಂದ್ಸಸಿ ಬಂತು, ಡುಂಡುಂ. ಅಂತೂ ಇಂತೂ ಲೆಕ್ಕ ಸರಿಹೋಯ್ತಲ್ಲಾ! ಎಷ್ಟೇ ದುಡ್ಡು ಒಡದ್ರೂ, ಲೆಕ್ಕ ಸರಿಮಾಡೋದ್ರಲ್ಲಿ ನಿಸ್ಸೀಮರು ಈ ನನ್ಮಕ್ಕಳು!

ತಮ್ಮನೇ ಕಟ್ಟಿಸ್ಕೊಳ್ಳೋಕೆ ಸಾಕಷ್ಟು ಜಾಗಇಲ್ದಮಂದಿ ಮರ ಎಲ್ನೆಡಬೇಕು? ಇನ್ನೆಲ್ಲಿ, ಮನೆ ಮುಂದಿನ ಮುನ್ಸಿಪಾಲಿಟಿಗೆ ಸೇರಿದ ರಸ್ತೇಲಿ ಮರ ನೆಡ್ತಾರೆ. ಅದರ ಆರೈಕೇನೂ ಚೆನ್ನಾಗೇ ಮಾಡ್ತಾರೆ. ಹಿಂದೆಲ್ಲಾ ಸರ್ಕಾರವೇ ಮನೆಯಲ್ಲಿ, ಮನೆಮುಂದೆ ಬೆಳೆಸಿದ ಮರಗಳಿಂದ ಬರೋ ಆದಾಯದಲ್ಲಿ ಒಂದು ಪಾಲು ಆ ಮಾಲೀಕರಿಗೆ ಸೇರಬೇಕು ಅನ್ನೋ ಕಾನೂನೂ ಮಾಡಿದ್ದು ನೆನಪು. ಇದಕ್ಕೂ ಅವಕಾಶ ಇಲ್ಲದೇ ಇರೋರು ಮನೆ ಮಾಡಿ ಮೇಲೆ, ಅದೇ ಕುಂಡಗಳಲ್ಲಿ ಬೆಳೆಸ್ತಾರೆ ಕುಳ್ಮರಗಳನ್ನ, ಬೋನಸಾಯ ಅನ್ನೋ ಹೆಸರಿನಲ್ಲಿ. ಹೊರಗಿನ್ಮರದ ಫಲ ಇವ್ರಿಗೆ ಸಿಕ್ಕೋದಿಲ್ಲ (ಕಂಡವ್ರ ಪಾಲಾಯ್ತದೆ) ಒಳಗಿನ್ಮರ ನೆಳ್ನೀಡೋದಿಲ್ಲ, ಆದ್ರೆ ಪ್ರತಿವರ್ಷ ವನಮಹೋತ್ಸವ ಮಾತ್ರ ಭರ್ಜರಿಯಾಗಿ ಆಚರಣೆ ಆಯ್ತಾ ಇರ್ತದೆ. ಇದಕೇನಂತೀರಿ?

# 26. (ತಲೆ) ಹರಟೆ

ಶಾಲೆಗೆ ಹೋಗುತ್ತಿರುವಾಗ ನಾನು ಗೊರೂರು ರಾಮಸ್ವಾಮಿ ಐಯ್ಯಂಗಾರ್ಯರ 'ನಮ್ಮ ಎಮ್ಮೆಗೆ ಮಾತು ತಿಳಿಯುವುದೇ?' ಎಂಬ ಲೇಖನ ಓದಿದ್ದೆ. ಅದರಲ್ಲಿ ದಿನಂಪ್ರತಿ ಹಾಲುಕರೆಯುತ್ತಿದ್ದ ಮನೆಯಾಕೆ, ತವರಿಗೆಹೋದ ಸಂದರ್ಭದಲ್ಲಿ, ಮನೆಯಾತ ಹಾಲು ಕರೆಯಲು ಪಡುವ ಸಾಹಸದ ವಿವರಣೆ ಇತ್ತು. ಕೊನೆಗೆ ಮನೆಯಾಕೆಯ ಸೀರೆಯನ್ನುಟ್ಟು ಹಾಲುಕರೆದು ಇನ್ನೇನು ಮುಗಿಯಿತು ಎನ್ನುವಷ್ಟರಲ್ಲಿ ಹೊರಗಿನಿಂದ ಯಾರೋ ಕರೆದ ದನಿಗೆ ಇವ ಉತ್ತರಿಸಲು ಬಾಯ್ತೆರೆದಾಗ, ಆ ಧ್ವನಿಯನ್ನು ಗುರುತಿಸಿದ ಆ ಎಮ್ಮೆ ತನ್ನೆಲ್ಲ ಶಕ್ತಿಯನ್ನೂ ಒಗ್ಗೂಡಿಸಿ ಜಾಡಿಸಿ ಒದ್ದಿತಂತೆ. ಆಗ ಆತ 'ನಮ್ಮ ಎಮ್ಮೆಗೆ ಮಾತು ತಿಳಿಯುವುದೇ' ಎಂದು ಅರಚುತ್ತಾ, ಕರೆದಿದ್ದ ಹಾಲನ್ನೆಲ್ಲಾ ಚೆಲ್ಲಿಕೊಂಡು ಅಷ್ಟುದೂರ ಹೋಗಿಬಿದ್ದನಂತೆ. ಈ ಕೆಳಗಿನ ಘಟನೆಯೂ ಒಂದು ಎಮ್ಮೆಗೆ ಸಂಬಂಧಿಸಿದುದು.

ಕಾರು ತೆಗೆದುಕೊಂಡ ಹೊಸತು, ಹೊಸದಾಗಿ ಕೊಂಡ ಹಳೇ ಕಾರಿನಲ್ಲಿ ಹೆಂಡತಿ, ಮಕ್ಕಳನ್ನು ಕೂರಿಸಿಕೊಂಡು ಬೆಟ್ಟದ ದೇವಾಲಯಕ್ಕೆ ಹೋಗಿ ಪೂಜೆ ಮಾಡಿಸಿಕೊಂಡು, ವಾಪಸು ಬಂದು ಹೋಟಲಿಗೆ ಹೋಗಿ ಭರ್ಜರಿ ತಿಂಡಿಮುಗಿಸಿ ಮನೆಗೆ ವಾಪಸಾಗಬೇಕೆನ್ನುವಷ್ಟರಲ್ಲಿ ಶುರುವಾಯಿತು ಭರ್ಜರಿ ಮಳೆ. ಎಂಥಹಾ ಮಳೆ ಅನ್ನುತ್ತೀರಿ. ಮುಂದಿನ ಹತ್ತಡಿ ದೂರಕಾಣದಾದಷ್ಟು ಬಿರುಮಳೆ. ಮಳೆ ನಿಲ್ಲುವವರೆಗೆ ಒಂದು ಬದಿಯಲ್ಲಿ ನಿಲ್ಲುವುದೋ. ಅಥವಾ ಹೇಗಾದರೂ ಮಾಡಿ ಮನೆ ತಲುಪಿಕೊಳ್ಳುವುದೋ ಅನ್ನುವ ದ್ವಂದ್ವದಲ್ಲಿದ್ದೆ. ಮಳೆ ನಿಲ್ಲದೇ ಇದ್ದರೆ. ರಾತ್ರಿಯೆಲ್ಲಾ ರಸ್ತೆಬದಿಯಲ್ಲೇ ನಿಲ್ಲಬೇಕಾಗಿ ಬಂದರೆ ಅನ್ನುವ

ಅನುಮಾನ ಬೇರೆ ಕಾಡಿತು. ಏನಾದರೂ ಆಗಲೀ, ಮನೆಗೆ ಸೇರಿಕೊಳ್ಳುವುದೇ ಸರಿ ಎಂಬ ತೀರ್ಮಾನಕ್ಕೆ ಬಂದು ಕಾರು ಓಡಿಸಲು ಪ್ರಾರಂಭಿಸಿದೆ.

ನಿಧಾನವಾಗಿ ಮುಂದೆ ಚಲಿಸುತ್ತಾ ಎರಡು ಮೂರು ತಿರುವು ತಿರುವುತ್ತಿದ್ದಂತೆ ಇದ್ದಕ್ಕಿದ್ದಂತೆ ಮುಂದೆ ಒಂದು ಕಪ್ಪುಗೋಡೆ ಧುತ್ತೆಂದು ಪ್ರತ್ಯಕ್ಷವಾದಂತ ಅನುಭವದೊಂದಿಗೆ ಧಢ್ ಎಂಬ ಶಬ್ದ, ಏನೂ ಕಾಣುತ್ತಿಲ್ಲ; ಹಾಗೂ ಹೀಗೂ ಹಿಂದುಮುಂದು ಮಾಡಿಕೊಂಡು ಸ್ಟೀರಿಂಗ್ ತಿರುಗಿಸಿ ಮುಂದೆ ದಾಟಬಂದ ಸ್ವಲ್ಪದೂರದಲ್ಲೇ ಏನಾಯಿತೋ ಗೊತ್ತಿಲ್ಲ, ಕಾರು ಗಕ್ಕಂತ ನಿಂತುಬಿಟ್ಟಿತು. ನನಗೋ ಕಾರು ಓಡಿಸುವುದೊಂದು ಬಿಟ್ಟು ಮತ್ತೇನೂ ಗೊತ್ತಿಲ್ಲ. ರಿಪೇರಿ ಮಾಡಿಸಲು ಅಂದು ಹತ್ತಿರದಲ್ಲೆಲ್ಲೂ ಯಾವ ಮೆಕ್ಯಾನಿಕ್ ಗ್ಯಾರೇಜೂ ಕಾಣುತ್ತಿಲ್ಲ, ಜೊತೆಗೆ ಭಾನುವಾರದ ರಜಾದಿನ ಬೇರೆ. ಆ ಬಿರುಮಳೆಯಲ್ಲಿ, ಕತ್ತಲಲ್ಲಿ ಏನೂ ಮಾಡಲು ತೋಚಲಿಲ್ಲ. ಮನೆ ತಲುಪಲು ಇನ್ನೂ ಅರ್ಧ ಕಿ.ಮೀ. ಕ್ರಮಿಸಬೇಕು. ಕಾರು ಓಡುವಂತಿದ್ದರೆ ಮಾತ್ರ ಚೆನ್ನ, ಅದೇನಾದರೂ ಕೈಕೊಟ್ಟರೆ, ಯಾರಿಗೂ ಬೇಡ ಅದರ ಸಹವಾಸ, ಬರೀ ನರಕ. ನಮ್ಮ 12 ವರ್ಷದ ಮಗನನ್ನೇ ಸ್ಟೀರಿಂಗ್ ಹಿಡಿಯಲು ಕೂರಿಸಿದೆವು. ಅವನಿಗೂ ಕಾರು ಓಡಿಸುವುದು ಅಷ್ಟಾಗಿ ಗೊತ್ತಿರಲಿಲ್ಲ. ಹಿಡಿ ಅಂದುದಕ್ಕೆ ಸ್ಟೀರಿಂಗ್ ಹಿಡಿದು ಕುಳಿತ. ನಾವು ಗಂಡಹೆಂಡತಿ ಮತ್ತು 10 ವರ್ಷದ ಮಗಳು ಸೇರಿ ಅಲ್ಲಿಂದ ಸುಮಾರು ಅರ್ಧ ಕಿ.ಮೀ. ದೂರವಿದ್ದ ಮನೆಕಡೆಗೆ ಕಾರು ತಳ್ಳಲು ಶುರುಮಾಡಿ ಇನ್ನೇನು 100 ಗಜ ತಲುಪುವಲ್ಲಿ ಒಂದು ತಿರುವು ಬಂತು.

ಕಾರು ಸೊಟ್ಟಗೆ ರಸ್ತೆಬದಿಯ ಚರಂಡಿಕಡೆಗೆ ಚಲಿಸುವುದನ್ನು ಕಂಡ ಮಗ ಗಾಬರಿಯಿಂದ 'ಅಪ್ಪಾ, ಅಪ್ಪಾ ಕಾರು ಚರಂಡಿಗೆ ಬೀಳುತ್ತಿದೆ, ನೆಟ್ಟಗೆ ತಳ್ಳಪ್ಪಾ' ಎಂದು ಕೂಗತೊಡಗಿದ. ತಕ್ಷಣ ಕಾರುತಳ್ಳುವುದನ್ನು ನಿಲ್ಲಿಸಿ, ಅವನಿಗೆ ಕಾರು ರಸ್ತೆಯಲ್ಲಿ ಸರಿಯಾಗಿ ಚಲಿಸಲು, ಚಲಿಸದಿರಲೂ ನೀನೇ ಕಾರಣ, ಬೇಕಾದಲ್ಲಿ ಸ್ಟೀರಿಂಗ್ ತಿರುಗಿಸುವಂತೆ ತಿಳಿಸಿ, ಮತ್ತೆ ನಮ್ಮ ನೂಕುವಿಕೆ ಮುಂದುವರೆಸಿ, ಮನೆ ಸೇರುವಲ್ಲಿ ಆ ಮಳೆಯಲ್ಲೂ 'ಬೆವರ್ತರನ್ ಉರಗಪತಾಕನ್' ಎಂಬಂತಾಗಿತ್ತು ನಮ್ಮ ಸ್ಥಿತಿ. ಕಾರಿಗೆ ಏನು ಬಡಿಯಿತು, ಕಾರಿಗೇನಾಯಿತು ಎಂಬುದನ್ನು ನೋಡಲೂ ಸಾಧ್ಯವಾಗಲಿಲ್ಲ. ಸುಮ್ಮನೆ ಬಿದ್ದುಕೊಂಡೆವು ಅನ್ನಿ.

ಮಾರನೇ ಬೆಳಿಗ್ಗೆ ಕಾರಿಗೆ ಏನು ಬಡಿದಿತ್ತು ಎಂದು ಪರೀಕ್ಷಿಸಿದಾಗ ತಿಳಿದಿದ್ದು ಅದಕ್ಕೆ ಅಂಟಿದ್ದ ಸಗಣಿ, ಕೂದಲು ಇತ್ಯಾದಿ. ಆ ಗಬ್ಬು ವಾಸನೆಯಿಂದ ಅದೂ ಎಮ್ಮೆಯದೋ, ಕೋಣದ್ದೋ ಇರಬೇಕೆಂದು ತೀರ್ಮಾನಿಸಲಾಯಿತು. ಹೊಡೆತದ

ರಭಸಕ್ಕೆ ರೇಡಿಯೇಟರ್ ಪಂಚರ್ ಆಗಿ ನೀರು ಸೋರಿಹೋಗಿತ್ತು. ಆ ಆಕ್ಸಿಡೆಂಟ್ ವಿಷಯ ಆ ಹೊತ್ತಿನಲ್ಲಿ ಅಲ್ಲಿನ ಜನರಿಗೆ ತಿಳಿದಿದ್ದರೆ, ನಮ್ಮ ಗತಿ ಏನಾಗುತ್ತಿತ್ತೋ ಗೊತ್ತಿಲ್ಲ. ಮೊದಲೇ ಕೊಪ್ಪಲಿನ ಜನ, ಕೇಳಬೇಕೇ, ಸಣ್ಣಪುಟ್ಟ ವಿಷಯಗಳಿಗೂ ದೊಡ್ಡ ಗದ್ದಲವನ್ನೇ ನಡೆಸಿಬಿಡುವಂತಹವರು. ಮಳೆ ಜೋರಾಗಿದ್ದುದರಿಂದ ಅವರೆಲ್ಲಾ ಮನೆಯೊಳಗೆ ಸೇರಿಕೊಂಡು, ಯಾವುದೋ ಟೀ.ವೀ ಧಾರಾವಾಹಿಯ ಪ್ರವಾಹದಲ್ಲಿ ಮುಳುಗಿ ಹೋಗಿದ್ದಿರಬೇಕು. ಹಾಗಾಗಿ ನಾವು ಬಚಾವಾಗಿದ್ದೆವು.

ಆ ಮೂಕಪ್ರಾಣಿಯ ಬಗೆಗೆ ಕರುಣೆ ಉಕ್ಕಿತು ಅದು ಬದುಕಿತೋ ಇಲ್ಲವೋ, ಅಥವಾ ಗಾಯಗೊಂಡು ಬಿದ್ದಿದೆಯೋ ಎಂಬ ಕುತೂಹಲ ಇದ್ದರೂ, ಅದರ ಬಗೆಗಿನ ಮಾಹಿತಿ ಪಡೆಯಲು ಆ ಪ್ರದೇಶಕ್ಕೆ ಹೋಗಲು ಏನೋ ಒಂದು ತರಹಾ ಅಂಜಿಕೆ. ಹೋದರೂ 'ಕಳ್ಳನ ಮನಸ್ಸು ಹುಳ್ಳಹುಳ್ಳಗೆ' ಅಂತಾರಲ್ಲಾ ಹಾಗೆ ಎಲ್ಲರೂ ನನ್ನನ್ನೇ ಅನುಮಾನಾಸ್ಪದವಾಗಿ ನೋಡುತ್ತಿರುವರೇನೋ ಅನ್ನುವ ಅನುಮಾನ. ಪೇಪರಿನಲ್ಲಿ ಸುದ್ದಿಯಾಗುತ್ತದೆಯೇನೋ ಅಂದರೆ, ಅದು ಮನುಷ್ಯ ಅಲ್ಲವಲ್ಲ, ಯಕಶ್ಚಿತ್ ಒಂದು ಪ್ರಾಣಿ! ಈಚಿನ ದಿನಗಳಲ್ಲಿ ಪತ್ರಿಕೋದ್ಯಮದಲ್ಲೂ ಪ್ರಿಫರೆನ್ಸ್‌ಗಳ ಬದಲಾವಣೆ ಆಗಿದೆ ಎನಿಸುತ್ತದೆ. ಆಕ್ಸಿಡೆಂಟಾಗಿ ಮನುಷ್ಯರು ಸತ್ತಾಗಲೂ, ಕೇಳುವ ಪ್ರಶ್ನೆ 'ಎಷ್ಟು ಮಂದಿ ಸತ್ತರು ಅಥವಾ ಗಾಯಗೊಂಡರು?' ಎನ್ನುವುದು. ಒಂದೆರಡು ಮಂದಿಯಾದರೆ, ಅದಕ್ಕಿಲ್ಲ ಕಿಮ್ಮತ್ತು. ನಾಲ್ಕೈದಾದರೂ ಹೆಣ ಬಿದ್ದಿರಬೇಕು, ಆವಾಗಲೇ ಅದು ಸುದ್ದಿ. ಹೀಗಾಗಿ ನಾವೂ ಆ ಪ್ರಾಣಿಯ ಸ್ಥಿತಿಯ ಕಡೆಗೆ ಗಮನಹರಿಸುವ ಬದಲು, ನಮ್ಮ ಕಾರಿನ ದುರಸ್ತಿಯ ಕಡೆಗೆ ಗಮನಹರಿಸಿದೆವೆನ್ನಿ.

ಪರಿಚಿತ ಮೆಕ್ಯಾನಿಕ್ಕನಿಗೆ ಫೋನಾಯಿಸಿದ ಎರಡು ಘಂಟೆಗಳ ಬಳಿಕ ಮನೆಗೆ ಬಂದ ಆ ಮೆಕ್ಯಾನಿಕ್ಕ, ಕಾರಿನ ಮುಂಭಾಗದ ಜೊತೆ ಹಿಂಭಾಗ, ಅಕ್ಕಪಕ್ಕ ಮೇಲೆ ಕೆಳಗೆ ಎಲ್ಲಕೋನಗಳಿಂದಲೂ ಆ ಕಾರನ್ನು ಪರೀಕ್ಷಿಸಿ, 'ಸಾರ್, ಇದು ಐನಾತಿ ರಿಪೇರಿ ಐಟಂ ಸಾರ್. ಬಂಡೆಗೋ ಇನ್ಯಾತಕ್ಕೋ ಹೊಡೆದಹಾಗಿದೆ. ಮೇಲೆ ಕಾಣೋದಕ್ಕಿಂತ ಒಳಗೆ ಹೆಚ್ಚಿಗೆ ಡ್ಯಾಮೇಜ್ ಆಗಿದೆ. ಏನಿಲ್ಲೆಂದರೂ ಒಂದು ವಾರದ ಕೆಲಸ ಆಗುತ್ತೆ' ಅನ್ನೋದೇ. ಈ ರಿಪೇರಿ ಕೆಲಸಾನೇ ಹಾಗೆ. ಆ ಪರಿಣಿತ ಏನು ಹೇಳಿದರೂ ನಾವು ತಲೆ ಅಲ್ಲಾಡಿಸಲೇಬೇಕು. ಏಕೆಂದರೆ ನಮಗೆ ಅದರ ಬಗೆಗೆ 'ಝೀರೋ' ನಾಲೆಜ್! ಅವಾಗ ಉಳಿದಿರುವುದೊಂದೇ ದಾರಿ. ಐಟಮ್ಮು ಡ್ಯಾಮೇಜು, ರಿಪೇರಿ ಇವುಗಳ ಬಗೆಗೆ ಮಾತನಾಡುವ ಬದಲು, 'ಎಷ್ಟಾಗುತ್ತೆ?' ಅನ್ನೋದು. ಅವನು ಬಾಯಲ್ಲೇ ಅಂದಾಜು ಲೆಕ್ಕಹಾಕಿ ಹೇಳಿದ

ಬಿಲ್ಲಿನ ಮೊತ್ತದಲ್ಲಿ ಸ್ವಲ್ಪ ತಗ್ಗಿಸಲು ಹಲ್ಲುಗಿಂಜೋದು. ಅಂತೂ ಇಂತೂ ಅವನೂ ನಾವೂ ಒಂದು ರಾಜಿ ಒಪ್ಪಂದಕ್ಕೆ ಬಂದು 'ಆರು ಸಾವಿರ' ಪೀಕಲು ಒಪ್ಪಿಗೆ ಸೂಚಿಸಿದೆವು. ಅಲ್ಲಾ ಎದುರಿಗೆ ಒಂದು ವಾಹನ ಬಂದರೆ, ಅತ್ತ ಸರಿಯಬೇಕು ಎಂದೂ ತಿಳಿಯುವುದಿಲ್ಲವೇ ಆ ಪ್ರಾಣಿಗೆ. ಅದಕ್ಕೇ ಇರಬೇಕು ಈ ಎಮ್ಮೆ, ಕತ್ತೆ ಇವಕ್ಕೆಲ್ಲಾ 'ಬ್ರೇಕ್ ಇನಸ್ಪೆಕ್ಟರ್' ಎನ್ನುವುದು. ಅದು ಬಿಡಿ, ಮನುಷ್ಯರೇ ಹಾರನ್ ಮಾಡಿದರೆ ಪಕ್ಕಕ್ಕೆ ಸರಿಯದೇ, ತಾವೇ ಕೈ ಅಡ್ಡತೋರಿಸಿ ನಡೆದುಹೋಗುವ ಈ ದಿನಗಳಲ್ಲಿ, ಯಕಶ್ಚಿತ್ ಒಂದು ಪ್ರಾಣಿ, ಅದೂ ಎಮ್ಮೆಯಂತಹುದು ನಮ್ಮ ಹಾರನ್ನಿಗೆ ಕೇರ್ ಮಾಡುತ್ತದೆಯೇ? ನಾವೇ ಕಾರನ್ನು ನಿಲ್ಲಿಸಿ, ಅವು ಹಾದುಹೋದ ಬಳಿಕ ಪ್ರಯಾಣ ಮುಂದುವರೆಸಬೇಕು, ಅಲ್ಲವೇ? ಇದು ಸಾಧ್ಯ ಆಗುವುದು, ನಮ್ಮ ಮುಂದೆ ಅದು ನಿಂತಿದೆ ಎನ್ನುವುದು ನಮಗೆ ಕಾಣಿಸಿದ ನಂತರದ ಮಾತು. ಕತ್ತಲೆಯಲ್ಲಿ ಧುತ್ತೆಂದು ಅದು ನಿಂತಿದ್ದರೆ ನಮಗೆ ಕಾಣುವುದಾದರೂ ಹೇಗೆ?

# 27. ಈ ಜಗತ್ತಿನಲ್ಲಿ 'ಬಿಟ್ಟಿ'ಯೆಂಬುದು ಯಾವುದೂ ಇಲ್ಲಾ!

ಸುಮಾರು 40 ವರ್ಷಗಳ ಹಿಂದೆ ನಾನು 'ಮಂಡ್ಯ ಜೇಸೀಸ್' ಎಂಬ ಅಂತರರಾಷ್ಟ್ರೀಯ ಯವಜನ ಸಂಸ್ಥೆಯಲ್ಲಿ ಸದಸ್ಯನಾಗಿದ್ದೆ. ಆ ಸಂದರ್ಭದಲ್ಲಿ ಚೆನ್ನೈನಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಿದ್ದೆ. ಆ ಸಮ್ಮೇಳನಕ್ಕೆ ನಾನು 'ಫ್ರೀ' ಆಗಿ ಹೋಗಿಬಂದಿದ್ದೆ. ಅಂದರೆ ನನ್ನ ಊಟ, ವಸತಿ, ಪ್ರಯಾಣ ವೆಚ್ಚ & ಸಮ್ಮೇಳನದ ಎಲ್ಲ ವೆಚ್ಚಗಳನ್ನೂ ನನ್ನ ಜೊತೆ ಬಂದಿದ್ದ ಮತ್ತೊಬ್ಬ ಸದಸ್ಯ ವಹಿಸಿಕೊಂಡಿದ್ದರು. ಆ ಸಮ್ಮೇಳನದಲ್ಲೇ ಅಂತರರಾಷ್ಟ್ರೀಯ ಅಧ್ಯಕ್ಷರಾಗಿದ್ದ ನನ್ನ ಹೆಸರಿನವರೇ ಆಗಿದ್ದ ಕುಮಾರ್ ಗೇರಾ ಎನ್ನುವವರು ಹೇಳಿದ ಮಾತು `There is nothing called FREE in this world'. ಆಗ ಆ ಮಾತನ್ನು ಲೈಟಾಗಿ ತೆಗೆದುಕೊಂಡಿದ್ದ ನನಗೆ ಅದರ ನಿಜವಾದ ಅರ್ಥ ಆಗಲು ಆರಂಭವಾದುದು 'ಬೆಳಕು' ಸಂಸ್ಥೆಗಳು 'ಸಂಪೂರ್ಣವಾಗಿ ಉಚಿತ ಸೌಲಭ್ಯ' ನೀಡುವಾಗ. ನಾವು 'ಫ್ರೀ' ಎಂದು ಬಳಸುತ್ತಿರುವ ಪ್ರತಿಯೊಂದು ವಸ್ತುವಿಗೂ, ಆಹಾರದ ಅಗುಳಿಗೂ ಇನ್ನಾರೋ ಹಣ ನೀಡಿರುತ್ತಾರೆ ಎಂಬ ಸತ್ಯ. ಇನ್ನು ಅನೇಕ ಸಂದರ್ಭಗಳಲ್ಲಿ 'ಫ್ರೀ' ಎನ್ನುವ ಜಾಹಿರಾತುಗಳ ಬಗೆಗೆ ನಿಮ್ಮ ಜೊತೆ ಹಂಚಿಕೊಳ್ಳಬೇಕೆನಿಸುತ್ತಿದೆ.

ಇಂದಿನ ದಿನಮಾನದಲ್ಲಿ ಪ್ರತಿದಿನ ಪ್ರತಿಕ್ಷಣ ಹಲವಾರು ಜಾಹಿರಾತುಗಳು ನಮ್ಮ ಗಮನವನ್ನು ಆಕರ್ಷಿಸುತ್ತಿರುತ್ತವೆ. ನಮ್ಮಂತಹ ಗ್ರಾಹಕರು ಹೇಗಾಗಿಬಿಟ್ಟಿದ್ದೇವೆಂದರೆ, ಏನೇ ವ್ಯಾಪಾರಮಾಡುವಾಗಲೂ ನಮ್ಮ ಖರೀದಿಯ ಜೊತೆಗೆ ಬರುವ 'ಬಿಟ್ಟಿ' ಯ ಬಗೆಗೇ ಆಲೋಚಿಸಿ ಆಕರ್ಷಿತರಾಗುತ್ತಿರುವುದು ಸರ್ವೇಸಾಮಾನ್ಯ. ಅಲ್ವಾ ಯಾಕೆ ಈ

ವ್ಯಾಪಾರಸ್ಥರು ನಮಗೆ 'ಬಿಟ್ಟಿ' ಕೊಡಬೇಕು ಅಥವಾ ಅವರು ಏಕೆ 'ಬಿಟ್ಟಿ' ಕೊಡುತ್ತಾರೆ ಎಂಬ ಬಗೆಗೆ ಕೆಲನಿಮಿಷಗಳಾದರೂ ಯೋಚಿಸಿದ್ದೇವೆಯೇ?

ಕೆಲವರ್ಷಗಳ ಹಿಂದೆ ನಾನೊಂದು ಬಟ್ಟೆ ಮಾರಾಟದ ಜಾಹಿರಾತು ನೋಡಿದ್ದೆ. ಅದರಲ್ಲಿದ್ದುದು 'ನಾನೊಬ್ಬ ಹುಚ್ಚ, ನನ್ನ ಬಳಿ ಇರುವ ಸಂಪತ್ತನ್ನೆಲ್ಲಾ ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನ್ನಿಸಿದೆ. ಆದುದರಿಂದ ಬಟ್ಟೆಬರೆಗಳನ್ನು ಹೋಲ್‌ಸೇಲ್ ದರದಲ್ಲಿ ಖರೀದಿಸಿ, ಶೇ.50ರ ಸೋಡಿಯಲ್ಲಿ ಮಾರಾಟಮಾಡಲು ನಿರ್ಧರಿಸಿದ್ದೇನೆ' ಈ ಜಾಹಿರಾತು ನೋಡಿದ್ದೇ ತಡಾ ಸಾವಿರಾರು ಮಂದಿ ಓಡೋಡಿಹೋಗಿ ಖರೀದಿಸಲು ಮುಗಿಬಿದ್ದಿದ್ದೇ ಬದ್ದಿದ್ದು.

ಮತ್ತೊಮ್ಮೆ ಈ 'ಬಾಟಾ ಕಂಪನಿ' ಯ ಜಾಹಿರಾತು ಬಗೆಗೆ ನೋಡಿರಬಹುದು. 'ವಿದೇಶಕ್ಕೆ ಕಳುಹಿಸಿ ತಿರಸ್ಕರಿಸಲ್ಪಟ್ಟ ಸರಕು' ಎಂಬ ಶೀರ್ಷಿಕೆಯಡಿ ಶೇ.50ರ ರಿಯಾಯಿತಿಯಲ್ಲಿ ಮಾರಾಟಮೇಳ ಏರ್ಪಡಿಸಿತ್ತು. ಆ ಪಾದರಕ್ಷೆಗಳ ತಿರಸ್ಕಾರಕ್ಕೆ ಕಾರಣ ಜೊತೆ ಚಪ್ಪಲಿಗಳಲ್ಲಿ ಹೊಂದಾಣಿಕೆಯಾಗದಿರುವುದು. ನಮ್ಮ ಜನ ಈ ಬಾಟಾ ಕಂಪನಿಯ ದರಗಳನ್ನು ಗಮನಿಸಿರಬಹುದು. 99ರೂ. 95ಪೈಸೆ, 199ರೂ. 95ಪೈಸೆ ಇತ್ಯಾದಿ. ಅವರು ಎಂದೂ ರಿಯಾಯಿತಿ ಮಾರಾಟ ಮಾಡುವವರಲ್ಲ. ಅಂತಹ ಕಂಪನಿ ಈಗೇಕೆ ರಿಯಾಯಿತಿ ಮಾರಾಟ ಮಾಡುತ್ತಿದೆ ಎಂದು ಒಂದು ಕ್ಷಣ ಯೋಚಿಸಿ. ಅವು 'ಆಫ್ರಿಕಾ ದೇಶ'ದ ನೀಗ್ರೋಗಳಿಗೆಂದು ಸಿದ್ಧಪಡಿಸಿದ್ದ ಪಾದರಕ್ಷೆಗಳು. ನಮ್ಮ ಜನ ಅವುಗಳನ್ನು ಮೆಟ್ಟಿಕೊಂಡು ನೋಡಿದರೆ ಅವು ಕಾಲಿಗಿಂತ ಅರ್ಧ ಮುಕ್ಕಾಲು ಇಂಚು ಜಾಸ್ತಿಯಾಗಿಯೇ ಇರುತ್ತಿದ್ದವು. ಆದರೂ ನಮ್ಮ ಜನ ರಿಯಾಯಿತಿಯಲ್ಲಿ ದೊರಕುತ್ತಿರುವುದರಿಂದ, ಅವುಗಳನ್ನೇ ಖರೀದಿಸಿ ಧರಿಸಿ ಖುಷಿಪಡುತ್ತಿದ್ದರು. ಕಂಪನಿಗೋ ನಮ್ಮ ಜನರ ಆಸೆಬುರುಕತನವನ್ನು ಬಳಸಿಕೊಂಡು ತಮ್ಮ ನಷ್ಟವನ್ನು ಅಷ್ಟರಮಟ್ಟಿಗಾದರೂ ತಪ್ಪಿಸಿಕೊಂಡಂತಾಯಿತು. ಇನ್ನು ಈ 'ಬಿಟ್ಟಿ' ವಿಚಾರ. 'ಒಂದು ಕೊಂಡರೆ ಮತ್ತೊಂದು ಫ್ರೀ' 'ಒಂದು ಸೋಪಿನ ಪೌಡರ್ ಪ್ಯಾಕೆಟ್ ಕೊಂಡರೆ ಒಂದು ಬಕೇಟ್ ಫ್ರೀ' 'ಒಂದು ಬಲ್ಬ್ ಕೊಂಡರೆ ಗಂಡಸರಿಗಾದರೆ ಒಂದು ಬ್ಲೇಡ್ ಫ್ರೀ, ಹೆಂಗಸರಿಗಾದರೇ ಒಂದು ಬಿಂದಿ ಫ್ರೀ' ಮುಂತಾದ ಜಾಹಿರಾತುಗಳನ್ನು ನೀವು ಆಗಾಗ ನೋಡಿರಬಹುದು. ಈ ಎಲ್ಲ ವ್ಯವಹಾರಗಳಲ್ಲೂ ಕೊಡುವವರು ಕಳಕೊಳ್ಳುವವರು ಅವರಲ್ಲ, ಅಷ್ಟು ಮೂರ್ಖರೂ ಅವರಲ್ಲ. 'ಬಿಟ್ಟಿ' ಎಂಬ ವಸ್ತುವಿನ ಬೆಲೆಯನ್ನು ಮತ್ತೊಂದರಲ್ಲಿ ಸೇರಿಸಿಬಿಟ್ಟಿರಬಹುದು. ಯಾವ ವಸ್ತುವಿಗೆ ಬೇಡಿಕೆ ಇರುವುದಿಲ್ಲವೋ ಅಥವಾ ಔಟ್ ಡೇಟೆಡ್ ಆಗಿರುತ್ತದೋ ಅವುಗಳನ್ನು 'ಬಿಟ್ಟಿ'ಯಾಗಿ ಕೊಡುವುದು ಅವರ ಉಪಾಯ.

ಇನ್ನು ನಮ್ಮ ಕ್ಷೇತ್ರಕ್ಕೆ ಬರೋಣ. ಎಲ್ಲ ಸೌಕರ್ಯವನ್ನೂ 'ಉಚಿತ'ವಾಗಿ ನೀಡುವ ಹಲವಾರು ಆಶ್ರಮಗಳಿವೆ. ಅವುಗಳಲ್ಲಿ ನಮ್ಮ 'ವೆಳಕು ಸಂಸ್ಥೆ' ಆಶ್ರಯದಲ್ಲಿ ನಡೆಸಲ್ಪಡುತ್ತಿರುವ ಆಶ್ರಮವೂ ಒಂದು. ಆಶ್ರಮವಾಸಿಗಳಿಗೆ 'ಉಚಿತ'ವಾಗಿ ಸಿಗುತ್ತಿರುವ ಸೌಲಭ್ಯಗಳನ್ನು ನಿಜವಾಗಲೂ ನೀಡುತ್ತಿರುವವರು ನಾವಲ್ಲ. ನಾವು ಬರೀ ಮಧ್ಯವರ್ತಿಗಳು. ಸ್ಥಳೀಯರು, ದೇಶಿಗರು, ವಿದೇಶದಲ್ಲಿರುವ ಅನೇಕರು ಧನ, ಧಾನ್ಯ, ವಸ್ತ್ರರೂಪದಲ್ಲಿ ಮಾಡುತ್ತಿರುವ ಉದಾರ ಸಹಾಯವೇ ನಮಗೆ ಈ 'ಉಚಿತ'ಸೇವೆ ನೀಡಲು ಶಕ್ತಿನೀಡುತ್ತಿರುವುದು. ಈ ನೆರವನ್ನು ನಾವೆಂದೂ ಮರೆಯಬಾರದು. ಅಂತೆಯೇ ಆಶ್ರಮವಾಸಿಗಳಿಗೂ ಈ ಉಚಿತ ಸೇವೆ ನಿಜವಾಗಲೂ ಉಚಿತವಲ್ಲ. ನಿಮ್ಮ ಕಣ್ಣುಗಳಿಗೆ ಕಾಣದ ಸಾವಿರಾರು ಮಂದಿ ನೀಡುತ್ತಿರುವ ಸೌಲಭ್ಯಗಳನ್ನು ದುರುಪಯೋಗಮಾಡಿಕೊಳ್ಳುವುದಾಗಲೀ, ವೇಸ್ಟ್ ಮಾಡುವುದಾಗಲೀ ನೀವು ಮಾಡುತ್ತಿರುವ ಸಮಾಜದ್ರೋಹ. ಮತ್ತೊಂದು ವಿಷಯ ಸಾರ್ವಜನಿಕರು ಆಶ್ರಮವಾಸಿಗಳಿಗಾಗಿ ನೀಡುವ ಸವಲತ್ತುಗಳು ಅವರಿಗೇ ಮೀಸಲಾಗಿರಬೇಕೇ ಹೊರತು ಮತ್ಯಾರಿಗೂ ಅಲ್ಲ ಎಂದು ಪಾರದರ್ಶಕವಾಗಿ ನಡೆದುಕೊಂಡಾಗ ಮಾತ್ರ ದಾನ ನೀಡಿದವರ ಆಶಯ ಸಾರ್ಥಕವಾಗುವುದು.

ನಾನು ಆಗಾಗ ಮನೆಬಾಗಿಲಿಗೆ ಬಂದು 'ನಮ್ಮ ಅನಾಥಾಶ್ರಮಕ್ಕೆ/ ವೃದ್ಧಾಶ್ರಮಕ್ಕೆ' ನಿಮ್ಮ ಕೈಲಾದ ಧನಸಹಾಯ, ಬಟ್ಟೆಬರೆಗಳಿದ್ದರೆ ಕೊಡಿ' ಎಂದು ಅಂಗಲಾಚುವವರನ್ನು ಕಂಡಿದ್ದೇನೆ. ನಮಗೆ ದಾನಿಗಳೇ ಹುಡುಕಿಕೊಂಡು ಬಂದು ಉದಾರ ನೆರವು ನೀಡುತ್ತಿರುವುದನ್ನು ಕಂಡಾಗ, ಆ ದೇವರಿಗೆ 'ಓ ದೇವರೇ, ನಮಗೆ ಅಂತಹ ಪರಿಸ್ಥಿತಿ ತರಬೇಡ' ಎಂದು ವಿನಂತಿಸಬೇಕೆನ್ನಿಸುತ್ತಿದೆ. ಸಮಾಜದಲ್ಲಿ ನೆರವು ನೀಡುತ್ತಿರುವವರ ಸಂಖ್ಯೆ ಇಷ್ಟೊಂದು ಇರುವಾಗ ಈ ರೀತಿ ಮನೆಮನೆಗೆ ಹೋಗಿ ಬೇಡುವ ಪರಿಸ್ಥಿತಿ ಏಕೆ ಬರುತ್ತಿದೆ? ಅಥವಾ ಇದೂ ಒಂದು ಸಂಪಾದನೆಯ ಮಾರ್ಗವೋ ತಿಳಿಯದಾಗಿದೆ. ಹಲವರು ಹೇಳುವಂತೆ ಈ ರೀತಿ ಸಂಗ್ರಹಿಸಿದ ವಸ್ತು, ವಸ್ತ್ರಗಳನ್ನು 5ರಿಂದ 10 ರೂ.ಗಳಿಗೆ ಹಳ್ಳಿಯ ಸಂತೆಗಳಲ್ಲಿ ಮಾರಾಟಮಾಡುವವರೂ ಇದ್ದಾರೆ ಎಂಬ ವಿಷಯ ಕೇಳಿ ಸಖೇದಾಶ್ಚರ್ಯ ಆಯಿತು.

ಮತ್ತೊಂದು ಅಂಶ ಎಂದರೆ ನಮ್ಮ ಮೇಲೆ ನಂಬಿಕೆಯಿಟ್ಟು ನೀಡಿದ ವಸ್ತುಗಳು ಅವುಗಳ 'ಜೀವಿತಾವಧಿ' ಮುಗಿಯುವ ಮುನ್ನ ಸದ್ಬಳಕೆ ಆಗಬೇಕು ಎನ್ನುವುದು. ಕೆಲಸಂದರ್ಭಗಳಲ್ಲಿ ನಮಗೆ ಹೆಚ್ಚುವರಿಯಾದ ದಿನಸಿಗಳನ್ನು ಅವುಗಳು ಉಪಯುಕ್ತ ಸ್ಥಿತಿಯಲ್ಲಿ ಇರುವಾಗಲೇ ಮತ್ತೊಂದು ಅಂತಹ ಸಂಸ್ಥೆಗಳಿಗೆ

ಕೈದಾಟಿಸುವುದೂ ಸತ್ಕಾರ್ಯ. ಅದುಬಿಟ್ಟು ನಮ್ಮ ಅವಶ್ಯಕತೆಗಳಿಗೂ ಮಿಕ್ಕಿರುವ ದಿನಸಿ ವಸ್ತುಗಳನ್ನು ಸಂಗ್ರಹಿಸಿಟ್ಟು, ಅವು ಹುಳುಬಿದ್ದಬಳಿಕ ಉದಾರವಾಗಿ ಅವನ್ನು ಇತರರಿಗೆ ನೀಡುವುದು ನಾವು ಮಾಡುವ 'ಅಕ್ಷಮ್ಯ ಅಪಚಾರ/ ಅಪರಾಧ' ಎನ್ನುವುದನ್ನು ಮರೆಯಬಾರದು. ಇದು ಸೇವಾಸಂಸ್ಥೆಗಳನ್ನು ನಡೆಸುತ್ತಿರುವ ಎಲ್ಲರಿಗೂ ಒಂದು ಕಿವಿಮಾತಾಗಬಾರದೇಕೆ?

## 28. ಆಗಸ್ಟ್ 15 ಕ್ಕೂ ಜನವರಿ 26 ಕ್ಕೂ ಯತ್ವಾಸ ಏನ್ಲಾ?

ಆಗಸ್ಟ್ 15 ಕ್ಕೂ ಜನವರಿ 26 ಕ್ಕೂ ಯತ್ವಾಸ ಏನ್ ಗೊತ್ತಾ ತಾತಾ? ಅಂದ ಮೊಮ್ಮೊಗಂಗೆ ನನ್ನಂತಾ ಅಳ್ಳೀಮುಕ್ಕ ಏನಾ ಏಳೋದೂ? ನಂಗೊತ್ತಿರೋಷ್ಟೇ ಏಳೋದಾದ್ರೆ ಆಗಸ್ಟ್ 15ಕ್ಕೆ ಪ್ರಧಾನಮಂತ್ರಿಗಳು ಬಾವ್ಟ ಹಾರ್ಸಿ ಭಾಷ್ಣಾ ಮಾಡ್ತಾರೆ; ಜನವರಿ 26ಕ್ಕೆ ರಾಷ್ಟ್ರಾಧ್ಯಕ್ಷರು ಬಾವ್ಟಾ ಹಾರ್ಸಿ ಕವಾಯತ್ ನೋಡ್ತಾರೆ. ದೇಶದ ಎಲ್ಲಾ ಕಡೇನೂ ಬಾವ್ಟಾ ಹಾರ್ಸಿ ಅಬ್ಬಾ ಆಚರಿಸಬೇಕೂಂತ ರೂಲೀಸು ಇರೋದ್ರಿಂದ ಇಷ್ಟಾ ಇಲ್ದೇ ಇದ್ರೂ ಕಾನೂನು ಪಾಲ್ಸೋಕ್ಕೋಸ್ಕರ ಕಛೇರಿ ಮುಖ್ಯಸ್ಥರು, ಶಾಲೆ ಹೆಡ್ಮಾಸ್ತರುಗಳು ಬಾವ್ಟಾ ಹಾರ್ಸಿ ಬೂಂದಿ ಹಂಚ್ತಾರೆ. ಬೂಂದಿ ಆಸೆಗೋಸ್ಕರನಾದ್ರೂನೂ ಮಕ್ಕಳು ಒಂದ್ಕಡೆಯಿಂದ ಇನ್ನೊಂದ್ಕಡೆಗೆ ಓಡೋಡಿ ಬಂದು ಬಾವ್ಟಾನ್ನೂ, ಬೂಂದಿತಟ್ಟೇನೂ ನೋಡ್ತಾ ನಿಂತ್ಕೋಳತ್ವೆ. ಇನ್ನೆಕೆಲ್ವುಕಡೆ ದೊಡ್ಡವರನ್ನು ಆಕರ್ಷಿಸೋದಕ್ಕೆ, ಬಾವ್ಟಾ ಹಾರಿಸಿದ್ಮೇಲೆ, ಭರ್ಜರಿ ತಿಂಡಿನೂ ಕೊಡಿಸ್ತಾರೆ, ಬೇರೇವ್ರ ತಲೇಮೇಲೆ ಕೈಮಡಗಿ! ಇದೆಲ್ಲಾ ಯಾಕಪ್ಪಾ ಅಂದ್ರೆ, ಪ್ರತಿವರ್ಷ ಬಾವ್ಟಾ ಹಾರಿಸ್ಟೇಕಾದ್ದು ಅನಿವಾರ್ಯ. ಅದಕ್ಕೇ ಜನಗಳ್ನ ಜಮಾಯಿಸೋದ್ಕೆ ಏನಾರಾ ಮಾಡ್ಲೇಬೇಕಲ್ಲಾ ಅದ್ಕೆ.

ಇದೆಂಗಾಯ್ತು ಅಂದ್ರೆ, ಇಂದ್ಕೆಲ್ಲಾ ಸಿನಿಮಾಟಾಕೀಸುಗಳಲ್ಲಿ ಸಿನಿಮಾ ಮುಗಿದತಕ್ಷಣ ರಾಷ್ಟ್ರಗೀತೆ ಆಕ್ಟೇಕು ಅಂತ ರೂಲ್ಸು ಮಾಡಿದ್ರು. ಅಲ್ಲಾ, ನಮ್ಮ ಜನಾನೂ ಎಂತಾವರೂ ಅಂದ್ರೆ, ಎರಡೂವರೆ ಘಂಟೆ ಸಿನಿಮಾ ನೋಡ್ಲೋಕೆ ತಯಾರಾಗಿರ್‍ತಿದ್ ಜನಾ, ಮೂರು ನಿಮಿಷದ ರಾಷ್ಟ್ರಗೀತೆ ಕೇಳೋಕೆ ತಾಳ್ಮೆ ಇರ್‍ತಿರಲಿಲ್ಲ. ಕೊನೇಸೀನ್‌ಮುಗೀತಿದ್ದಾಗೇ, ಬಾಗಿಲ ಕಡೆ ಓಡ್ತೋಗ್ತಿದ್ರು. ರಾಷ್ಟ್ರಗೀತೆ ಮೊದಲನೇಪಲ್ಲವಿ

ಮುಗಿಯೋದ್ರೊಳಗೆ, ಇಡೀ ಥಿಯೇಟರ್ ಖಾಲಿ ಆಗಿರ್‍ತಿತ್ತು. ಅಧಿಕಾರಿಗಳು, ಥೇಟರ್ ಮಾಲೀಕರಿಗೆ ಉಗೀತಿದ್ರು, ಇದನ್ ತಪ್ಪಿಸಿ, ಬಲವಂತವಾಗಾದ್ರೂ, ಜನರಿಗೆ ರಾಷ್ಟ್ರಗೀತೆ ಕೇಳಿಸಲೇಬೇಕೂಂತ ಈ ಮಾಲೀಕರು, ಶೋ ಇನ್ನೇನು ಮುಗೀತದೆ ಅನ್ನೋವಾಗ್ಲೇ, ಬಾಗಿಲುಗಳಿಗೆ ಚಿಲಕ/ಬೀಗ ಜಡೀತಿದ್ರು, ರಾಷ್ಟ್ರಗೀತೆ ಕೊನೇ ಚರಣ ಮುಗಿದಮೇಲೇ ಬೀಗ ಬಾಗಿಲು ತೆಗೀತಿದ್ದರು ಅದೇ ರೀತಿ ಈ ರಾಷ್ಟ್ರೀಯ ಹಬ್ಬಗಳನ್ನು ಕಡ್ಡಾಯವಾಗಿ ಆಚರಿಸುವ ಬಗ್ಗೆ ರೂಲ್ಸ್ ಮಾಡ್ದೇ ಇದ್ರೆ ಎಷ್ಟು ಮಂದಿ ಈ ಹಬ್ಬಗಳಿಗೆ, ಇಷ್ಟಪಟ್ಟು ಹಾಜರಾಗ್ತಾರೆ ಅನ್ನೋದನ್ನು ಆ ಸಿವನೇ ಏಳ್ಬೇಕು.

## 29. ಎಚ್ಚರ ಗ್ರಾಹಕ ಎಚ್ಚರ:

ನಾವೆಲ್ಲ ಬಾರ್‌ಗಳಲ್ಲಿ ಹೀಗಾಗುವುದನ್ನು ಕಂಡಿದ್ದೇವೆ. ಅಲ್ಲಿ ಕುಡಿದು ಚಿತ್ತಾದ ಸಂದರ್ಭಗಳಲ್ಲಿ ನಾವು ಏನೇನು ಕುಡಿದೆವು, ತಿಂದೆವು ಎಂಬುದರ ಸರಿಯಾದ ಲೆಕ್ಕಹಾಕದ ಸ್ಥಿತಿಯಲ್ಲಿರುವ ನಮಗೆ ಬೇರರ್ ಹಾಕಿದ್ದೇ ಬಿಲ್, ತಂದಿಟ್ಟು ಒಂದು ಸಲಾಂ ಹಾಕಿದರೆ ಮುಗಿಯಿತು ಅದರಲ್ಲಿ ಕಾಣಿಸಿದ ಮೊತ್ತಕ್ಕೆ ಟಿಪ್ಸ್‌ಸೇರಿಸಿಕೊಟ್ಟು ಹೊರಬಂದಿರುತ್ತೇವೆ. ನಮ್ಮ ಆ ಮತ್ತಿನ ಸ್ಥಿತಿಯನ್ನರಿತ ಬೇರರ್, ಬಿಲ್ಲರ್ ನಾವು ತಿಂದ, ತಿನ್ನದ, ಕುಡಿದ, ಕುಡಿಯದ ಎಲ್ಲವನ್ನೂ ಅದರಲ್ಲಿ ಸೇರಿಸಿಬಿಟ್ಟಿರುತ್ತಾನೆ. ಇಲ್ಲಿ ತಪ್ಪು ನಮ್ಮದೇ ಆಗಿರುತ್ತದೆ. ಆದರೆ ನಾವು ಮತ್ತಿನಲ್ಲಿರದೇ ಮಾಮೂಲಿ ತಿಂಡಿ, ಊಟಮಾಡುವ ಅದರಲ್ಲೂ ಸಸ್ಯಾಹಾರಿ ಹೋಟಲ್‌ಗಳಲ್ಲಿ ಇಂತಹ ಮೋಸ ನಡೆಯುವ ಸಾಧ್ಯತೆ ಇದೆಯೇ? ತೀರ ಅಪರೂಪ. ಆದರೆ ಹೀಗೂ ನಡೆಯುತ್ತದೆ ಎಂದರೆ ನೀವು ನಂಬಲೇಬೇಕು. ನಾವು ಇತ್ತೀಚೆಗೆ ಬೆಂಗಳೂರಿಗೆ ಹೋಗುವಾಗ ಹೋಟಲಿಗೆ ತಿಂಡಿ ತಿನ್ನಲು ಹೋಗಿದ್ದೆವು. ಮೆನು ಕಾರ್ಡ್ ತಂದಿಟ್ಟ ಸರ್ವರ್ ಆರ್ಡರ್ ಕೇಳಿದ. ಕಾರ್ಡಿನಲ್ಲಿ ಇಡ್ಲಿ 1ಕ್ಕೆ 14 ರೂ. ವಡೆ 1ಕ್ಕೆ 15 ರೂ ಎಂದಿತ್ತು, ನಾವು 2 ಪ್ಲೇಟ್ ಎರಡೆರಡು ಇಡ್ಲಿ ಒಂದೊಂದು ವಡೆ & ಬೈಟೂ ಕಾಫಿ ಆರ್ಡರ್ ಮಾಡಿದೆವು. ತಿಂಡಿ ತಿಂದಮೇಲೆ ಬಂದ ಬಿಲ್ 120 ರೂ. ಹಣ ಕೊಟ್ಟು ಪ್ರಯಾಣ ಮುಂದುವರಿಸಿದೆವು. ಹಲವಾರು ಮೈಲು ಕ್ರಮಿಸಿದನಂತರ ನಾವು ತಿಂದ ತಿಂಡಿಗೆ ಎಷ್ಟಾಯಿತೆಂದು ಲೆಕ್ಕ ಹಾಕಿದಾಗ ಮೊತ್ತ ಬಂದುದು 106 ರೂ. ಆದರೆ ಬಿಲ್ಲು ಹಾಕಿದ್ದುದು 120 ರೂ. 14 ರೂ ಹೆಚ್ಚಿಗೆ ಕೊಟ್ಟು ಮೋಸಹೋಗಿದ್ದೇವೆ ಎಂದು ಸುಮ್ಮನಾದೆವು.

ಮೂರು ದಿನಬಿಟ್ಟು ಮತ್ತೆ ಅದೇ ದಾರಿಯಲ್ಲಿ ವಾಪಸಾಗುವಾಗ ಅದೇ ಹೋಟಲಿಗೆ ಮಧ್ಯಾಹ್ನದ ಊಟಕ್ಕೆ ಹೋಗಲು ತೀರ್ಮಾನಿಸಿದೆವು. ಮಾಮೂಲಿನಂತೆ ಮೆನುಕಾರ್ಡ್ ಮುಂದಿಟ್ಟಿತ್ತು. ಅದನ್ನು ಗಮನಿಸಿದಾಗ ಅದರಲ್ಲಿ 2ಇಡ್ಲಿ + 1ವಡೆಗೆ 50ರೂ. ಎಂದಿತ್ತು. ಅರೆ ನಾವು ಒಂದೊಂದೇ ಇಡ್ಲಿ ತರಿಸಿದ್ದರೆ ಹಣ ಉಳಿಸಬಹುದಿತ್ತು ಎಂದುಕೊಂಡೆವು. ಸಾರಿಗೆ ಸಂಸ್ಥೆಗಳು ಕೆಲವೊಮ್ಮೆ ಹತ್ತಿರದ ಪ್ರದೇಶಗಳಿಗೆ ಕಡಿಮೆದರ ವಿಧಿಸುವ ನೀತಿ ಅನುಸರಿಸುತ್ತವೆ. ಅಂತಹ ಸಂದರ್ಭಗಳಲ್ಲಿ ದೂರ ಪ್ರಯಾಣ ಮಾಡುವವರೂ, ಮುಂದಿನ ಹತ್ತಿರದ ಪ್ರದೇಶಕ್ಕೆ ಟಿಕೇಟು ಖರೀದಿಸುತ್ತಾ ಹಣ ಉಳಿಸುವ ಉಪಾಯ ಮಾಡಿದ್ದೂ ಉಂಟು. ನಾನು ಒಂದು ಮಿತಭೋಜನಕ್ಕೆ ನನ್ನ ಶ್ರೀಮತಿ ಒಂದು ತಟ್ಟೆ ಇಡ್ಲಿ ಆರ್ಡರ್ ಮಾಡಿದೆವು. ಮೆನು ಕಾರ್ಡಿನಲ್ಲಿ ನಮೂದಿಸಿದ್ದ ದರ ಮಿತಭೋಜನ 80 ರೂ & ತಟ್ಟೆ ಇಡ್ಲಿ 25 ರೂ. ನಂತರ ಒಂದು ಐಸ್‌ಕ್ರೀಂ 30ರೂ. ನದು ತರಿಸಿಕೊಂಡೆವು. 4 ಮದ್ದೂರುವಡೆ (ಒಂದು ವಡೆ ಬೆಲೆ 15 ರೂ) ಪಾರ್ಸಲ್ ಮಾಡಿಸಿದೆವು.

ಬಂದ ಬಿಲ್ 310 ರೂ.ಗಳು. ಇನ್ನೇನು ಪರ್ಸಿನಿಂದ ಹಣತೆಗೆದು ಕೊಡಬೇಕೆಂದು ಕೈ ಹಾಕುತ್ತಿದ್ದಂತೆ ನನ್ನ ಗಮನ ಬಿಲ್ ವಿವರದ ಕಡೆ ಹೋಯಿತು. ಅದರಲ್ಲಿ 'ಕಾಫಿ' 20 ರೂ. ಎಂದಿತ್ತು. ನನಗೆ ಅನುಮಾನ ಶುರುವಾಯಿತು. ನಾವು ಕುಡಿಯದ ಕಾಫಿಗೆ ಬಿಲ್ಲಿನಲ್ಲಿ ಸ್ಥಾನ ಹೇಗೆ? ವಿಚಾರಿಸಲು ನೋಡಿದರೆ ಸರ್ವರ್ ಅಲ್ಲಿರಲಿಲ್ಲ. ನಾವೇ ಕ್ಯಾಶ್ ಕೌಂಟರಿಗೆ ಹೋಗಿ 500 ರೂ. ಹಾಗೂ ಬಿಲ್ ನೀಡಿ, ನಾವು ಕುಡಿಯದ ಕಾಫಿ ಸೇರಿಸಿದೆ ಎಂದು ತಕರಾರು ತೆಗೆದೆ. 5 ನಿಮಿಷ ಬಿಟ್ಟು ಬಂದ ಸರ್ವರ್ ನನಗೆ ಗೊತ್ತಿಲ್ಲ ಅನ್ನೋದೇ? ಇಬ್ಬರು ಸರ್ವರ್‌ಗಳು ನಮ್ಮ ಆರ್ಡರ್ ತೆಗೆದುಕೊಂಡಿದ್ದುದರಿಂದ ಈ ಪ್ರಮಾದ ಆಗಿದೆ ಎಂದ ಕ್ಯಾಶಿಯರ್ 20 ರೂ ಕಳೆದು ಕೊಡಬೇಕಾದ 195 ರ ಬದಲಿಗೆ 205 ರೂ. ನೀಡಿದ. ನಾನು ಹಣ ತೆಗೆದುಕೊಂಡು ಕಾರಿನಲ್ಲಿ ಕುಳಿತಮೇಲೆ ಶ್ರೀಮತಿಗೆ ಪೆದ್ದ ಕ್ಯಾಶಿಯರ್ 195 ರೂ ಬದಲಿಗೆ 10 ರೂ. ಹೆಚ್ಚಾಗಿ ಕೊಟ್ಟಿದ್ದಾನೆ ಎಂದು ಕಾರು ಚಲಾಯಿಸಲು ತೊಡಗಿದೆ. 2-3 ಕಿ.ಮೀ. ಬರುತ್ತಿದ್ದಂತೆ ಮತ್ತೆ ಲೆಕ್ಕ ಹಾಕಿದಾಗ ಪೆದ್ದರಾಗಿ ಮೋಸ ಹೋಗಿದ್ದು ಅವನಲ್ಲ, ನಾನು ಎಂದೆನಿಸತೊಡಗಿತು. ಏಕೆಂದರೆ ನನ್ನ ಶ್ರೀಮತಿ ಲೆಕ್ಕದ ಪ್ರಕಾರ ನಮಗೆ 100 ರೂ. ದೋಖಾ ಆಗಿದೆ ಎನ್ನಿಸಿತು. ಮತ್ತೆ ಹೋಟಲಿನ ಕಡೆಗೆ ಕಾರು ತಿರುಗಿಸಿದೆ. 'ಬಿಲ್ ಬಗೆಗೆ ಸ್ವಲ್ಪ ಕನ್‌ಫ್ಯೂಸ್ ಆಗಿದೆ ಎಂದು ಕಾಣುತ್ತದೆ. ಆ ಬಿಲ್ ತೆಗೆಯಿರಿ' ಎಂದೆ. ಅವನು

ಬಿಲ್ ತೆಗೆದು ನಾವು ತೆಗೆದುಕೊಂಡ ಐಟಂಗಳ ಬಗೆಗೆ ಸರ್ವರ್‌ಗಳನ್ನು ಕರೆದು ವಿಚಾರಿಸತೊಡಗಿದ. ಬಿಲ್‌ನಲ್ಲಿ 5 ಸ್ಪೆಶಲ್ ಮದ್ದೂರು ವಡೆ ಎಂದು ಪ್ರತಿ ವಡೆಗೆ 25 ರೂ. ಎಂದು ಕಾಣಿಸಿತ್ತು. ನಾನು ಪಾರ್ಸಲ್ ತೆಗೆದುನೋಡಿ ಎಂದೆ.ನೋಡಿದರೆ ಅದರಲ್ಲಿ 4 ಆರ್ಡಿನರಿ ಮದ್ದೂರು ವಡೆ ಇತ್ತು. ಆಗ ಅವನು ನಾನೂ ನಿಮಗೆ 10 ರೂ. ಹೆಚ್ಚಿಗೆಕೊಟ್ಟಿದ್ದೆ ಎನ್ನಬೇಕೇ!ಎಲ್ಲ ಮತ್ತೆ ಲೆಕ್ಕಹಾಕಿದಾಗ ಮೊತ್ತ 195 ಆಯಿತು.

ಅವನ ಮೋಸದಾಟ ಬಯಲಾದ ನಂತರ 305 ರೂ. ವಾಪಸುಕೊಟ್ಟ, ಇದು ಒಂದು ರೀತಿ 10 ರೂ. ನೋಟು ಕೆಳಗೆಸೆದು ನಿಮ್ಮ ಗಮನ ಅದರಕಡೆಸೆಳೆದು ನಿಮ್ಮ ಹಣ ಎಗರಿಸುವ ರೀತಿ ಆಯಿತು. ಬಹುಶಃ ವ್ಯಾಪಾರ ಕಡಿಮೆ ಆಗುತ್ತಿರುವುದನ್ನು ಸರಿದೂಗಿಸಲು ಮಾಡುವ ತಂತ್ರಗಾರಿಕೆ ಇದ್ದರೂ ಇರಬಹುದು.ಅದಕ್ಕೇ ಅನ್ನುವುದು 'ಎಚ್ಚರ ಗ್ರಾಹಕ ಎಚ್ಚರ'. ಕಾರಿನಲ್ಲಿ ಬರುವ ಶ್ರೀಮಂತರು, ಗರ್ಲ್ ಫ್ರೆಂಡ್ ಜೊತೆ ಬರುವ ಪಡ್ಡೆಗಳು ಬಿಲ್ ವಿವರ ನೋಡದೇ ಹಣಕೊಟ್ಟು ಹೋಗುವರೆಂದು ಆ ಹೋಟಲಿನವರಿಗೆ ತಿಳಿದಿರಬೇಕು. ಆದರೆ ನನ್ನಂತಹ ಗಿರಾಕಿ ಮೊದಲಬಾರಿ ಅವನ ಮೋಸದಾಟ ಬಯಲಿಗೆ ಎಳೆದಾಗ ಏನೂ ತಿಳಿಯದವನಂತೆ ನಾಟಕವಾಡಿದ್ದಾನೆ ಆ ಕೊರಮ ಕ್ಯಾಶಿಯರ್ ಎಂದು ಗೊಣಗುತ್ತಾ ಇನ್ನೆಂದೂ ಆ ಹೋಟಲಿಗೆ ಕಾಲಿಡಬಾರದು ಎಂದು ಗೊಣಗಿದಳು ನನ್ನ ಶ್ರೀಮತಿ. ನಿಮಗೂ ಇಂತಹ ಅನುಭವ ಆಗಿರಬಹುದಲ್ಲವೇ ? ಅದಕ್ಕೇ ಅನ್ನುವುದು 'ಎಚ್ಚರ ಗ್ರಾಹಕ ಎಚ್ಚರ'.

## 30. ಸೀರಿಯಲ್ ಎಂಬ ದುರಂತ:

ದೂರದರ್ಶನ ಎಂಬ ಸಿಂಗಲ್ ಚಾನಲ್ ಪ್ರಾರಂಭವಾದಾಗ ಮೊತ್ತ ಮೊದಲ ಸಲ ನಮಗೆ ದೇವಲೋಕವೇ ಭೂಮಿಗೆ ಬಂದಂತಹ, ಮನೆಯೊಳಗೇ ಸಿನಿಮಾಲೋಕ ಧಾವಿಸಿಬಂದಂತಹ ಅನುಭವ ಆಯಿತು. ರಾಷ್ಟ್ರಮಟ್ಟದಲ್ಲಿ ಪ್ರಖ್ಯಾತಿಪಡೆದ ಚಿಕ್ಕ ಚಿಕ್ಕ ಕಥೆಗಳನ್ನು ಆಯ್ಕೆಮಾಡಿಕೊಂಡು ಪ್ರದರ್ಶಿಸಲಾಗುತ್ತಿತ್ತು. ರಾಷ್ಟ್ರೀಯ ಚಾನಲ್‌ನಲ್ಲಿನ ಯೇ ಜೋ ಹೈ ಝಿಂದಗಿ, ನುಕ್ಕಡ್, ಹಮ್‌ಲೋಗ್, ರಂಗೋಲಿ, ಸುರಭಿ ಮುಂತಾದ ಕಾರ್ಯಕ್ರಮಗಳು ನಮ್ಮ ಮನದಲ್ಲಿ ಇನ್ನೂ ಹಚ್ಚಹಸಿರಾಗಿವೆ. ಶನಿವಾರ, ಭಾನುವಾರಗಳಂದು ರಾಷ್ಟ್ರ ಪ್ರಶಸ್ತಿ ಪಡೆದ ವಿವಿಧ ಭಾಷೆಗಳ ಚಲನಚಿತ್ರಗಳ ಪ್ರಸಾರವಾಗುತ್ತಿದ್ದವು. ಕನ್ನಡದ ಕಾರ್ಯಕ್ರಮಗಳು ಸೀಮಿತವಾಗಿ ಒಂದೆರಡು ಘಂಟೆಗಳ ಕಾಲಪ್ರಸಾರವಾಗುತ್ತಿದ್ದವು.

ಚಂದನ ಎಂಬ ಚಂದದ ಹೆಸರನ್ನು ಹೊತ್ತು ಸ್ವತಂತ್ರ ಚಾನಲ್ಲಾಗಲು ಹಲವಾರು ವರ್ಷಗಳೇ ಬೇಕಾಯಿತು. ಆದರೂ ಈ ಸರ್ಕಾರಿ ಕನ್ನಡ ಚಾನಲ್ಲಿನಲ್ಲಿ ಯಾವುದೇ ಕಾರ್ಯಕ್ರಮ ಪ್ರಸಾರವಾದರೂ ಅದಕ್ಕೆ ನಿಗದಿಪಡಿಸಿದಸಮಯ ಕೇವಲ 15 ರಿಂದ 30 ನಿಮಿಷಗಳಿಗೆ ಸೀಮಿತವಾಗಿತ್ತು. ಈ ನಿಯಮ ಇತರ ಭಾಷೆಗಳ ಚಾನಲ್ಲುಗಳಿಗೂ ಅನ್ವಯವಾಗಿತ್ತು. ನಂತರದ ವರ್ಷಗಳಲ್ಲಿ ಹಲವಾರು ಖಾಸಗೀ ಚಾನಲ್ಲುಗಳು ಪ್ರಾರಂಭಗೊಂಡು ಇಂದು ರೇಡಿಯೋ ರೀತಿಯಲ್ಲಿ ನೂರಾರು ಚಾನಲ್ಲುಗಳು ತಮ್ಮವೇ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಪ್ರಸಾರಮಾಡತೊಡಗಿವೆ. ಕಲಾವಿದರಿಗೆ ಭರಪೂರ ಅವಕಾಶ ಗಳು ದೊರಕತೊಡಗಿದುದು ಒಂದು ಒಳ್ಳೆಯ ಬೆಳವಣಿಗೆ.

ಈಗಂತೂ ಯಾವುದೇ ಕಾರ್ಯಕ್ರಮದ ಕನಿಷ್ಟ ಪ್ರಸಾರದ ಅವಧಿ ಒಂದು ಘಂಟೆಯಾಗಿದೆ. ಮೊದಲಿಗೆ ಯಾವುದೇ ಸೀರಿಯಲ್ 13 ಕಂತುಗಳಿಗೆ ಸೀಮಿತವಾಗಿತ್ತು. ಹೆಚ್ಚೆಂದರೆ ಒಂದು ತಿಂಗಳ ಅವಧಿ ಅತ್ಯಧಿಕ ಎಂದು ಭಾವಿಸಲಾಗಿತ್ತು.

ಈಗ ಇರುವುದು ಮೆಗಾಸೀರಿಯಲ್ ಯುಗ. ಈ ಸಾಲಿಗೆ ನನ್ನ ನೆನಪಿನಲ್ಲಿ ಉಳಿದಿರುವುದು ಹಿಂದಿಯಲ್ಲಿ ಮಧ್ಯಾಹ್ನ ಊಟದ ಸಮಯದಲ್ಲಿ ಪ್ರಸಾರವಾಗುತ್ತಿದ್ದ 'ಶಾಂತಿ' ಎಂಬ ಧಾರಾವಾಹಿ. ಈ ಸಾಲಿಗೇ ಸೇರಿಸಲಾಗಿದ್ದು 'ಹಮ್‌ಲೋಗ್', 'ನುಕ್ಕಡ್' ಮುಂತಾದವು. ಈಗೀಗಂತೂ 'ನೆವರ್ ಎಂಡಿಂಗ್' ಧಾರಾವಾಹಿಗಳ ಯುಗ. ನಮ್ಮ ಕನ್ನಡದಲ್ಲಿನ ಒಂದು ಧಾರಾವಾಹಿ 'ಬದುಕು' ಸಾವೇ ಇಲ್ಲದ ಧಾರಾವಾಹಿಯಾಗಿ ಮೂಡಿ ಬರುತ್ತಿದೆ. ಮೊದಲೆಲ್ಲ ಧಾರಾವಾಹಿ ನಿರ್ಮಾಪಕರು ತಾವು ಪ್ರಸಾರಕ್ಕಾಗಿ ನೀಡುವ ಧಾರಾವಾಹಿಗಳ ಎಲ್ಲ ಎಪಿಸೋಡುಗಳನ್ನೂ ಪೂರ್ಣವಾಗಿ ಶೂಟ್‌ಮಾಡಿ ದೂರದರ್ಶನಕ್ಕೆ ಸಲ್ಲಿಸಬೇಕಾಗಿತ್ತು. ಈಗಂತೂ ಮುಂದಿನ ಒಂದೆರಡು ವಾರದ ಕಂತನ್ನು ಮಾತ್ರ ಶೂಟ್‌ಮಾಡಿ (ಚಿತ್ರೀಕರಿಸಿ) ತಲುಪಿಸುವ ನಿರ್ಮಾಪಕ, ನಿರ್ದೇಶಕರೂ ಇದ್ದಾರೆನ್ನಿಸುತ್ತದೆ. ಅದರಲ್ಲೂ ಆ ವಾರ ಸಿಕ್ಕ ಇಬ್ಬರು ಮೂವರು ನಟರನ್ನೇ ಬಳಸಿ, ಒಂದು ದಿನದ ಮಟ್ಟಿಗೆ ಘಟನೆ ಹೊಸೆದು ಚಿತ್ರೀಕರಿಸಿ ಕಳುಹಿಸಿಕೊಟ್ಟಿರುವುದೂ ಉಂಟು. ಕೆಲವು ವೇಳೆ ಚಿತ್ರೀಕರಣ ಮಾಡದೇ ಇದ್ದಲ್ಲಿ, ಹಿಂದಿನ ದಿನದ ಕಂತನ್ನೇ ಮರುಪ್ರಸಾರ ಮಾಡಿಯೋ, ಅಥವಾ ಮತ್ಯಾವುದೋ ಕಾರ್ಯಕ್ರಮವನ್ನು ತುರುಕಿಯೋ ಅಂದಿನ ಕಥೆ ಮುಗಿಸಿದ್ದೂ ಇದೆ. ಮತ್ತೊಂದು ವಿಚಾರ ಎಂದರೆ ಧಾರಾವಾಹಿಗಳಲ್ಲಿ ಮನರಂಜನೆ ಪ್ರಧಾನವಾಗಿರಬೇಕು. ಜನರ ಮನದಲ್ಲಿ ಬೇಸರಕಳೆಯಲು ಸಹಾಯಕವಾಗಿರಬೇಕು ಎಂಬ ಭಾವನೆ ಹೋಗಿ ಈಗ ದ್ವೇಷ, ಕ್ಲೇಶ ಬಿತ್ತುವಂತಿವೆ. ಎಲ್ಲ ಧಾರಾವಾಹಿಗಳಲ್ಲೂ ಈಗೀಗ ಹುಟ್ಟಿಕೊಂಡಿರುವವರು ಲೇಡಿ ವಿಲನ್‌ಗಳು. ಅದು ಅತ್ತೆಯ ರೂಪದಲ್ಲಿ ಇರಬಹುದು, ಅತ್ತಿಗೆ, ನಾದಿನಿ ರೂಪದಲ್ಲಿರಬಹುದು, ಪ್ರೇಯಸಿಯ ರೂಪದಲ್ಲಿ ಇರಬಹುದು. ಯಾವುದೇ ಧಾರಾವಾಹಿಗಳನ್ನು ನೋಡುವವರ ಮನದಲ್ಲಿ ಕೆಟ್ಟ ಪರಿಣಾಮಗಳನ್ನು ಉಂಟುಮಾಡಬಾರದು. ನಿರ್ಮಾಪಕರನ್ನು ಕೇಳಿದರೆ "ಜನರು ಕೇಳಿದುದನ್ನು ನಾವು ಕೊಡುತ್ತಿದ್ದೇವೆ, ಅದರಲ್ಲೂ ನಾವು ಒಂದು ಸಾಮಾಜಿಕ ಸಂದೇಶವನ್ನು ನೀಡುತ್ತಿದ್ದೇವೆ. ಜನರಿಗೆ ಅಶ್ಲೀಲತೆ ಬೇಕು ಅದನ್ನು ನಾವು ನೀಡುತ್ತಿದ್ದೇವೆ. ನಾವು ಏನೇ ಕೊಟ್ಟರೂ ಅದನ್ನು ನೋಡುವ ಇಲ್ಲವೇ ಚಾನಲ್ ಬದಲಾಯಿಸುವ ಆಯ್ಕೆ ಜನರ ಕೈಲಿದೆ "ಎಂದೆಲ್ಲ ಹೇಳಿಕೆ ನೀಡಿ ನುಣುಚಿಕೊಳ್ಳುತ್ತಾರೆ.

ಇಂದಿನ ಧಾರಾವಾಹಿಗಳನ್ನಾಗಲೀ, ಚಲನಚಿತ್ರಗಳನ್ನಾಗಲೀ ಸಂಸಾರಸಮೇತ ನೋಡುವುದಕ್ಕೆ ಹೋದರೆ ಮುಜುಗರವಾಗುತ್ತದೆ. ಅಂತಹ ಅಸಭ್ಯ ಉಡುಗೆಗಳು ನಾಯಕಿ ಹಾಕುತ್ತಾಳೆ ಅಥವಾ ಅವಳಿಗೆ ತೊಡಿಸುತ್ತಾರೆ. ಹಿಂದೆ ವ್ಯಾಂಪ್‌ಗಳು, ಕ್ಯಾಬರೆ ನೃತ್ಯಗಾರ್ತಿಯರು ಹೀಗೆ ಬೇರೆಬೇರೆ ಕಲಾವಿದರು ಇರುತ್ತಿದ್ದರು. ಈಗ ಆಲ್ ಇನ್ ಒನ್ ಎಂಬಂತೆ ಎಲ್ಲ ಪಾತ್ರಗಳನ್ನೂ, ಅವರ ಉಡುಪುಗಳನ್ನೂ ನಾಯಕಿಯೇ ತೊಡುತ್ತಾಳೆ. ಇವು ಸಮಾಜಕ್ಕೆ ಎಂತಹ ಸಂದೇಶ ಬಿತ್ತರಿಸುತ್ತಿವೆ?

ಇವತ್ತಿನ ದಿನಗಳಲ್ಲಿ ನೋಡುಗರು ಧಾರಾವಾಹಿಗಳನ್ನು ನೋಡುವುದನ್ನೇ ಬಿಡುತ್ತಿದ್ದಾರೆ. ವಿವಿಧ ಚಾನಲ್ಲುಗಳಲ್ಲಿ ಪ್ರಸಾರವಾಗುವ ವಾರ್ತೆಗಳನ್ನು ನೋಡತೊಡಗಿದ್ದಾರೆ. ಆ ವಾರ್ತೆಗಳಲ್ಲಿ ಮಧ್ಯೆ ಮಧ್ಯೆ ಬರುವ 'ಬ್ರೇಕಿಂಗ್ ನ್ಯೂಸ್' ಮತ್ತು ಅಬ್ಬರದ ಹಿನ್ನೆಲೆಸಂಗೀತದ ಹಾವಳಿ ಹೇಳತೀರದು. ಡಮ್ಮ ಡಮ್ಮ ಎಂಬ ದೊಡ್ಡ ಸದ್ದಿನೊಂದಿಗೆ ಕಿವಿಗಳಿಗೆ ಕಿರಿಕಿರಿ ಉಂಟು ಮಾಡುವಂತಿರುತ್ತವೆ. ವಾರ್ತೆಗಳಿಗೆ ಸಂಗೀತದ ಅವಶ್ಯಕತೆ ಎಷ್ಟರಮಟ್ಟಿಗೆ ಇರುತ್ತವೆ ಎಂಬುದೂ ಪ್ರಶ್ನಾರ್ಹ ವಿಚಾರ. ರೇಡಿಯೋದಲ್ಲಿ ಬರುವ ವಾರ್ತೆಗಳಲ್ಲಿ ವಾಚನಕ್ಕೆ ಪ್ರಾಮುಖ್ಯತೆ ನೀಡಬೇಕು. ದೂರದರ್ಶನದಲ್ಲಿ ಪ್ರಸಾರವಾಗುವ ವಾರ್ತೆಗಳು ಹೆಚ್ಚಿನಮಟ್ಟಿಗೆ ದೃಶ್ಯಪ್ರಧಾನವಾಗಿರಬೇಕಾದುದು ಅತ್ಯವಶ್ಯಕ. ಎಲ್ಲಕ್ಕಿಂತ ಮುಖ್ಯವಾದ ವಿಷಯ ಎಂದರೆ ಅವು 'ಸೆಲ್ಫ್ ಎಕ್ಸ್‌ಪ್ಲನೇಟರಿ' ಆಗಿರಬೇಕು. ವಿಶ್ಲೇಷಣೆ ಏನಿದ್ದರೂ ದೃಶ್ಯಗಳಿಗೆ ಪೂರಕವಾಗಿರಬೇಕು. ಒಟ್ಟಿನಲ್ಲಿ ಇಂದು ಚಲನಚಿತ್ರಗಳಿಗೆ ನೀಡುವ ಸೆನ್ಸಾರ್ ಪ್ರಮಾಣಪತ್ರವೇ ಪ್ರಶ್ನಾರ್ಹವಾಗಿದ್ದರೂ, ಕಾಲಕ್ಕನುಗುಣವಾಗಿ ಸ್ವಲ್ಪಮಟ್ಟಿನ ನಿಯಂತ್ರಣ ಇದೆ ಎಂದು ಒಪ್ಪಿಕೊಳ್ಳಬೇಕಾಗಿದೆ. ಇದೇ ನಿಯಂತ್ರಣ ಈ ದೂರದರ್ಶನದಲ್ಲಿ ಪ್ರಸಾರವಾಗುವ ಧಾರಾವಾಹಿಗಳ ಮೇಲೂ ಇರಬೇಕಾದುದು ಅವಶ್ಯಕ ಎನಿಸುತ್ತದೆ.

ಚಲನಚಿತ್ರಗಳಲ್ಲಿನ ದೃಶ್ಯಗಳು ಅನುಕರಣೀಯವಾಗಿರಲೇಬೇಕೆಂಬ ನಿಯಮವೇನೂ ಇಲ್ಲ, ಇದು ಬರೀ 'ರೀಲು' ರಿಯಲ್ ಅಲ್ಲ ಎಂಬ ವಾದ ಮಂಡಿಸುತ್ತಾರೆ. ಸಿನಿಮಾದಲ್ಲಿ ಬರುವ ಮರಸುತ್ತಿ ಹಾಡುವುದು ನಿಜಜೀವನದಲ್ಲಿ ಕಂಡು ಬರುವುದೇ ಇಲ್ಲದಿರುವುದರಿಂದ ಅದು 'ರೀಲ್'. ನಿಜ ಜೀವನದಲ್ಲಿನ ಘಟನೆಗಳು ಕೇವಲ 3 ಘಂಟೆಗಳಲ್ಲೇ ಮುಗಿಯದೇ ಇರಬಹುದು. ಆದರೆ ಚಲನಚಿತ್ರಗಳಲ್ಲಿ ಎಲ್ಲ ಎಳೆಗಳನ್ನೂ ಸೇರಿಸಿ ಕಥೆಯನ್ನು ಕೇವಲ ಎರಡೂವರೆ ಅಥವಾ ಮೂರು ಘಂಟೆಗಳೊಳಗೆ ಮುಗಿಸಲೇಬೇಕಾಗಿರುತ್ತದೆ. ಅಂತೆಯೇ ಇಂದಿನ ಧಾರಾವಾಹಿಗಳ ಮೇಲೆ ಯಾವುದೇ ಅಂಕೆ ಇಲ್ಲದಿರುವುದರಿಂದ ಅವನ್ನು ಚಲನಚಿತ್ರಗಳಿಗಿಂತ ಹೆಚ್ಚಿನ ಅವಧಿಗೆ ಎಳೆಯುವ ಸಾಧ್ಯತೆಯಿರುತ್ತದೆ.

ಒಂದು ನೈಜ ಘಟನೆ ತೆಗೆದುಕೊಂಡರೆ. ಒಬ್ಬ ಪೋಲೀಸ್ ಕಳ್ಳನೊಬ್ಬನನ್ನು ಹಿಡಿಯಲು ತಿಂಗಳು ಬಿಡಿ. ಹತ್ತು ಹದಿನೈದು ವರ್ಷಗಳನ್ನೇ ತೆಗೆದುಕೊಂಡಿರುವ ಉದಾಹರಣೆಗೂ ನಮ್ಮ ಮುಂದಿವೆ. ಕೆಲವು ಸಂದರ್ಭಗಳಲ್ಲಿ ಕಳ್ಳ ಅಥವಾ ಕೊಲೆಗಾರ ಸಿಗದೇ ಆ ಕೇಸನ್ನೇ ಬಿ ರಿಪೋರ್ಟ್ ಹಾಕಿ ಮುಗಿಸಿರುವ ಘಟನೆಗಳೂ ನಮ್ಮ ಮುಂದಿವೆ. ಕೆಲವು ರೋಚಕ ಘಟನೆಗಳೂ ಇರಬಹುದು. ಅಂತಹವುಗಳನ್ನು ಚಲನ ಚಿತ್ರವಾಗಿಯೋ, ಧಾರಾವಾಹಿಯಾಗಿಯೋ ಮಾಡುವ ಸಾಧ್ಯತೆಗಳು ಇರುತ್ತವೆ. ಆದರೆ ವಹಿಸಬೇಕಾದ ಎಚ್ಚರಿಕೆ ಎಂದರೆ ಅಪರಾಧಗಳ ವೈಭವೀಕರಣ ಆಗಬಾರದು ಎಂಬುದು ಗಮನಿಸಬೇಕಾದ ವಿಚಾರ.

## 31. ಬುದ್ವಂತಾ, ಎಮ್ಮೆ ಮಾಡ್ಕೊಂಡ್ ಎಂಡ್ತಿ ಕಟ್ಕೊಂಡವ್ನೆ

ನನ್ನ ಪಟ್ಣದ ಬಾಮ್ಮೈಕ ಅದೇ ಒಸ್ನಗ್ರದಲ್ಲಿ ಒಸ್ನನೆ ಕಟ್ಟಿಸವ್ನಲ್ಲಾ ಅವ್ನ ಓದ್ವಾರ ಬಂದಿದ್ದ. ಭೋ ಬುದ್ವಂತಾ ಎಮ್ಮೆ ಮಾಡ್ಕಂಡವ್ನೆ, ಎಮ್ಮೆ ಮಾಡ್ಕೊಂಡ ಎಡ್ತೀನೂ ಕಟ್ಕಂಡವ್ನೆ. ಬೇರೆ ಪಟ್ಣದವ್ರತರಾ ನಾವೂ ಇರ್ಬೇಕೂ ಅಂತಾ ಮನೆ ತುಂಬಾ ಪಾಟ್ಗಳ್ನ ಖಾಲಿ ಮಡೀಕೊಂಡು ಗಿಡಗಳ್ಗೆ ಉಡುಕ್ತಾವ್ನೆ, ಯಾರಾರ ಪುಕ್ಸಟ್ಟೆ ಕೊಟ್ಟಾರಾ ಅಂತ. ಒಂದಿಸ ಆಕಾಸನೋಡ್ತಾ ಸಿಗ್ರೇಟ್ ಸೇಂದ್ತಾ, ಮನೆಮುಂದ್ನಿಂತಿದ್ನಂತೆ. ಆಗ ಸ್ವಾಮೀ ಐಯ್ನೋರಾ, ಗುಲಾಬಿ ಗಿಡ ಬೇಕ್ರಾ ಅಂದಗಾಯ್ತಂತೆ. ಸಬ್ದಾ ಕೇಳ್ಬೇಟ್ಗೆ ದಾಪ್ಗಾಲಾಕ್ಕೊಂಡು ಓಡೋದನಂತೆ ಒಂದೇ ಉಸ್ರಿಗೆ ಆ ದಿಕ್ಕಿಗೆ, ಮುಗ್ಗರಿಸಿ ಬೀಳೋದೊಂದೇ ಬಾಕಿ. ಏನಪ್ಪಾ ಯಾವ್ಯಾವ ಬಣ್ಣದ ಗುಲಾಬಿ ಐತೆ? ಅಳ್ದಿ ಗುಲಾಬಿ ಐತಾ? ನೀಲಿ ಗುಲಾಬಿ ಐತಾ? ಅಂತೆಲ್ಲಾ ಕೇಳೋಕ್ಸುರುಮಾಡ್ದ.. ಅಲ್ಲಾ ಗುಲಾಬಿ ಊ ಅಂದ್ರನೇ ಒಂದು ಬಣ್ಣ ಅಲ್ವಾರಾ! ಗುಲಾಬಿ ಬಣ್ಣ ಅನ್ನೋ ಪದ ಬಂದಿರೋದೇ ಆ ಊವಿಂದ ಅಲ್ವಾ. ಅದ್ರಾಗೆ ಅಳ್ದಿಗುಲಾಬಿ, ಕೆಂಪು ಗುಲಾಬಿ, ಅಸಿರುಗುಲಾಬಿ ಅನ್ನೋ ಪದಕ್ಕೆ ಅರ್ಥ ಐತಾ? ಏನು ಮಂಕುದಿಣ್ಣೆಗಳಪ್ಪಾ ಈ ಪಟ್ನದವ್ರು ಅನ್ನಸೋಕಿಲ್ವಾ, ಆದ್ರೂ ಅವ್ರು ಬುದ್ವಂತರು. ಅವ್ರುನ್ನ ಗುಲಾಬಿಗುಲಾಬಿ, ಕೆಂಪು ಗುಲಾಬಿ ಎಲ್ಲಾ ಐತಾ ಅಂತಾ ಇಚಾರ್ಸೋಕ್ ಸುರು ಅಚ್ಕಂಡ್ನಂತೆ. ಮಾರೋಕ್ಬಂದವ್ನು ಬಲೇ ಪಾಕ್ಡಾ ನನ್ಮಗಾ. ಅವ್ನಾರನ್ಕರೀರಿ ಬುದ್ಧಿ, ನೀವು ಏನೇನ್ಕೇಳ್ತೀರೋ, ಏನೇನ್ಬೇಳ್ತೀರೋ ಎಲ್ಲ ಬಣ್ಣದ ಗುಲಾಬಿನೂ ಐತೆ ಅಂದ್ನಂತೆ.ಅಳದೀ, ಅಸಿರು, ಕೆಂಪು, ಕಪ್ಪು ಎಲ್ಲ ಬಣ್ಣದ ಊಬಿಡೋ ಕಸೀಮಾಡಿದ ಒಂದು ಗಿಡ, ನಂಡಿಪಾರ್ಟ್ಮೆಂಟನೋರು ಬೆಳೆಸಿರೋದು ನನ್ತಾವಐತೆ. ಬಲು ಉಸಾರಾಗಿ ನೆಡ್ಬೇಕು. ಅಸನ್ ಗೊಬ್ರ ಆಕ್ಬೇಕು. ನೀವ್ರು ಅವ್ರಿವ್ರ ಮಾತ್ಕೇಳಿ ಅತ್ಗಿದ ಆಕೋದೂ ಒಂದೆ. ನಾನ್ಕೊಡೋ ಒಂದು ಗಿಡಾ ಆಕೋದೂ ಒಂದೇಯಾ ಅಂತೆಲ್ಲಾ

ಬಂಡಲ್ಬಿಟ್ಟ. ಈ ಎರಡೆಮ್ಮೆಗಳೂ ಬೋ ಖುಷಿಯಾಗ್ಬಿಟ್ವೋ. ಅವನ್ಗಿಡ ಕೊಂಡ್ಕೊಳ್ಳೋಕ್ಕೂ ತಯಾರಾಗ್ಬಿಟ್ವು. ಎಡ್ಡೀ ದುಡ್ಡಿನ ಚೀಲ ಎತ್ಕೊಂಡ್ಬರೋಕೆ ಓಡೋದ್ಲು, ಆದ್ರೆ ನನ್ನ ಬುದ್ವಂತ ಬಾಮೈದ, ಒಸಿತಡ್ಕಳ್ಳಿ ಅಂದು, ಅವನ್ಗೆ ಮೊದ್ಲು ಗಿಡ ತಕ್ಕಂಬಂದು ತೋರ್ಸು ಅಂತಾ ಪಟ್ಟಿಡ್ದಾ. ಕಾಲ್ಗಂಟೆ ತಡ್ಕಳ್ಳಿ, ಇಂಗೋಗಿ ಅಂಗ್ಬಂದೆ ಅಂತ ಓದವ್ನೆ ಕೈನಾಗೆ ಮೇಲೆ ಎರ್ಡಡಿ ಕಡ್ಡಿ, ಕೆಳ್ಗೆ ಅರ್ಧಡಿ ಬೇರು ಒಟ್ಟು ಎರ್ಡೂವರಡಿ ಗಿಡದ ಸೊಂಟಕ್ಕೆ ಅರ್ಧಡಿ ಕೆಸರು ಮೆತ್ತಿದ್ದು ಇಡ್ಕೊಂಡು ಬಂದ. ಆ ಕಡೆ ಈ ಕಡೆ ನೋಡ್ತಾ ಬೇಗ ಪಾಟ್ಟನ್ನಿ, ಡಿಪಾರ್ಟ್‌ಮೆಂಟಿನವರ ಕಣ್ಣಿಗೆ ಬಿದ್ರೆ ನನ್ಕತೆಮುಗಿದೋಯ್ತದೆ ಅಂತ ಅವಸರಿಸಿದ. ನಾನೇ ಸರ್ಯಾಗಿ ನೆಟ್ಕೊಡ್ತೀನಿ, ನೀವು ನೀರಾಕಿದ್ರಾಯ್ತು, ಒಂದ್ವಾರದಲ್ಲಿ ಮೊಗ್ ಕಚ್ತಾವೆ ಅಂತೇಳಿ ಅರ್ವತ್ತು ರೂಪಾಯ್ಕಿತ್ತು ಕಾಲಿಗೆ ಬುದ್ಧಿ ಏಳಿದಾ. ಗಂಡಾಎಡ್ತಿ ಖುಸ್ಖುಸಿಯಾಗಿ ದಿನಾ ಅವನ್ಕೊಟ್ಟಿದ್ದ ಗಿಡಕ್ಕೆ ಒಂದ್ವವರ್ಗೆ ನೀರ್ಬುರೀತಾ ಮೊಗ್ಗಚ್ತಾ ಅಂತಾ ಬಗ್‌ಬಗ್ಗಿ ನೋಡ್ತಾ ಇದ್ರಂತೆ. ಮೂರ್ನಾಕು ದಿವ್ಸಕ್ಕೆ ಎಲೆ ಒಣಗ್ತಾ, ಗಿಡ ಕೊಳೀತಾ ಬಂತಂತೆ. ಇದ್ಯಾಕೆ ಅಂತ ಗಿಡಾನಾ ಮೇಕೆ ಎಳಿದ್ರೆ ಎರ್ಡಡಿ ಪೀಸ್ ಕೈಗೆ ಬಂತಂತೆ. ಯಾರೋ ಕಟ್‌ಮಾಡಿ ಬಿಸಾಕಿದ ಎರಡ್ಮೂರು ಗಿಡದ ಮೇಲ್ಬಾಗ ಜೊತೆಗೆ ಇನ್ಯಾವುದೋ ಗಿಡದ ಬೇರು ಎರಡನ್ನೂ ಕೆಸರುಮಣ್ಣಲ್ಲಿ ಕಟ್ಟಿ ನಮಗೇ ನಾಮ ಹಾಕಿದ್ನ. ಒಡ್ಕೋಬೇಕು ನಮ್ ಬುದ್ವಂತ್ಗೇಗೆ, ಕೆಸರು ಮೆಟ್ಟಿದ ಮೆಟ್ನಲ್ಲಿ ಅಂತಾ ಒಬ್ಬರಿಗೊಬ್ಬರು ಬಯ್ಕೊಂಡ್ರಂತೆ ಈ ಬುದ್ವಂತ್ರು.

# 32. ಇನ್ನೊಂದು ಮುಖ:

ಮೇಲ್ನೋಟಕ್ಕೆ ನಮಗೆಲ್ಲ ಅನ್ನಿಸಬಹುದು. ಈ ಆಶ್ರಮವಾಸಿಗಳು ನಮಗಿಂತ ಪುಣ್ಯವಂತರು. ಏನೂ ಕೆಲಸಮಾಡಬೇಕಿಲ್ಲ, ಹೊತ್ತುಹೊತ್ತಿಗೆ ಊಟ, ಅದೂ ಆಗಾಗ ವಿವಿಧ ಭಕ್ಷ್ಯಗಳು, ವರ್ಷವರ್ಷವೂ ಹೊಸಹೊಸ ಉಡುಗೆಗಳು, ಕಾಲಕಾಲಕ್ಕೆ ಆರೋಗ್ಯತಪಾಸಣೆ, ಯಾವುದೇ ಜಂಜಡವಿಲ್ಲ ಅಂತ. ಅದು ಹಾಗೇ ಇದ್ದಲ್ಲಿ ನಿಜಕ್ಕೂ ಸ್ವರ್ಗ. ಆದರೆ ವಾಸ್ತವ ಪರಿಸ್ಥಿತಿಯೇ ಬೇರೆ. ಕೆಲವು ಆಶ್ರಮಗಳು ಈ ಕೆಳಗಿನ ಉದಾಹರಣೆಗಳಿಗಿಂತ ಭಿನ್ನವಿರಬಹುದು. ಆಶ್ರಮವಾಸಿಗಳನ್ನು, ಅಲ್ಲಿ ಪರಿಚಾರಕರಾಗಿ ಕಾರ್ಯ ನಿರ್ವಹಿಸುತ್ತಿರುವವರನ್ನು ಆಪ್ತಸಮಾಲೋಚನೆಯಲ್ಲಿ ತೊಡಗಿಸಿ ಕೊಂಡಾಗ ಅರಿವಾಗುವ ಸತ್ಯ ಅತ್ತಿ ಹಣ್ಣಿನಂತಿರುವ ಕೆಲವು ಆಶ್ರಮಗಳ ಕಥೆ ಈ ಕೆಳಗಿನ ಸಾಲುಗಳಲ್ಲಡಗಿವೆ.

ಅಕ್ಕಾ ನನಗೆ 17 ವರ್ಷಕ್ಕೇ ಮದುವೆಮಾಡಿದರು. 20ನೇ ವರ್ಷದ ವೇಳೆಗೆ ಎರಡು ಮಕ್ಕಳನ್ನು ಕೊಟ್ಟು ನನ್ನ ಗಂಡ ಸತ್ತುಹೋದರು. ಏನು ಮಾಡಲೂ ತೋಚದೇ ಇದ್ದಾಗ ಅಣ್ಣ ಅವರು ನನ್ನನ್ನು ಈ ಆಶ್ರಮದಲ್ಲಿ ಆಶ್ರಯ ಒದಗಿಸಿಕೊಟ್ಟರು. ಮಕ್ಕಳ ವಿದ್ಯಾಭ್ಯಾಸದ ಹೊರೆಯನ್ನೂ ಹೊತ್ತುಕೊಂಡರು. ಅಕ್ಕಾ ನನಗೆ ಮದುವೆ ಆಗಿ ಕೇವಲ ಒಂದೇ ವರ್ಷಕ್ಕೆ ನನ್ನ ಗಂಡ ತೀರಿಕೊಂಡರು. ಮಕ್ಕಳು ಮರಿ ಯಾರೂ ಇಲ್ಲ. ನಮ್ಮ ಅತ್ತೆಮನೆಯವರ ಕಾಟ ತಡೆದುಕೊಳ್ಳಲಾಗಲಿಲ್ಲ. ಯಾರೋ ಮಹಾತ್ಮರು ನಿಮ್ಮ ಆಶ್ರಮದ ಅಡ್ರೆಸ್ ಕೊಟ್ಟುಕಳುಹಿಸಿದರು. ಈಗ ಸಂತೋಷವಾಗಿದ್ದೀನಿ. ಅಕ್ಕಾ

ನನ್ನ ಕಥೆ ಹೇಳಬೇಕೇ. ನನಗೆ ಒಬ್ಬ ಗಂಡನ್ನು ತೋರಿಸಿದ್ದರು. ಬಂದು ನೋಡಿ ತನ್ನ ಒಪ್ಪಿಗೆ ಸೂಚಿಸಿ ವಾಪಸಾಗುವಾಗ ಮಾರ್ಗಮಧ್ಯೆ ಅಪಘಾತವಾಗಿ ತೀರಿಹೋದರು. ಅಂದಿನಿಂದ ನಾನು ಬೇರೆ ಮದುವೆ ಯೋಚನೆಯನ್ನೂ ಮಾಡದೇ ಇದ್ದುಬಿಟ್ಟೆ. ಒಮ್ಮೆ ನನ್ನ ತಮ್ಮ ನನ್ನನ್ನು ಮೈಸೂರು ತೋರಿಸಲು ಕರೆತಂದಿದ್ದ. ದಾರಿಯಲ್ಲಿ ನಿಮ್ಮ ಆಶ್ರಮದ ನಾಮಫಲಕ ನೋಡಿದೆ. ಬಂದು ವಿಚಾರಿಸಿದಾಗ ಇದೇ ನನಗೆ ತಕ್ಕ ಸ್ಥಳ ಎನ್ನಿಸಿತು. ಬಂದು ಕಾರ್ಯದರ್ಶಿಗಳನ್ನು ಭೇಟಿಮಾಡಿದೆ. ಒಂದು ತಿಂಗಳು ಸತಾಯಿಸಿ ನಂತರ ಸ್ಥಳಾವಕಾಶ ಮಾಡಿಕೊಟ್ಟರು. ಇದ್ಯಾಕೆ ಹೀಗೆ? ಎಲ್ಲ ಹೆಣ್ಣುಮಕ್ಕಳದೂ ಒಂದೇ ರೀತಿಯ ಗೋಳು. ಜೊತೆಗೆ ಹುಟ್ಟಿದ ಅಣ್ಣ ತಮ್ಮಂದಿರಿಗೆ, ಅಕ್ಕ ತಂಗಿಯರಿಗೆ ಇವರುಗಳನ್ನು ಬದುಕಿರುವವರೆಗೆ ನೋಡಿಕೊಂಡು ಇವರಿಗೆ ವಸತಿ, ಎರಡು ಹೊತ್ತು ಊಟಹಾಕಲು ಕಷ್ಟವೇ, ಅರ್ಥವಾಗುವುದಿಲ್ಲ ಈ ಜನರ ನಡವಳಿಕೆ. ತಾವು ಚಿಕ್ಕವರಿದ್ದಾಗ ತಮ್ಮ ಮಕ್ಕಳನ್ನು ಅಕ್ಕರೆಯಿಂದ ಸಾಕಿದ ತಮ್ಮ ತಾಯಂದಿರ ನೆನಪಾಗುವುದಿಲ್ಲವೇ ಈ ಜನರಿಗೆ. ವಿಭಿನ್ನ ಸಂಸ್ಕೃತಿ, ಪರಿಸರ, ಆಚಾರ ವಿಚಾರ, ಆಹಾರ ಪದ್ಧತಿಗಳಿಗೆ ಹೊಂದಿಕೊಂಡು ಬದುಕುತ್ತಿದ್ದ ಜೀವಗಳು ವಿಧಿಯಿಲ್ಲದೇ ಆಶ್ರಯಬಯಸಿ ವೃದ್ಧಾಶ್ರಮಗಳಿಗೆ ಬರುವಂತಾಗುವುದು ವಿಧಿಯ ಕ್ರೌರ್ಯವಲ್ಲದೇ ಮತ್ತೇನು?

ಮೇಲುನೋಟಕ್ಕೆ ಎಲ್ಲವೂ ಚೆನ್ನಾಗಿದೆ ಎನ್ನುವ ಆಶ್ರಮವಾಸಿಗಳನ್ನು ಆಪ್ತವಾಗಿ ಸಮಾಲೋಚಿಸಿದರೆ ಅವರ ಒಳಗಿನ ವೇದನೆ ಅರ್ಥವಾಗುತ್ತದೆ. ತಮ್ಮ ಮೊದಲಿನ ಆಹಾರಪದ್ಧತಿಗೆ ಒಗ್ಗದ ಆಹಾರಪದ್ಧತಿಯಿರಬಹುದು. ಸ್ವಾತಂತ್ರ್ಯಹರಣ ವಿಚಾರ ಆಗಿರಬಹುದು, ಅನ್ಯರ ಜೊತೆಯಿದ್ದರೂ, ತಮ್ಮನ್ನು ದೂರೀಕರಿಸಿದ ಕರುಳ ಸಂಬಂಧಿಗಳ ನೆನಪಿರಬಹುದು, ಕೆಲವೊಮ್ಮೆ ಆಶ್ರಮ ನಡೆಸುವವರ ದೌರ್ಜನ್ಯಗಳೇ ಇರಬಹುದು ಬಹಿರಂಗಗೊಳ್ಳದ ಸಂಕಟಗಳಾಗಿ ಗೋಚರಿಸತೊಡಗುತ್ತವೆ. ಅನಿವಾರ್ಯವಾದುದರಿಂದ ಇವುಗಳೆಲ್ಲವನ್ನೂ ಸಹಿಸಿಕೊಂಡು ಬದುಕು ಸವೆಸುತ್ತಿರುವವರ ಸಂಖ್ಯೆಯೇನೂ ಕಡಿಮೆಯಿಲ್ಲ. ನಮ್ಮ ಆಶ್ರಮದಲ್ಲೇ ಪರವಾಗಿಲ್ಲ, ತಿಂಗಳಲ್ಲಿ ಹತ್ತಾರು ದಿನ ಹೊರಗಿನಿಂದ ಊಟಬರುತ್ತದೆ. ಮಕ್ಕಳ ಹುಟ್ಟುಹಬ್ಬ, ತಮ್ಮ ಹುಟ್ಟುಹಬ್ಬ, ತಮ್ಮವರ ಪುಣ್ಯದಿನ ಹೀಗೇ ನಾನಾ ಕಾರಣಗಳಿಗಾಗಿ ಆಶ್ರಮಗಳಲ್ಲಿ ಊಟಹಾಕಿಸುವವರು ಹೆಚ್ಚಾಗಿದ್ದಾರೆ. ಇದು ಕೆಲವರ ಅಭಿಪ್ರಾಯವಾಗಿದ್ದರೆ, ನಮ್ಮ ವೃದ್ಧಾಶ್ರಮದಲ್ಲಿ ಮಾಡುವ ಅಡುಗೆ ಬಾಯಿಗಿಡಲು ಆಗುವುದಿಲ್ಲ. ಅವರು ಬೇಕೆಂತಲೇ ಹಾಗೆ ಮಾಡುತ್ತಾರೋ, ಅಥವಾ ಅವರಿಗೆ ಅಡುಗೆಮಾಡಲು ಬರುವುದಿಲ್ಲವೋ ತಿಳಿಯುತ್ತಿಲ್ಲ. ಪಲಾವ್/

ಚಿತ್ರಾನ್ನಕ್ಕೆ ಹೆಚ್ಚು ಖಾರಹಾಕುವುದು. ಚಟ್ನಿಗೆ ಹೆಚ್ಚು ಉಪ್ಪು ಹಾಕುವುದು, ಚಪಾತಿ, ತರಕಾರಿ ಬೆಂದೇಯಿರುವುದಿಲ್ಲ ಮುಂತಾದ ದೂರುಗಳು ಸಾಮಾನ್ಯ. ಇನ್ನು, ಕೆಲವುಕಡೆ ತರಕಾರಿ ಹೋಳೇ ಇರುವುದಿಲ್ಲ. ನನಗೆ ಕೊಟ್ಟ ಚಪಾತಿಯನ್ನು ಕೋತಿ, ನಾಯಿಗಳಿಗೆ ತಿನ್ನಿಸುತ್ತೇನೆ. ಬರೀ ಮೊಸರನ್ನ ತಿಂದುಕೊಂಡು ಕಾಲಕಳೆಯುತ್ತಿದ್ದೇನೆ, ಇದು ಒಬ್ಬ ಆಶ್ರಮವಾಸಿಯ ಗೋಳು. ಮ್ಯಾನೇಜರ್ ಹೊಡೆಯುತ್ತಾರೆ, ಗದರಿಸುತ್ತಾರೆ, ಯಾರ ಮುಂದೆಯೂ ಬಾಯಿಬಿಚ್ಚುವಂತಿಲ್ಲ ಇದು ಮತ್ತೊಬ್ಬರ ದೂರು. ಅವರೂ ತಮ್ಮಂತೆ ಮನುಷ್ಯರು ಎಂಬ ಭಾವನೆ ಇಂತಹವರಿಗೆ ಯಾಕೆ ಬರುವುದಿಲ್ಲವೋ ನಾಕಾಣೆ. ಇಂದಿನ ದಿನಗಳಲ್ಲಿ ಮನುಷ್ಯರಲ್ಲಿ ಮಾನವೀಯತೆ ಮರೆಯಾಗಿ, ಮೃಗೀಯತೆ ಹೆಚ್ಚಾಗುತ್ತಿರುವುದು ಕಂಡುಬರುತ್ತಿದೆ. ಇಂತಹ ಸುದ್ದಿಗಳನ್ನು ಪದೇಪದೇ ಮಾಧ್ಯಮಗಳು ಬಿತ್ತರಿಸುವುದರಿಂದ ನಮ್ಮಲ್ಲಿ ಕಾರುಣ್ಯ ಮರೆಯಾಗಿ ಕಾಠಿಣ್ಯ ನೆಲೆಗೊಳ್ಳುತ್ತಿದೆಯೇನೋ ಎಂದೂ ಅನಿಸುತ್ತಿದೆ. ವರುಷಗಳು ಕಳೆದಂತೆ, ಕಳೆದ ವರ್ಷಗಳೇ ಹಿತಕರವಾದವು ಎನಿಸತೊಡಗುವುದೂ ಉಂಟು. ಮತ್ತೊಂದೆಡೆ ತಮ್ಮ ತಂದೆತಾಯಿಗಳನ್ನೇ ವೃದ್ಧಾಶ್ರಮಗಳಿಗೆ ದೂಡಿದ್ದರೂ, ತಮ್ಮ ಗಳಿಕೆಯ ಒಂದು ಪಾಲನ್ನು ದಾನಮಾಡುವ ಪ್ರವೃತ್ತಿ ಹೆಚ್ಚುಹೆಚ್ಚಾಗಿ ಕಂಡುಬರುತ್ತಿದೆ. ಎಷ್ಟೇ ವೃದ್ಧಾಶ್ರಮಗಳನ್ನು ತೆರೆದರೂ ಅದಕ್ಕೆ ಪ್ರವೇಶಿಸುವವರ ಸಂಖ್ಯೆಗೂ ಕೊರತೆಯಿಲ್ಲ, ಹರಿದುಬರುವ ಸಂಪತ್ತಿಗೂ ಕೊರತೆ ಕಾಣಿಸುವುದಿಲ್ಲ. ಕೆಲವರು ಒಳ್ಳೆಯ ಮನಸ್ಸಿನಿಂದಲೇ ದಾನಧರ್ಮ ಕ್ರಿಯೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರಲೂ ಬಹುದು.

ಮೊದಮೊದಲು ಒಂದು ನಿರ್ದಿಷ್ಟ ಕೋಮಿನಲ್ಲಿ ತಂದೆತಾಯಿಯರನ್ನು ವೃದ್ಧಾಶ್ರಮಗಳಲ್ಲಿ ಬಿಡುವ ಪದ್ಧತಿ ಕಾಣಿಸಿ ಕೊಂಡಿತ್ತಾದರೂ, ಇಂದು ಕೋಮಿನ ಎಲ್ಲೆಯನ್ನು ಮೀರಿ ಎಲ್ಲ ವರ್ಗದವರೂ ನಾನಾ ಕಾರಣಕ್ಕೆ ವೃದ್ಧಾಶ್ರಮಗಳಿಗೆ ತಂದೆತಾಯಿ, ಅಕ್ಕ ತಂಗಿಯರನ್ನು ಸೇರಿಸುವ ಘನಕಾರ್ಯ ಮಾಡುತ್ತಿರುವುದು ಸಾಮಾನ್ಯಸಂಗತಿ. ಅಲ್ಲಿ ತಗಲುವ ಖರ್ಚನ್ನು ಭರಿಸಲು ಸಿದ್ಧರಿರುತ್ತಾರೆಯೇ ಪರಂತು ಅವರನ್ನು ತಮ್ಮ ಮನೆಯಲ್ಲಿಯೇ ಇಟ್ಟುಕೊಂಡು ನೋಡಿಕೊಳ್ಳುವ ಹೊಣೆಹೊರಲು ತಯಾರಿರುವುದಿಲ್ಲ. ತಮ್ಮ ಹಾಲೂಡಿಸಿ, ಮುದ್ದುಮಾಡಿ, ಸರ್ವಸ್ವವನ್ನೂ ತ್ಯಾಗಮಾಡಿ ಬೆಳೆಸಿದ ಮಗ/ಮಗಳು ವಿದೇಶಕ್ಕೆ ತೆರಳಿದಾಗ ಅನಾಥರಾಗುವ ಮುದಿಮಂದಿ ಎಷ್ಟುಮಂದಿಯಿಲ್ಲ? ಭವ್ಯ ಬಂಗಲೆಯಲ್ಲಿದ್ದರೂ, ಲಕ್ಷಾಂತರ ರೂಪಾಯಿಗಳ ಆದಾಯವಿದ್ದರೂ ಇವರೂ ಒಂದು ರೀತಿಯ

ಅನಾಥರೇ. ಇಂತಹವರೂ ವೃದ್ಧಾಶ್ರಮಗಳಲ್ಲಿ ಆಶ್ರಯ ಬಯಸುತ್ತಿದ್ದಾರೆ. ಹಾಗಿದ್ದಲ್ಲಿ ವೃದ್ಧಾಶ್ರಮಗಳು, ಅನಾಥಾಶ್ರಮಗಳು ಬೇಕಿಲ್ಲವೇ? ಖಂಡಿತ ಇದಲ್ಲ ನಮ್ಮ ವಾದ. ಚಿಕ್ಕ ವಯಸ್ಸಿನಲ್ಲೇ ತಂದೆತಾಯಿಗಳನ್ನು ಕಳೆದುಕೊಂಡ ಮಕ್ಕಳು, ಗಂಡ ಹೆಂಡತಿ ಇಬ್ಬರೇ ಇದ್ದು, ಅವರಲ್ಲೊಬ್ಬರು ಮರಣಿಸಿದಾಗ ಅಂತಹವರಿಗೆ ಇಂತಹ ಆಶ್ರಯತಾಣಗಳು ಅತ್ಯವಶ್ಯಕ. ಮಕ್ಕಳಿದ್ದೂ ವೃದ್ಧಾಶ್ರಮ ಸೇರುವ ಮಂದಿಯ ದೌರ್ಭಾಗ್ಯಕ್ಕೆ ಏನನ್ನಬೇಕು ನೀವೇ ಹೇಳಿ !

## 33. ಮನರಂಜನೆ –ಪರಿಮಾಣ, ಪರಿಣಾಮ:

ಅಯ್ಯೋ ನಮ್ಮೊಗು ನೋಡ್ರೀ ಸ್ಮಾರ್ಟ್ ಫೋನ್ ಎಷ್ಟು ಚೆನ್ನಾಗಿ ಆಪರೇಟ್ ಮಾಡುತ್ತಿದ್ದಾನೆ. ಅಮ್ಮಅಪ್ಪಂದಿರಿಗೆ ಸಂಭ್ರಮವೋ ಸಂಭ್ರಮ. ಅವನೇ ವಿಡಿಯೋ ಗೇಂಗಳನ್ನು ಹಾಕ್ಕೊಂಡು ಆಡ್ಕೋತಾಯಿರ್ತಾನೆ, ನಮಗೆ ತೊಂದರೇನೇ ಕೊಡೊಲ್ಲಾಪ್ಪ. ನಮಗೇ ಗೊತ್ತಿಲ್ಲ, ನಾವು ಅವನನ್ನು ಏನು ಮಾಡುತ್ತಿದ್ದೇವೆ? ಈ ಸ್ಮಾರ್ಟ್ ಫೋನ್ ಆಪರೇಶನ್ ಅವನ ಉನ್ನತಿಯೋ ಅಧಃಪತನವೋ? ಇತ್ತೀಚಿನ ಸಂಶೋಧಕರು ಹೇಳುವಂತೆ ನಿಮ್ಮ ಮಕ್ಕಳ ಕ್ರಿಯೇಟವಿಟಿ ಹಾಳಾಗುತ್ತಿರುವುದಕ್ಕೆ ಕಾರಣವೇ ಅವರ ಕೈಗೆ ನಾವು ಕೊಟ್ಟಿರುವ ಸ್ಮಾರ್ಟ್‌ಫೋನ್! ಅವನ ದೃಷ್ಟಿ ಹಾಳಾಗಲೂ ನಾವೇ ಕಾರಣವಾಗುತ್ತಿಲ್ಲವೇ? ಅವರು ಇಂದಿನ ಜಗತ್ತಿಗೆ ಹೊಂದಿಕೊಳ್ಳುತ್ತಿರಬಹುದು. ಅವರ ಅಜ್ಜಿ ತಾತಂದಿರಿಗೆ ಗೊತ್ತಿಲ್ಲದ ಹಲವಾರು ಆಪರೇಶನ್ನುಗಳನ್ನು ಅವರು ಮಾಡುತ್ತಿದ್ದಾರೆ, ಅವರಿಗಿಂತ ಈ ಮುಂದಿನ ಜನರೇಶನ್ ಅಡ್ವಾನ್ಸ್ ಆಗಿರಬಹುದು ಅಷ್ಟೇ. ನೀವೇ ಯೋಚಿಸಿನೋಡಿ, ಇಂದಿನ ಮಕ್ಕಳು ಎಷ್ಟರ ಮಟ್ಟಿಗೆ ಲೆಕ್ಕಾಚಾರದಲ್ಲಿ ನಿಷ್ಣಾತರಾಗಿರುತ್ತಾರೆ ಎಂದರೆ ಒಂದು ಸರಳ ಗುಣಾಕಾರ, ಭಾಗಾಕಾರ, ಅಷ್ಟೇ ಏಕೆ ಹತ್ತು ಅಂಕಿಗಳನ್ನು ಕೂಡಲು ಹೇಳಿದರೆ ಅವರು ಮೊದಲು ಕೈಗೆತ್ತಿಕೊಳ್ಳುವುದು ಕ್ಯಾಲ್ಕಿ (ಕ್ಯಾಲ್ಕುಕುಲೇಟರ್) ಅಥವಾ ಸ್ಮಾರ್ಟ್ ಫೋನ್. ಅದೇ ನಮ್ಮ

ಪೀಳಿಗೆಯವರು ಅವರಿಗಿಂತ ಮುಂಚೆ ಬಾಯಲ್ಲೇ ಲೆಕ್ಕ ಹಾಕಿಹೇಳಿ ಬಿಡುತ್ತೇವೆ. ಇನ್ನೂ ಮುಂದುವರಿದು ಹೇಳುವುದಾದರೆ. ಒಂದು ಮಂದೆಯಲ್ಲಿ ಇರುವ ಕುರಿಗಳ ಸಂಖ್ಯೆ ಕೇಳಿದರೆ. ಅವುಗಳ

ಕಾಲುಗಳನ್ನು ಲೆಕ್ಕಹಾಕಿ ಅದನ್ನು ನಾಲ್ಕರಿಂದ ಭಾಗಿಸಿ ಉತ್ತರ ಕೊಡುವಷ್ಟು ಬುದ್ಧಿ ವಂತಿಕೆ ನಮ್ಮಲ್ಲಿತ್ತು ಎನ್ನಲು ಹೆಮ್ಮೆಯಾಗುತ್ತದೆ. ಬಿ.ಕಾಂ ಪದವಿ ಮುಗಿಸುವವರೆಗೆ ನಾನು ಬಾಲ್ಯ ಸ್ನೇಹಿತರೊಡನೆ ರೇಡಿಯೋದಲ್ಲಿ ಕ್ರಿಕೆಟ್ ಕಾಮೆಂಟರಿ ಕೇಳುತ್ತಿದ್ದುದು ಸಾಮಾನ್ಯ. ಯಾವಾಗಲಾದರೊಮ್ಮೆ ಚಲನಚಿತ್ರಗಳಿಗೆ ಹೋಗಿದ್ದುಂಟು. ನಾಟಕಗಳಿಗೆ ಹೋಗಿದ್ದು ನೆನಪಿಲ್ಲವೇ ಇಲ್ಲ. ಸಿನಿಮಾಗೆ ಹೋದರೂ ಅದು ಕೆಳಗಿನ ಅಂತಸ್ತಿನಲ್ಲಿ ಮಾತ್ರ. ಒಮ್ಮೆಯಂತೂ ಆಶಾಪರೇಖ್ ನಟಿಸಿದ್ದ ಒಂದು ಹಿಂದಿ ಚಲನಚಿತ್ರಕ್ಕೆ ಮುಂದುಗಡೆಯಿಂದ ಎರಡನೇ ಸಾಲಿನಲ್ಲಿ ಕುಳಿತು ಸಿನಿಮಾನೋಡಿದ್ದೆ. ವ್ಯಕ್ತಿಗಳೆಲ್ಲಾ ಉದ್ದುದ್ದವಾಗಿ ಸೌತೇಕಾಯಿ ಮುಖದವರ ತರಹ ಕಾಣುತ್ತಿದ್ದರು. ಇವತ್ತಿಗೂ ನೆನಪಿನಲ್ಲಿ ಉಳಿದಿರುವುದು ಶ್ರೀ ಟಾಕೀಸಿನಲ್ಲಿ ನೋಡಿದ್ದ ಹಿಂದಿಯ 'ಸಂಗಾದೌರ್', ಕ್ಲಾಸಿಗೆ ಚಕ್ಕರ್ ಹೊಡೆದು ಲಕ್ಷ್ಮೀಟಾಕೀಸಿನಲ್ಲಿ ನೋಡಿದ್ದ ತಮಿಳಿನ ಶಿವಾಜಿ ಗಣೇಶನ್ ಸರೋಜಾದೇವಿ ನಟಿಸಿದ್ದ 'ಪುದಿಯ ಪರವೈ' ಒಂದು ಪತ್ತೇದಾರಿ ಥ್ರಿಲ್ಲರ್, ಗಾಯಿತ್ರಿ ಟಾಕೀಸಿನಲ್ಲಿ ನೋಡಿದ್ದ ಇಂಗ್ಲೀಷಿನ 'ಸೈಕೋ' ಹೀಗೆ ಬೆರಳಣಿಕೆಯಷ್ಟು ಮಾತ್ರ. ಇನ್ನು ನಾನು ಆಗ ತಾನೇ ಪದವಿಮುಗಿಸಿ ಸ್ನಾತಕೋತ್ತರ ಪದವಿ ಎಂ.ಕಾಂ. ಗೆ ಸೇರಿದ್ದೆ. ಬೆಳಿಗ್ಗೆ ತರಗತಿ ಮುಗಿಸಿ ಮನೆಕಡೆ ನಾನೂ, ಅನಂತನ್ ಬರುವಾಗ ನೂರಡಿರಸ್ತೆಯಲ್ಲಿ 'ಮೆಜೆಸ್ಟಿಕ್' ಹೋಟಲಿನ ರೇಡಿಯೋದಲ್ಲಿ ವಿವಿಧಭಾರತಿಯಲ್ಲಿ ಹಿಂದಿ ಚಿತ್ರಗೀತೆಗಳನ್ನು ಹಾಕಿರುತ್ತಿದ್ದರು. ಅದನ್ನು ಕೆಲಹೊತ್ತು ನಿಂತು ಕೇಳಿ, ನಂತರ ಮನೆಕಡೆ ಹೋಗುತ್ತಿದ್ದೆವು.

ಅಷ್ಟೇ ನಮ್ಮ ಮನರಂಜನೆ. ನಾನು ಸಿನಿಮಾ ಹೆಚ್ಚಿಗೆ ನೋಡತೊಡಗಿದ್ದು ಕೆಲಸಕ್ಕೆ ಸೇರಿದನಂತರ, ನಾವು ಬಾಡಿಗೆಗೆ ಹಿಡಿದಿದ್ದ ಮನೆಮಾಲೀಕನ ಮಗ ನನ್ನ ದೋಸ್ತಿಯಾದನಂತರ, ಅದೂ ಸೆಕೆಂಡ್ ಶೋಗಳಿಗೆ ಹೋಗತೊಡಗಿದೆವು. ಅಲ್ಲಿಯವರೆವಿಗೂ ನಮ್ಮ ಮನರಂಜನೆ ಹೆಚ್ಚಿನ ಸಮಯ ರೇಡಿಯೋಗೆ ಸೀಮಿತವಾಗಿತ್ತು. ರೇಡಿಯೋ ತನ್ನ ಪಾಡಿಗೆ ಅರಚುತ್ತಿದ್ದರೂ, ನಮ್ಮ ಕೆಲಸ ಅಭಾದಿತವಾಗಿ ಸಾಗುತ್ತಿತ್ತು. ಆ ದಿನಗಳಲ್ಲಿ ಶೇ.99 ಮಂದಿ ಕನ್ನಡಿಗರು ಕೇಳುತ್ತಿದ್ದ ಸಂಜೆ7-30 ರಿಂದ 7-45 ರವರೆಗೆ ಪ್ರಸಾರವಾಗುತ್ತಿದ್ದ 'ನಿಮ್ಮ ಮೆಚ್ಚಿನ ಚಿತ್ರಗೀತೆಗಳು' ರೇಡಿಯೋ ಜನಪ್ರಿಯತೆಗೆ ಹಿಡಿದ ಕೈಗನ್ನಡಿ. ನಂತರದ ದಿನಗಳಲ್ಲಿ ಟೇಪ್ ರೆಕಾರ್ಡರ್ ಬಂತು. ರೇಡಿಯೋದಲ್ಲಿ ಅವರು ಹಾಕಿದ ಹಾಡನ್ನು, ಅವರು ಪ್ರಸಾರ ಮಾಡಿದಾಗ ಮಾತ್ರ ನಾವು ಕೇಳಬೇಕಾಗಿತ್ತು. ಆದರೆ ಈ ಟೇಪ್ ರೆಕಾರ್ಡರ್‌ನಲ್ಲಿ ನಮಗೆ ಬೇಕಾದ ಹಾಡುಗಳ ಕ್ಯಾಸೆಟ್ಟುಗಳನ್ನು ಕೊಂಡು

ಅಥವಾ ರೆಕಾರ್ಡ್ ಮಾಡಿಕೊಂಡು, ನಮಗೆ ಬೇಕೆನಿಸಿದಾಗ ಕೇಳುವ ಅವಕಾಶವಿತ್ತು. ಇಲ್ಲಿಯೂ ಸಹಾ ನಾವು ಮಾಡುತ್ತಿದ್ದ ಕೆಲಸಕಾರ್ಯಗಳಿಗೆ ಯಾವುದೇ ಅಡಚಣೆ ಇರುತ್ತಿರಲಿಲ್ಲ. ಆದರೆ 1984-85ರ ವೇಳೆಗೆ ಬಂತು ನೋಡಿ ಈ 'ಟೀ.ವೀ' ಅನ್ನುವ ಮಾಧ್ಯಮ, ಅಲ್ಲಿಂದಾಚೆಗೆ ನಮ್ಮ ಕಾರ್ಯ ವೈಖರಿ, ಮಾನವೀಯ ಸಂಬಂಧಗಳು ಎಲ್ಲವುಗಳಲ್ಲಿ ಅಗಾಧ ಬದಲಾವಣೆಗಳಾಗತೊಡಗಿದವು. ಆಗ ಇದ್ದುದು ಒಂದೇ ಚಾನಲ್ ಅದು ದೂರದರ್ಶನ. ಅದರಲ್ಲಿ ಪ್ರತಿದಿನ ಕೆಲಹೊತ್ತು ಕನ್ನಡ ಕಾರ್ಯಕ್ರಮಗಳು ವಾರ್ತೆಗಳು ಪ್ರಸಾರವಾದರೆ, ಶುಕ್ರವಾರ, ಶನಿವಾರ, ಭಾನುವಾರಗಳಂದು ಸಂಜೆ ಕನ್ನಡ ಚಲನಚಿತ್ರಗಳು & ಭಾನುವಾರಗಳ ಮಧ್ಯಾನ್ಹ ರಾಷ್ಟ್ರಪ್ರಶಸ್ತಿ ವಿಜೇತ ವಿವಿಧ ಭಾಷೆಗಳ ಚಲನಚಿತ್ರಗಳು ಪ್ರಸಾರವಾಗುತ್ತಿದ್ದವು.

ಟೀವಿ ಇದ್ದ ಎಲ್ಲರ ಮನೆಮೇಲೂ ಉದ್ದುದ್ದ ಆಂಟೆನಾಗಳು ನಿಲ್ಲತೊಡಗಿದವು. ಮೊದಮೊದಲಿಗೆ ಬಣ್ಣದ ಟೀವೀಗಿಂತ ಹೆಚ್ಚಾಗಿ ಪ್ರಸಾರವಾಗುತ್ತಿದ್ದುದು ಕಪ್ಪು ಬಿಳುಪಿನ ಕಾರ್ಯಕ್ರಮಗಳು. ನೈಜತೆಯ ಹೆಸರಿನಲ್ಲಿ ಬಣ್ಣದ ಟೀವೀ ಕಾರ್ಯಕ್ರಮಗಳು ಪ್ರಸಾರವಾಗತೊಡಗಿದವು. ಆದರೂ ಇದ್ದುದು ಒಂದೇ, ಅದು 'ದೂರದರ್ಶನ'. ಇದರ ಪರಿಣಾಮ ನೇರವಾಗಿ ಆಗಿದ್ದು ರೇಡಿಯೋ-ಗಳ ಮೇಲೆ. ರೇಡಿಯೋ ಮೂಲೆಗುಂಪಾಯಿತು. ಜನರು ಹೆಚ್ಚುಹೆಚ್ಚಾಗಿ ಮನೆಗೆ ಅದರಲ್ಲೂ ಟೀವೀಗೆ ಅಂಟಿಕೊಳ್ಳತೊಡಗಿದರು. ಆಗ ನನಗನ್ನಿಸಿದ್ದು, ಈ ಟೀವೀಯಲ್ಲೂ ಯಾಕೆ ರೇಡಿಯೋತರಹಾ ಹಲವಾರು ಸ್ಟೇಶನ್ನುಗಳು ಇರಬಾರದಾ? ನಂತರ ಕೇಬಲ್ ಪ್ರಾರಂಭಗೊಂಡಾಗಲಿಂದ "ಉದಯ" & "ಈ ಟೀವೀ" ಚಾನಲ್ಲುಗಳು ಮೊದಲು ಪ್ರಸಾರವಾಗತೊಡಗಿದವು. ನಂತರ ಇತರ ಚಾನಲ್ಲುಗಳು ಸೇರುತ್ತಾ ಹೋಗಿ, 99 ಚಾನಲ್ಲುಗಳು, ನಂತರದ ದಿನಗಳಲ್ಲಿ 250 ಚಾನಲ್ಲುಗಳು, 350 ಚಾನಲ್ಲುಗಳ ಸೇರ್ಪಡೆಗೊಂಡವು. ಅದು 999 ರ ಗಡಿ ತಲುಪುವ ದಿನ ದೂರವಿಲ್ಲ. ಒಟ್ಟಿನಲ್ಲಿ ಚಾನಲ್ಲುಗಳ ಮಹಾಪೂರವೇ ಉಂಟಾಯಿತು. ಜನರಿಗೆ ಯಾವ ಚಾನಲ್ಲು ನೋಡುವುದು, ಯಾವುದನ್ನು ಬಿಡುವುದು ಅನ್ನುವ ಗೊಂದಲವೇ ಉಂಟಾಗತೊಡಗಿತು. ಈಗಂತೂ ಡಿಶ್‌ಗಳು, ಸೆಟ್ ಟಾಪ್ ಬಾಕ್ಸ್, ಡಿಟಿಹೆಚ್‌ಗಳ ಯುಗ ಪ್ರಾರಂಭವಾಗಿದೆ. ಯಾವ ಹಂತ ತಲುಪಿರುವೆವೆಂದರೆ, ಈ ಟೀವೀ ಮಾಧ್ಯಮಕ್ಕಿಂತ ನಮಗೆ ರೇಡಿಯೋನೇ ಎಷ್ಟೋ ವಾಸಿಯಾಗಿತ್ತು, ಅದು ಅರಚುತ್ತಿದ್ದರೂ ನಾವು ನಮ್ಮ ಕೆಲಸವನ್ನು ನಿರಾತಂಕವಾಗಿ ಮಾಡಿಕೊಂಡು ಹೋಗಬಹುದಿತ್ತು ಎನ್ನಿಸತೊಡಗಿದೆ.

ಜನರು ಸಿನಿಮಾ ನಾಟಕಗಳಿಗೆ ಹೋಗುವುದು ಕಡಿಮೆಯಾಯಿತು. ಮನೆಗೆ ನೆಂಟರೋ ಸ್ನೇಹಿತರೋ ಬಂದರೆ, ಅವರೊಡನೆ ಮಾತನಾಡಲೂ ಕಷ್ಟವಾಗ-ತೊಡಗಿತು. ಮನೆಮಂದಿಯಲ್ಲೇ ಅವರವರ ಚಾನಲ್ಲುಗಳನ್ನು ನೋಡಲು ಜಗಳವೇ ಶುರುವಾಯಿತು. ಮನೆಗೊಂದು ಟೀವೀ ಅನ್ನೋದು ಹೋಗಿ ಅಪ್ಪನಿಗೊಂದು, ಅಮ್ಮನಿಗೊಂದು, ಮಕ್ಕಳಿಗೊಂದು ಟೀವೀ ಅನ್ನೋ ಕಾಲಬಂತು. ಈಗಂತೂ ಮೊಬೈಲುಗಳಲ್ಲೇ ಟೀವೀ ನೋಡುವ ಅವಕಾಶ ಬಂದುಬಿಟ್ಟಿದೆ. ಜನರ ಭಾವನೆಗಳೇ ಬದಲಾಗಿಹೋಗಿದೆ. ಅಪರಾಧ, ಅತ್ಯಾಚಾರ, ಕಳ್ಳತನ, ದರೋಡೆ, ಅಪಘಾತ ಇವುಗಳೇ ಚಾನಲ್ಲುಗಳ ಮುಖ್ಯ ಸರಕುಗಳಾಗಿಬಿಟ್ಟಿವೆ. ಜನರೂ ಅಂತಹ ಘಟನೆಗಳನ್ನು ಮಾಮೂಲಿ ಘಟನೆಗಳೆಂದು ಭಾವಿಸಲು ಆರಂಭಿಸಿದ್ದಾರೆ. ಆಜಾದಿ ಬಚಾವೋ ಆಂದೋಲನದ ರೂವಾರಿ ದಿವಂಗತ ರಾಜೀವ್ ದೀಕ್ಷಿತ್ ತಮ್ಮ ಭಾಷಣಗಳಲ್ಲಿ ಹತ್ತಿಪ್ಪತ್ತು ವರ್ಷಗಳ ಹಿಂದೆಯೇ ಹೇಳಿದ್ದ ಮಾತುಗಳು ನೆನಪಿಗೆ ಬರುತ್ತಿವೆ. 'ಇಂದು ಈ ಟೀವೀ ಹಾವಳಿ ಎಷ್ಟರಮಟ್ಟಿಗೆ ಅಪರಾಧ, ಅತ್ಯಾಚಾರ ವಿಚಾರಗಳನ್ನು ಮುಂದಿಡುತ್ತಿದೆ ಎಂದರೆ, ಒಂದು ಚಿಕ್ಕ ಮಗು ಯುವಕನಾಗುವ ವೇಳೆಗೆ ಅವನ ಕಣ್ಣಮುಂದೆಯೇ ಅತ್ಯಾಚಾರ, ಅಪರಾಧ ನಡೆದರೂ ಅದನ್ನು ಅವನು ತಡೆಗಟ್ಟುವ ಪ್ರಯತ್ನಮಾಡುವ ಬದಲಿಗೆ ಅದನ್ನು ಎಂಜಾಯ್‌ಮಾಡತೊಡಗುತ್ತಾನೆ'.

ಈ ಮಾತುಗಳು ಇಂದು ಸತ್ಯವಾಗಿವೆ ಎನಿಸುತ್ತಿದೆ. ಮನೆಗೆ ಯಾರಾದರೂ ಬರುತ್ತಾರೆಂದರೆ, 'ಅಯ್ಯೋ ಇವರು ಯಾಕೆ ವಕ್ಕರಿಸಿಕೊಳ್ಳುತ್ತಿದ್ದಾರೋ ಆ ಸಮಯದಲ್ಲಿ ನನ್ನ ಇಷ್ಟದ ಧಾರಾವಾಹಿ ಮಿಸ್ ಆಗುತ್ತದಲ್ಲಾ' ಅಂತ ಸಂಕಟ ಪಡುವವರೇ ಹೆಚ್ಚಾಗಿದ್ದಾರೆ. ಮಾತನಾಡುವ ವ್ಯವಧಾನವೇ ಇಲ್ಲ ಅವರಿಗೆ. ಕೆಲವೊಮ್ಮೆ ಬಂದವರನ್ನೂ ಧಾರಾವಾಹಿ ನೋಡಿಸಿ, ಅವರು ಬೇಸರಿಸಿ 'ನಾವು ಇನ್ನು ಹೊರಡುತ್ತೇವೆ' ಎಂದಾಗ ಒಲ್ಲದ ಮನದಿಂದ ಅವರನ್ನು ಬಾಗಿಲವರೆಗೆ ಕಳುಹಿಸಿ, ಬಾಗಿಲುಬಡಿದು ಮತ್ತೆ ಟೀವೀಮುಂದೆ ತಮ್ಮನ್ನು ಪ್ರತಿಷ್ಠಾಪಿಸಿಕೊಂಡು ಬಿಡುವ ಮಂದಿಯೂ ಉಂಟು. ಗಂಡನಿಗೆ, ಮಕ್ಕಳಿಗೆ ಅಡುಗೆ, ತಿಂಡಿ ಹೊತ್ತುಹೊತ್ತಿಗೆ ಆಗುವುದೂ ಅಪರೂಪವೇ. ಈ ರೀತಿ ನಮ್ಮ ಸಂಬಂಧಗಳೇ ಹಾಳಾಗಿಹೋಗುವ ಕಾಲಬಂದಿದೆ. ಅನಿವಾರ್ಯವಾಗಿ ಮದುವೆಗೋ ದೇವಾಲಯಕ್ಕೋ ಹೋಗಬೇಕಾದ ಪರಿಸ್ಥಿತಿ ಬಂದು ಅಲ್ಲಿಗೇ ಹೋದರೂ, ಸಿಕ್ಕ ಗೆಳತಿಯರೊಡನೆ 'ಅಯ್ಯೋ ಆ ಧಾರಾವಾಹಿಯ ..ಎಪಿಸೋಡ್ ಮಿಸ್ ಆಗೋಯ್ತು; ನೀನೇನಾದರೂ ನೋಡಿದೆಯಾ. ಅವಳೇನೋ ಆ .. ನಟಿ ಕದ್ದಿ ಅಳ್ತಾಡಿಸ್ತಾಳಲ್ಲಾ, ಆ ಎಪಿಸೋಡು' ಅನ್ನೋದೇ ಚರ್ಚೆಯ ವಿಷಯವಾಗಿರುತ್ತೆ.

ಮನೆಯಲ್ಲಿನ ಟೀವೀ ಏನಾದರೂ ಕೆಟ್ಟಿತೆಂದರೆ ಅಂದು ಮನೆಯವರ ಮೂಡೇ ಔಟ್. ಅದು ಎಷ್ಟೇ ಸಮಯವಾಗಿರಲಿ, ಒಬ್ಬ ಟೆಕ್ನಿಶಿಯನ್ನನ್ನು ಹುಡುಕಿ ಅದರ ರಿಪೇರಿ ಆಗುವವರೆಗೆ ಎಲ್ಲರ ಮೇಲೂ ಎಗರಾಟ. ಈಗಂತೂ ಸಮಾಜದಲ್ಲಿ ಎರಡು ವರ್ಗಗಳೇ ಸೃಷ್ಟಿಯಾಗಿದೆ. ಮೊದಲ ಗುಂಪು ಕ್ಯೂನಲ್ಲಿ ನಿಂತೋ, ಆನ್‌ಲೈನಿನಲ್ಲೋ ಟಿಕೇಟ್‌ಕೊಂಡು ಥಿಯೇಟರ್ ಕತ್ತಲಿನಲ್ಲಿ ಸಿನಿಮಾನೋಡಿ ನಿರ್ಮಾಪಕರ ಜೇಬುತುಂಬಿಸೋ ವರ್ಗ. ಎರಡನೆಯದು ಮನೇಲೇ ಕೂತೋ, ಮಲಗೋ ನಿರ್ಮಾಪಕರಿಗೆ ಲುಕ್ಸಾನುಮಾಡಿ ಪುಕ್ಕಟ್ಟೆ ಸಿನಿಮಾವನ್ನು ಟೀವೀಯಲ್ಲಿ ನೋಡೋ ಮಂದಿ. ಒಂದು ತಮಾಷೆ ಜಾಹಿರಾತು ನೆನಪಿಗೆ ಬರುತ್ತಿದೆ. ಮನೆಮಂದಿಯೆಲ್ಲಾ ಟೀವೀ ನೋಡುವುದರಲ್ಲಿ ಎಷ್ಟು ಮಗ್ನರಾಗಿರುತ್ತಾರೆ ಎಂದರೆ, ಮನೆಗೆ ಒಬ್ಬ ಕಳ್ಳ ಬಂದು ಒಳಗಿನ ಅಮೂಲ್ಯ ವಸ್ತುಗಳನ್ನು ದೋಚಿಕೊಂಡು ಹೋದರೂ, ಇವರಿಗೆ ತಿಳಿಯುವುದೇ ಇಲ್ಲ! ಕ್ಯಾಸೆಟ್ಟುಗಳ ಯುಗಮುಗಿದು ಸೀಡೀಗಳ ಶಕೆ ಪ್ರಾರಂಭವಾಗಿ ಆಡಿಯೋ ಟೇಪ್ ರೆಕಾರ್ಡರ್‌ಗಳು, ವಿಡಿಯೋ ಕ್ಯಾಸಟ್ ರೆಕಾರ್ಡರ್‌ಗಳು ಮೂಲೆಗುಂಪಾದವು. ಮತ್ತೆ ಈಗ ಪೆನ್ ಡ್ರೈವ್‌ಗಳು, ಬ್ಲೂ ರೇ ಡಿಸ್ಕಗಳು ಬಳಕೆಗೆ ಬರುತ್ತಿವೆ. ರೇಡಿಯೋ ಎಫ್‌ಎಂ ರೂಪದಲ್ಲಿ ಪುನರ್ಜನ್ಮ ಪಡೆದು ಜನಪ್ರಿಯವಾಗುತ್ತಿವೆ. ಸ್ಮಾರ್ಟ್ ಫೋನ್‌ಗಳು ಈ ಎಲ್ಲ ಕೆಲಸಗಳನ್ನು ಅಂಗೈಯಲ್ಲಿ ಮಾಡತೊಡಗಿವೆ. ನಾನೇ ನಿವೃತ್ತನಾಗುವವರೆಗೆ ಬೇಸಿಕ್ ಮಾಡಲ್ ಮೊಬೈಲ್ ಇಟ್ಟುಕೊಂಡಿದ್ದೆ. ಅದೂ ನಮ್ಮ ಮಕ್ಕಳು ಲೇಟರ್ ಮಾಡಲ್‌ಗಳನ್ನು ಕೊಂಡಾಗ ಬಿಸಾಡುವ ಬದಲಿಗೆ ಅವರ ಅಪ್ಪಮ್ಮಂದಿರಿಗೆ ಕೈದಾಟಿಸಿದ್ದು, ನಮಗೆ ಅದೇ ಅಷ್ಟೈಶ್ವರ್ಯ ಸಿಕ್ಕಂತೆ. ನನ್ನ 64ನೇ ಜನ್ಮದಿನದಂದು ನನ್ನ ಮಗಳು ಅಳಿಯ ನನಗೊಂದು ಸ್ಮಾರ್ಟ್ ಫೋನ್ ಗಿಫ್ಟ್ ಮಾಡಿದುದರಿಂದ ಅವುಗಳ ಪರಿಚಯ ನನಗಾಯಿತು ಅನ್ನಿ. ಇಲ್ಲದಿದ್ದಲ್ಲಿ ನಾನು ನನ್ನ ಮೊಬೈಲ್ ಬರೀ ಫೋನಾಗಿಯೇ ಬಳಸುತ್ತಿದ್ದೆ. ಈ ವಾಟ್ಸಾಪ್, ಫೇಸ್‌ಬುಕ್, ಗೂಗಲ್ ಇವುಗಳನ್ನು ಬರೀ ಲ್ಯಾಪ್‌ಟಾಪ್‌ಗೆ ಸೀಮಿತಗೊಳಿಸುತ್ತಿದ್ದೆನೋ ಏನೋ. ಇನ್ನು ಮುಂದಕ್ಕೆ ಏನೇನು ಬರಲಿವೆಯೋ ಆ ದೇವನಿಗೇ ಗೊತ್ತೋ ಅಥವಾ ಅವನಿಗೂ ಗೊತ್ತಿಲ್ಲವೋ. ನನಗೆ ಗೊತ್ತಿಲ್ಲ.

## 34. ಅವು ನಿಜವಾಗಿಯೂ ಮೂಢನಂಬಿಕೆಗಳಾ!

ನಾವೆಲ್ಲಾ ಇನ್ನೂ ಚಿಕ್ಕವರಾಗಿದ್ದಾಗ ನಮ್ಮ ಹಿರಿಯರು ನಮಗೆಲ್ಲ ಹೇಳುತ್ತಿದ್ದ ಕೆಲವು ನಿಯಮಗಳು ಇವು:

1. ಮನೆ ಒಳಗೆ ಬರುವಾಗ, ದೇವಸ್ಥಾನಕ್ಕೆ ಹೋಗುವಾಗ ಚಪ್ಪಲಿ ಹೊರಗೆಬಿಟ್ಟು ಕಾಲು ತೊಳೆದುಕೊಂಡು ಒಳಗೆ ಬಾ.
2. ಕೂದಲು ತೆಗೆಸಿದಾಗ ನೇರವಾಗಿ ಬಚ್ಚಲುಮನೆಗೆ ಹೋಗಿ ತಲೆಗೆ ಸ್ನಾನಮಾಡಿಕೊಂಡು ಒಳಗೆ ಬಾ;
3. ಊಟಮಾಡುವಾಗ ಎಲೆ ನೋಡಿಕೊಂಡು, ಮಾತನಾಡದೇ ಮುಗಿಸು.
4. ಬೆಲ್ಲ ಹಂಚಲಿಕ್ಕಾಗದಿದ್ದರೂ, ಬೆಲ್ಲದಂತ ಮಾತನಾಡು.;
5. ಗುರುಹಿರಿಯರನ್ನು ಗೌರವಿಸು; ನೆರೆಹೊರೆಯವರೊಡನೆ ದ್ವೇಷ ಕಟ್ಟಿಕೊಳ್ಳಬೇಡ.
6. ಪ್ರಕೃತಿ ವಿರುದ್ಧ ಹೋಗಬೇಡ

ಈ ಮೇಲಿನ ಪ್ರತಿಯೊಂದು ಹೇಳಿಕೆಯನ್ನೂ ಮೂಢನಂಬಿಕೆ ಎಂದು ಹೀಗಳೆಯದಿರಿ. ಏಕೆಂದರೆ ಇವುಗಳ ಹಿಂದೆ ನೂರಾರು ವರ್ಷಗಳ ಅನುಭವ ಬೆನ್ನೆಲುಬಾಗಿದೆ. ವಿಜ್ಞಾನಿಗಳ ಪ್ರಕಾರ ಹೃದಯ ಒಂದು ಪಂಪ್ ಅಷ್ಟೇ. ಆದರೆ ನಮ್ಮ ಪ್ರಕಾರ ಹೃದಯವಂತಿಕೆ, ಹೃದಯವೈಶಾಲ್ಯ, ಪ್ರೀತಿ, ಪ್ರೇಮ ಮುಂತಾದ ಭಾವನೆಗಳು ಜನಿಸುವುದು ಹೃದಯದಿಂದ ಎಂಬುದು. ಇವುಗಳನ್ನು ಇತ್ತೀಚಿನವರೆಗೂ ಅಲ್ಲಗಳೆಯುತ್ತಿದ್ದ ವಿಜ್ಞಾನಿಗಳು ಈಗ ಮಾಡಿರುವ ಸಂಶೋಧನೆಗಳ ಪ್ರಕಾರ ಹೌದು ಎಂದಾಗಿದೆ. ಕೆಲವು ವೇಳೆ ಹೃದಯವಲ್ಲಿ

ಉತ್ಪನ್ನವಾಗುವ ಕೆಲವು ಹಾರ್ಮೋನುಗಳು ಈ ಭಾವನೆಗಳಿಗೆ ಕಾರಣವಾಗುತ್ತವಂತೆ. ಬಾಳೆಎಲೆ ಹಾಸಿಕೊಂಡು ಊಟ ಮಾಡುವುದರ ಬಗೆಗೆ ನಡೆಸಿದ ಸಂಶೋಧನೆಯಿಂದ ತಿಳಿದುಬಂದಿರುವುದು ಏನೆಂದರೆ, ಬಡಿಸಿರುವ ಆಹಾರ ವಿಷಯುಕ್ತವಾಗಿದ್ದರೆ, ಬಾಳೆಎಲೆ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಅಂತೆಯೇ ಊಟಮಾಡುವಾಗ ಟೀವಿ ನೋಡುವುದು, ಮಾತನಾಡುವುದು, ಊಟದ ಕಡೆ ಗಮನನೀಡದೇ ಇರುವುದರಿಂದ ತಟ್ಟೆಯಲ್ಲಿ ಬೀಳಬಹುದಾದ ಹುಳುಹುಪ್ಪಟೆ, ಧೂಳು ಮುಂತಾದವೂ ನಮ್ಮ ಹೊಟ್ಟೆಸೇರುವ ಸಂಭವ ಇರುತ್ತದೆ. ಅಲ್ಲದೇ ತಿನ್ನುವ ಪ್ರಮಾಣದ ಮೇಲೆ ಗಮನವಿರುವುದಿಲ್ಲ. ಇವುಗಳೆಲ್ಲದರ ಜೊತೆಗೆ ಅಂದಿನ ಕಾಲದಲ್ಲಿ ಇದ್ದದ್ದು ಮಂದಬೆಳಕು.

ಇನ್ನು ಹೊರಗಿನಿಂದ ಮನೆಯೊಳಗೆ ಪ್ರವೇಶಿಸುವ ಮುನ್ನ ಕೈಕಾಲು ತೊಳೆದು ಬರುವ ಬಗೆಗೆ. ಹೊರಗೆ ಅಡ್ಡಾಡುವಾಗ ಧೂಳು, ಕಸ ಮುಂತಾದವು ಕಾಲಿಗೆ ಮೆತ್ತಿರುವ ಸಾಧ್ಯತೆ ಹೆಚ್ಚು. ಅವುಗಳನ್ನು ಪರಿಹರಿಸಿಕೊಂಡು ಬರಲು ಇದು ಸೂಚನೆ. ಕೆಳಗೆ ಬಿದ್ದ ಆಹಾರಪದಾರ್ಥಗಳನ್ನು ತಿನ್ನಬಾರದೆಂಬ ಕಟ್ಟುಪಾಡಿಗೂ ಇದೇ ಕಾರಣ. ಇನ್ನು ಮಡಿವಂತ ಮಹಿಳೆಯರು ಹೊರಗೆ ಹೋಗಿ ವಾಪಸಾದಾಗ ಉಟ್ಟ ಬಟ್ಟೆ ಕಳಚಿ, ಸ್ನಾನ ಮಾಡಿ ಬೇರೆ ಬಟ್ಟೆ ಧರಿಸುತ್ತಿದ್ದುದೂ ಇದೇ ಕಾರಣಕ್ಕೆ.

ಕ್ಷೌರ ಮಾಡಿಸಿದಾಗ ಕತ್ತರಿಸಿದ ಕೂದಲು ಬಟ್ಟೆ ಹಾಗೂ ಮೈಮೇಲೆ ಬಿದ್ದಿರುವುದು ಸಾಮಾನ್ಯ ಸಂಗತಿ. ಆದುದರಿಂದ ಸೆಲೂನಿನಿಂದ ಬಂದಾಕ್ಷಣ ಸ್ನಾನಮಾಡಿದರೆ ಆ ಕೂದಲುಗಳು ಸ್ವಚ್ಛವಾಗುತ್ತವೆ. ಅವು ನಾವು ತಿನ್ನುವ ಆಹಾರಪದಾರ್ಥಗಳಲ್ಲಿ ಬೀಳುವ ಸಂಭವ ತಪ್ಪಿಸಿದಂತಾಗುತ್ತದೆ.

ಯಾವುದೇ ಕೆಲಸ ಪ್ರಾರಂಭಿಸುವ ಮುನ್ನ ದೇವತಾ ಪ್ರಾರ್ಥನೆಯನ್ನೋ ಧ್ಯಾನವನ್ನೋ ಮಾಡುವುದರಿಂದ ಮನಸ್ಸು ಶಾಂತವಾಗಿ ಮಾಡುವ ಕೆಲಸ ಸುಗಮವಾಗಿ, ಯಶಸ್ವಿಯಾಗಿ ಪೂರ್ಣಗೊಳ್ಳುತ್ತದೆ. ಇನ್ನು ನೆರೆಹೊರೆ ಯವರೊಡನೆ ನಮ್ಮ ನಡವಳಿಕೆ ಹೇಗಿರಬೇಕೆಂದರೆ, ಅವರು ನಮಗೆ ನೆರೆಯುವರಾಗಿ ಸಹಾಯಮಾಡುವಂತೆ ಇರಬೇಕೇ ವಿನಹ ಹೊರೆಯಾಗಿ ನಮ್ಮ ವೈರಿಗಳಾಗಿ ಇರದಂತೆ ಎಚ್ಚರದಿಂದ ನಿರ್ವಹಿಸಬೇಕು. ಆದುದರಿಂದಲೇ ಅವರನ್ನು ಮಿತ್ರರಂತೆಯೇ ಕಾಣಬೇಕು.

ರಾತ್ರಿ ಹೊತ್ತು ಹುಣಿಸೆಮರ/ಆಲದ ಮರದ ಕೆಳಗೆ ಮಲಗಬೇಡ: ಮರಗಿಡಗಳು ಹಗಲು ಹೊತ್ತು ಸೂರ್ಯರಶ್ಮಿಯನ್ನು ಬಳಸಿಕೊಂಡು ಇಂಗಾಲವನ್ನು ಹೀರಿ

ಆಮ್ಲಜನಕವನ್ನು ಹೊರಸೂಸುತ್ತವೆ. ಆದರೆ ರಾತ್ರಿಹೊತ್ತು ಇಂಗಾಲವನ್ನು ಹೊರಹಾಕುತ್ತವೆ. ಇದರಿಂದ ಅದರ ಕೆಳಗೆ ಕುಳಿತೋ ಮಲಗಿಯೋ ಮಾಡುವುದರಿಂದ ಉಸಿರು ಕಟ್ಟಿದಂತ ಅನುಭವ ಆಗುತ್ತದೆ. ಅಂತೆಯೇ ಸಂಜೆಹೊತ್ತಿನಲ್ಲಿ ಹೂವು ಎಲೆ ಕೀಳಬೇಡಿ. ಏಕೆಂದರೆ ಆ ಹೊತ್ತಿನಲ್ಲಿ ಹಾವು ಚೇಳು ಮುಂತಾದ ಕೀಟಗಳು ಕಚ್ಚಬಹುದು. ಇದೇ ರೀತಿ ಸಂಜೆಹೊತ್ತಿನಲ್ಲಿ ಕಸಗುಡಿಸಬಾರದು. ಕಾರಣ ಏನಾದರೂ ಬೆಲೆಬಾಳುವ ಐಟಂಗಳು ಬಿದ್ದಿದ್ದರೆ ಅವೂ ಗುಡಿಸಿಹೋಗುತ್ತವೆ. ಇಂದಿನ ಕಾಲದಲ್ಲಿ ಎಲ್ಲ ಕಡೆಯೂ ಜಗಮಗಿಸುವ ಬೆಳಕು ಇರುವುದರಿಂದ ಈ ಆಚರಣೆಯನ್ನು ಕೈಬಿಟ್ಟರೂ ಚಿಂತೆಯಿಲ್ಲ. ಯೋಚಿಸುತ್ತಾ ಹೋದರೆ ಹಿಂದಿನವರೇನೂ ಮೂರ್ಖರಲ್ಲ. ಇಂದು ವಿಜ್ಞಾನಿಗಳು ಅವರ ಒಂದೊಂದೇ ನಂಬಿಕೆಗಳಿಗೆ ವೈಜ್ಞಾನಿಕ ತಳಹದಿ ಇದೆಯೆಂದು ಒಪ್ಪುತ್ತಿರುವುದು ಗಮನಿಸಬೇಕಾದ ಅಂಶ.

# 35. ಅಂಗವೈಕಲ್ಯಕ್ಕೆ ಸವಾಲೆಸೆದ ಧೀರರು

ಅಂಗವೈಕಲ್ಯ ಆಕಸ್ಮಿಕವಾಗಿ ಅಥವಾ ಹುಟ್ಟಿನಿಂದ ಬಂದುದಾಗಿರಬಹುದು. ಅದನ್ನೇ ಪ್ರಧಾನವಾಗಿ ಪರಿಗಣಿಸಿ, ಜೀವನವನ್ನೇ ಕೊನೆಗಾಣಿಸಿಕೊಂಡವರು ಕೆಲವರಾದರೆ, ಅದನ್ನು ವರವಾಗಿ ಪರಿಗಣಿಸಿ, ಸೋಮಾರಿಯಾಗಿ ತಮ್ಮ ಜೀವನಕ್ಕೆ ಸಾಧನವನ್ನಾಗಿಸಿಕೊಂಡವರು ಹಲವರು. ಆದರೆ, ತಾವು ಇತರ ಸಾಮಾನ್ಯರಿಗಿಂತ ಭಿನ್ನರಲ್ಲ ಎಂದು ತಿಳಿದು ತಮ್ಮ ಎಂದಿನ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸಿ ಭೇಷ್ ಎನಿಸಿಕೊಂಡವರು ನಮ್ಮ ಸುತ್ತಲೇ ಇರುತ್ತಾರೆ. ಇದಕ್ಕೆ ನಮ್ಮ ಸಮಾಜದ ಉತ್ತೇಜನ ಬಹಳ ಮಟ್ಟಿಗೆ ಕಾರಣವಾಗುತ್ತದೆ.

ಹಿಂದಿನ ಚರಿತ್ರೆ ಗಮನಿಸಿದಾಗ ನಮ್ಮ ನೆನಪಿನಲ್ಲಿ ಮೂಡುವುದು ಪ್ರಖ್ಯಾತ ನೃತ್ಯಗಾರ್ತಿ, ಚಲನಚಿತ್ರ ನಟಿ ಸುಧಾಚಂದ್ರನ್. ಆಕಸ್ಮಿಕ ಒಂದರಲ್ಲಿ ಕಾಲನ್ನು ಕಳೆದುಕೊಂಡ ಯುವತಿ, ಧೃತಿಗೆಡದೆ, ಛಲದಿಂದ ಕೃತಕ ಕಾಲು ಧರಿಸಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಭರತನಾಟ್ಯ ಪ್ರದರ್ಶನ ನೀಡಿ ಎಲ್ಲರ ಪ್ರಶಂಸೆಗಳಿಸಿದುದು ಕಡಿಮೆ ಸಾಧನೆಯೇ? ಅಂತರರಾಷ್ಟ್ರೀಯ ಕ್ರಿಕೆಟ್ ಆಟದಲ್ಲಿ ಮಿಂಚಿದ ನವಾಬ ಮನ್ಸೂರ್ ಅಲಿಖಾನ್ ಪಟೌಡಿ ಅಂಗವಿಕಲರೆಂದು ಅನ್ನಿಸುತ್ತದೆಯೇ? ಅವರ ಆಟದ ವೈಖರಿಯನ್ನು ಬಣ್ಣಿಸುತ್ತಿದ್ದುದು 'Pataudi has one eye, & a good eye'. ಬ್ರಿಟಿಷ್ ಕಡಲ್ಗಾಲುವೆ ಈಜಿದ ಮಿಹಿರ್ ಸೇನ್, ನಮ್ಮವರೇ ಆದ ಮಹಿಳಾ ಈಜುಗಾರ್ತಿ ಜಯಂತಿ, ಕ್ರಿಕೆಟ್ ಹಿರಿಯ, ಚಂದ್ರಶೇಖರ್ ಬಿ.ಎಸ್, ಅಥ್ಲೆಟಿಕ್‌ನ ಮಾಲತಿ ಹೊಳ್ಳ, ಹಾಸನದ ಗಿರೀಶ, ಪೋಷಕ ನಟ ಮುಖ್ಯಮಂತ್ರಿ ಚಂದ್ರು ಮುಂತಾದವರ ಸಾಧನೆ ಯಾರಿಗೆ ತಾನೆ ಕಡಿಮೆ? ಕೈಗಳು ಇದ್ದರೆ ಮಾತ್ರ ಬರೆಯಲು

ಸಾಧ್ಯ ಎಂಬ ಮಾತನ್ನು ಸುಳ್ಳು ಮಾಡಿ, ಕಾಲ್ಬೆರಳುಗಳಿಂದ ಬರೆದು ಪರೀಕ್ಷೆ ಪಾಸುಮಾಡಿರುವ ಮಕ್ಕಳು ನಮ್ಮಲ್ಲಿಯೇ ಇದ್ದಾರೆ. ಯೂನಿಸೆಫ್ ಅಂಗವಿಕಲ ಮಕ್ಕಳಿಂದ ರಚಿಸಲ್ಪಟ್ಟ ಶುಭಾಶಯ ಪತ್ರಗಳನ್ನು ಮಾರಾಟಮಾಡಿ ಬಂದ ಹಣವನ್ನು ಅವರ ಕಲ್ಯಾಣಕ್ಕಾಗಿ ಬಳಸುತ್ತಿದೆ. ಕೈಕಾಲುಗಳೇ ಇಲ್ಲದಿದ್ದರೂ, ಬಾಯಿಯನ್ನೇ ಕುಂಚಹಿಡಿಯಲು ಬಳಸಿ ಬಿಡಿಸಿದ ಚಿತ್ರ ಯಾವ ಕಲಾಕೃತಿಗೂ ಕಡಿಮೆಯದಲ್ಲ. ಆ ದುಡಿಮೆಯ ಹಿಂದಿನ ಶ್ರಮ ಪರಿಶ್ರಮವನ್ನು ನಾವು ಕಲ್ಪಿಸಿಕೊಳ್ಳಬೇಕಷ್ಟೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ತೋರಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಉನ್ನತ ಹುದ್ದೆಗಳನ್ನು ಅಲಂಕರಿಸಿರುವ ಅದೆಷ್ಟು ಮಂದಿಯನ್ನು ನಾವುಗಳು ನೋಡಿಲ್ಲ? ಎಲ್ಲಕ್ಕೂ ಇರಬೇಕು ನಮ್ಮ ಸಹೃದಯ. ಅಂಗವಿಕಲರೆಂದು ಹೀಗಳೆಯದೆ, ಅವರನ್ನು ನಮ್ಮಲ್ಲಿ ಒಬ್ಬರೆಂದು ಬಗೆದು ನಡೆದುಕೊಂಡು ಪ್ರೋತ್ಸಾಹಿಸಿದರೆ ಅವರಲ್ಲಿ ವಿಶ್ವಾಸ ಮೂಡಿಸಿದರೆ, ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯವಲ್ಲವೇ? ಪ್ರಾಣಿ ಪ್ರಪಂಚವನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ, ಒಂದೊಂದು ಜೀವವೂ ಪ್ರಕೃತಿಗೆ ಹೇಗೆ ಹೊಂದಾಣಿಕೆ ಮಾಡಿಕೊಂಡಿವೆ ಎಂಬ ಅಂಶ ಮನದಟ್ಟಾಗುತ್ತದೆ.

ಮನುಷ್ಯರಿಗಾದರೋ ಕೈ ಕಾಲು ಎಂಬ ಬೇರೆಬೇರೆ ಅಂಗಗಳಿರುತ್ತವೆ.ಆದರೆ ನಾಲ್ಕು ಕಾಲಿನ ಪ್ರಾಣಿಗಳು ತಮ್ಮ ಮುಂಗಾಲುಗಳನ್ನೇ ಸಂದರ್ಭಕ್ಕನುಗುಣವಾಗಿ ಕೈಗಳಾಗಿಬಳಸುತ್ತವೆ. ಎರಡು ಕಾಲಿನ ಹಕ್ಕಿಗಳು ಇರುವ ಎರಡೇ ಕಾಲುಗಳನ್ನು ಕೈಗಳನ್ನಾಗಿಯೂ ಬಳಸುತ್ತವೆ. ಇನ್ನು ಮೀನು, ಹಾವು ಮುಂತಾದವು ಕೈ ಕಾಲುಗಳೇ ಇರದಿರುವ ಜೀವಿಗಳು. ಆದರೂ ಪರಿಸರಕ್ಕೆ ಹೇಗೆ ಹೊಂದಿಕೊಂಡು ಜೀವಿಸುತ್ತಿವೆ. ತಮ್ಮ ಕಾರ್ಯಗಳನ್ನು ಹೇಗೆ ನಿಭಾಯಿಸುತ್ತವೆ? ಇವುಗಳಿಂದ ನಾವು ಕಲಿಯಬೇಕಾದುದು ಏನು? ನಮ್ಮ ಸೋದರರು ಈ ಪ್ರಾಣಿಗಳಿಗಿಂತ ಹೀನ ಸ್ಥಿತಿಯಲ್ಲೇನೂ ಇಲ್ಲವಲ್ಲ! ಇವುಗಳ ಜೀವನ ಶೈಲಿ ಗಮನಿಸಿ, ತಮ್ಮ ವೈಕಲ್ಯಗಳನ್ನು ಹೇಗೆ ನಿಭಾಯಿಸಬಹುದು ಎಂಬುದರ ಬಗ್ಗೆ ತೀರ್ಮಾನಿಸುವುದು ಒಳ್ಳೆಯದಲ್ಲವೇ? ಹಾಗೆಂದು ಕೈಕಟ್ಟಿ ಕುಳಿತುಕೊಂಡಿರುವವರು ಬಹಳ ಮಂದಿ ಇಲ್ಲ. ನಮ್ಮ ಜೊತೆ ಜೊತೆಯಲ್ಲೆ ಎಲ್ಲರಂತೆ ಆಡಿಕೊಂಡಿದ್ದ ಮಕ್ಕಳು ಇದ್ದಕ್ಕಿದಹಾಗೆ ಅಂಗವಿಕಲರಾದರೆ, ಅವರ ಪೋಷಕರಿಗೆ ಆಕಾಶವೇ ತಲೆಮೇಲೆ ಕಳಚಿಬಿದ್ದಹಾಗೆ ಆಗುತ್ತದೆ. ತಮ್ಮ ಮಕ್ಕಳ ಆರೈಕೆಗೆ ಇದ್ದಬದ್ದ ಆಸ್ತಿಯನ್ನೆಲ್ಲಾ ವ್ಯಯಮಾಡಲು ಅವರು ತಯಾರಾಗಿ ಬಿಡುತ್ತಾರೆ. ಕಾಣದ ದೇವರುಗಳಿಗೆಲ್ಲಾ ಹರಕೆ ಹೊರುತ್ತಾರೆ. ಆದರೆ ಆ ಮಕ್ಕಳು ತಾಳ್ಮೆಗೆಡದೆ ಇಂದಿನ ವೈಜ್ಞಾನಿಕ ಅನ್ವೇಷಣೆಗಳ ಉಪಯೋಗ

ಪಡೆದುಕೊಂಡು ಎಲ್ಲರಂತೆ ಬಾಳು ರೂಪಿಸಿಕೊಂಡರೆ, ಅದೇ ತಂದೆತಾಯಂದಿರ ಸಂತಸ ಹೇಳತೀರದು. ಕಂಪ್ಯೂಟರ್‌ಗೆ ಮತ್ತು ಮೊಬೈಲ್‌ಗೂ ತನಗೆ ಅನುಕೂಲವಾಗುವ ಮೆದುತಂತ್ರಾಂಶ (software) ಬಳಕೆಮಾಡಿಕೊಂಡು, ಇತರ ಸಾಮಾನ್ಯರಂತೆ ಪ್ರಾಧ್ಯಾಪಕವೃತ್ತಿಯಲ್ಲಿ ತೊಡಗಿಕೊಂಡಿರುವ ಮಂಡ್ಯದ ಹುಡುಗ ಶ್ರೀ ಅರುಣ್ ಕುಮಾರ್, ವಿದ್ಯಾಭ್ಯಾಸದ ಎಲ್ಲ ಹಂತಗಳಲ್ಲೂ ಪ್ರಥಮ ದರ್ಜೆಯಲ್ಲೇ ಉತ್ತೀರ್ಣನಾಗಿ, ಇತ್ತೀಚೆಗಷ್ಟೇ ನೆಟ್ (NET)ಪರೀಕ್ಷೆ ಪಾಸುಮಾಡಿ ಮೈಸೂರಿನ ಲಲಿತಕಲೆಗಳ ಕಾಲೇಜಿನಲ್ಲಿ ಅತಿಥಿ ಅಧ್ಯಾಪಕನಾಗಿ ಕಾರ್ಯವೆಸಗುತ್ತಿರುವ ಕ್ಯಾಸಿಯೋ ಕಿರಣ್ ನನಗೆ ವೈಯುಕ್ತಿಕವಾಗಿ ಪರಿಚಯವಿರುವ ಇಬ್ಬರು ವ್ಯಕ್ತಿಗಳು. ನೋಡನೋಡುತ್ತಾ ಈ ಹುಡುಗರು ಎಲ್ಲರ ಮೆಚ್ಚುಗೆಗೆ ಪಾತ್ರವಾದ ಬಗೆ ಅಭಿನಂದನೀಯ. ತಾವು ಕಲಿತ ವಿದ್ಯಾ ಸಂಸ್ಥೆಗಳಲ್ಲಿನ ಸಿಂಹಪಾಲು ಬಹುಮಾನಗಳಿಗೆ ಕಾರಣಕರ್ತರಾಗಿ, ಗುರುಗಳಿಗೆ ಮೆಚ್ಚಿನ ಶಿಷ್ಯರಾಗಿ, ತಂದೆತಾಯಂದಿರಿಗೆ ಹೆಮ್ಮೆಯ ಕರುಳಕುಡಿಗಳಾಗಿ, ಮನೆಗೆ ತಮ್ಮ ಸ್ವಂತಸಂಪಾದನೆ ಮೂಲಕ ಆಸರೆಯಾಗಿ ನಿಂತಿರುವ ಇವರ ಹುಮ್ಮಸ್ಸು ಬಹಳಷ್ಟು ಮಂದಿಗೆ ಅಸೂಯೆ ಹಾಗೂ ನಾಚಿಕೆ ಉಂಟುಮಾಡಬಲ್ಲರು. ಅಂಗವಿಕಲರು ಎಂಬ ಶಬ್ದವೇ ಇಂದು ಕಿರಿಕಿರಿ ಉಂಟು ಮಾಡುವಂತಹದು. ವಿಶ್ವಮಟ್ಟದಲ್ಲಿ ಇಂದು ಅಂಗವಿಕಲರು ಎಂಬ ಶಬ್ದಕ್ಕೆ ಪರ್ಯಾಯ ಪದವಾಗಿ ಬಳಕೆಗೆ ಬಂದಿರುವ ಪದ ದೈಹಿಕ ಅಸಮರ್ಥತೆಯನ್ನು ಮೆಟ್ಟಿನಿಂತವರು /ವಿಶೇಷ ಸಾಮರ್ಥ್ಯ ಉಳ್ಳವರು/ವಿಕಲಚೇತನರು (Physically challenged/Specially abled/ Differently abled). ಈ ಪದ ಅವರಿಗೆ ಒಂದು ಗೌರವಸೂಚಕವಾಗಿ ಬಳಕೆಯಾಗಬಹುದು ಎಂಬುದು ನಮ್ಮಂತಹವರ ಅನ್ನಿಸಿಕೆ.

# 36. ದೈತ್ಯ ಶಂಖು ಹುಳು

ಇತ್ತೀಚೆಗೆ ಒಂದು ಬೆಳಿಗ್ಗೆ ನನ್ನ ಶ್ರೀಮತಿ ಒಗೆಯುವ ಕಲ್ಲಿನ ಬಳಿ ಹೋದವಳೇ 'ರೀ, ಸ್ವಲ್ಪ ಬೇಗ ಬನ್ನಿ' ಎಂದು ಅರಚಿದಳು. ಏನಾಗಿದೆಯೋ ಎಂದು ಗಾಬರಿಯಿಂದ ಓಡೋಡಿಹೋಗಿ ನೋಡಿದಾಗ 'ಇಲ್ಲಿ ನೋಡಿ ಈ ಶಂಖದ ಹುಳು ಎಷ್ಟು ದೊಡ್ಡದಿದೆ?' ಎಂದಳು. ನಾನೂ ನೋಡಿದೆ, ಇದುವರೆವಿಗೂ ನಾನು ಅಷ್ಟು ದೊಡ್ಡ ಶಂಖದ ಹುಳುವನ್ನು ಕಂಡಿರಲಿಲ್ಲ. ನನ್ನ ಮೊಬೈಲಿನಲ್ಲಿ ಅದರ ಚಿತ್ರ ತೆಗೆದುಕೊಂಡು, ಆ ಹುಳುವನ್ನು ನನ್ನ ಕಾಂಪೌಂಡ್ ತೋಟದಲ್ಲಿ ಬಿಟ್ಟುಬಂದೆ. ಅಲ್ಲಿಂದಾಚೆಗೆ ಯಾವಾಗಲಾದರೊಮ್ಮೆ ಹುಳು ಎಲ್ಲಿದೆ ಎಂದು ಸೂಕ್ಷ್ಮವಾಗಿ ಕಣ್ಣು ಹಾಯಿಸಿದರೂ ತಟ್ಟಂತ ಗೋಚರಿಸುತ್ತಿರಲಿಲ್ಲ ಆ ಹುಳು. ಅದರ ಕ್ಯಾಮಾಫ್ಲಾಜ್ ಅಷ್ಟು ಅಧ್ಭುತ. ಒಣಗಿದ ಎಲೆ ಮಣ್ಣುಗಳೊಡನೆ ಅಷ್ಟು ಚೆನ್ನಾಗಿ ಹೊಂದಿಕೊಂಡುಬಿಡುತ್ತಿತ್ತು ಅದರ ಬಣ್ಣ. ಕೊನೆಗೊಮ್ಮೆ ಅಯ್ಯೋ ಬಿಡು ಅದು ಎಲ್ಲೋ ಹೋಗಿ ಬಿಟ್ಟಿರಬಹುದು ಎಂದು ವಾಪಸಾಗುತ್ತಿದ್ದಾಗ ಅಚಾನಕ್ಕಾಗಿ ಒಂದು ಮೂಲೆಯಲ್ಲಿ ಅಲ್ಲಾಡದೇ ಬಿದ್ದಿರುತ್ತಿತ್ತು ಆ ಶಂಖದ ಹುಳು.

ಈ ಪ್ರಕೃತಿಯದು ಎಂತೆಂತಹ ಸೃಷ್ಟಿಯೋ! ತನ್ನ ಬೆನ್ನಮೇಲೆ ಹುಟ್ಟನಿಂದ ಒಂದುಶಂಖವನ್ನು ಹೊತ್ತುಕೊಂಡು ಬದುಕಬೇಕಾದ ಅನಿವಾರ್ಯತೆ ಈ ಶಂಖು ಹುಳುವಿನದು. ಹುಳು ಅದು ಹೇಗೆ ತನ್ನಮ್ಮನ ಹೊಟ್ಟೆಯಿಂದ ಈ ಶಂಖಸಮೇತ ಹುಟ್ಟುತ್ತದೆಯೋ ಆಶ್ಚರ್ಯ! ಹುಳು ಬೆಳೆದಂತೆ ಅದರ ಬೆನ್ನಮೇಲಿನ ಶಂಖವೂ ದೊಡ್ಡದಾಗುತ್ತಾ ಅದಕ್ಕೆ ತಾತ್ಕಾಲಿಕವಾದ ಒಂದು ಸಂಚಾರಿ ರಕ್ಷಾಗೃಹವಾಗಿ ಕಾರ್ಯನಿರ್ವಹಿಸುವುದು ಈ ಶಂಖದ ಕಾರ್ಯ.

ಆಮೆಯಂತೆ ಅಪಾಯ ಎದುರಾದಾಗ ತನ್ನ ಇಡೀ ಶರೀರವನ್ನು ಶಂಖದೊಳಕ್ಕೆ ಎಳೆದುಕೊಂಡು ಹುಳುವಿನ ಅಸ್ತಿತ್ವವನ್ನೇ ಮರೆಮಾಡುತ್ತದೆ ಈ ಶಂಖ.

ಈಗ್ಗೆ ಒಂದು ರಾಜ್ಯಮಟ್ಟದ ದೈನಂದಿನ ಪತ್ರಿಕೆ 'ಆಫ್ರಿಕಾ ಖಂಡದ ದೈತ್ಯ ಶಂಖು ಹುಳು' ಎಂಬ ಶೀರ್ಷಿಕೆಯಲ್ಲಿ ಒಂದು ಸುದ್ದಿ ಪ್ರಕಟಿಸಿತ್ತು. ಚಿಕ್ಕಮಗಳೂರಿನ ಕಾಫಿತೋಟಗಳಲ್ಲಿ ಈ ಶಂಖು ಹುಳುಗಳ ಬಾಧೆ ವಿಪರೀತವಾಗಿ ಕಾಫಿ ಗಿಡದ ಎಲೆ, ಹೂ ಗಳನ್ನು ಇವು ತಿಂದು ಬೆಳೆಯನ್ನು ಹಾಳುಮಾಡುತ್ತಿವೆ. ಈ ಹುಳುಗಳು ಆಫ್ರಿಕಾ ಖಂಡದಿಂದ ಬಂದಿರುವುದಾಗಿಯೂ, ಇವುಗಳ ಉಪಟಳದಿಂದ ಪಾರಾಗಲು ಇವುಗಳನ್ನು ಹಿಡಿದು ಉಪ್ಪು ನೀರಿನಲ್ಲಿ ಮುಳುಗಿಸಿಯೋ ಬೆಂಕಿಹಾಕಿ ಭೂಮಿಯಡಿ ಹೂತುಹಾಕಿ ನಿವಾರಿಸಿಕೊಳ್ಳಲು ಸಲಹೆ ನೀಡಲಾಗಿತ್ತು. ಸುದ್ದಿಯ ಜೊತೆಗೆ ಆ ಹುಳುವಿನ ಚಿತ್ರವನ್ನೂ ಪ್ರಕಟಿಸಲಾಗಿತ್ತು. ಆ ಚಿತ್ರವನ್ನು ನೋಡಿದಾಕ್ಷಣ ನಮ್ಮ ತೋಟದಲ್ಲಿಯ ಶಂಖು ಹುಳು ನೆನಪಿಗೆ ಬಂತು. ಅದೂ ಅದೇ ಬಣ್ಣದ, ಅದೇ ಗಾತ್ರದ ಹುಳುವಾಗಿತ್ತು.

ಆದರೆ ಚಿಕ್ಕಮಗಳೂರಿಗೆ ಈ ದೈತ್ಯ ಶಂಖುಹುಳು ಬಂದುದಾದರೂ ಹೇಗೆ? ಯಾರಾದರೂ ಚಿಕ್ಕಮಗಳೂರಿಗರು ಆಫ್ರಿಕಾ ಖಂಡಕ್ಕೆ ಹೋಗಿಬರುವಾಗ ಅವನ್ನು ಹಿಡಿದುತಂದರೇ? ಅಥವಾ ಅಲ್ಲಿನ ಕಾಡುಗಳಲ್ಲಿ ಚಾರಣಕ್ಕೆ ಹೋಗಿದ್ದಾಗ ಅವು ಇವರ ಬ್ಯಾಗಿನಲ್ಲೋ, ಜೇಬುಗಳಲ್ಲೋ ನುಸುಳಿಕೊಂಡು ಭಾರತಕ್ಕೆ ಬಂದು, ಚಿಕ್ಕಮಗಳೂರಿಗೆ ಸೇರಿದುವೇ ತಿಳಿಯುತ್ತಿಲ್ಲ. ಈ ವಿಚಾರ ಬಿಡಿ. ನಾನಂತೂ ಸಿಂಗಪೂರೊಂದನ್ನು ಹೊರತುಪಡಿಸಿ ಬೇರೆ ಯಾವ ದೇಶಕ್ಕೂ ಭೇಟಿಕೊಟ್ಟವನಲ್ಲ; ಆಫ್ರಿಕಾಕ್ಕಂತೂ ಕಾಲಿಟ್ಟದ್ದು ಬಿಡಿ, ಕನಸಿದವನಂತೂ ಅಲ್ಲವೇ ಅಲ್ಲ. ಇನ್ನು ಚಿಕ್ಕಮಗಳೂರಿಗೂ ಎಂದೂ ಹೋಗಿಲ್ಲ. ಹೀಗಿದ್ದರೂ ನಮ್ಮ ಹಿತ್ತಲಿಗೆ ಈ ದೈತ್ಯ ಶಂಖು ಹುಳು ಬಂದದ್ದು ಹೇಗೆ? ಎಂಬುದೇ ಮಿಲಿಯನ್ ಡಾಲರ್ ಪ್ರಶ್ನೆ.

ಈ ಯಕ್ಷಪ್ರಶ್ನೆಗೆ ಉತ್ತರ ಕಂಡುಹಿಡಿಯಲು ನಿರ್ಧರಿಸಿ ಯೋಚಿಸತೊಡಗಿದೆ. ಈಗ್ಗೆ ಕೆಲವು ತಿಂಗಳ ಹಿಂದೆ ನಮ್ಮ ಪಕ್ಕದ ನಿವೇಶನದಲ್ಲಿ ಮನೆಯೊಂದು ನಿರ್ಮಾಣಗೊಳ್ಳುತ್ತಿದೆ. ನಾವು ಚಿಕ್ಕವರಾಗಿದ್ದಾಗ ಎಲ್ಲಾದರೂ ಮರಳು ಗುಡ್ಡೆ ಕಂಡರೆ ಅವುಗಳಲ್ಲಿ ಮನೆಕಟ್ಟುವುದು, ಜಿಗಿದಾಡುವುದೂ ಮಾಮೂಲಾಗಿತ್ತು. ಅಂತೆಯೇ ಮಕ್ಕಳು ಕೆಲವೊಮ್ಮೆ ಮಹಿಳೆಯರು ಮರಳಿನಲ್ಲಿ ಸಿಗುವ ದುಂಡು ನುಣುಪು ಕಲ್ಲು, ಕಪ್ಪೆಚಿಪ್ಪು, ಶಂಖಗಳನ್ನು ಹೆಕ್ಕಿ ಮನೆಗೆ ತರುವುದು ಸಾಮಾನ್ಯ. ನದೀ ದಡಗಳಿಂದ ತರುವ ಮರಳುಗಳಲ್ಲಿ ಈ ವಸ್ತುಗಳು ಸಿಗುವುದು ಮಾಮೂಲು.

ಅದೇ ರೀತಿ ನಮ್ಮ ಪಕ್ಕದ ನಿವೇಶನದಲ್ಲಿ ಕಟ್ಟಡ ನಿರ್ಮಾಣಕ್ಕೆ ತರಿಸಿರುವ ಮರಳಿನಲ್ಲಿ ಈ ದೈತ್ಯ ಶಂಖು ಹುಳು ಬಂದಿರಬಹುದು. ಯಾರ ಕಣ್ಣಿಗೂ ಕಾಣದಂತೆ ಅದು ರಾತ್ರಿವೇಳೆ ಸಂಚರಿಸುತ್ತಾ ನಮ್ಮ ಹಿತ್ತಲಿಗೂ ಬಂದಿರಬಹುದು. ಸುದ್ದಿ ಓದಿದ ನಾನು ನಮ್ಮ ಹಿತ್ತಲಿನಲ್ಲಿಯೂ 'ದೈತ್ಯ ಆಫ್ರಿಕಾ ಶಂಖು ಹುಳು' ಕಾಣಿಸಿಕೊಂಡಿರುವ ಬಗೆಗೆ ಚಿತ್ರಸಮೇತ ಮಾಹಿತಿ ನೀಡಿದೆ.ಆದರೆ ಅದು ಪತ್ರಿಕೆಯಲ್ಲಿ ಪ್ರಕಟವಾಗಲಿಲ್ಲ. ಅದರ ಬಗೆಗೆ ಅದು ಆಫ್ರಿಕಾ ಖಂಡದ್ದು ಎಂದು ಆಗಲೇ ಹೇಳಿಬಿಟ್ಟಿದ್ದರಲ್ಲಾ, ಅದಕ್ಕೇ ಅವರ ಮನಸ್ಸು ಇದನ್ನು ಸ್ಥಳೀಯ ಹುಳು ಎಂದು ಒಪ್ಪಿಕೊಳ್ಳಲು ತಯಾರಿರಲಿಲ್ಲವೆಂದು ಕಾಣುತ್ತದೆ. ಅದು ಏನೇ ಇರಲಿ, ನನ್ನ ಮನಸ್ಸಿನಲ್ಲಿ ಯಾರಾದರೂ ನಮ್ಮ ಮನೆಗೆ ಬಂದು ಆ ಹುಳುವನ್ನು ತೋರಿಸು ಎಂದು ಬಿಟ್ಟರೇ ಎಂಬ ಆತಂಕ ಶುರುವಾಯಿತು. ಸಾಕ್ಷಕ್ಕಾಗಿ ಆ ಹುಳುವಿನ ಚಿತ್ರಬಿಟ್ಟರೆ ಬೇರೆ ಏನೂ ಇಲ್ಲ. ಆ ಹುಳುವನ್ನು ಹುಡುಕ ತೊಡಗಿದೆ. ಒಂದರ್ಧ ಘಂಟೆ ಹುಡುಕಾಟ ಫಲಕೊಟ್ಟಿತ್ತು. ಅಲ್ಲೇ ಒಂದು ಮೂಲೆಯಲ್ಲಿ ಮುದುರಿಕುಳಿತ್ತಿತ್ತು 'ದೈತ್ಯ ಶಂಖು ಹುಳ'. ಇನ್ನು ಅದು ಇಲ್ಲೇ ಓಡಾಡಿಕೊಂಡಿರುತ್ತದೆ ಎಂಬ ಸಮಾಧಾನದಿಂದ ಮನೆ ಒಳಕ್ಕೆ ಬಂದೆ. ಪ್ರತಿದಿನವೂ ಒಮ್ಮೆಯಾದರೂ ಗಿಡಗಳ ಸಂದುಗಳಲ್ಲಿ ಆ ಹುಳುವನ್ನು ಹುಡುಕುತ್ತಿದ್ದೆ. ಎರಡು ದಿನದ ಹಿಂದೆ ನನ್ನ ಶ್ರೀಮತಿ 'ರೀ ನೋಡ್ರೀ, ನಿಮ್ಮ ಶಂಖು ಹುಳು ಕಾಂಪೌಂಡು ಹತ್ತಿಕುಳಿತಿದೆ' ಎಂದು ಕರೆದು ತೋರಿಸಿದಳು. ನಾವು ಬೆಳಿಗ್ಗೆ ಸುಮಾರು 8 ಘಂಟೆಗೆ ಮೊದಲ ಸಲ ನೋಡಿದ ಹುಳು ಅದೇ ಜಾಗದಲ್ಲಿ ಅದೇ ಪೋಸಿನಲ್ಲಿ ಮಧ್ಯಾನ್ಹದವರೆಗೂ ಹಾಗೇ ಕುಳಿತಿತ್ತು. ಆದರೆ ಇಂದು ಬೆಳಿಗ್ಗೆ ನೋಡಿದರೆ ಅದು ಅಲ್ಲಿರಲಿಲ್ಲ. ಏನಾಯಿತೋ ಗೊತ್ತಿಲ್ಲ. ನನ್ನ ಊಹೆ ಪ್ರಕಾರ ಅದು ಪಕ್ಕದ ಖಾಲೀ ನಿವೇಶನಕ್ಕೆ ಹೋಗಿರಬಹುದು ಅಥವಾ ಕೆಂಬೂತದ ಬಾಯಿಗೆ ಆಹಾರವಾಯಿತೋ ಆ ಶಿವನಿಗೇ ಗೊತ್ತು. ಈ ಮಧ್ಯೆ ಇನ್ನೊಂದು ಚಿಕ್ಕ ಶಂಖದ ಹುಳು ಮತ್ತು ಈ ಮೊದಲಿನ 'ದೈತ್ಯ ಶಂಖದ ಹುಳು'ವಿನ ಬ್ರದರ್ ಮನೆಸುತ್ತ ಕಂಡುಬಂದಿತ್ತೆಂದು ನನ್ನ ಮಡದಿಯ ಉವಾಚ! ಒಟ್ಟಿನಲ್ಲಿ ಪ್ರಕೃತಿ ಯಾವ ಜೀವಿಯನ್ನೂ ಸಂಪೂರ್ಣ ನಾಶವಾಗಲು ಬಿಡುವುದಿಲ್ಲ ಎನ್ನುವುದಕ್ಕೆ ಇದೂ ಒಂದು ಉಧಾಹರಣೆ.

# 37. ಸ್ವಚ್ಛ ಭಾರತ ಉರುಫ್ ಸ್ವಸ್ಥ ಭಾರತ:

ಶ್ರೀ ನರೇಂದ್ರ ಮೋದಿ ಭಾರತದ ಪ್ರಧಾನಿ ಆದನಂತರ ಸ್ವಚ್ಛ ಭಾರತ ಅಭಿಯಾನವನ್ನು ಪುನಃ ಪ್ರಾರಂಭಿಸಿದರು. ಸ್ವಚ್ಛ ಭಾರತ ಅಂದರೆ ಭಾರತದಲ್ಲಿನ ಕಸವನ್ನು ಸ್ವಚ್ಛಗೊಳಿಸುವುದು ಎಂದಷ್ಟೇ ಏಕೆ ಭಾವಿಸಬೇಕು? ಮೊದಲು ನಮ್ಮ ನಮ್ಮ ಮನಸ್ಸುಗಳನ್ನು ಸ್ವಚ್ಛಗೊಳಿಸಿಕೊಂಡರೆ, ಅದು ಸ್ವಚ್ಛ ಭಾರತದ ಜೊತೆಗೆ ಸ್ವಸ್ಥ ಭಾರತವೂ ಆಗುತ್ತದೆ. ಇನ್ನೂ ಮುಂದುವರೆದು ಪ್ರಧಾನಿ ಮೋದಿ ಹೇಳಿದ್ದು 'ಪ್ರತಿಯೊಬ್ಬರೂ ತಾವು ತಮ್ಮ ಮನೆಯ ಕಸವನ್ನು ಹೊರಗೆ ಬಿಸಾಡುವುದಿಲ್ಲ ಎಂಬ ಪ್ರತಿಜ್ಞೆ ಮಾಡಿದ್ದೇ ಆದಲ್ಲಿ, ಪ್ರಪಂಚದ ಯಾವುದೇ ಶಕ್ತಿ ನಮ್ಮ ದೇಶವನ್ನು ಕಸಯುಕ್ತಮಾಡಲು ಅಸಾಧ್ಯ'. ಇದರಲ್ಲಿ ತಪ್ಪೇನಿದೆ. ಸ್ವಚ್ಛ ಭಾರತ ಕಾರ್ಯಕ್ರಮ ಮೋದಿಯವರದಲ್ಲ, ಅದು ಮಹಾತ್ಮ ಗಾಂಧಿಯವರ ಕರೆ. ಇದನ್ನು ಹಿಂದಿನ ಸರ್ಕಾರಗಳು ತೀವ್ರವಾಗಿ ತೆಗೆದುಕೊಂಡಿಲ್ಲ. ಈಗ ಮೋದಿಯವರು ಈ ಕರೆಕೊಟ್ಟಮಾತ್ರಕ್ಕೆ, ಅದು ಅವರ ಕಾರ್ಯಕ್ರಮ, ಅದು ಅವರ ಜವಾಬ್ದಾರಿ ಎಂದು ಅವರ ಕೊರಳಿಗೆ ಕಟ್ಟುವುದು ಎಷ್ಟು ಮಟ್ಟಿಗೆ ಸರಿ. ಮೋದಿಯೇ ಬಂದು ಎಲ್ಲರ ಮನೆ ಸ್ವಚ್ಛಗೊಳಿಸಬೇಕೆಂದು ಆಶಿಸುವುದು ಮೂರ್ಖತನವೇ ಸರಿ.

ಕಾಲೇಜು ವಿದ್ಯಾರ್ಥಿಗಳು ವರ್ಷಕ್ಕೊಮ್ಮೆ ಎನ್.ಎಸ್;ಎಸ್. ಕಾರ್ಯಕ್ರಮದಡಿಯಲ್ಲಿ ಬೇರೆಬೇರೆ ಗ್ರಾಮಗಳಲ್ಲಿ ರಸ್ತೆ ನಿರ್ಮಾಣ, ಕಸಗುಡಿಸುವುದು, ಪಾರ್ಕುಗಳಿಗೆ ಬೇಲಿಹಾಕುವುದು ಮುಂತಾದ ಕೆಲಸಗಳನ್ನು ಮಾಡಿದ ಸಂದರ್ಭದಲ್ಲಿ ಗ್ರಾಮಸ್ಥರು ಮುಂದೆ ಯಾವಾಗ ಬಂದು ಕ್ಲೀನ್ ಮಾಡುತ್ತೀರಿ ಎಂದು ಕೇಳಿದ ಹಾಗಾಯಿತು

ಇವರವಾದ. ಇನ್ನು ನಮ್ಮಲ್ಲಿರುವ ಆರ್ಥಿಕಅಸಮಾನತೆ ಅಸಹಿಷ್ಣುತೆಗೆ ಮತ್ತೊಂದು ಪ್ರಧಾನ ಕಾರಣ ಎನ್ನಬಹುದು. ಶ್ರೀಮಂತರು ಶ್ರೀಮಂತರಾಗೇ ಹೋಗುತ್ತಿರುವುದು, ಬಡವರು ಬಡವರಾಗೇ ಉಳಿದಿರುವುದು. ಶ್ರೀಮಂತರು ಬಡವರ ಕಷ್ಟಕ್ಕೆ ಸ್ಪಂದಿಸದಿರುವುದು, ಮುಂತಾದವು ಒಬ್ಬರು ಮತ್ತೊಬ್ಬರ ಬಗೆಗೆ ಅಸಹನೆ ಬೆಳೆಸಿಕೊಳ್ಳಲು ಕಾರಣ. ಬಡಜನರ ಉದ್ಧಾರಕ್ಕಾಗಿ ಕೇಂದ್ರ ರಾಜ್ಯ ಸರ್ಕಾರಗಳು ಕೈಗೊಂಡಿರುವ ಕಲ್ಯಾಣ ಕಾರ್ಯಕ್ರಮಗಳು ಅವರಿಗೆ ತಲುಪದೇ ಇರುವುದು, ಆ ನಿಧಿಗಳ ದುರುಪಯೋಗ, ಭ್ರಷ್ಟಾಚಾರ ಮುಂತಾದವೂ ಅವರಲ್ಲಿ ಅಸಹನೆ ಉಂಟುಮಾಡುತ್ತದೆ.

ಇನ್ನು ವಿರೋಧ ಪಕ್ಷ ಎಂದ ಮಾತ್ರಕ್ಕೇ ಆಡಳಿತ ಪಕ್ಷದವರ ಎಲ್ಲ ಕಾರ್ಯಕ್ರಮಗಳನ್ನೂ ವಿರೋಧಿಸಲೇಬೇಕೆಂಬ ಹಠ ಸರಿಯಲ್ಲ ಎನಿಸುತ್ತದೆ. ಎಲ್ಲ ಕಾರ್ಯಕ್ರಮಗಳೂ ಸಕಾರಾತ್ಮಕವಾಗಿ ಸಫಲವಾಗಬೇಕಾದಲ್ಲಿ ಮೊದಲು ನಮ್ಮೆಲ್ಲರ ಮನಸ್ಸುಗಳೂ ಸ್ವಸ್ಥವಾಗಬೇಕು. ಎಲ್ಲರೂ ನಮ್ಮಂತೆಯೇ ಮನುಷ್ಯರು ಎಂಬ ಭಾವನೆ ಮೊದಲು ಮೂಡಬೇಕು. ಆಗ ಈ ಅಸಹಿಷ್ಣುತೆ, ವಿರೋಧ ಎಲ್ಲ ತನ್ನಿಂದ ತಾನೇ ಮಾಯವಾಗುತ್ತವೆ.

ದೇವರು, ನ್ಯಾಯ ಎಂಬ ಬಗೆಗೆ ನಂಬಿಕೆಯೇ ಹೋಗಿಬಿಟ್ಟಿದೆ. ಮೋಸಮಾಡಿಯೋ ದರೋಡೆ ಮಾಡಿಯೋ ಸಂಪಾದಿಸಿದ ಹಣದಲ್ಲಿ ಒಂದು ಭಾಗವನ್ನು ದೇವರ ಹುಂಡಿಗೆ ಹಾಕಿಬಿಟ್ಟರೆ ತಮ್ಮ ಹಳೆಯ ಪಾಪಗಳೆಲ್ಲ ಮಾಫಿಯಾಗಿ ಹೊಸದಾಗಿ ಪಾಪ ಮಾಡಲು ಲೈಸೆನ್ಸ್ ಸಿಕ್ಕಂತೆ ಎಂಬ ಭಾವನೆ ಬಂದಂತೆ ತೋರುತ್ತಿದೆ. ಈ ರೀತಿ ದುರುಳರು ಯಾವುದೇ ಪಾಪಪ್ರಜ್ಞೆಯಿಲ್ಲದೇ ಹಾಯಾಗಿಬದುಕುತ್ತಿರುವುದನ್ನು ಕಂಡ ಇತರರು ತಾವೂ ಹಾಗೆಯೇಮಾಡಿ ಸುಖದಿಂದ ಇರಬಹುದು ಎಂಬ ಭಾವನೆ ಬೆಳೆಸಿಕೊಳ್ಳುವ ಸಾಧ್ಯತೆ ಹೆಚ್ಚಾಗುತ್ತಿದೆ. ನ್ಯಾಯಾಲಯಗಳಲ್ಲೂ ಸತ್ಯವನ್ನೇ ಹೇಳುತ್ತೇನೆ ಎಂದು ಪ್ರಮಾಣಮಾಡಿದ ವ್ಯಕ್ತಿಯೇ ರಾಜಾರೋಷವಾಗಿ ಸುಳ್ಳು ಹೇಳುವುದನ್ನು ನೋಡಿದ ವ್ಯಕ್ತಿಗೆ ನ್ಯಾಯದಾನದಲ್ಲಿ ಯಾವರೀತಿಯ ನಂಬಿಕೆ ಬರಬಹುದು ಯೋಚಿಸಿ. ಇನ್ನು ವ್ಯಾಪಾರಂ ದ್ರೋಹಚಿಂತನಂ ಎಂದಾಗಿಬಿಟ್ಟಿದೆ. ಎಲ್ಲದರಲ್ಲೂ ಕಲಬೆರಕೆ, ಶೀಘ್ರ ಲಾಭಗಳಿಸುವ ಆಲೋಚನೆಗಳಿಂದ ಬಳಸುವವರ ಆರೋಗ್ಯದ ಮೇಲುಂಟಾಗುವ ದುಷ್ಪರಿಣಾಮಗಳ ಬಗೆಗೆ ನಿರ್ದಾಕ್ಷಿಣ್ಯ ನಿರ್ಲಕ್ಷ್ಯ ಎದ್ದುಕಾಣುತ್ತಿದೆ.

ಸಿದ್ದಯ್ಯ ಪುರಾಣಿಕರ ಮೊದಲು ಮಾನವನಾಗು ಎಂಬ ಉಕ್ತಿ ಈ ಹೊತ್ತಿನಲ್ಲಿ ಎಷ್ಟು ಸಮಂಜಸ ಅಲ್ಲವೇ. ಮಾನವ ಎಂದಾಗ ಎಲ್ಲ ಮಾನವೀಯ ಗುಣಗಳೂ ಅವನಲ್ಲಿರಬೇಕಾದುದು. ಮೃಗೀಯ, ದಾನವ ಗುಣಗಳು ಇಲ್ಲವಾಗಬೇಕಾದುದು ಅತ್ಯವಶ್ಯ ಎನಿಸುವುದಿಲ್ಲವೇ.

## 38. ಕಮರಿದ ಕನಸು

ಈಗ್ಗೆ ಕೆಲವು ದಿನಗಳಿಂದ ನಮ್ಮ ಮನೆ ಜಾಜಿ ಬಳ್ಳಿಯ ಪೊದೆಯೊಳಗೆ ಎರಡು ಪಾರಿವಾಳಗಳು ಬಂದು ಸೇರಿಕೊಂಡಿವೆ. ನಾನು ದಿನನಿತ್ಯ ಹೂ ಬಿಡಿಸಲು ಹೋದಾಗಲೆಲ್ಲ, ಅವುಗಳ ಕುಟುರ್ ಕುಟುರ್ ಸದ್ದು ಕೇಳುವುದು ಸಾಮಾನ್ಯ. ಒಮ್ಮೊಮ್ಮೆ ಪೊದೆಯ ಮಧ್ಯಭಾಗದಲ್ಲಿರುವ ಹೂಗಳನ್ನು ಬಿಡಿಸಲು ಕೈ ಒಳತೂರಿಸಿದಾಗ ಪುರ್ರ್ ಎಂದು ಅಷ್ಟು ದೂರಹಾರಿ ಪಕ್ಕದ ಮರದ ಕೊಂಬೆಗಳ ಮೇಲೆ ಕುಳಿತಿದ್ದು, ನಾನು ಇನ್ನೊಂದು ಕಡೆ ಹೋದುದನ್ನು ಕಂಡತಕ್ಷಣ ಮತ್ತೆ ಹಾರಿಬಂದು ಪೊದೆಸೇರಿಕೊಳ್ಳುತ್ತವೆ. ನಾನಾದರೋ ಈ ಪಾರಿವಾಳಗಳು ರಾತ್ರಿವೇಳೆಬಂದು ಇಲ್ಲಿ ವಿಶ್ರಮಿಸಿಕೊಳ್ಳುತ್ತವೆಯೇನೋ ಎಂದು ಆ ಕಡೆ ನನ್ನ ಗಮನವನ್ನು ಹರಿಸಿರಲಿಲ್ಲ. ಈಚೀಚೆಗಂತೂ ನಾನು ಕೈಹಾಕಿದರೂ ಹಾರಿಹೋಗದೇ ಅಲ್ಲೇ ಕೆಲವು ಅಡಿಗಳ ಅಂತರಕಾಯ್ದುಕೊಂಡು ಕುಳಿತಿರುತ್ತಿತ್ತು. ಇದಕ್ಕೇನು ಹಾರಲಿಕ್ಕೆ ಆಗುತ್ತಿಲ್ಲವೋ, ಅಥವಾ ನನ್ನನ್ನು ಕಂಡರೆ ಹೆದರಿಕೆ ಇಲ್ಲವೋ ಎಂದು ಆಶ್ಚರ್ಯಚಕಿತನಾಗುತ್ತಿದ್ದೆ. ಅಲ್ಲೇ ತಾರಸಿಯಲ್ಲಿ ಓಡಾಡುತ್ತಾ ಸಿಕ್ಕ ಸಣ್ಣಪುಟ್ಟ ಹುಳುಗಳನ್ನೋ ಇನ್ನೇನನ್ನೋ ತಿನ್ನುತ್ತಾ ಇರುತ್ತಿದ್ದವು. ಅಥವಾ ನನ್ನನ್ನು ಅವುಗಳಿಗೆ ಯಾವುದೇ ಹಾನಿ ಉಂಟುಮಾಡದಿರುವವನೆಂದು ಭಾವಿಸಿದುವೋ? ಅವುಗಳು ತಮ್ಮ ತಮ್ಮೊಳಗೇ ಮಾಡಿಕೊಳ್ಳಬಹುದಾದ ಸಂಭಾಷಣೆಯನ್ನು, ಹೀಗೆ ಊಹಿಸಿಕೊಳ್ಳುತ್ತೇನೆ. 'ಲೇ ನೋಡೇ ಅವನು ಮತ್ತೆ ಬರುತ್ತಿದ್ದಾನೆ' 'ಬರಲಿ ಬಿಡ್ರೀ, ಅವನೇನು ನಮ್ಮನ್ನು ಹಿಡಿದುಕೊಳ್ಳುವ/ಕೊಲ್ಲುವ ಪೈಕಿಯಲ್ಲ' 'ನೀವು ಹೋಗಿ ಹಾರಾಡಿಕೊಂಡು ಬನ್ನಿ, ನಾನು ಇಲ್ಲೇ

ಅವನ ಕೈಗೆಟುಕದಂತೆ ಕೂತಿರುತ್ತೇನೆ' 'ಲೇ ಹುಷಾರು ಕಣೇ, ಈ ನರಮನುಷ್ಯರನ್ನು ನಂಬುವಂತಿಲ್ಲ, ನಮ್ಮ ಜಾಗ್ರತೆಯಲ್ಲಿ ನಾವಿರಬೇಕು'. ಒಟ್ಟನಲ್ಲಿ ಒಂದು ಗಂಡು ಕಾಡು ಪಾರಿವಾಳ ಹಾರಿ ಸ್ವಲ್ಪ ದೂರದ ಟೆಲಿಫೋನ್ ಕಂಬದಮೇಲೆ ಕುಳಿತು ನನ್ನನ್ನೇ ಗಮನಿಸುತ್ತಿತ್ತು. ಆ ಇನ್ನೊಂದು ಹೆಣ್ಣು ಕಾಡುಪಾರಿವಾಳ ಅಲ್ಲಲ್ಲೇ ಟೊಂಗೆಯಿಂದ ಟೊಂಗೆಗೆ ಜಿಗಿಯುತ್ತಾ ಇರುತ್ತಿತ್ತು. ನನ್ನ ಕ್ಯಾಮರಾಕ್ಕಂತೂ ಅಧ್ಬುತ ಫೋಸ್ ಸಹಾ ಕೊಡುತ್ತಿತ್ತು.ಇಂದು ಬೆಳಿಗ್ಗೆ ನಾನು ಮಾಮೂಲಿನಂತೆ ಹೂ ಕೀಳಲು ಮೇಲೆಹೋದಾಗ ಎರಡೂ ಪಾರಿವಾಳಗಳೂ ಪುರ್ರ್ ಎಂದು ಅಷ್ಟು ದೂರ ಹಾರಿಹೋದವು. ಕೆಲಕ್ಷಣಗಳಲ್ಲೇ ಅದರಲ್ಲೊಂದು ಹೆಣ್ಣು ಪಾರಿವಾಳ ಮತ್ತೆ ವಾಪಸುಬಂದು ನನ್ನಿಂದ ಕೇವಲ ಒಂದೆರಡಡಿ ದೂರದಲ್ಲೇ ಕುಳಿತು ಕೊಂಡಿತು. ನಾನು ನನ್ನ ಮೊಬೈಲ್ ಕ್ಯಾಮರಾ ಆನ್‌ಮಾಡಿ ಫೋಕಸ್ ಮಾಡಿದರೆ, ಇನ್ನೂ ಹತ್ತಿರಕ್ಕೆ ಅಂದರೆ ಕೇವಲ ಒಂದಡಿ ದೂರದಲ್ಲೆ ನನ್ನನ್ನೇ ನೋಡುತ್ತಾ ಕುಳಿತು ಕೊಂಡಿತು. ನಾನು ಸೂಕ್ಷ್ಮವಾಗಿ ಗಮನಿಸತೊಡಗಿದಾಗ, ಅದು ಕುಳಿತಿದ್ದುದು ಹರಡಿಕೊಂಡಿದ್ದ ಕೆಲವು ಕಡ್ಡಿಗಳ ಮೇಲೆ. ಅಂದರೆ ಇನ್ನೂ ಪೂರ್ಣಗೂಡಾಗಿರದ ಗೂಡಿನಮೇಲೆ! ಅಲ್ಲೇ ಧೈರ್ಯವಾಗಿ ಗೂಡುಕಟ್ಟಿ ಮೊಟ್ಟೆಯಿಟ್ಟು ಮರಿಮಾಡುವ ಕಾಯಕಕ್ಕೆ ಸಿದ್ಧತೆ ಪ್ರಾರಂಭವಾಗಿತ್ತು.

ನನ್ನ ಶ್ರೀಮತಿಗೆ 'ನೋಡೇ ಆ ಕಾಡುಪಾರಿವಾಳಗಳು ನಮ್ಮ ಜಾಜಿಬಳ್ಳಿಯಲ್ಲಿ ಗೂಡುಕಟ್ಟಲು ಪ್ರಾರಂಭಿಸಿವೆ'ಎಂದೆ. ಅದಕ್ಕವಳು'ಅವಕ್ಕೆ ಬುದ್ದಿಬೇಡವಾ, ಹೋಗಿಹೋಗಿ ಅಲ್ಲಾ ಗೂಡುಕಟ್ಟುವುದು, ನಮ್ಮ ಬೆಕ್ಕಿನ ಬಾಯಿಗೆಬೀಳಲು; ಆ ಕಡೆ ಹೋಗಿ ಆ ಬೇವಿನ ಮರದ ಮಧ್ಯದಲ್ಲೋ, ಹೊಂಗೆಮರದ ಮಧ್ಯದಲ್ಲೋ ಗೂಡುಕಟ್ಟಬಾರದಿತ್ತಾ?' ಎಂದು ಹಲುಬಿದಳು. ನಾನಂದುಕೊಂಡಿದ್ದಂತೆ ಆ ಪಾರಿವಾಳಗಳಿಗೆ ನನ್ನ ಮೇಲೆ ಯಾವುದೇ ಪ್ರೀತಿಯಿರಲಿಲ್ಲ, ಬದಲಿಗೆ ತಮ್ಮ ಸಂಸಾರಕ್ಕಾಗಿ ಒಂದು ಬೆಚ್ಚನೆಯ ಸುರಕ್ಷಿತವೆಂದು ಅವು ಭಾವಿಸಿದ್ದ ಗೂಡು ನಿರ್ಮಾಣಕ್ಕಾಗಿ ಎಂದು ತಿಳಿಯಲು ಹೆಚ್ಚು ಸಮಯ ಬೇಕಾಗಿರಲಿಲ್ಲ.

ನಾನು ಗಮನಿಸಿದಾಗಲೆಲ್ಲಾ ಆ ಹೆಣ್ಣು ಗೂಡಿನಿಂದ ಕದಲದೇ ಕುಳಿತಿರುತ್ತಿತ್ತು. ಆಹಾರ ತಿನ್ನಲೂ ಹೋಗುತ್ತಿರಲಿಲ್ಲ. ಇದರಿಂದ ಮನಕರಗಿದ ನಾನು ನನ್ನ ಶ್ರೀಮತಿಯಲ್ಲಿ ಈ ವಿಷಯದ ಬಗೆಗೆ ಪ್ರಸ್ತಾಪಿಸಿದೆ. ಏನು ಪ್ರಕೃತಿಯೋ ಏನೋ. ಮೊಟ್ಟೆಯಿಂದ ಮರಿಹೊರಬರುವವರೆಗೂ ಅದು ಉಪವಾಸ ಮಾಡುತ್ತದೆಯೋ ಏನೋ ಇರಬೇಕು ಎಂದು ಸಮಜಾಯಿಷಿ ನೀಡಿದಳು. ಇದುವರೆವಿಗೂ ತಲೆಕೆಡಿಸಿಕೊಳ್ಳದ ನಾನೇ. ಪಾಪ ನಾವೇ ಯಾವುದಾದರೂ

ಕಾಳುಗಳನ್ನು ಅದರ ಬಳಿ ಇಡೋಣ ಎಂದು ಒಂದು ತಟ್ಟೆಯಲ್ಲಿ ಕಡಲೇಕಾಳು, ಹೆಸರುಕಾಳುಗಳನ್ನು ಹಾಕಿಸಿಕೊಂಡು ಮಹಡಿಮೆಟ್ಟಲು ಹತ್ತಿಹೋದರೆ ಅಲ್ಲಿ ಹಕ್ಕಿ ಕೂತಿರಲಿಲ್ಲ. ಎಲ್ಲೋ ಹೋಗಿರಬಹುದೆಂದು ಭಾವಿಸಿ ನೆಲದ ಕಡೆನೋಡಿದರೆ ಅಲ್ಲೆಲ್ಲಾ ಇರುವೆಗಳುಮುತ್ತಿದ್ದವು. ನೆಲದಲ್ಲಿ ಅಲ್ಲಲ್ಲಿ ತೇವವಾದಂತಿತ್ತು. ಮತ್ತೆ ಕತ್ತೆತ್ತಿ ಗೂಡಿನಕಡೆ ದೃಷ್ಟಿಹಾಯಿಸಿದೆ. ಏನೋ ಬೆಳ್ಳಗೆ ಕಾಣಿಸಿತು. ಮೆಲ್ಲಗೆ ಕೈಬೆರಳು ತೂರಿಸಿದರೆ ಕೈಗೆ ಮೆತ್ತಿದ್ದು ಒಡೆದುಹೋದ ಮೊಟ್ಟೆಯೊಳಗಣ ಜೀವರಸ. ಹಕ್ಕಿಯ ಮರಿಮಾಡುವ ಕನಸು ಕಮರಿಹೋಗಿತ್ತು.

ಅಂದು ಬೆಳಗ್ಗೆ ಕೆಂಬೂತವೊಂದು ಮರದಿಂದ ಮರಕ್ಕೆ ಹಾರಾಡುತ್ತಾ ಈ ಗೂಡಿನತ್ತ ಬಂದಿದ್ದು ಆ ಪಾರಿವಾಳಗಳ ಚೀರಾಟ ಕೇಳಿಸಿತ್ತು. ಆ ಕೆಂಬೂತವೇ ಪಾರಿವಾಳಗಳನ್ನು ಹೆದರಿಸಿ ಓಡಿಸಿ, ಅಲ್ಲಿದ್ದ ಮೊಟ್ಟೆಗಳನ್ನು ತಿಂದಿರಬೇಕು. ಹಾಗೆ ತಿನ್ನುವ ಅವಸರದಲ್ಲೊಂದು ಮೊಟ್ಟೆ ಒಡೆದು ಅದರಲ್ಲಿದ ಜೀವರಸ ಕೆಳಗೆ ಚೆಲ್ಲಿಹೋಗಿ ಇರುವೆಗಳಿಗೆ ಆಹಾರವಾಗಿತ್ತು. ಹಕ್ಕಿಯ ಹಸಿವನ್ನು ಇಂಗಿಸಲು ಹೋದರೆ ಹಕ್ಕಿಯೇ ಹಾರಿಹೋಗಿತ್ತು. ಅಂತೂ ಮಡದಿಯ ಭವಿಷ್ಯ ನಿಜವಾಗಿತ್ತು; ಹಕ್ಕಿಯಲ್ಲದಿದ್ದರೂ ಅದರ ಮೊಟ್ಟೆ, ಬೆಕ್ಕಿನ ಬಾಯಿಗಲ್ಲದಿದ್ದರೂ ಕೆಂಬೂತದ ಕೊಕ್ಕಿಗೆ ಆಹಾರವಾಗಿತ್ತು. ಭಾರವಾದ ಮನಸ್ಸಿನಿಂದ ಕಾಳುಗಳನ್ನು ಅಲ್ಲೇ ಎರಚಿ ಖಾಲಿಯಾದ ಮನಸ್ಸನ್ನೂ, ಖಾಲಿಯಾದ ತಟ್ಟೆಯನ್ನೂ ಹೊತ್ತು ನನ್ನ ಗೂಡಿಗೆ ಮರಳಿದೆ.

ಒಂದನ್ನು ತಿಂದು ಮತ್ತೊಂದು ಬದುಕುವುದು ಜಗದ ನಿಯಮ. ಆದರೆ ಎಲ್ಲವನ್ನೂ ತಿನ್ನುವುದು ಮನುಷ್ಯನ ನೀಚತನ. ಅಪ್ಪಿ ತಪ್ಪಿ ಬದುಕುಳಿದರೆ ಅದುವೇ ಜೀವನ.

# 39. ಸೀಮೆಣ್ಣೇನಾ .. ಸಿಲಿಂಡರ್ರಾ

ಅಪ್ಪಾ, ಸಾಕಪ್ಪಾ ಸಾಕು ಈ ಎಣ್ಣೆ ಸಾವಾಸ. ಅಯ್ಯೋ, ನಾ ಏಳ್ತಿರೋದು ಸೀಮೆಣ್ಣೆ ಕಣಣ್ಣೋ. ಒತ್ತಾರೆ ಐದ್ಗಂಟ್ಗೇ ಎದ್ರುಮನೆ ಸೀನಣ್ಣಾ ಎಬ್ರಿಸಿ ಬೇಗ್ಬಾ, ಬೆಳಕರಿಯೋ ಒತ್ಗೆ ಸೀಮೆಣ್ಣೆ ಮುಗದೋಯ್ತದಂತೆ, ಡಬ್ಬ ಇಡ್ಕೊಂಡ್ಬಾ ಅಂದ ಕಣಪ್ಪಾ. ನಾನೂ ಡಬ್ಬ ಇಡ್ಕೊಂಡು ಅವನ್ಕೂಟ ಓಗಿನೋಡ್ದ್ರೆ, ಅನುಮಂತನ ಬಾಲಾ! ಆಗಲೇ ಅಷ್ಟುದ್ದ ಕೀವ್ರು! ಅಂಗೂ ಇಂಗೂ ಸೀಮೆಣ್ಣೆ ಗಾಡಿತಾಕೋಗಿ, ಕಾರ್ಡ್ ಮುಂದಿಡ್ದೆ ಕಪ್ಪಾ. ಅಂಗ್ದೀವ್ನು, ಕಾರ್ಡ್ ನೋಡಿದ್ದೇ, ಲೇ ನೀ ಯಾಕ್ಲಾ ಬರೋಕೋದಿ, ನಿಂಗೆ ಎಣ್ಣೆ ಸಿಗಾಕಿಲ್ಲ ಅನ್ನೋದೇ! ಅದ್ಯಾಕಪ್ಪಾ, ಇವ್ರಿಗೆಲ್ಲಾ ಬುಡ್ತಿದ್ದೀಯಾ ಎಣ್ಣೇನಾ, ನಂಗೂ ಬುಟ್ರೆ ನಿಮ್ಮಪ್ಪನ್ ಗಂಟ್ ಓಗೋದೇನಾ ಅಂತ ರೇಗಿದೆ. ಅದ್ಕೆ, ಅಂಗ್ದೀವ್ನು, ಕಾರ್ಡ್ ಮೇಲಿದ್ದ ಠಸ್ಸೆ ತೋರ್ಸಿ, ನಿಮ್ಮನ್ಯಾಗ ಸಿಲಿಂಡರ್ ಮಡಿಕೊಂಡು ಸೀಮೆಣ್ಣೆ ಬುಡೂ ಅಂತೀಯಾ? ಸಿಲಿಂಡರ್ ಇದ್ದ್ಯಾಕೆ ನೋ ಸೀಮೆಎಣ್ಣೆ ಅಂದ್ಬುಟ್ಟ, ಅದ್ದರಿಕಪ್ಪಾ ಮನ್ಯಾಗೆ ಸಿಲಿಂಡರೇನೋ ಅದೆ. ಆದ್ರೆ ಅದು ಖಾಲಿ ಆಗ್ಬುಟ್ಟದೆ. ಗ್ಯಾಸ್ ಕಂಪನೀವ್ನು ಸಿಲಿಂಡರ್ ಕೊಡೋಕೆ ಇನ್ನೊಂದೆರಡು ತಿಂಗಳಾಯ್ತದೆ ಅಂದವ್ನೆ. ಈಗ ನಾನೇನ್ಮಾಡ್ಬೇಕಾ? ಈ ಕಡೆ ಎಣ್ಣೇನೂ ಇಲ್ಲಾ, ಅತ್ಲಾಗೆ ಗ್ಯಾಸೂ ಇಲ್ಲಾ, ಮನ್ಯಾಗೆ ದೀಪ ಎಂಗಂಟ್ಸೋದೂ ನೀನೇ ಏಳು ಮಗಾ?

ನೀನ್ಕೇಳಿಲ್ಲಾ ಅಜ್ಜಾ, ಒಂದ್ಕಾಲ್ದಾಗೆ ಬರೀ ಆಡೇಳೇ ತಾನ್ಸೇನಂ ಬೋನಿನು ದೀಪ ಅತ್ತಿದ್ನಂತೆ. ನೀನೂ ಯಾಕೆ ಒಂದ್ಕಿತಾ ಪದಾಬುಟ್‌ನೋಡ್ಬಾರ್ದು. ಅಯ್ ಉಡ್ಗಾಟದ ಮಾತಾಡಬೇಡ ಮಗಾ. ಆ ಕಾಲ ಸತ್‌ವಂತರ ಕಾಲಕಪ್ಪಾ, ಆಡೇಳ್ತೆ ದೀಪಾನೂ

ಬೆಳ್ಗೋದ್ರೂ, ಬೇಡ್ಕಂಡ್ರೆ ದೇವ್ರೂನೂ ಎದುರ್ಗೆ ನಿಂತ್ಬುಡ್ತಿದ್ದ, ಈಗಿನ್ಕಾಲದಲ್ಲಿ ಆಡೇಳಿದ್ರೂ ಅಥ್ವಾ ಬಾಯ್ಬುಡ್ಕೊಂಡ್ರೂ ಏನೂ ಆಗಾಕಿಲ್ಲ. ಬ್ಯಾರೇ ಏನಾದ್ರೂ ಉಪಾಯ ಏಳಪ್ಪಾ. ತಾತ ಒಂದ್ಕೆಲ್ಸ ಮಾಡು. ಒಂದಿಪ್ಪತ್ತು ಸಾವ್ರ ಖರ್ಚು ಮಾಡಿದ್ರೆ, ಎಣ್ಣೇನೂ ಬ್ಯಾಡಾ, ಸಿಲಿಂಡರ್ರೂ ಬ್ಯಾಡಾ, ಜೀವಪೂರ್ತಿ ದೀಪ ಉರಿಸ್ಬೋದು. ಆದ್ರೂ ಒಂದು ಕಂಡಿಸನ್ನು, ಸೂರ್ಯಪ್ಪ ಕಣ್ಬಿಡ್ಬೇಕು. ಅವನೇನಾರಾ ಕಣ್ಮುಚ್ಕೊಂಡ್ ಕುಂತ್ರೆ, ನಿನ್ ಬಂಡ್ವಾಳಾ ಗೋವಿಂದಾ.. ಗೋವಿಂದ.

ಈ ನಮ್ ಮೋದಿ ಬಂದತಕ್ಷಣ ಸಿಲಿಂಡರ್ ಲೆಕ್ಕದ್ಮೇಲೆ ಸಹಾಯಧನ ಅಮ್ತ ಕೊಡೋಕೇ ಸುರುಮಾಡ್ದ, ಆಮೇಕೆ ಬಡವರಿಗಾಗಿ ಸಹಾಯಧನ ಬಿಟ್ಕೊಡಿ ಅಂತಾವ್ನೆ. ಈಗಾಗ್ಲೇ 125 ಕೋಟಿ ಜನರಲ್ಲಿ 30 ಲಕ್ಷ ಜನ ಬಿಟ್ಕೊಟ್ಟಿದ್ದಾರಂತೆ. ನಮ್ಮನ್ನ ಬಿಟ್ಕೊಡೋಕೆ ತಯಾರಾಗವ್ರೆ, ಆದ್ರೆ ರಾಜಕಾರಣಿಗಳು.. ಊಹೂಂ ಅಂತಾವ್ರೆ, ದಿಲ್ಲೀಲಿ ಇವರಿಗೆ ಕ್ಯಾಂಟೀನಿನಲ್ಲಿ ಅಮ್ಮ ಕ್ಯಾಂಟೀನ್ ರೇಟಂತೆ. ಅದ್ನ ಮೊದ್ಲು ಬಿಟ್ಕೊಡೋಕೆ ಏಳ್ಬೇಕು ಅಲ್ವಾರಾ!

ಏನಪ್ಪಾ, ಕೈನಾಗೆ ಹಗ್ಗ ಆದೆ ಅಂದಿದ್ಕೆ, ಸಾಕ್ಕೋ ಅಂತ ಕೊಟ್ರಂತೆ, ಒಂದಾನೇನಾ, ಅಂಗಾತು ನಿನ್ಕತೆ.

## 40. ಭಾಷಣ/ಬರೆಯುವ ಕಲೆ:

ನಾನಂತೂ ಪದವಿ ಮುಗಿಸುವವರೆಗೂ ಲಾಸ್ಟ್ ಬೆಂಚ್ ಸ್ಟೂಡೆಂಟ್. ಅಧ್ಯಾಪಕರು ಕೇಳುವ ಪ್ರಶ್ನೆಗಳಿಗೆ ಉತ್ತರ ಗೊತ್ತಿದ್ದರೂ, ಅದನ್ನು ಪಕ್ಕದವನಿಗೆ ತಿಳಿಸಿ, ಅವನು ಶಹಬ್ಬಾಸ್‌ಗಿರಿ ಪಡೆಯುವಂತೆ ಮಾಡುತ್ತಿದ್ದುದಕ್ಕೆ ಕಾರಣ ನನಗಿಲ್ಲದ ಧೈರ್ಯ. ಉತ್ತರ ಹೇಳಲು ಬಾಯ್ತೆರೆದರೆ ಬಾಯಿ ಒಣಗಿದಂತಾಗುತ್ತಿತ್ತು, ಕಾಲು ನಡುಗಲು ಪ್ರಾರಂಭವಾಗುತ್ತಿತ್ತು. ಇದು ನಾನು ಸ್ನಾತಕೋತ್ತರ ಪದವಿ ಮುಗಿಸುವವರೆಗೂ ಮುಂದುವರೆದಿತ್ತು ಅನ್ನಿ. ಆದರೆ ಅದೇನು ನನ್ನ ಅದೃಷ್ಟವೋ, ದುರಾದೃಷ್ಟವೋ ನನಗೆ ಸಿಕ್ಕಿದ್ದು ಲೆಕ್ಚರರ್ ಹುದ್ದೆ. ಅನಿವಾರ್ಯವಾಗಿ ನಾನು ನನಗೆ ಇಚ್ಛೆಯಿಲ್ಲದಿದ್ದರೂ ಬಾಯ್ತೆಗೆಯಲೇ ಬೇಕಾದ ವೃತ್ತಿ. ನಿಜವಾಗಲೂ ನಾನು ಸಾರ್ವಜನಿಕವಾಗಿ ಮಾತನಾಡುವಂತೆ ನನ್ನನ್ನು ತಯಾರುಮಾಡಿದ್ದು ಒಂದು ಅಂತರರಾಷ್ಟ್ರೀಯ ಯುವ ಸಂಸ್ಥೆ, ಅದೇ ಜೇಸೀಸ್ ಸಂಸ್ಥೆ. ಅದರಲ್ಲಿ ಸದಸ್ಯರನ್ನು ಕಡ್ಡಾಯವಾಗಿ ಏನಾದರೂ ಮಾತನಾಡುವಂತೆ ಪ್ರೇರೇಪಿಸಬೇಕಾಗಿತ್ತು. ಹೆಚ್ಚಿನ ಸದಸ್ಯರು ವ್ಯಾಪಾರಸ್ಥರಾಗಿದ್ದುದರಿಂದ ಅದು ನಾವು, ಅಂದರೆ ನಾನು & ನನ್ನ ಸಹೋದ್ಯೋಗಿ ತುಂಗ ಸೇರುವವರೆಗೂ 'ಶೆಟ್ಟರ ಸಂಘ' ಅನ್ನುವಂತೆ ಆಗಿತ್ತು. ನಾವು ಅಧ್ಯಾಪಕ ವೃತ್ತಿಯವರಾಗಿದ್ದುದರಿಂದ ನಾವೇ ಮಾತನಾಡಲು ಹಿಂಜರಿದರೆ ಹೇಗೆ? ಆದುದರಿಂದ ನಾವು ಸೇರಿದಂದಿನಿಂದ ಯಾವುದೇ ಸಾರ್ವಜನಿಕ ಸಮಾರಂಭಗಳನ್ನು ಏರ್ಪಡಿಸಿದಾಗ ನಮ್ಮಬ್ಬರಲ್ಲಿ ಒಬ್ಬರು ಸ್ವಾಗತ ಕೋರಿದರೆ, ಮತ್ತೊಬ್ಬರು ವಂದನಾರ್ಪಣೆ ಮಾಡುವಂತೆ ಒತ್ತಾಯ ಬರತೊಡಗಿತು. ಅಂತೆಯೇ ನಾವೂ ಸಹಾ ಇತರ ಸದಸ್ಯರಿಗೆ

ಕನಿಷ್ಠ 2 ನಿಮಿಷ ವಾದರೂ, ನಿಮ್ಮ ಪಕ್ಕದಲ್ಲಿರುವವರ ಪರಿಚಯ ಮಾಡಿಕೊಡಿ ಎಂಬ ಕಾರ್ಯಕ್ರಮ ಹಾಕಿಕೊಂಡು, ಅವರನ್ನೂ ಮಾತನಾಡುವ ಮಟ್ಟಕ್ಕೆ ತಂದೆವು. ನಾನೂ ಸಹಾ ಧೈರ್ಯ ರೂಢಿಸಿಕೊಂಡು, ಅಲ್ಲಲ್ಲೇ ಸಾರ್ವಜನಿಕ ಉಪನ್ಯಾಸ, ಭಾಷಣ ನೀಡಲು ಪ್ರಾರಂಭಿಸಿದೆ.

ಪ್ರಾರಂಭದ ವರ್ಷಗಳಲ್ಲಿ, ಕಾಲೇಜಿನಲ್ಲಿ ನಾನು ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಮಾಧ್ಯಮವಾಗಿದ್ದುದರಿಂದ, ಇಂಗ್ಲೀಷಿನಲ್ಲಿಯೇ ಬೋಧಿಸುತ್ತಿದ್ದೆ. ಕೆಲವೊಮ್ಮೆ ಆ ಹಳ್ಳಿಗಳಿಂದ ಬರುತ್ತಿದ್ದ ಮಕ್ಕಳ ಪೆಚ್ಚುಮುಖ ನೋಡಿದರೆ, ಅವರಿಗೆ ನಾನು ಹೇಳುತ್ತಿದ್ದುದು ತಿಳಿಯುತ್ತಿದೆಯೋ ಇಲ್ಲವೋ ತಿಳಿಯುತ್ತಿರಲಿಲ್ಲ. ನಿಧಾನವಾಗಿ ಅವರಿಗೆ ಅರ್ಥವಾಗುವಂತೆ ಬೋಧಿಸಲು ನಡುನಡುವೆ ಕನ್ನಡ ವಿವರಣೆ ಕೊಡಲು ಪ್ರಾರಂಭಿಸಿದ ಮೇಲೆ, ಅವರ ಚೆಹರೆಯಲ್ಲಿ ವ್ಯತ್ಯಾಸ ಗುರುತಿಸಲಾರಂಭಿಸಿದೆ. ಅಲ್ಲಿಂದ ಕೆಲವೇ ತಿಂಗಳುಗಳಲ್ಲಿ ನಾನು ಪೂರ್ಣಪ್ರಮಾಣದಲ್ಲಿ ಕನ್ನಡದಲ್ಲೇ ಉಪನ್ಯಾಸ ನೀಡಲು ಆರಂಭಿಸಿದೆ. ಆದರೂ ಸಾರ್ವಜನಿಕವಾಗಿ ಕನ್ನಡದಲ್ಲಿ ಮಾತನಾಡಲು ಹಿಂಜರಿಯುತ್ತಿದ್ದೆ. ಒಮ್ಮೆ ನಮ್ಮ ಮತ್ತೊಬ್ಬ ಸಹೋದ್ಯೋಗಿಯೊಡನೆ 'ರೋಟರಿ ಸಂಸ್ಥೆ'ಯಲ್ಲಿ ಭಾಷಣಕಾರನಾಗಿ ಆಹ್ವಾನಿತನಾಗಿ ಹೋಗಿ ಪೂರ್ಣಪ್ರಮಾಣದಲ್ಲಿ ಕನ್ನಡದಲ್ಲಿ ಭಾಷಣನೀಡಿಮುಗಿಸಿದಾಗ, ನನ್ನ ಬೆನ್ನುತಟ್ಟಿ 'ನೀವು ಇಷ್ಟು ಚೆನ್ನಾಗಿ ಕನ್ನಡದಲ್ಲಿ ಮಾತನಾಡುತ್ತೀರೆಂದು ನನಗೆ ಇಂದೇ ತಿಳಿದುದು' ಎಂದವರು ನನ್ನ ಜೊತೆಯಲ್ಲಿ ಬಂದಿದ್ದ ನನ್ನ ಸಹೋದ್ಯೋಗಿ ಜನಾರ್ದನ್ ಐಯ್ಯಂಗಾರ್. ನನ್ನಲ್ಲೇ ನನ್ನ ಶಕ್ತಿಯ ಅರಿವನ್ನು ಉಂಟುಮಾಡಿದವರು ಅವರು. ಅಲ್ಲಿಂದಾಚೆಗೆ ಇಂದಿನವರೆಗೂ ನಾನು ಸಾರ್ವಜನಿಕವಾಗಿ ಸ್ವಾರಸ್ಯಕರವಾಗಿ ಮಾತನಾಡಬಲ್ಲೆನೆಂಬ ವಿಶ್ವಾಸ ನನ್ನಲ್ಲಿ ಉಂಟಾಗಿದೆ. ಹಾಗೆಯೇ ನನ್ನಲ್ಲಿ ಬರವಣಿಗೆಯ ಅವಕಾಶವನ್ನು ಗುರುತಿಸಿದವನು ನನ್ನ ಸ್ನೇಹಿತ–ಕಂ–ಶಿಷ್ಯ 'ಕೊಳಲು' ಶ್ರೀಪಾದ. ಅವನ ವಾರಪತ್ರಿಕೆ 'ಕೊಳಲು'ನಲ್ಲಿ ನನಗಾಗಿ ಒಂದು 'ಬುರುಡೆ' ಅಂಕಣವನ್ನು ಮೀಸಲಿಟ್ಟು, ನನಗೆ ಪ್ರಚಲಿತ ವಿಷಯಗಳ (ಕರೆಂಟ್ ಅಫೇರ್) ಬಗೆಗೆ ಸ್ವಾರಸ್ಯವಾಗಿ ಬರೆಯಲು ಒಂದು ಅವಕಾಶ ನೀಡಿದನು. ನಾನೂ ವಾರಕ್ಕೊಂದು ಕಥೆ ಹೆಣೆದು ಮಂಡ್ಯ ಶೈಲಿಯಲ್ಲಿ ಬರೆಯತೊಡಗಿದೆ.

ನನಗೆ ಪ್ರೇರಣೆ, ಅಂದು ಪ್ರಖ್ಯಾತರಾಗಿದ್ದ ಹಾಸ್ಯಬರಹಗಾರರಾದ, ಸ್ಥಳೀಯ ಕಾಲೇಜಿನಲ್ಲಿ ಪ್ರಾಧ್ಯಾಪಕ ರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಡಾ.ಎಚ್.ಕೇಶವಮೂರ್ತಿ (ಎಚ್ಕೆಕೆ). ಆ ಅವಧಿಯಲ್ಲಿ ಸುಮಾರು ಹತ್ತು ತಿಂಗಳು ಪ್ರತಿವಾರವೂ ಬರೆದ.

ನಂತರ ಸುಮಾರು ವರ್ಷಕಾಲ ವಿರಾಮ. ಇತ್ತೀಚೆಗೆ ಕಳೆದ ವರ್ಷದಿಂದ ಮತ್ತೆ ಬರೆಯಲು ಪ್ರಾರಂಭಿಸಿದ್ದೇನೆ. ನನ್ನ ಒಂದು ಲೇಖನ ಏಪ್ರಿಲ್ 4 ರ ಪ್ರಜಾವಾಣಿಯ 'ಕಾಮನಬಿಲ್ಲು' ಸಂಚಿಕೆಯಲ್ಲಿ ಪ್ರಕಟವಾಗಿದೆ ಎಂದು ತಿಳಿಸಲು ಹೆಮ್ಮೆ ಎನಿಸುತ್ತದೆ. ಹಲವಾರು ಲೇಖನಗಳು 'ಬೆಳಕು' ಮಾಸಪತ್ರಿಕೆಯಲ್ಲಿ, ಒಂದು ಲೇಖನ 'ಅಪರಂಜಿ' ಮಾಸಪತ್ರಿಕೆಯಲ್ಲಿ ಮತ್ತೊಂದು ಲೇಖನ 'ಸಿಂಗಾರಿ ವೆಬ್ ಮ್ಯಾಗಜೈನ್'ನಲ್ಲಿ ಪ್ರಕಟವಾಗಿವೆ.

ನನಗಂತೂ ಮೊದಲಿನಿಂದ ಪುಸ್ತಕಗಳನ್ನು ಕೊಂಡುಕೊಳ್ಳುವುದು ಒಂದು ಫ್ಯಾಶನ್. ಎಲ್ಲ ವಿಷಯಗಳ, ವಿಚಾರಗಳ ಪುಸ್ತಕಗಳನ್ನು ಖರೀದಿಮಾಡುತ್ತಲಿದ್ದೆ. ಸಧ್ಯದಲ್ಲಿ ಓದಲಿಕ್ಕಾಗದಿದ್ದರೂ, ಕೆಲಸದಿಂದ ನಿವೃತ್ತಿಹೊಂದಿದ ಬಳಿಕ ಓದುವಸಲುವಾಗಿ. ಅವುಗಳಲ್ಲಿ ಕೆಲವನ್ನು ಓದಿಯೂ ಇದ್ದೆ ಅನ್ನಿ. ಮತ್ತೆ ಕೆಲವನ್ನು ಒಮ್ಮೆಯೂ ತಿರುವಿಯೂ ಹಾಕಿರಲಿಲ್ಲ. ಯಾರು ಯಾವುದೇ ವಿಷಯ ಕೇಳಿದರೂ, ಹೇಳಿದರೂ ನನಗೆ ಗೊತ್ತಿಲ್ಲ ಎನ್ನಬಾರದು ಎನ್ನುವುದಕ್ಕಾಗಿಯಾದರೂ ಪುಸ್ತಕಗಳನ್ನು ಕೊಳ್ಳುತ್ತಲಿದ್ದೆ. ನನಗೆ ವಿಶೇಷ ಆಸಕ್ತಿಯಿದ್ದ ಕ್ಷೇತ್ರ ಹಾಸ್ಯ, ಪತ್ತೇದಾರಿ & ಭಾಷಣಕಲೆ. ಇದಕ್ಕಾಗಿ ಕೈಲಾಸಂ, ನರಸಿಂಹಮೂರ್ತಿ, ಬೀಚಿ, ಜೆಮ್ಸ್ ಬಾಂಡ್ ಕರ್ತೃ ಇಯಾನ್ ಫ್ಲೆಮಿಂಗ್,ಶೆರ್ಲಾಕ್ ಹೋಮ್ಸ್ ಕರ್ತೃ ಸರ್ ಕಾನನ್ ಡಯಲ್, ಅಗಾತ ಕ್ರಿಸ್ಟಿ, ಡೇಲ್ ಕಾರ್ನೆಗಿ ಮುಂತಾದವರ ಪುಸ್ತಕಗಳನ್ನು ಕೊಂಡಿದ್ದೆ.

ಮಾತನಾಡುವುದೇ ನನ್ನ ಕಾಯಕವಾದುದರಿಂದ, ಡೇಲ್ ಕಾರ್ನೆಗಿಯ ಹಲವಾರು ಪುಸ್ತಕಗಳನ್ನು ಓದಿಕೊಂಡಿದ್ದೆ. ಅದರಲ್ಲೂ ಸಾರ್ವಜನಿಕ ಭಾಷಣಕಲೆ, ಮಾನವ ಸಂಬಂಧಗಳು ನನ್ನ ಫೇವರಿಟ್ ವಿಷಯ. ಅದರಲ್ಲಿ ಪ್ರಖ್ಯಾತ ಭಾಷಣಕಾರರು ತಮ್ಮ ಭಾಷಣಗಳನ್ನು ಹೇಗೆ ಸಿದ್ಧಪಡಿಸಿಕೊಳ್ಳುತ್ತಿದ್ದರು ಎಂಬ ಬಗೆಗೆ ಕೂಲಂಕಶವಾಗಿ ಓದಿಕೊಳ್ಳುತ್ತಿದ್ದೆ. ಮಾತನಾಡುವಾಗ ತಮ್ಮ ನಿಲುವು, ಬಾಯಿಯ ಚಲನೆ, ಧ್ವನಿಗಳ ಏರಿಳಿತ, ಶ್ರೋತೃಗಳ ಗಮನವನ್ನು ತನ್ನೆಡೆಗೆ ಹಿಡಿದಿಟ್ಟುಕೊಳ್ಳುವುದು ಹೇಗೆ ಮುಂತಾದ ಮುಖ್ಯ ವಿಚಾರಗಳ ಕಡೆಗೆ ಗಮನ ಹರಿಸಲು ಪ್ರಯತ್ನಿಸುತ್ತಿದ್ದೆ. ಪ್ರಾರಂಭದ ದಿನಗಳಲ್ಲಿ ಮಾತನಾಡಲು ಮೈಕಿನ ಮುಂದೆ ನಿಂತಾಗ ಹೊಸಬರಿಗೆ ಆಗುವ ಸಂಕಟ, ಬೆವರುವಿಕೆ, ನಿಶ್ಶಕ್ತಿ ಮುಂತಾದುವನ್ನು ಪರಿಹರಿಸಲು ಇರುವ ಉಪಾಯಗಳು ನನಗೆ ಅಪ್ಯಾಯಮಾನವಾದುವೆನಿಸಿದವು.

## 41. ಅದು. ಹೋಯ್ತು, ಇದು ಬಂತು ಡುಂ ಡುಂ:

ನಾವು ಚಿಕ್ಕವರಿದ್ದಾಗ ಈ ಡುಂ ಡುಂ ಕಥೆ ಕೇಳಿದ್ದು ನೆನಪಿಗೆ ಬರುತ್ತಿದೆ. ಒಂದು ಕೋತಿ ಸಿಕ್ಕಿಸಿದ್ದ ಬೆಣೆಯನ್ನು ಕೀಳಲು ಹೋಗಿಗಿ ಬಾಲ ಕತ್ತರಿಸಿಕೊಂಡು 'ಬಾಲಹೋಯ್ತು ಬೆಣೆ ಬಂತು ಡುಂ ಡುಂ ಎನ್ನುತ್ತಿತ್ತಂತೆ. ಇದನ್ನೇ ಮಾನವೀಯ ನೆಲೆಗಟ್ಟಿನಲ್ಲಿ ನೋಡಿದಾಗ ಹೀಗೊಂದು ಕಥೆ ಹೆಣೆಯಬಹುದು. ಒಬ್ಬನಿಗೆ ಅವರಮ್ಮ ಜೀವನೋಪಾಯ ಕಲಿತುಬರಲಿಕ್ಕೆಂದು ಒಂದು ರೂಪಾಯಿ ಕೊಟ್ಟು ಕಳುಹಿಸುತ್ತಾಳೆ. ಅವನು ಆ ರೂಪಾಯಿಯನ್ನು ತೆಗೆದುಕೊಂಡು ಹೋಗುತ್ತಾ ಇದ್ದಾಗಹೊಟ್ಟೆ ತುಂಬ ಹಸಿವಾಗುತ್ತೆ. ಕೊಟ್ಟ ಒಂದು ರೂಪಾಯಿಯನ್ನು ಶೆಟ್ಟರ ಅಂಗಡಿಗೆ ಕೊಟ್ಟು ಎರಡು ರೊಟ್ಟಿ ಖರೀದಿಸುತ್ತಾನೆ. ಅದರಲ್ಲಿ ಒಂದು ರೊಟ್ಟಿ ತಿಂದು ಮತ್ತೊಂದು ರೊಟ್ಟಿ ತನ್ನಲ್ಲೇ ಇಟ್ಟುಕೊಂಡು ತನ್ನ ಪ್ರಯಾಣ ಮುಂದುವರೆಸುತ್ತಾನೆ. ದಾರಿಯಲ್ಲಿ ಒಂದು ನಾಯಿ ಹಸಿವಿನಿಂದ ಒದ್ದಾಡುತ್ತಿರುವುದನ್ನು ಕಂಡು ತನ್ನಲ್ಲಿದ್ದ ರೊಟ್ಟಿಯನ್ನು ಅದಕ್ಕೆ ನೀಡುತ್ತಾನೆ. ರೊಟ್ಟಿ ತಿಂದ ಆ ನಾಯಿ ಕೃತಜ್ಞತಾರೂಪದಲ್ಲಿ ತನ್ನನ್ನು ಮಾರುವಂತೆ ಕೋರಿ ಅವನ ಜೊತೆಯಲ್ಲೇ ಸಾಗುತ್ತದೆ. ಪಕ್ಕದ ಊರಿನಲ್ಲಿ ಒಬ್ಬ ಆ ನಾಯಿಯನ್ನು ತನಗೆ ನೀಡಬೇಕೆಂದೂ ಬದಲಿಗೆ ತಾನು ತನ್ನ ಬಳಿಯಿರುವ ಕತ್ತೆ ನೀಡುವುದಾಗಿ ಕೇಳುತ್ತಾನೆ. ಹುಡುಗ ನಾಯಿ ಹೋಯ್ತು, ಕತ್ತೆ ಬಂತು ಡುಂ .. ಡುಂ.. ಅನ್ನುತ್ತಾ, ನಾಯಿಯನ್ನು ಕೊಟ್ಟು ಕತ್ತೆ ಪಡೆದು ಮುಂದುವರೆಯುತ್ತಾನೆ. ಮುಂದೆ ಹೋದಾಗ ಒಬ್ಬ ಅಗಸ ತನಗೆ ಕತ್ತೆ ನೀಡುವಂತೆಯೂ ಅದಕ್ಕೆ ಬದಲಾಗಿ ತನ್ನಲ್ಲಿರುವ ಬೆಕ್ಕೊಂದನ್ನು ನೀಡುವುದಾಗಿ ಕೇಳುತ್ತಾನೆ. ಸರಿ ಹುಡುಗ

ಕತ್ತೆ ಹೋಯ್ತು ಬೆಕ್ಕು ಬಂತು ಡುಂ.. ಡುಂ ಅನ್ನುತ್ತಾ ಕತ್ತೆ ಕೊಟ್ಟು ಬೆಕ್ಕು ಪಡೆಯುತ್ತಾನೆ. ಈಗೇ ಮುಂದುವರೆಯುತ್ತಾ ಕೊನೆಗೆ ಕಲ್ಲೆಂದು ಕೊಟ್ಟ ವಜ್ರವನ್ನು ಮಾರಿ ಕೋಟ್ಯಾಧೀಶನಾಗುತ್ತಾನೆ ಆ ಹುಡುಗ .. ಎಂದು ಕಥೆ ಮುಗಿಯುತ್ತದೆ.

ನಿಮ್ಮ ಜೀವನದಲ್ಲೂ ಇಂತಹ ಹಲವಾರು ಘಟನೆಗಳು ಜರುಗಿರಬಹುದು. ನನ್ನ ಜೀವನದಲ್ಲಿ ನಡೆದ ಇಂತಹ ಪ್ರಕರಣವನ್ನು ಮುಂದೆ ವಿವರಿಸುತ್ತಿದ್ದೇನೆ. ನಮ್ಮಲ್ಲಿ ಒಂದು ಬಿಪಿಎಲ್ 24 ಇಂಚಿನ ಟೀವಿ ಇತ್ತು, ಸುಮಾರು ಹತ್ತು ವರ್ಷಗಳಿಂದ ಚೆನ್ನಾಗಿ ಕಾರ್ಯನಿರ್ವಹಿಸುತ್ತಿದ್ದ ಟೀವಿ ಕಳೆದ ವರ್ಷ ಇದ್ದಕ್ಕಿದ್ದಂತೆ ಕೆಂಪಾಗತೊಡಗಿತ್ತು, ಅಂದರೆ ಕೆಂಪು ಬಣ್ಣ ಢಾಳಾಗಿ ಕಾಣತೊಡಗಿತ್ತು. ಅದೇ ಸಮಯಕ್ಕೆ ನಮ್ಮ ಮಗಳು ಇದ್ದ ಒಂದು 32 ಇಂಚಿನ ಎಲ್‌ಸಿಡಿ ಟೀವಿ ಬದಲಾಯಿಸಿ 48 ಇಂಚಿನ ಸ್ಮಾರ್ಟ್ ಎಲ್‌ಇಡಿ ಟೀವಿ ಕೊಂಡಿದ್ದಳು. ನಾವು ನಮ್ಮ ಹಳೇ ಟೀವಿಯನ್ನು ರಿಪೇರಿ ಅಂಗಡಿಯವನಿಗೆ ದಾಟಿಸಿ, ಮಗಳ ಮನೆಯಿಂದ 32 ಇಂಚಿನ ಎಲ್‌ಸಿಡಿ ಟೀವಿ ಮನೆಗೆ ತಂದೆವು. ಒಂದು ರೀತಿ '24 ಇಂಚಿನ ಟೀವಿ ಹೋಯಿತು, 32 ಇಂಚಿನ ಟೀವಿ ಬಂದಿತು ಡುಂ.. ಡುಂ' ಆಯಿತು. ತಂದಾಗಲೇ 32 ಇಂಚಿನ ಟೀವಿ ಪರದೆಯ ಮೇಲೆ ಬರೆ ಎಳೆದಂತೆ ಕೆಲವು ಗೆರೆಗಳು ಮೂಡಿದ್ದವು. ಬರುಬರುತ್ತಾ ಒಂದೊಂದೇ ಕಂಟ್ರೋಲ್ ಕೆಡತೊಡಗಿತು. ಟೀವೀ ಆನ್ ಮಾಡಿದರೆ ಚಿತ್ರಮೂಡಲು ಒಂದು ನಿಮಿಷ, ಚಾನಲ್ ಬದಲಾಗಲು ಒಂದು ನಿಮಿಷ ಆಗತೊಡಗಿತು. ಆನ್ ಮಾಡಿದಾಗ ಗಾಢ ಬಣ್ಣವಿರುತ್ತಿತ್ತು. ಅದನ್ನು ಕಡಿಮೆಮಾಡಿದನಂತರ ಮತ್ತೆ 15 ನಿಮಿಷದಲ್ಲಿ ಹಳೇ ಗಾಢಬಣ್ಣ ಮರುಕಳಿಸುತ್ತಿತ್ತು. ಇದರ ಆಯಸ್ಸು ಕ್ಷೀಣಿಸುತ್ತಿದೆ ಎಂದನ್ನಿಸತೊಡಗಿತ್ತು. ಇದ್ದಕ್ಕಿದ್ದಂತೆ ಒಂದು ಮಧ್ಯಾಹ್ನ ಅದು ಕಣ್ಣು ಮುಚ್ಚೇಬಿಟ್ಟಿತು. ಆನ್ ಮಾಡಿದರೂ ತೆರೆದುಕೊಳ್ಳಲಿಲ್ಲ.

ಈವತ್ತಿನ ದಿನಗಳಲ್ಲಿ ಮನೆಗಳಲ್ಲಿ ಟೀವೀ ಮಹತ್ವ ಎಷ್ಟು ಎಂದು ವಿವರಿಸ ಬೇಕಾಗಿಲ್ಲ. ಒಪ್ಪೊತ್ತಿನ ಊಟ ಸಿಗದಿದ್ದರೂ ಸಹಿಸಿಕೊಳ್ಳುವ ಗೃಹಿಣಿ ಒಪ್ಪೊತ್ತು ಟೀವಿ ಬರದಿದ್ದರೆ ಮನೆಯಲ್ಲಿ ಮಾಡುವ ರಾದ್ಧಾಂತ ಅಷ್ಟಿಷ್ಟಲ್ಲ. ತಕ್ಷಣ ಅದಕ್ಕೆ ಒಂದು ರಿಪ್ಲೇಸ್‌ಮೆಂಟ್ ಆಗಲೇಬೇಕು. ಇಲ್ಲದಿದ್ದಲ್ಲಿ ನಿಮ್ಮ ರಾತ್ರಿಯ ಊಟಕ್ಕೇ ಸಂಚಕಾರ. ನಮ್ಮನೆಯಲ್ಲೂ ಇದೇ ಆಯಿತು. ಅದನ್ನು ರಿಪೇರಿಮಾಡಿಸುವ ಪ್ರಯತ್ನ ಎಂದು ಬಲು ಕಷ್ಟದಿಂದ ಒಂದು ವಾರ ಕಳೆದಿದ್ದಾಯಿತು. ಕೊನೆಗೆ ಅದು ರಿಪೇರಿಮಾಡಲು ಆಗುವುದಿಲ್ಲ ಎಂಬ ತೀರ್ಮಾನ ನೀಡಿದಾಗ, ಬೇರೊಂದು ಟೀವಿ ತರಲು ತೀರ್ಮಾನಿಸಲಾಯಿತು. ಸಂಜೆಗೆ ಒಂದು 40 ಇಂಚಿನ ಎಲ್‌ಇಡಿ

ಸ್ಮಾರ್ಟ್ ಟೀವಿ ಕೊಂಡುತಂದೆವೆನ್ನಿ. ಆಗ ನೆನಪಾಗಿದ್ದೇ '32 ಇಂಚಿನ ಟೀವಿ ಹೋಯಿತು, 40 ಇಂಚಿನ ಟೀವಿ ಬಂತು ಡುಂ ..ಡುಂ!

ಮತ್ತೊಂದು ಪ್ರಕರಣ: ನಮ್ಮ ಮನೆಯಲ್ಲಿ ಒಂದು ಆರಾಮ ಸೋಫಾಸೆಟ್ 5 ವರ್ಷದ ಹಿಂದೆ ಕೊಂಡಿದ್ದೆವು. ಮೂರು ವರ್ಷಗಳನಂತರ ಅದರ ಹೊರಹೊದಿಕೆ ಬಿರುಕುಬಿಡಲು ಶುರುವಾದುದರಿಂದ ಆ ಹೊರಹೊದಿಕೆಯನ್ನು ಬದಲಾಯಿಸಲು ಸುಮಾರು ಹಣ ಖರ್ಚುಮಾಡಲಾಯಿತು. ನಂತರ ಆ ಸೋಫಾವನ್ನು ಮಗಳಮನೆ ಬೆಂಗಳೂರಿಗೆ ಸಾಗಿಸಲಾಯಿತು. ಅದಕ್ಕೆ ಬದಲಾಗಿ ಅಲ್ಲಿದ್ದ ಒಂದು ಟೂ ಸೀಟರ್ ಸೋಫಾವನ್ನು ನಮ್ಮ ಮನೆಗೆತರಲಾಯಿತು. ಮತ್ತೆ 5 ಸೀಟರ್ ಸೋಫಾ ಹೋಯ್ತು, 2 ಸೀಟರ್ ಸೋಫಾ ಬಂತು ಡುಂ. ಡುಂ! ನಾವು ಕೊಟ್ಟ ಸೋಫಾ ಮಕ್ಕಳ ಜಿಗಿದಾಟದಿಂದ ಆ ಸೋಫಾ ಹೊರಹೊದಿಕೆ ಮತ್ತೆ ಚಿಂದಿಚಿಂದಿ ಆಯಿತು ಎಂದು ಅದನ್ನು ನಮ್ಮ ಮಗಳು 'ಒಎಲ್‌ಎಕ್ಸ್' ಮೂಲಕ 5000 ರೂ.ಗಳಿಗೆ ಮಾರಿ ಅದರ ಜಾಗದಲ್ಲಿ ಒಂದು ಲಕ್ಷ ರೂ. ಗಳ ಭಾರಿ ರಿಕ್ಲೈನರ್ ಸೋಫಾ ಖರೀದಿಸಿದಳೆಂದು ತಿಳಿಯಿತು. ಮತ್ತೆ 'ಹಳೇ ಸೋಫಾ ಹೋಯ್ತು, ಹೊಸ ಸೋಫಾ ಬಂತು ಡುಂ.. ಡುಂ!'

ಕೊನೆಗೆ ಇನ್ನೊಂದು ಡುಂ.. ಡುಂ ಹೇಳಿಕೆ: ನಮ್ಮ ಸೋಫಾ ಹೋಯ್ತು, ಅವರ ಟೀವೀನೂ ಹೋಯ್ತು; ನಮಗೂ ಹೊಸ ಟೀವೀ ಬಂತು, ಅವರಿಗೂ ಹೊಸ ಸೋಫಾ ಬಂತು; ಡುಂ.. ಡುಂ.. ಡುಂ!

## 42. ಶುಕವನ ದರ್ಶನ:

ಮೈಸೂರಿಗೆ ಬಂದು ಆರೇಳು ವರ್ಷಗಳೇ ಕಳೆದಿದ್ದರೂ ಇಲ್ಲಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿರುವ 'ಶುಕವನ'ಕ್ಕೆ ಹೋಗಿಬರಲಾಗಿರಲಿಲ್ಲ. ಹಾಂ ಮಂಡ್ಯದಲ್ಲಿರುವಾಗಲೇ ಈ ಆಶ್ರಮದ ಆವರಣದಲ್ಲಿರುವ ಆಯುರ್ವೇದ ಆಸ್ಪತ್ರೆ ಸೇರಿ ಸುಮಾರು ಹತ್ತು ದಿನ ಅಲ್ಲೇ ಇದ್ದೆ. ಆ ಸಮಯದಲ್ಲಿ ನಾನು ಪೇಶಂಟ್ ಆಗಿದ್ದು-ದರಿಂದ ನನಗೆ ಸ್ವತಂತ್ರವಾಗಿ ತಿರುಗಾಡಲು ಅನುಮತಿಯಿರಲಿಲ್ಲ. ಆಗ ಬಹುಶಃ ಈ ಶುಕವನವೂ ಇರಲಿಲ್ಲ ಎನ್ನಿ. ಆಗ ಇದ್ದುದು ನಕ್ಷತ್ರವನ, ಬೋನ್ಸಾಯ್ ತೋಟ ಮುಂತಾದವು.

ಟೀವೀಯಲ್ಲಿ ಒಮ್ಮೆ ಈ ಶುಕವನದ ಬಗೆಗೆ ಡಾಕ್ಯುಮೆಂಟರಿ ಪ್ರಸಾರ ಆದಾಗಲೇ ಅದರ ಬಗೆಗೆ ನನ್ನ ಆಸಕ್ತಿ ಹೆಚ್ಚಿದುದು. ಆ ಆಶ್ರಮದ ಶುಕವನದಲ್ಲಿ ಮಾತನಾಡುವ ಗಿಳಿಗಳೂ ಇವೆ ಎನ್ನುವುದು ನನ್ನ ಆಸಕ್ತಿಯನ್ನು ಇಮ್ಮಡಿಗೊಳಿಸಿತ್ತು. ಅದರಲ್ಲೂ ಆ ಗಿಳಿಗಳು ಸ್ವಾಮೀಜಿಯವರೊಂದಿಗೆ ಮಾತನಾಡುವುದು, ನಾವು ನೀಡುವ ಹಣ್ಣುಗಳನ್ನು, ನಮ್ಮ ತಲೆ, ಭುಜ, ಕೈಗಳ ಮೇಲೇ ಕುಳಿತು ತಿನ್ನುವುವೆಂಬ ವಿಷಯ ಮತ್ತೂ ಆಕರ್ಷಕವಾಯಿತು. ನನ್ನ ತಂಗಿ ಮಗನ ಮದುವೆಯೂ ಅದೇ ಆಶ್ರಮದ ಆವರಣದಲ್ಲಿರುವ ಕಲ್ಯಾಣಮಂಟಪದಲ್ಲೇ ನಡೆದುದು. ಅದೂ 2014 ರ ನವಂಬರಿನಲ್ಲಿ. ಆಗಲೂ ಅದನ್ನು ನೋಡುವುದಾಗಲಿಲ್ಲ. ಅಲ್ಲಿಗೆ ಹೋಗಿಬರಲು ಹಲವಾರು ಸಲ ಪ್ರಯತ್ನಿಸಿದರೂ ಅದು ಸಾಧ್ಯವಾದುದು ಮಾತ್ರ ನನ್ನ ಮಗಳು ಅಳಿಯ ಕಳೆದ ಅಕ್ಟೋಬರ್ 2015 ರಂದು ನನ್ನ ಭಾವಮೈದುನನ ಸೊಸೆಯ ಸೀಮಂತ ಹಾಗೂ ನೂತನವಾಗಿ

ಕಟ್ಟಿಮುಗಿಸಿದ್ದ ಅಪಾರ್ಟ್‌ಮೆಂಟ್‌ನಲ್ಲಿನ ಹೋಮಕಾರ್ಯಕ್ರಮಕ್ಕೆ ಬಂದವೇಳೆಯಲ್ಲಿ.

ಅಂದು ಎರಡು ಕಾರ್ಯಕ್ರಮಗಳ ನಡುವಿನ ವಿರಾಮದ ದಿನವಾಗಿತ್ತು. ಸರಿ ನನ್ನ ನಾದಿನಿ ಹಿರಿಮಗ, ಹಿರಿಸೊಸೆ, ಅವಳ ಮಗ, ನನ್ನ ಮಗಳು ಅಳಿಯ ಮೊಮ್ಮೊಗ ಎಲ್ಲಿಗಾದರೂ ಹೋಗಿಬರೋಣ ಎಂದಾಗ ನಾನು ತಕ್ಷಣ 'ಶುಕವನ'ಕ್ಕೆ ಹೋಗಿಬರಬಹುದು ಎಂದೆ. ಅವರೂ ಹೂಂಗುಟ್ಟಿದುದರಿಂದ ನನಗೆ ಶುಕವನದ ದರ್ಶನಭಾಗ್ಯ ದೊರೆಯಿತು. ನನ್ನ ಪತ್ನಿ ನಾದಿನಿ & ಕಿರಿಸೊಸೆ ಮನೆಯಲ್ಲೇ ಉಳಿದರು. ಹೀಗಾಗಿ ನನಗೂ ಅವರ ಕಾರಿನಲ್ಲೇ ಕರೆದುಕೊಂಡು ಹೋದರು.

ತಿಂಡಿಮುಗಿಸಿ ಅಲ್ಲಿಗೆ ಹೋದಾಗಲೇ 12 ಸಮೀಪಿಸಿತ್ತು. ಶುಕವನದಲ್ಲಿ ಸುತ್ತಾಡಲು ನಮಗೆ ದೊರೆತುದು ಕೇವಲ ಒಂದು ಘಂಟೆ, ಅಬ್ಬಬ್ಬಾ ಅಂದರೆ ಒಂದೂವರೆ ಘಂಟೆ. ಅವರಿವರನ್ನು ವಿಚಾರಿಸಿ ಶುಕವನ ಪ್ರವೇಶಿಸಿದೆವು. ಎಂಟ್ರಿ ಫ್ರೀ ಎನ್ನುವುದ ತಿಳಿದಾಗ ಆಶ್ಚರ್ಯವಾಯಿತು. ಇವರು ಖರ್ಚುಗಳನ್ನು ಹೇಗೆ ನಿರ್ವಹಿಸುತ್ತಿದ್ದಾರೆ ಎಂಬ ಆಶ್ಚರ್ಯವೂ ಆಯಿತು. ನಾನು ಚಿಕ್ಕವನಿದ್ದಾಗ, ನಂತರ ದೊಡ್ಡವನಾಗಿದ್ದಾಗ ಮಡದಿ ಮಗಳೊಡನೆ 'ಝೂ'ಗೆ ಹೋಗಿದ್ದಾಗ ಅಲ್ಲೊಂದು ಕೌಂಟಿಂಗ್ ಮೆಷೀನ್ ಮೂಲಕ ಹಾದುಹೋಗಿದ್ದುದು ನೆನಪಿಗೆ ಬಂತು. ಚಿಕ್ಕ ಮಕ್ಕಳನ್ನು ಅದರಡಿಯಿಂದ ನುಸುಳಲುಹೇಳಿ ದೊಡ್ಡವರನ್ನು ಅದರ ಮೂಲಕ ಒಬ್ಬೊಬ್ಬರನ್ನಾಗಿ ಒಳಬಿಡುತ್ತಾರೆ. ಅದರ ಮೂಲಕ ಒಳಹೋದ ದೊಡ್ಡವರ ಲೆಖ್ಖವಿಡಲು. ಇಲ್ಲೂ ಅದೇ ಸಿಸ್ಟಂ ಅಳವಡಿಸಿದ್ದರು. ಇಬ್ಬರು ಚಿಕ್ಕಮಕ್ಕಳನ್ನು ಕೆಳನುಸುಳಿಸಿ ನಮ್ಮನ್ನು ಗೇಟ್ ದಾಟಿಸಿದರು, ಮುಂದೆ ಮೂರು ದ್ವಾರಗಳು; ಎರಡು ದಪ್ಪ ಪ್ಲಾಸ್ಟಿಕ್ ಹಾಳೆಚೂರುಗಳನ್ನು ನೇತುಹಾಕಿದ್ದುದು, ಮೂರನೆಯದು ಕಬ್ಬಿಣದ ಸರಪಳಿಗಳನ್ನು ಒಂದರಪಕ್ಕ ಒಂದರಂತೆ ನೇತು ಹಾಕಿದ್ದ ದ್ವಾರ. ಬಹುಶಃ ಅಪ್ಪಿತಪ್ಪಿಯೂ ಯಾವುದೇ ಪಕ್ಷಿಯೂ ತಪ್ಪಿಸಿಕೊಂಡು ಹೊರ ಹಾರಬಾರದೆಂಬ ಮುನ್ನೆಚ್ಚರಿಕೆ ಇದು. ಆ ದ್ವಾರಗಳನ್ನು ದಾಟಿಹೊರಬಂದ ತಕ್ಷಣ ಅಲ್ಲಿ ನಿಂತಿದ್ದವ ಸೆಕ್ಯೂರಿಟಿ. 'ಸಾರ್ ಮೊಬೈಲ್ ಕ್ಯಾಮರ ಆಫ್‌ಮಾಡಿ. ಬಳಸಬೇಡಿ' ಎನ್ನುವ ಎಚ್ಚರಿಕೆ ನೀಡಿ ಕಳುಹಿಸಿದ.

ಮುಂದೆ ಸಾಗಿದರೆ ಪಂಜರದ ಕೊಠಡಿಗಳಲ್ಲಿ ವಿಧವಿಧವಾದ ದೇಶವಿದೇಶದ ಗಿಳಿಗಳು. ದೊಡ್ಡಗಿಳಿಗಳಾದರೆ ಎರಡೋ ಮೂರೋ.ಚಿಕ್ಕವಾದರೆ ಹತ್ತಾರು ಒಂದೊಂದು ಪಂಜರದಲ್ಲಿ ಇಟ್ಟಿದ್ದರು. ಹೆಚ್ಚಿನವು ದಾನವಾಗಿ ಬಂದವು. ಕೆಲವು

ಗಾಯಗೊಂಡೋ, ಮತ್ತೇನೋ ಅನಾರೋಗ್ಯದಿಂದ ಚಿಕಿತ್ಸೆಗಾಗಿ ಬಂದು ಅಲ್ಲೇ ನೆಲೆಸಿರುವವು.ಅಲ್ಲೊಂದು ಕಡೆ ಸಣ್ಣ ಗುಂಪುಸೇರಿತ್ತು.ಅದೇನೆಂದು ಕುತೂಹಲದಿಂದ ಹತ್ತಿರಹೋಗಿನೋಡಿದರೆ, ಅಲ್ಲಿ ದೊಡ್ಡದೊಂದು ಮಕಾವ್ ಗಿಳಿಯನ್ನು ಕೈಮೇಲೆ ಕೂಡಿಸಿ ಫೋಟೋ ತೆಗೆಯುತ್ತಿದ್ದರು. ನನ್ನ ಮಗಳು ಅಳಿಯ ಸಿಂಗಪೂರಿನಲ್ಲಿದ್ದಾಗ ಅಲ್ಲಿಯೂ ಇದೇ ರೀತಿಯ ಫೋಟೋ ತೆಗೆಸಿಕೊಂಡಿದ್ದರು. ಒಂದು ದೊಡ್ಡ ಗಿಳಿಯೊಂದಿಗೆ ಫೋಟೋ ಎಂದರೆ 300 ರೂ. ನಿಂದ 400 ರೂ.ಗಳು ತೀಕಬೇಕು. ನಾವು ಯಾವುದೇ ರೀತಿ ಫೋಟೋ ತೆಗೆಯಬಾರದೆಂಬ ಶರತ್ತು ಇದಕ್ಕೇ ಇರಬೇಕು. ಹೀಗೆ ಎರಡು ಕಡೆ ಫೋಟೋ ತೆಗೆಯುವ ಕಾರ್ಯಕ್ರಮ.. ಮತ್ತೊಂದು ಸಣ್ಣ ಓಣಿಯ ಮೂಲಕ ಅಂಗಳ ಪ್ರವೇಶಿಸಿದರೆ, ಹತ್ತು ರೂ.ಗೆ ಒಂದು ತಟ್ಟೆ ಹಣ್ಣು ಕೈಲಿಟ್ಟು ಒಳಕಳುಹಿಸುತ್ತಾರೆ. ತಟ್ಟೆ ನೋಡಿದ್ದೇ ತಡ ಸಣ್ಣ ಸಣ್ಣ ಪ್ಯಾರಾಕೀಟುಗಳು ಹಾರಿಬಂದು ಹಣ್ಣು ತಿನ್ನತೊಡಗುತ್ತವೆ.ಈ ದೃಶ್ಯ ಫೋಟೋ ತೆಗೆಯಲು ಕಾಯುತ್ತಿರುತ್ತಾರೆ ಅಲ್ಲಿನ ಫೋಟೋಗ್ರಾಫರ್‌ಗಳು. ಒಟ್ಟಿನಲ್ಲಿ ಅವರು ಕಾಸುಮಾಡುತ್ತಿರುವುದು ಈ ಫೋಟೋಗಳ ಮಾರಾಟದಿಂದ. ಹೊರಬರುವಷ್ಟರಲ್ಲಿ, ನಿಮ್ಮ ಫೋಟೋ ಕೈಲಿಟ್ಟು ಕಳುಹಿಸುತ್ತಾರೆ.ಅಲ್ಲೊಂದು ಪಂಜರದ ಮುಂದೆ ಜನ ನಿಂತು ಏನೇನೋ ಮಾತನಾಡುತ್ತಿದ್ದರು. ಗಿಳಿ ಅವರ ಮಾತನ್ನು ಅನುಕರಿಸುತ್ತಿತ್ತು. ಪದೇ ಪದೇ ಜನ ಕೂಗುತ್ತಿದ್ದುದು, ಗಿಳಿ ಅರಚುತ್ತಿದ್ದ ಒಂದು ಶಬ್ದ 'ಹಲೋ' ಉಳಿದ ಶಬ್ದಗಳನ್ನು ನಾವೇ ಊಹಿಸಿಕೊಳ್ಳಬೇಕಾಗಿತ್ತು.ಒಟ್ಟಿನಲ್ಲಿ ಕಾಸು ಬೋಳಿಸಿಕೊಂಡರೂ, ನೆನಪಿನಲ್ಲುಳಿಯುವ ಸಂಗತಿ.

## 43. ಮೊಲದ ಬೇಟೆ:

ಅಂದು ಬೆಳಗಿನಜಾವ ರಸ್ತೆಯಲ್ಲಿ ಹೆಚ್ಚಿನ ಜನಸಂಚಾರವಿರಲಿಲ್ಲ. ನಾನು ಎಂದಿನಂತೆ ಗೇಟಿನ ಬೀಗ ತೆಗೆಯುತ್ತಿದ್ದೆ, ರಸ್ತೆಯಲ್ಲಿ ಓಡುತ್ತಾ ಜಿಗಿಯುತ್ತಾ ಬಂದ ಪುಟ್ಟ ಪ್ರಾಣಿಯನ್ನು, ಗಮನಿಸುವ ಮೊದಲೇ ಅದು ಪಕ್ಕದ ಸೈಟಿನ ಕಡೆ ನೋಡಲು ಎದ್ದುನಿಂತಿತು. ಅದುವರೆವಿಗೂ ಮಾಮೂಲಿ ಬೆಕ್ಕಿರಬೇಕೆಂದುಕೊಂಡಿದ್ದ ನನಗೆ ಅದು ಆ ರೀತಿ ಎದ್ದುನಿಂತಾಗಲೇ, ಕಂಡಿದ್ದು ಅದು ಒಂದು ಕಂದುಬಣ್ಣದ ಕಾಡುಮೊಲ ಎಂದು! ಚಂಗೆಂದು ನೆಗೆದು ಪಕ್ಕದ ಸೈಟಿನೊಳಗೆ ಹಾರಿ ಅಲ್ಲಿನ ಪೊದೆಗಳನಡುವೆ ಮರೆಯಾಯಿತು ಆ ಕಂದುಕಾಡುಮೊಲ. ಒಣಗಿದ ಗಿಡದ ಕಡ್ಡಿಗಳನಡುವೆ ಅದು ಕುಳಿತರೂ ಕಣ್ಣಿಗೆ ತಕ್ಷಣ ಗೋಚರಿಸುವುದಿಲ್ಲವಾದುದರಿಂದ ಅದರ ಇರುವಿಕೆಯನ್ನೇ ಮರೆತುಬಿಟ್ಟಿದ್ದೆ.

ನಾವು ಮನೆಗಳಲ್ಲಿ ಬೆಳೆಸಬೇಕೆಂದರೂ ಗಿಡಗಳು ಸರಿಯಾಗಿ ಬೆಳೆಯುವುದಿಲ್ಲ. ಅದೇ ಖಾಲೀ ನಿವೇಶನಗಳನ್ನೇ ನೋಡಿ. ಕೇವಲ ಒಂದೆರಡು ತಿಂಗಳಲ್ಲೇ ಅಲ್ಲೊಂದು ಪುಟ್ಟ ಕಾಡೇ ಸೃಷ್ಟಿಯಾಗಿಬಿಡುತ್ತದೆ. ಹಾಗೇ ನಮ್ಮ ಮನೆಯ ಇಕ್ಕೆಲಗಳಲ್ಲೂ ಖಾಲೀ ನಿವೇಶನಗಳಿವೆ. ಅದರ ತುಂಬಾ ನಾನಾ ರೀತಿಯ ಎಕ್ಕ, ನಾಯಿತುಳಸಿ, ಮುಂತಾದ ಸ್ವಾಭಾವಿಕ ಸಸ್ಯರಾಶಿ ಹಬ್ಬಿ, ಹಲವಾರು ಜೀವಸಂಕುಲಗಳಿಗೆ ಆಶ್ರಯತಾಣವಾಗಿದೆ. ಹಲವಾರು ಸಣ್ಣಪುಟ್ಟ ಹಕ್ಕಿಗಳು ಆ ಪೊದೆಗಳಲ್ಲೇ ಗೂಡುಮಾಡಿಕೊಂಡು ಮೊಟ್ಟೆಯಿಟ್ಟು ಮರಿ ಮಾಡಿಕೊಂಡಿವೆ. ಮುಂಗುಸಿಗಳು ನಿರಾತಂಕವಾಗಿ ಓಡಾಡಿಕೊಂಡು ವಿಶ್ರಾಂತಿ ಪಡೆದುಹೋಗುತ್ತವೆ. ಇನ್ನು ಹಾವುರಾಣಿ, ಹೆಂಟೇಗೊದ್ದ,

ಗೊದ್ದ, ಹಲ್ಲಿ, ಗೊಣ್ಣೆಹುಳು, ಸಿಂಬಿಹುಳ, ಬಸವನಹುಳ ಹೀಗೆ ನೂರಾರು ಪ್ರಬೇಧಗಳೂ ಇಲ್ಲಿ ಕಾಣಸಿಗುತ್ತವೆ. ಈ ಸಸ್ಯರಾಶಿಗಳಲ್ಲಿ ಪ್ರಧಾನವಾದ 'ಕಾಂಗ್ರೆಸ್' ಗಿಡ ಇದುವರೆವಿಗೂ ಉಪದ್ರವಿ ಸಸ್ಯವೆಂದೇ ಹೆಸರಿಸಲ್ಪಟ್ಟಿದೆ. ಅವುಗಳ ಗಾಳಿ ಸೋಕಿದರೂ ಅಲರ್ಜಿ ಖಾಯಿಲೆ ಬರುತ್ತದೆ ಎನ್ನುತ್ತಾರೆ. ಅದರಿಂದಲೇ ಏನೋ ವರ್ಷದ ಹನ್ನೆರಡು ತಿಂಗಳೂ ನನ್ನ ಮೂಗು ಒಣಗುವುದೇ ಇಲ್ಲ. ಈ ಸಸ್ಯಗಳು ಆಳೆತ್ತರ ಬೆಳೆಯುತ್ತಿದ್ದಂತೆ ನೆರೆಯ ಮನೆಗಳು, ಮನುಷ್ಯರು ಎಲ್ಲ ದೃಷ್ಟಿಯಿಂದಲೇ ಮರೆಯಾಗುತ್ತಾರೆ. ನಾವು ಮನೆಬೀಗಹಾಕಿ ಪರ ಊರಿಗೆ ಹೋದ ಸಂದರ್ಭಗಳಲ್ಲಿ ಮನೆ ಬೀಗಮುರಿದರೂ ಇತರರಿಗೆ ತಿಳಿಯುವುದೇ ಇಲ್ಲ. ಹಾಗಾಗಿ ಆರು ತಿಂಗಳಿಗೆ ಒಮ್ಮೆ ಆ ಗಿಡಗಂಟಿಗಳನ್ನು ಸವರಿಸುವುದು ನಮ್ಮ ಅನಿವಾರ್ಯ ಕರ್ಮವಾಗಿದೆ.

ಹಾಗೆ ಗಿಡಗಳನ್ನು ಸವರಿಸಲು ಖಾಸಗಿ ಕೂಲಿಯವರಿಂದಾದರೆ, ನೂರಾರು ರೂ.ಗಳ ಕೂಲಿಕೊಡಬೇಕಾಗುತ್ತದೆ. ಹಾಗೆ ಕೊಟ್ಟರೂ ಅವರು ಮನೆಯ ಪಕ್ಕದ ಎರಡು ಮೂರು ಅಡಿ ಅಗಲದವರೆಗೆ ಮಾತ್ರ ಗಿಡ ಸವರುತ್ತಾರೆ. ಇದಕ್ಕೆ ಬದಲಾಗಿ ನಾವು ನಮ್ಮ ಏರಿಯಾ ಕಾರ್ಪೊರೇಟರಿಗೆ ಫೋನಾಯಿಸಿದರೆ, ಅವರೇ ಮುನಿಸಿಪಾಲಿಟಿ ಕಡೆಯಿಂದ ಜಾಡಮಾಲಿಗಳನ್ನು ಆ ಕೆಲಸಕ್ಕೆ ಕಳುಹಿಸಿಕೊಡುತ್ತಾರೆ. ಅವರಿಗೆ ಕಾಫಿಗೆ ಕಾಸುಕೊಟ್ಟರೆ ಸಾಕು ಇಡೀ ನಿವೇಶನದಲ್ಲಿನ ಗಿಡಗಳನ್ನು ಸವರಿಬಿಡುತ್ತಾರೆ. ಈಗ್ಗೆ ಎರಡು ದಿನಗಳ ಹಿಂದೆಯೂ ನಾನು ನಮ್ಮ ಏರಿಯಾ ಕಾರ್ಪೊರೇಟರಿಗೆ ಫೋನಾಯಿಸಿ, ಮನೆಪಕ್ಕದ ನಿವೇಶನಗಳಲ್ಲಿ ಗಿಡಗಳು ವಿಪರೀತ ಬೆಳೆದು ತೊಂದರೆಯಾಗುತ್ತಿರುವುದರಿಂದ ಕೆಲಸಗಾರರನ್ನು ಕಳುಹಿಸಿ ಕ್ಲೀನ್ ಮಾಡಿಸಿಕೊಡಿರೆಂದು ವಿನಂತಿಸಿದೆ. ಕೇವಲ 15 ನಿಮಿಷ ಕಳೆಯುವಷ್ಟರಲ್ಲಿ ಮನೆಮುಂದೆ ನಿಂತಿಬ್ಬರು, 'ಸಾರ್, ನೀವೇನಾ ಸಾಹೇಬರಿಗೆ ಫೋನ್ ಮಾಡಿದ್ದೋರು?' ಎಂದಬ್ಬರಿಸಿದರು. ನಾನು ಅವರ ಕೈಯಲ್ಲಿದ್ದ ಮಚ್ಚುಗಳನ್ನು ನೋಡಿದವನೇ, ಇವರು ಗಿಡಕತ್ತರಿಸಲು ಬಂದವರು ಎಂಬುದನ್ನು ಗುರುತಿಸಿ 'ಹೌದಪ್ಪ' ಅಂದೆ. ಆ ಆಸಾಮಿಗಳನ್ನು ಕೆಲವಾರು ಸಲ ನಮ್ಮ ಬೀದಿಯಲ್ಲಿನ ಮನೆಯ ಮುಂದಿಟ್ಟ ಕಸಗಳನ್ನು ಸಂಗ್ರಹಿಸುವುದನ್ನೂ ನೋಡಿದ್ದೆನಾದುದರಿಂದ ಅನ್ಯ ಅರ್ಥ ಕಲ್ಪಿಸಿಕೊಂಡು ಹೆದರುವ ಅವಶ್ಯಕತೆ ಕಾಣಲಿಲ್ಲ. ತಂದಿದ್ದ ಮೋಟರ್ ಸೈಕಲ್ಲನ್ನು ರಸ್ತೆಬದಿಯಲ್ಲಿ ನಿಲ್ಲಿಸಿ, ಫೀಲ್ಡಿಗಿಳಿದು ಗಿಡಗಳನ್ನು ತರಿಯಲು, ಅವುಗಳ ಸೊಂಟ ಮುರಿಯಲು ಪ್ರಾರಂಭಿಸುತ್ತಾ, 'ಸಾರ್, ಒಂದು ಬಾಟಲ್ ನೀರುಕೊಡಿ' ಎಂದು ಆದೇಶಿಸಿದರು. ಸರಿ ಎನ್ನುತ್ತಾ ಒಳಹೋಗಿ ಒಂದು ಬಾಟಲ್ ನೀರುತಂದು ಕಾಂಪೌಂಡಿನ ಮೇಲಿಟ್ಟು, ಮನೆ ಒಳಗೆ ಸೇರಿಕೊಂಡೆ.

ತಮ್ಮ ಮೊಬೈಲುಗಳಲ್ಲಿ ಸಂಗ್ರಹಿಸಿದ್ದ ತೆಲುಗು, ಕನ್ನಡ, ತಮಿಳು ಚಲನಚಿತ್ರ ಹಾಡುಗಳನ್ನು ಜೋರಾಗಿ ಹಾಕಿಕೊಂಡು ಕೇಳುತ್ತಾ, ಜೊತೆಜೊತೆಗೆ ತಾವೂ ಆಗಾಗ ಗುನುಗುನಿಸುತ್ತಾ, ತಮ್ಮ ಕಾಯಕ ಮುಂದುವರಿಸುತ್ತಿದ್ದವರು, 'ಓ ಮೊಲಾ' ಅಂತ ಕೂಗಿದರು. ಹಾವು ಎಂದಂತಾಗಿ ಪಕ್ಕದ ಮನೆಕಟ್ಟುತ್ತಿದ್ದವರು, ನಾನು ಎಲ್ಲರೂ ಗಾಬರಿಯಿಂದ ಓಡಿಬಂದು 'ಏನಾಯಿತು?' ಎಂದಾಗ 'ಮೊಲಾ ಸಾರ್, ಕಂದುಕಾಡುಮೊಲ ಆ ಮೂಲೆಗೆ ಓಡಿಹೋಯಿತು' ಎಂದರು. ಆಗಲೇ ನನಗೆ ಹದಿನೈದು ದಿನಗಳ ಹಿಂದೆ ನಿವೇಶನ ಹೊಕ್ಕಿದ್ದ ಮೊಲದ ನೆನಪು ಮರುಕಳಿಸಿತು. 'ಅದನ್ನು ಏನ್ಮಾಡ್ತೀರಪ್ಪಾ?' ಅಂತ ನಾನೂ ನನ್ನ ಶ್ರೀಮತಿ ಕೇಳಿದಾಗ 'ಹಿಡಿದು ಯಾರಿಗಾದರೂ ಮಾರಿಬಿಡುತ್ತೇವೆ' ಎಂದುತ್ತರಿಸಿದರು. ಕತ್ತರಿಸಿದ ಗಿಡಗಳನ್ನೆಲ್ಲಾ ನಿವೇಶನದ ದ್ವಾರಕ್ಕೆ ಒಟ್ಟಲು ತೊಡಗಿದರು. ಆ ನಿವೇಶನದ ಎಲ್ಲ ಕಡೆಗೂ ನಿವೇಶನ ಮಾಲೀಕರು ಸಿಮೆಂಟ್ ಕಾಂಪೌಂಡ್ ಹಾಕಿಸಿ, ಒಬ್ಬರು ಮಾತ್ರ ಒಳಬರಲು ಅನುವಾಗುವಂತೆ ಜಾಗ ಬಿಟ್ಟಿದ್ದರು. ಆ ಜಾಗವನ್ನೇ ಇವರು ಗಿಡದ ಎಲೆಕೊಂಬೆಗಳಿಂದ ಮುಚ್ಚುತ್ತಿದ್ದರು. ಗಿಡಸವರುವ ಕೆಲಸ ಅಲ್ಲಿಗೇ ನಿಂತಿತು. ಅದಾಗಲೇ ಅವರು ಆ ಮೊಲವಿದ್ದ ಮೂಲೆ ಬಿಟ್ಟು ಉಳಿದೆಡೆಗಳಲ್ಲಿ ಗಿಡ ಸವರಿದ್ದರು ಅನ್ನಿ. ಇದ್ದವರಿಬ್ಬರು ಅದನ್ನು ಆ ಮೂಲೆಯಿಂದ ಓಡಿಸಿ ಹಿಡಿಯಲು ಯತ್ನಿಸಿದರೂ ಸಫಲವಾಗಲಿಲ್ಲ. ಒಬ್ಬನಂತೂ ಡೈವ್ ಹೊಡೆದು ಅದರ ಹೊಟ್ಟೆಗೆ ಕೈಹಾಕಿ ಹಿಡಿಯಲೆತ್ನಿಸಿದ, ಅದು ವಿಕಾರವಾಗಿ ಕಿರುಚಿಕೊಂಡು ಅದರ ಉಗುರುಗಳಿಂದ ಪರಚಿ ಅವನಿಗೆ ಗಾಯಮಾಡಿತು. ಅದೇ ಮೊದಲ ಸಲ ನಾನು ಮೊಲವೊಂದು ಕಿರುಚಿದ್ದನ್ನು ಕೇಳಿದುದು. ಮೊಲದ ಕಿರಿಚಿನೊಡನೆ ಪರಚಿದುದಕ್ಕೆ ಆತನೂ ಕಿರಿಚಿರಬಹುದು. ಆ ಮೂಲೆಯಿಂದ ಓಡಿಹೊರಬಂದ ಮೊಲ ಸಿಕ್ಕ ಸಿಕ್ಕ ಕಡೆಯೆಲ್ಲಾ ಚಾಣಾಕ್ಷತನದಿಂದ ಓಡುತ್ತಾ ಇವರ ಹಿಡಿತಕ್ಕೆ ಸಿಗದೇ ತಪ್ಪಿಸಿಕೊಳ್ಳುತ್ತಿತ್ತು. ಎದುರಿಗೆ ಬಂದರೂ ನಿಲ್ಲುತ್ತಿರಲಿಲ್ಲ. ತಕ್ಷಣ ಇಬ್ಬರಲ್ಲೊಬ್ಬ ತನ್ನ ಮೊಬೈಲ್‌ನಿಂದ ತನ್ನ ಕಡೆಯ ಇನ್ನೂ ಮೂರ್ನಾಲ್ಕು ಮಂದಿಗೆ ಫೋನಾಯಿಸಿ, ಮೊಲಹಿಡಿಯಲು, ಅಲ್ಲಲ್ಲ, ಹೊಡೆಯಲು ಅವರನ್ನು ಕೂಡಲೇ ತಾನಿರುವ ಜಾಗಕ್ಕೆ ಬರುವಂತೆ ಕರೆಕಳುಹಿಸಿದ. ಕೆಲವೇ ನಿಮಿಷಗಳಲ್ಲಿ ಸೈಕಲ್ಲುಗಳಲ್ಲಿ ಆ ಸ್ಥಳಕ್ಕೆ ಬಂದಿತು ಅವರ ಸ್ನೇಹಿತರ ಸೈನ್ಯ. ಒಬ್ಬ ಒಂದು ಸರ್ವೆ ಮರದ ಕೊರಡನ್ನು ಕೈಗೆತ್ತಿಕೊಂಡ. ಮತ್ತೊಬ್ಬ ಗಿಡಕತ್ತರಿಸುವ ಮಚ್ಚನ್ನೇ ಹಿಡಿದುನಿಂತ. ಮತ್ತೊಬ್ಬ ದ್ವಾರದ ಬಳಿನಿಂತ. ದ್ವಾರದ ಬಳಿಯಿದ್ದವನೊಬ್ಬನನ್ನು ವಿಡಿಯೋ ಮಾಡಲು ತಿಳಿಸಿ, ಮತ್ತೊಬ್ಬ ರನ್ನಿಂಗ ಕಾಮೆಂಟರಿ ನೀಡಲು ತೊಡಗಿದ್ದ,

ಇಬ್ಬರು ಆ ಮೊಲವಿದ್ದ ಮೂಲೆಗೆ ಹೋಗಿ ಅಲ್ಲೇಬಿದ್ದಿದ್ದ ಚಾಪೆಯೊಂದನ್ನು ಅನಾಮತ್ತಾಗಿ ಆ ಮೊಲದ ಮೇಲೆ ಹಾಕಿ ಅದನ್ನು ಅವುಚಿಹಿಡಿಯಲು ಮುಂದಾದರು. ಅವರು ಚಾಪೆಯನ್ನು ಹರಡಿದ ತಕ್ಷಣವೇ ಆ ಮೊಲ ಓಡತೊಡಗಿತು, ಯಾರ ಕೈಗೂ ಸಿಗದೇ! ಅದು ಓಡುತ್ತಾ ದ್ವಾರದ ಕಡೆಗೆ ಬಂದಾಗ ಅಲ್ಲಿದ್ದವನು ಅದರ ಮೇಲೇ ಡೈವ್ ಹೊಡೆದ, ಊಹೂಂ, ಪ್ರಯೋಜನವಾಗಲಿಲ್ಲ. ಅದನ್ನು ಹಿಡಿಯುವ ಯೋಚನೆ ಬದಲಾಗಿ ಅದನ್ನು ಹೊಡೆಯುವ ಕಾರ್ಯಕಕ್ಕೆ ಸಿದ್ಧವಾದರು. ನಮಗೆ ಈ ಬೇಟೆ ದೃಶ್ಯವನ್ನು ನೋಡಲು ಮನಸ್ಸಾಗಲಿಲ್ಲ. ನನ್ನ ಶ್ರೀಮತಿಯಂತೂ 'ಹೊಡೀಬೇಡಿರಪ್ಪಾ, ನಮಗೆ ಕೊಟ್ಟುಬಿಡಿ, ನಾವು ಪ್ರಾಣಿದಯಾಸಂಘಕ್ಕೋ, ಯಾವುದಾದರೂ ಸ್ವಾಮಿಗಳ ಆಶ್ರಮಕ್ಕೋ ಕೊಟ್ಟುಬಿಡುತ್ತೇವೆ' ಎಂದು ಅಂಗಲಾಚಿದ್ದಳು. ಅವರು, 'ನಾವು ಹೊಡೆಯುವುದಿಲ್ಲಮ್ಮಾ, ಅದನ್ನು ಬೇರೆಯವರಿಗೆ ಕೊಟ್ಟುಬಿಡುತ್ತೇವೆ' ಎಂದು ಹೇಳಿದ್ದರು. 'ಮುಂಡೇದ್ರ ಆಯಸ್ಸು ಇವತ್ತಿಗೆ ಮುಗಿದಿತ್ತೋ ಏನೋ, ಇವರ ಕೈನಲ್ಲಿ ಸಾಯತ್ತೆ' ಎಂದು ಗೊಣಗುತ್ತಾ ಒಳಬಂದಳು. ಒಬ್ಬ ತನ್ನ ಕೈಯಲ್ಲಿದ್ದ ದಢಿಯನ್ನೇ ಅದರತ್ತ ಒಗೆದ, ಮತ್ತೊಬ್ಬ ತನ್ನ ಕೈಯಲ್ಲಿದ್ದ ಮಚ್ಚನ್ನೇ ಅದರತ್ತ ಬೀಸಿದ. ಯಾರ ಏಟೋ ಏನೋ ಅದು ವಿಕಾರವಾಗಿ ಕಿರುಚಿಕೊಂಡು ಅದರ ಓಟ ನಿಶ್ಚಲವಾಯಿತು. ಸತ್ತೇ ಹೋಗಿತ್ತೋ ಏನೋ ಗೊತ್ತಾಗಲಿಲ್ಲ, ಯಾಕೆಂದರೆ ಆ ಬೇಟೆ ನೋಡಲು ನಾವು ಅಲ್ಲಿ ನಿಂತಿರಲಿಲ್ಲ. ಕೊನೆಗೆ, ನಿಶ್ಚೇಷ್ಟಿತವಾಗಿ ಕೈಮುಗಿದುಕೊಂಡು ಕಣ್ಣುಮುಚ್ಚಿಕೊಂಡು ಧ್ಯಾನಾಸಕ್ತನಂತಿದ್ದ ಆ ಮೊಲದ ಕಿವಿಗಳನ್ನು ಹಿಡಿದುಕೊಂಡು ಒಂದು ಗ್ರೂಪ್ ಫೋಟೋ ತೆಗೆಸಿಕೊಂಡನಂತರ, ಅದನ್ನು ಬಂದಿದ್ದವರ ಕೈನಲ್ಲಿ ಮನೆಗೆ ಸಾಗಿಸಿಬಿಟ್ಟಿದ್ದರು. ಇವರು ಕೆಲಸಮುಗಿಸಿ ಮನೆಗೆ ಮರಳುವ ವೇಳೆಗೆ ಬಹುಷಃ ಸಿದ್ಧವಾಗಿರಬಹುದೋ ಅಂದಿನ ಮಧ್ಯಾಹ್ನದ ಪಾರ್ಟಿಗೆ 'ಮೊಲದ ಮಾಂಸದ ಸಾರು'!

# 44. ಅನವಶ್ಯಕ ಸ್ಪರ್ಧೆ ಯಾಕೆ?

ಇಂದಿನ ದಿನಗಳಲ್ಲಿ ಎಲ್ಲ ಕಡೆ ಸ್ಪರ್ಧೆ ಇರುವುದು ಸಾಮಾನ್ಯ. ಅದು ಶೈಕ್ಷಣಿಕ ಕ್ಷೇತ್ರಕ್ಕೆ ಸೀಮಿತವಾಗಿದ್ದರೆ ಚೆನ್ನ. ಏಕೆಂದರೆ ಶಿಕ್ಷಣ ಮೂಲಭೂತ ಅವಶ್ಯಕತೆ. ಹಿಂದೆಲ್ಲ ವಿದ್ಯಾರ್ಹತೆಯ ಅಳತೆಗೋಲು ಮೂರೇಮೂರು ಅದೇ ಫಸ್ಟ್ ಕ್ಲಾಸ್, ಸೆಕೆಂಡ್ ಕ್ಲಾಸ್ & ಥರ್ಡ್ ಕ್ಲಾಸ್. ಅದನ್ನು ತಲುಪಲಾಗದವರು ಫೇಲ್. ಇಂದಿನ ಅಳತೆಗೋಲು: ಕನಿಷ್ಠ ಫಸ್ಟ್ ಕ್ಲಾಸ್, ಹೈ ಫಸ್ಟ್ ಕ್ಲಾಸ್ ಮತ್ತು ಡಿಸ್ಟಿಂಕ್ಷನ್. ಈ ಲೆವೆಲ್ಲಿಗೆ ಮತ್ತೊಂದು ಸೇರ್ಪಡೆ ಸೂಪರ್ ಡಿಸ್ಟಿಂಕ್ಷನ್ ಅಂದರೆ 97%, 98% 99% ಹೀಗೆ. ಅದನ್ನೂ ಈವತ್ತಿನ ಪರಿಸ್ಥಿತಿಯಲ್ಲಿ ಒಪ್ಪಿಕೊಳ್ಳೋಣ. ಮೂಲ ಪದವಿ ಜೊತೆಗೆ ಡಬ್ಬಲ್ ಡಿಗ್ರಿ, ಸ್ಪೆಷಲೈಸೇಶನ್ ಇದ್ದರೆ ಮಾತ್ರ ಉತ್ತಮ ಉದ್ಯೋಗಾವಕಾಶ. ವಿದೇಶದಲ್ಲಿ ಪದವಿ ಪಡೆದುಬಂದರೆ ಪ್ರಿಫರೆನ್ಸ್, ಇವು ತಮ್ಮ ಬದುಕಿಗೆ ಅತ್ಯವಶ್ಯಕ.

ವಿದ್ಯಾಭ್ಯಾಸದ ಜೊತೆಗೆ ತಮ್ಮ ಮನಸ್ಸಂತೋಷಕ್ಕಾಗಿ ಯಾವುದಾದರೂ ವಾದ್ಯವನ್ನೋ ಸಂಗೀತವನ್ನೋ ಕಲಿಯುತ್ತಿರುವುದು ಒಂದು ಸಂತೋಷದಾಯಕ ಬೆಳವಣಿಗೆಯೇ ಸರಿ. ಮಧ್ಯದಲ್ಲೆಲ್ಲೋ ಈ ಆಚಾರ ಮಾಯವಾಗಿದ್ದು ಮತ್ತೆ ಜನರ ಒಲವು ಈ ಸಂಸ್ಕೃತಿಯ ಕಡೆಗೆ ತಿರುಗಿದೆ. ಯಾವುದೇ ಕಲೆ ಸ್ಪರ್ಧೆಗಾಗಿ ಕಲಿಯಬಾರದು. ಸ್ಪರ್ಧೆಗಾಗಿ ಕಲಿತರೆ ಅದು ತಾತ್ಕಾಲಿಕ. ಮನಸ್ಸಂತೋಷಕ್ಕಾಗಿ ಹಿಂದೆಲ್ಲಾ ಕಲೆ ಕಲಿಯುತ್ತಿದ್ದರು. ಅದೂ ಗುರುಕೃಪೆಯಲ್ಲಿ ಪಲವಾರು ವರ್ಷಗಳ ಸತತ ಅಭ್ಯಾಸದ ನಂತರವೇ ಸಾರ್ವಜನಿಕ ಕಾರ್ಯಕ್ರಮ

ನೀಡಲು ಅನುಮತಿ ಸಿಕ್ಕುತ್ತಿತ್ತು. ತಮಗೆ ಸಂತೋಷವಾದಾಗಲೂ ಅವನ್ನು ಸಂಭ್ರಮಿಸಲು ಅಥವಾ ದುಃಖವಾದಾಗಲೂ ಅವುಗಳನ್ನು ಮರೆಯಲುವಾದನಕ್ಕೆ ಮೊರೆ ಹೋಗುತ್ತಿದ್ದರು. ಹಲವಾರು ವರ್ಷಗಳ ರಿಯಾಜ಼್ ಅಥವಾ ಸಾಧನೆಯಿಲ್ಲದೇ ಯಾವ ಕಲೆಯೂ ಸಿದ್ಧಿಸುವುದಿಲ್ಲ ಎನ್ನುವುದನ್ನು ಅರಿತಿದ್ದರು.

ನಾನು ಹೇಳಲು ಹೊರಟಿರುವ ವಿಷಯವೇ ಬೇರೆ. ದೂರದರ್ಶನ ಚಾನಲ್ಲುಗಳಲ್ಲಿ ನಡೆಯುವ ಸ್ಪರ್ಧೆಗಳ ಬಗೆಗೆ. ಚಿಕ್ಕ ಚಿಕ್ಕ ಮಕ್ಕಳನ್ನು ಸ್ಪರ್ಧೆಗಳಿಗೆ ತಯಾರು ಮಾಡುವುದು, ತಿಂಗಳುಗಟ್ಟಲೇ ತರಗತಿಗಳಿಗೆ ಚಕ್ಕರ್ ಹಾಕಿಸುವುದು, ದೊಡ್ಡವರ ಜೊತೆ ಸ್ಪರ್ಧೆನಡೆಸಲು ಅವಕಾಶಮಾಡಿಕೊಟ್ಟು ಅದರಲ್ಲಿ ಅವರು ಸೋತಾಗ ಅವರ ಗೋಳು ಜೊತೆಗೆ ಅವರ ತಂದೆತಾಯಿಗಳ ಸಂಕಟ ಇವುಗಳೆಲ್ಲಾ ಬೇಕಾ? ಹಿಂದೊಮ್ಮೆ ಒಂದು ಹಾಡಿನ ಸ್ಪರ್ಧೆಯಲ್ಲಿ ಸೋತುದಕ್ಕೆ ಆ ಮಗು ಆತ್ಮಹತ್ಯೆ ಮಾಡಿಕೊಂಡಿದ್ದೂ ಉಂಟು. ಇನ್ನು ಕೆಲವು ಮಕ್ಕಳು ಮಾನಸಿಕ ಸ್ಥೈರ್ಯವನ್ನೇ ಕಳೆದುಕೊಂಡುಬಿಡಬಹುದು. ಸೋಲನ್ನು ಗೆಲುವಿನ ಮೆಟ್ಟಿಲೆಂದು ಅರಿಯುವ ವಯಸ್ಸಲ್ಲವಲ್ಲ ಅದು. ಅದು ಹಾಡಾಗಿರಬಹುದು, ಅಥವಾ ನೃತ್ಯವಾಗಿರಬಹುದು. ಇಂದು ಬಹಳ ಬೇಗ ಖ್ಯಾತಿಪಡೆಯಲು ಒಂದೋ ಎರಡೋ ಹಾಡುಗಳನ್ನೋ ನೃತ್ಯಗಳನ್ನೋ ಬಾಯಿಪಾಠಮಾಡಿ ತಕ್ಷಣವೇ ಸ್ಪರ್ಧೆಗಳಿಗಿಳಿದುಬಿಡುವುದು ಸಾಮಾನ್ಯ ಸಂಗತಿ. ಒಟ್ಟಿನಲ್ಲಿ ನಮ್ಮ ಮಕ್ಕಳು ಚಾನಲ್ಲುಗಳಲ್ಲಿ ಕಾಣಿಸಿಕೊಂಡುಬಿಡಬೇಕು ಎನ್ನುವ ತಂದೆತಾಯಂದಿರ ಆಸೆ ಈ ದುರಂತಗಳಿಗೆಲ್ಲ ಮೂಲ ಕಾರಣ ಎನ್ನುವುದನ್ನು ತಿಳಿದುಕೊಳ್ಳುವುದು ಒಳ್ಳೆಯದು. ಇದಕ್ಕೊಂದು ಇತ್ತೀಚಿನ ಉದಾಹರಣೆ ಅಂದರೆ 'ಎದೆ ತುಂಬಿ ಹಾಡಿದೆನು' ಕಾರ್ಯಕ್ರಮದಲ್ಲಿ ಹಾಡಿದ ಬಾಲ ಕಲಾವಿದನೊಬ್ಬನಿಗೆ ಬಾಲಸುಬ್ರಮ್ಹಣ್ಯಂರವರು ಈ ಹಾಡು ಹಾಡಿದ ಗಾಯಕ ಯಾರು? ಯಾವ ಚಿತ್ರದ್ದು? ಮುಂತಾದ ಪ್ರಶ್ನೆಗಳಿಗೆ 'ಗೊತ್ತಿಲ್ಲ' ಎಂಬುದೇ ಉತ್ತರವಾಗಿತ್ತು. ಏನೂ ಅರಿಯದ ಕಂದಮ್ಮಗಳನ್ನು ತಾವು ಹಾಡುವ ಹಾಡಿನ ಬಗೆಗೆ ಯಾವುದೇ ಮಾಹಿತಿ ನೀಡದೇ, ಚಿಕ್ಕ ಮಕ್ಕಳ ಕೈಲಿ ಅವರ ವಯಸ್ಸಿಗೆ ಮೀರಿದ ಹಾಡುಗಳನ್ನು, ಅವರಿಗೆ ಅರ್ಥ ಹೇಳಲಾಗದ ಹಾಡುಗಳನ್ನು, ಹಾಡಿಸುವುದು ಅಕ್ಷಮ್ಯ ಅಪರಾಧ ಆಗುತ್ತದೆ.

ಮೊದಲೇ ಶೈಕ್ಷಣಿಕ ಹೊರೆ ಹೆಚ್ಚು, ಶಾಲೆ/ಕಾಲೇಜು ಮುಗಿಸಿ ಬಂದ ತಕ್ಷಣ ಟ್ಯೂಷನ್ನಿಗೆ ಓಡಬೇಕು. ಉಳಿದ ಸಮಯವನ್ನು ಈ ಸ್ಪರ್ಧಾ ತರಬೇತಿಗೆ ಬಳಸಿದರೆ ಅವರಿಗೆ ಆಟವಾಡಲು ಸಮಯವೆಲ್ಲಿ ಉಳಿಯುತ್ತದೆ. ದೈಹಿಕ ಆರೈಕೆಗೆ

ಅವಕಾಶವೆಲ್ಲಿ? ಅದೂ ಅಲ್ಲದೇ ಈಚೀಚೆಗೆ ಕಲೆಯನ್ನು, ಕಲೆಗಾಗಿ ಕಲಿಸುವ ಪ್ರವೃತ್ತಿ ಮಾಯವಾಗಿ, ಸ್ಪರ್ಧೆಗಾಗಿಯೇ ಕ್ರ್ಯಾಷ್ ಕೋರ್ಸ್‌ಗಳಾಗಿ ಕಲಿಸಿಕೊಡುವ ಚಾಳಿ ಶುರುವಾಗಿರುವುದು ಒಳ್ಳೆಯ ಬೆಳವಣಿಗೆ ಎನಿಸುವುದಿಲ್ಲ.

ಈ ವಿಷಯದಲ್ಲಿ ತಮ್ಮ ಅಭಿಪ್ರಾಯಗಳನ್ನೂ ಹಂಚಿಕೊಳ್ಳಿ.

# 45. ಆ ದೇಶದವ್ರು ಮೂರೇ ಸ್ಟೇಜ್ಮಾಡಿದ್ರು

ಓಯ್ತಲಪ್ಪೋ ಓಯ್ತು, ಒಂದಲ್ಲ ಎರಡಲ್ಲ 450 ಕೋಟಿ ರೂಪಾಯಿ ಎಕ್ಕುಟ್ಟೋಯ್ತು, ಉಪ್ಪು ತಗೊಂಡೋಗಿ ಸಮುದ್ರಕ್ಕೆಸುರಿದಂಗಾಯ್ತು. ನಮ್ದೇಶ್ದಮುಕ್ಕೆ ಮಂಗ್ಳಾರ್ತಿ ಎತ್ತಿದಂಗಾಯ್ತು. ಅದ್ನೈದು ವರ್ಷದಿಂದ ತಯಾರಿಮಾಡೀಮಾಡಿ ಈ ದಪಾ ಆಕಾಸ್ದಲ್ಲಿ ಕೂರ್ಲೇತೀರ್ತೀವಿ ಅಂತ ಕೊಚ್ಕೊಂತಿದ್ ನಮ್ಮ ಅಜ್ಞಾನಿಗಳು ಅಲ್ಲಲ್ಲ, ಇಜ್ಞಾನಿಗಳು ಈಗ ಇಂಗ್ ತಿಂದ ಮಂಗಗಳಂಗೆ ಬಾಯ್ಬೀಗ ಆಕ್ಕೊಂಡು ಕುಂತವೆ. ನಮ್ ಇಸ್ರೋ ರಾಯ್ರಂತೂ ಒಂದೇ ಒಂದು ವಿಸ್ಯ ಒಗಾಯಿಸವ್ರೆ, ದೇಸಪ್ರೇಮಿಗಳೇ, ನಾಯಕರೇ ದೋಸವೆಲ್ಲ ನಾವ್ಮಾಡಿದ ನಾಲ್ಕು ಸ್ಟೇಜಿನಾಗ್ಲ, ನಾವ್ ಕೆಟ್ಟದ್ದು ಈ ನಾಕನೇ ಸ್ಟೇಜನ್ನ ಸೇರ್ಸಿದ್ರಿಂದ ಅಂತಾ. ಎಚ್ಚೆಚ್ಚು ಸ್ಟೇಜು ಸೇರಿಸ್ತಾ ಓದಂಗೆ ಎಚೆಚ್ಚು ಟ್ರಬಲ್ಲು. ನೋಡಿ ಆ ಪರಂಗೀವ್ರು ಮೂರೇ ಸ್ಟೇಜು ಮಾಡಿದ್ರು, ಈ ಬಿಳೀಮೂತೀವ್ರು ಎರಡೇ ಸ್ಟೇಜು ಮಾಡಿದ್ರು ಅಂತಾ ಬಾಯ್ಬಡಕತ್ತಾವ್ರೆ. ಅಂಗಾದರೆ ಇವರ್ಯಾಕೆ ನಾಕುಸ್ಟೇಜು ಮಾಡೋಕೆ ಓಗಿದ್ದರು? ದೇಶದದುಡ್ಡನ್ನು ಪೋಲ್ಮಾಡೋಕಾ? ಅಥ್ವಾ ನಮ್ಮ ಜನಗಳು ದಡ್ಡರು, ಏನ್ ಮಾಡಿದ್ರೂ ಕೇಳೋದಿಲ್ಲ ಅಂತಾನೋ? ಬುಡಕ್ಬಂದಾಗಮಾತ್ರ ಬಚಾವಾಗೋ ವಿಸ್ಯ ಕೊಡೋಕೆ ಇವರೇನ್ ರಾಜಕಾರಣಿಗಳಾಗೋದರಾ? ಅಂತಾ ಜಾಣತನದ ವಿಸ್ಯ ಕೊಟ್ಟಿದ್ರೆ ಮುಣುಗೋದ ದುಡ್ಡು ಮತ್ತೆ ಎದ್ಬತ್ತದಾ?

ದೀಪಾವಳೀಲಿ ಕಡ್ಡೆ ಬೆಳಗೆ ಸಿಗ್ಲಿ ಅಂತ ತಂದ ಪಟಾಕಿಗ್ಳು ಡಂ ಅನ್ದೇ ಟುಸ್ ಪುಸ್ ಅಂತಾನೂ, ಪುಸ್ ಅನ್ಬೇಕಾದ ಹೂ ಕುಂಡಗಳು ಡಂ ಅಂತಾನೂ ಆಗೋ ಹಂಗೆ ಈ ರಾಕೆಟ್ಟೂನೂ

ಕೆಟ್ಟು ಉಲ್ಟಾಹೊಡೆದವೆ. ಕಾರಣಗಳು ಹುಡ್ಕಕೋದಕ್ಕೆ ಅಂತ ಒಂದು ಸಮಿತೀನೂ ರಚ್ನೆ ಆಗ್ಬೇಕಾಗದೆ. ಪರೀಕ್ಷೇಲಿ ಎಚ್ಗೆ ನಂಬರ ತಗೊಂಡು ಪಾಸಾಗ್ಲೀ ನನ್ಮಗಾ ಅಂತಾ ಸಾವ್ರಾರು ರೂಪಾಯಿ ಟ್ಯೂಸನ್ ಫೀಸುಕಟ್ಟಿ, ಪಾಕೀಟ್ ಮನಿನೂ ಕೊಟ್ಟು ಕಳ್ಸಿದ್ರೆ, ಅಚ್ಚಕಟ್ಟಾಗಿ ಫೇಲಾಗಿ ಮನೆಗೆ ಬಂದ್ಮಗಾ ಏಳ್ದನಂತೆ, ಅಪ್ಪಾ ಪೇಪರ ಸೆಟ್ಟರ್‌ಗೆ ಕೊಶ್ಚನ್‌ಪೇಪರ್ ಸೆಟ್ಮಾಡಾಕೆ ಬರಲ್ಲ; ವಾಲ್ಯುಯರ್‌ಗೆ ವಾಲ್ಯೂ ಮಾಡೋಕೇ ಬರಲ್ಲ ಅದ್ಕೇ ನಾ ಫೇಲಾಗಿದ್ದು ಅಂತ ನಮ್ಮ ಇಸ್ರೋ ರಾಯ್ರು ಏಳ್ದಂಗೆ ಏಳ್ಬಿಡೋದಾ! ನಮ್ದೇಶ ಅಂದ್ರೆ ಭಾರತದೇಶ, ಬಡಾದೇಶ, ಯಾವುದ್ರಾಗೆ ಅಂತೀರಾ, ಜನಸಂಖ್ಯೆನಾಗೆ! ಆದ್ರೂನೂವೆ ತಲಾದಾಯದಾಗೆ ಬಡದೇಸಾನೇ. ನಾವು ಪೋಲ್ಮಾಡೋ ಒಂದೊಂದು ರೂಪಾಯಿ ನಮ್ಮ ಬಡಜನರಿಗೆ ಕೊಡಬಹುದಾಗಿದ್ದ ಒಂದೊಂದು ತುತ್ತು ಅನ್ನ ಕಸ್ಕೊಂಡಂಗೆ ಅನ್ನೋದು ಈ ಅಜ್ಞಾನಿಗಳಿಗೆ ತಿಳೀಬೇಕಾಗಿತ್ತು. ಖರ್ಚು ಮಾಡಿದ್ದಕ್ಕೂ ಸಾರ್ಥ್ಕ ಆಗ್ದೇ ಇದ್ರೆ, ನಮ್ಕೆಲ್ಸದ ಬಗ್ಗೆ ನಮ್ಗೇ ಭರ್ವಸೆ ಇಲ್ದಿದ್ರೆ, ಸಕ್ಸಸ್ ಎಲ್ಲೈತ್ಲಾ ? ಮುಂದ್ಕಾದ್ರೂ ನವಿಲ್ನೋಡಿ ಕೆಂಬೂತ ಪುಕ್ಕ ತರ್ಕೊಂಡಂಗೆ ಅನ್ನೋ ಹಂಗಾಗ್ಬಾರ್ದಲ್ವಾರಾ !

## 46. 90 ರೂಪಾಯ್ಗೆ ಪೇಟೇಲ್ಮಾರೋ ಬೆಣ್ಣೆ ಮನೇಮುಂದೆ 60 ರೂಪಾಯಿ

ಏ ಸಿಂಗಣ್ಣಾ, ನಿನ್ನೆ ನಮ್ಮನೇಲಿ ಒಂದೆಡ್ವಟ್ ಕೆಲ್ಸನಡ್ದೈತಲ್ಲಾ. ಯಾವ್ನೋ ಬಡ್ಡೀ ಐದಾ ನಮ್ಮೆಂಗ್ಸಗ್ಗೆ ನಿನ್ನೆಸ್ತು ಏಳಿ 180ರೂಪಾಯಿ ಟೋಪಿ ಆಕ್ಬುಟವ್ನೆ. ನಾನಾಪೀಸ್ಗೆ ಓಗೋದ್ನೆ ನೋಡ್ಕೊಂಡು ನಮ್ಮನೇಗ್ಬಂದು "ಅಮ್ಮಾವ್ರೇ, ಸಿಂಗಣ್ಣನ ಮನೇವ್ರು ಕಳ್ಸವ್ರೆ, ಒಳ್ಳೆ ಅಸಿನ್ ಬೆಣ್ಣೆ 3 ಕೆಜಿ ಅದೆ. ಸಿಂಗಣ್ಣನ ಮನೇವ್ರು ಈಗ್ತಾನೇ 3 ಕೇಜಿ ತಕ್ಕಂಡವ್ರೆ, ಆಚೆ ಬೀದಿ ಶಾಮಣ್ಣೋರು 4 ಕೆಜಿ ಕೇಳ್ತಾವ್ರೆ, ಇವತ್ತಾಗಾಕಿಲ್ಲ, ನಾಡ್ದು ಬತ್ತೀನಿ ಆವಾಗ ತತ್ತೀನಿ ಅಂತೇಳಿವ್ನಿ. ನಿಮ್ಗೂ ಸಿಂಗಣ್ಣನ ಮನೇವ್ರಿಗೆ ಆಕ್ದಂಗೇ ಆಕ್ತೀನಿ. ಕೇಜಿಗೆ 60ರೂಪಾಯಿ. ಒಂದ್ರೂಪಾಯೀನೂ ಎಚ್ಚಡ್ಗೆ ಏಳಾಕಿಲ್ಲ" ಅಂದ್ನಂತೆ. ನಂ ಎಗುಸ್ರು ಯೋಚ್ನೇಮಾಡಿ ಅಲ್ಲ ಪೇಟೇಲಿ 90ರೂಪಾಯ್ಗೆ ಸಿಗೋ ಮಾಲು ಮನೆ ಮುಂದೇನೇ 60ಕ್ಕೆ ಸಿಕ್ತದಲ್ಲಾ ಅಂತ 3 ಕೇಜೀ ನಮ್ಗೂ ಇರ್ಲೀ ಅಂತ ಆಕಸ್ಕೊಂಡವ್ಳೆ. ಆಮೇಕೆ ಕಾಯಿಸ್ಕೋಡಿದ್ರೆ, ತಳದಲ್ಲಿ ಅಂಗೈಮಂದಕ್ಕೆ ದೋಸೆ ಅಂಗೆ ಬರೀ ಗಸ್ಟು. ಮೂಗ್ಮುಚ್ಕೋ ಳಂಗೆ ನಾತ. ದುರ್ನಾತ. ಯಾರ್ಗೂ ಕಾಣ್ದಂಗೆ ಬಚ್ಚಲ್ಲಿ ಸುರಿದು ತಲೇ ಮೇಲೆ ಕೈ ಅಚ್ಕೊಂಡು ಮುಸಿಮುಸೀ ಅಳ್ತಾ ಕುಂತಿದ್ಲು. ನೀ ಏನಾರಾ ಏಳ್ಕಳ್ಸಿದ್ಯಾ?

ತಕ್ಕಳಪ್ಪಾ, ನಿನ್ನೆ ನಮ್ಮನೇಗೂ ಅವ್ನೇ ಇರ್ಬೇಕೂ. ಬಂದಿದ್ನಂತೆ. ನಿನ್ನೆಸ್ರೇಳಿ ನಮ್ಮೆಂಗ್ಸರ್ಗೂ 120 ರೂಪಾಯ್ಗೆ ಆಕೋಗವ್ನೇ ಸಾಮಾನಾ! ಬಡ್ಡೀ ಐದಾ ಸಿಕ್ರೆ ಬುಟ್ಟೇನಾ. ಅವ್ನ, ಚೆಪ್ಲು ಏಳಬ್ಬೇ ನನ್ಮಂದ್ರಿ. ಟೀವೀಎಸ್‌ಮೇಲೆ ಬತ್ತಾನಂತೇ. ಮೆಳ್ಳಗ್ಣಂತೇ. ಕೈಲಿ ಅಲ್ಯೂಮಿನಿಯಂ

ಟಿಫಿನ್ ಕ್ಯಾರಿಯರ್ ತತ್ತಾನಂತೆ. ಎಲ್ಲಾರಾ ಕಣ್ಗೆ ಬಿದ್ರೇ ಏಳಕಳ್ಳಕ್ಕಾ, ಒಂದ್ಸ್ಲ ನೋಡ್ಕಂಬಡೋಮಾ!

# 47. ಮಾರ್ಜಾಲ ಪುರಾಣಂ

ನಾವಿದ್ದ ಮಂಡ್ಯದ ಮನೆ ಒಂದು ರೀತಿ ಸಾಕುಪ್ರಾಣಿಗಳ 'ಝೂ ಗಾರ್ಡನ್' ತರಹ ಇತ್ತು. ಅಕಸ್ಮಾತ್ ಎದುರು ಮನೆ ಮುಂದೆ ಒಂದು ಗೋಲ್ಡನ್ ಕಲರ್ ಬೆಕ್ಕಿನ ಮರಿ ಕಾಣಿಸಿದ್ದೇ ತಡ, ನನ್ನ ಮಗಳು ಅದು ತನಗೆ ಬೇಕೆಂದು ಹಠಹಿಡಿದಳು. ಅವಳ ಒತ್ತಾಯಕ್ಕೆ ಮಣಿದು ಅದನ್ನು ಹಿಡಿದುತಂದುಕೊಟ್ಟಿದ್ದೇ ಈ ಮಿನಿ ಝೂ ಗಾರ್ಡನ್ ಸೃಷ್ಟಿಗೆ ಕಾರಣವಾಯಿತು. ಅದು ಹೆಣ್ಣಾಗಿದ್ದು ಕೆಲದಿನಗಳಲ್ಲೇ 3 – 4 ಮರಿಗಳಿಗೆ ಜನ್ಮನೀಡಿತು. ಆ ಮರಿಗಳ ಆರೈಕೆಗೆ ನನ್ನ ಮಡದಿ ಮಗಳು ನಿಂತರು. ಅವುಗಳು ಬೆಚ್ಚಗೆ ಮಲಗಲಿಕ್ಕೆ ಎಂದು ದಿನಸಿ ಅಂಗಡಿಯವನನ್ನು ಬೇಡಿ ರಟ್ಟಿನ ಪೆಟ್ಟಿಗೆಗಳನ್ನು ತಂದಿದ್ದಾಯಿತು. ಅದರಲ್ಲಿ ಗೋಣೀಚೀಲಗಳನ್ನು ಹಾಸಿ, ಅವುಗಳನ್ನು ಬೆಳೆಸಿದ್ದಾಯಿತು. ನಂತರ ಆ ಮರಿಗಳು ಬೆಳೆದು ಅವು ತಲಾ 3 – 4 ಮರಿಗಳಿಗೆ ಜನ್ಮ ನೀಡಿದವು. ಹೀಗೆ ಒಂದು ಸಮಯದಲ್ಲಿ ಒಟ್ಟು 30 ಬೆಕ್ಕುಗಳ ಸಂಸಾರ ನಮ್ಮದಾಗಿತ್ತು. ಆದರೆ ಈ ಸಂಖ್ಯೆ ಹೆಚ್ಚು ಕಾಲ ಇರಲಿಲ್ಲ. ಕಾರಣ ಹೊರಗೆ ಹೋದ ಅನೇಕ ಬೆಕ್ಕುಗಳನ್ನು ಬೀದಿನಾಯಿಗಳು ಕಚ್ಚಿ ಸಾಯಿಸುತ್ತಿದ್ದವು. ಒಮ್ಮೆಯಂತೂ ಒಂದು ಬೆಕ್ಕನ್ನು ಎರಡು ನಾಯಿಗಳು ಕಚ್ಚಿಹಿಡಿದುಕೊಂಡು ಎಳೆದಾಡುತ್ತಿದ್ದುದನ್ನು ನಾನೇ ಕಣ್ಣಾರೆ ಕಂಡಿದ್ದೂ ಇದೆ. ಹಲವಾರು ಬೆಕ್ಕುಗಳು ನನ್ನ ಮಡದಿಯ ತೊಡೆಯ ಮೇಲೆ ಮಲಗೇ ತಮ್ಮ ಕೊನೆಯುಸಿರೆಳೆದಿರುವುದನ್ನೂ ನೋಡಿದ್ದೇನೆ. ನಮ್ಮ ಮನೆಗೆ ಹಾಲು ಹಾಕುತ್ತಿದ್ದ ಹಾಲಮ್ಮ ತಮ್ಮ ಮನೆಗೆ ಒಂದು ಬೆಕ್ಕಿನಮರಿ ಕೊಡಿರೆಂದು ಕೇಳಿದಾಗ ನನ್ನ ಮಡದಿ ಒಂದು ಮರಿಯನ್ನು ಅವಳಿಗೆ ನೀಡಿದಾಗ, ನನ್ನ ಮಗಳು ಊಟ, ತಿಂಡಿ

ಬಿಟ್ಟು ಅದನ್ನು ಮತ್ತೆ ಮನೆಗೆ ವಾಪಸು ತರುವವರೆಗೂ ಬಿಡದೆ ಜ್ವರವನ್ನೇ ಬರಿಸಿಕೊಂಡುಬಿಟ್ಟಿದ್ದಳು. ಹಾಗೂ ಹೀಗೂ ಮಂಡ್ಯ ಬಿಟ್ಟು ಮೈಸೂರು ಸೇರಿದಮೇಲೆ ಕೆಲಕಾಲ ಬೆಕ್ಕಿನ ಕಾಟ ಇರಲಿಲ್ಲ. ಆದರೆ ಒಂದು ದಿನ ಮನೆ ಪಕ್ಕದ ಖಾಲೀ ಸೈಟಿನಲ್ಲಿ ಬೆಕ್ಕಿನ ಮರಿಯ ಕೂಗು ಕೇಳಿಸಿದ್ದೇ ತಡ. ನನ್ನ ಮಡದಿಯ ಕಿವಿ ನೆಟ್ಟಗಾಯಿತು. ನಾನು ಅದರ ಸಹವಾಸಬೇಡವೆಂದು ಎಚ್ಚರಿಸಿದ್ದೂ ಆಯಿತು. ಅಯ್ಯೋಪಾಪ ಅಂದರೆ 6 ತಿಂಗಳ ಶಾಪ ಅಂತಾರಲ್ಲ ಹಾಗೆ, ಒಂದಿಷ್ಟು ಹಾಲುಅನ್ನ ಹಾಕಿದ್ದೇ ತಡಾ. ನಮ್ಮ ಗ್ರಹಚಾರಕ್ಕೆ ಎಂಬಂತೆ ಅದರ ತಾಯಿ ಆ ಮರಿಗಳನ್ನು ನಮ್ಮ ಮನೆ ಮಹಡಿಯಮೆಟ್ಟಿಲು ಕೆಳಗೇ ತಂದು ಹಾಕಬೇಕೆ! ಮತ್ತೆ ಗಂಟುಹಾಕಿಕೊಂಡಿತು ಬೆಕ್ಕಿನ ಸಹವಾಸ. ಆ ಮರಿಗಳಲ್ಲಿ ಒಂದು ಕಪ್ಪು ಮತ್ತೊಂದು ಬೂದು. ಮರಿಗಳು ಮೆಲ್ಲಗೆ ಮನೆ ಒಳಕ್ಕೆ ಬರತೊಡಗಿದವು. ಅವುಗಳಿಗಾಗಿ ತೆನಾಲಿರಾಮನ ತರಹ ಹೆಚ್ಚುವರಿ ಹಾಲನ್ನು ತರಿಸತೊಡಗಿದಳು. ಆದರೂ ಅವುಗಳಿಗೆ ನಮ್ಮ ಸಸ್ಯಾಹಾರಿ ಆಹಾರಕ್ಕಿಂತ ಮಾಂಸಾಹಾರವೇ ಹೆಚ್ಚುಪ್ರಿಯವಲ್ಲವೇ! ಅಂತೆಯೇ ಎಲ್ಲೆಲ್ಲಿಂದಲೋ ಹೆಗ್ಗಣಗಳನ್ನು ಹಿಡಿದುತಂದು ಮನೆ ಮೂಲೆಗಳಲ್ಲೋ, ಮಂಚದಕೆಳಗೋ ಹಾಕಿಕೊಂಡು ತಿಂದು ಗಲೀಜುಮಾಡತೊಡಗಿದವು. ಕಣ್ಣಿಗೆ ಕಂಡಾಗ ಆ ಹೊಲಸನ್ನು ಎತ್ತಿಬಿಸಾಕುವ ಕೆಲಸ ನನ್ನ ಮಡದಿಯದಾಯಿತು. ತಿನ್ನುವುದನ್ನು ಕಂಡಾಗ ಅವುಗಳನ್ನು ಹೊರಗೆ ಓಡಿಸಲು ತೊಡಗಿದೆವು. ಕೆಲತಿಂಗಳ ಬಳಿಕ ಆ ಕಪ್ಪು ಬೆಕ್ಕು ಮನೆಗೆ ಬರದೇ ಎಲ್ಲೋ ಹೋಯಿತು. ಆದರೆ ಆ ಬೂದು ಬೆಕ್ಕು ಮನೆಯಲ್ಲೇ ಉಳಿಯಿತು.

ಪುಣ್ಯಕ್ಕೆ ಆ ಎರಡೂ ಮರಿಗಳೂ ಗಂಡಾಗಿದ್ದುದರಿಂದ ಸಂತಾನವೃದ್ಧಿಯಾಗಿರಲಿಲ್ಲ. ನನ್ನ ಮಡದಿಗೆ ಆ ಬೂದುಬೆಕ್ಕನ್ನು ಕಂಡರೆ ವಿಶೇಷ ಪ್ರೀತಿ. ಹಾಗಾಗಿ ಕಪ್ಪು ಬೆಕ್ಕು ಕಾಣೆಯಾಗಿದ್ದು ಅಂತಹ ದುಃಖವನ್ನುಂಟು ಮಾಡಿರಲಿಲ್ಲ. ಆದರೆ ಬೂದುಬೆಕ್ಕು ದೊಡ್ಡದಾದಮೇಲೆ, ಎರಡು ಮೂರು ದಿನ ಮನೆಗೇ ಬರುತ್ತಿರಲಿಲ್ಲ. ಆಗ ನೋಡಬೇಕಿತ್ತು ನನ್ನವಳ ಚಡಪಡಿಕೆ. ತನ್ನ ಮಗನೇ ಕಾಣೆಯಾದಂತೆ ಒದ್ದಾಡುತ್ತಿದ್ದಳು. ನಮ್ಮ ಮಗಳು ಅಳಿಯ ವಿದೇಶದಲ್ಲಿದ್ದಾಗ ನಮಗೂ ಅಲ್ಲಿಗೆ ಕೆಲಕಾಲ ಬಂದಿರಲು ಕೊಟ್ಟ ಆಮಂತ್ರಣವನ್ನೂ ತಿರಸ್ಕರಿಸಿದ್ದಳು, ಆ ಬೆಕ್ಕಿಗಾಗಿ. ಮತ್ತೊಮ್ಮೆ ಸಿಂಗಪೂರಿಗೆ ಹೋಗುವ ಅವಕಾಶ ಒದಗಿಬಂದಾಗಲೂ. ಆ ಬೆಕ್ಕಿನ ಊಟದವ್ಯವಸ್ಥೆ ಆಗುವವರೆಗೆ ವೀಸಾ ಪಾಸ್‌ಪೋರ್ಟ್ ಮಾಡಿಸಲೂ ಅವಕಾಶಕೊಡಲಿಲ್ಲ. ಕೊನೆಗೂ ಎದುರು ಮನೆಯವರಿಗೆ ಮನೆಬೀಗದ ಕೈಗಳನ್ನು ಹಸ್ತಾಂತರಿಸಿ, ಅದಕ್ಕೆ ಪ್ರತಿದಿನ ಹಾಲು

ಅನ್ನ ಹಾಕುವ ವ್ಯವಸ್ಥೆ ಮಾಡಿದ ನಂತರವೇ ನಮ್ಮ ವಿದೇಶ ಪ್ರಯಾಣದ ಸಿದ್ಧತೆ ಪ್ರಾರಂಭಕ್ಕೆ ಅನುಮತಿದೊರಕಿದ್ದು. ಆ ಬೂದುಬೆಕ್ಕು ಕೆಲಕಾಲ ಹಾಕಿದ ಹಾಲು ಅನ್ನ ತಿನ್ನದೇ ಮುಷ್ಕರ ಹೂಡಿದಾಗ ಅದಕ್ಕಾಗಿ ಬೆಕ್ಕಿನ ಸಿದ್ಧ ಆಹಾರವನ್ನೂ ನೂರಾರು ರೂಪಾಯಿ ತೆತ್ತು ತರಿಸಿದಳು. ನಮ್ಮ ಮನೆ ಕೆಲಸದವಳಂತೂ 'ಎಲ್ಲಿ ನಿಮ್ಮ ಮಗ ಕಾಣುತ್ತಿಲ್ಲ' ಎಂದು ರೇಗಿಸುತ್ತಿದ್ದಳು. ಎರಡು ಮೂರು ದಿನಕ್ಕೊಮ್ಮೆ ಹೊರಗೆಲ್ಲೋ ಇಲಿಯನ್ನೋ ಹೆಗ್ಗಣವನ್ನೋ ಹೊಟ್ಟೆತುಂಬ ತಿಂದು ಮನೆಗೆ ಬಂದ ಬೆಕ್ಕಿಗೆ ಈ ಸಪ್ಪೆ ಆಹಾರ ಎಲ್ಲಿ ರುಚಿಸೀತು? ಮನೆಗೆ ಬೆಕ್ಕು ಅರ್ಧರಾತ್ರಿಯಲ್ಲಿ ಬಂದರೆ ತೊಂದರೆ ಆಗಬಾರದೆಂದು ತನ್ನ ಬೆಡ್‌ರೂಂ ಕಿಟಕಿಗಳನ್ನು ತೆಗೆದು ಇಟ್ಟಿರುತ್ತಿದ್ದಳು. ಅಂತಹ ಬೆಕ್ಕು ದಿಢೀರೆಂದು ನಾಪತ್ತೆಯಾಗಿಬಿಟ್ಟಿತ್ತು. ಇಂದು ಬರಬಹುದು. ನಾಳೆ ಬರಬಹುದು ಎಂದು ಕಾದಿದ್ದೇ ಬಂತು. ಕಾಶಿಗೆ ಹೋದ ಪತಿ ವಾಪಸಾಗದಿದ್ದಾಗಿನ ಪರಿಸ್ಥಿತಿ ನನ್ನ ಮಡದಿಯದು. ಹಾಗೆ ಅದು ಕಾಣೆಯಾಗಿ ಈಗ ಸುಮಾರು ತಿಂಗಳಾಗುತ್ತಾ ಬಂದಿದೆ. ಅದು ಯಾವ ನಾಯಿಯ ಬಾಯಿಗೆ ಆಹಾರವಾಯಿತೋ ಏನೋ.ಆದರೂ ನನ್ನ ಮಡದಿಗೆ ಇಂದಿಗೂಆಸೆ, ಅದು ಬಂದರೂ ಬರಬಹುದು ಎಂದು.

## 48. ಚಪ್ಪಲಿಗಳು:

ಚಪ್ಪಲಿಗಳ ಬಾಳಿಕೆ ಬಗೆಗೆ ಎರಡೂ ರೀತಿಯ ಹೇಳಿಕೆಗಳಿವೆ. 'ನಡದೂ ನಡದೂ ಚಪ್ಪಲಿಗಳು ಸವೆದುಹೋದರೂ, ಈ ಸರ್ಕಾರೀ ಕೆಲಸ ಆಗಲಿಲ್ಲ.' 'ಎಷ್ಟು ವರ್ಷಗಳಾದರೂ ಕಾಲುಗಳು ಸವೆದವೇ ಹೊರತು, ಈ ಚಪ್ಪಲಿಗಳು ಸವೆಯಲಿಲ್ಲ' ಮೊದಲನೆಯದು ಅನುಭವದ ಮಾತಾದರೆ, ಎರಡನೆಯದು ಜಾಹಿರಾತು. ಚಪ್ಪಲಿಗಳು ಅಂದರೆ ತಾತ್ಸಾರ ಮಾಡಬೇಡಿ.ಚಪ್ಪಲಿಗಳಿಗೆ ದೈವತ್ವ ಬಂದಿದ್ದೇ ನಮ್ಮ ರಾಮಾಯಣದಿಂದ. ರಾಮ ವನವಾಸಕ್ಕೆ ಹೋಗಿದ್ದ ಸಮಯದಲ್ಲಿ, ಭರತ ಕಾಡಿಗೇ ಹೋಗಿ, ರಾಮನ ಪಾದುಕೆಗಳನ್ನು (ಚಪ್ಪಲಿಗಳನ್ನು) ತನ್ನ ತಲೆಯಮೇಲೆ ಹೊತ್ತುಕೊಂಡು ಬಂದು ಅದನ್ನೇ ಸಿಂಹಾಸನದ ಮೇಲಿಟ್ಟು ರಾಜ್ಯಭಾರ ನಡೆಸಿದ ಸಂಗತಿ ತಮಗೆ ತಿಳಿದೇಯಿದೆ. ಬಿಳಿಗಿರಿರಂಗನ ದೇವಾಲಯದಲ್ಲಿ ಭಕ್ತರ ತಲೆಗೆ ಮೊಟಕಲಿಕ್ಕೆಂದೇ ತಯಾರಾಗಿರುವ ಬೃಹತ್ ಚಪ್ಪಲಿಗಳು ಇವೆ. ಹಿಂದೂ ದೇಗುಲಗಳಲ್ಲಿ ಅರ್ಚಕರು ಭಕ್ತರ ತಲೆಮೇಲೆ ಮಡಗುವ 'ಶಟಾರಿ' ದೇವರ ಪಾದರಕ್ಷೆ ಪ್ರತೀಕವೇ ಆಗಿದೆ.ಅಂತೆಯೇ ಮಾದಿಗರಚೆನ್ನಯ್ಯ ತನ್ನ ತೊಡೆಯ ಚರ್ಮದಿಂದಲೇ ಚಪ್ಪಲಿ ತಯಾರಿಸಿ ಬಸವಣ್ಣನಿಗೆ ಅರ್ಪಿಸಿದಾಗ, ಅದನ್ನು ಮೆಟ್ಟಲು ಮನಸ್ಸುಬಾರದೇ ಅದನ್ನು ಪೂಜನೀಯವಾಗಿಸಿದ ಸಂಗತಿಯೂ ತಮಗೆ ವಿದಿತ. ಈ ರೀತಿ ಪರಮ ಪೂಜನೀಯ ಚಪ್ಪಲಿಗಳಿಗೆ ನಾವು ಕೊಟ್ಟರುವ ಸ್ಥಾನ ಯಾವುದು? ಮನೆಗಳಲ್ಲಿ ಪೊರಕೆಗೆ ಮನೆಯ ಯಾವುದೋ ಮೂಲೆ ಆದರೆ, ಚಪ್ಪಲಿಗೆ ಮನೆ ಹೊರ ಜಗುಲಿ ಕೆಳಗೆ!

ಅದಿರಲಿ ಈಗೇಕೆ ಈ ಚಪ್ಪಲಿ ವಿಚಾರ ಅಂದಿರಾ? ಇದೆ, ಇದೆ ಇಂದೂ ಅದಕ್ಕೆ ಪ್ರಾಮುಖ್ಯತೆ ಕೊಡಬೇಕಾದಪರಿಸ್ಥಿತಿ ಕೆಲವರಿಗಾದರೂ ನಿರ್ಮಾಣವಾಗಿದೆ. ಅದರಲ್ಲೂ ಡಯಾಬಿಟೀಸ್ ಅಂದರೆ ಸಕ್ಕರೆ ಖಾಯಿಲೆಗೆ ಒಳಗಾಗಿರುವವರು, ತಮ್ಮ ಪಾದರಕ್ಷಣೆ ಬಗೆಗೆ ಶೇ. 100 ರಷ್ಟು ಕಾಳಜಿ ವಹಿಸಬೇಕಾಗುತ್ತದೆ. ಇಡೀ ದೇಹದ ಭಾರ ಕಾಲಿನ ಮೇಲೇ ಬೀಳುವುದರಿಂದ, ಅಲ್ಲೇನಾದರೂ ಗಾಯವಾದರೆ, ಅದು ವಾಸಿಯಾಗುವುದೇ ಇಲ್ಲ. ಇದರ ಪರಿಣಾಮ ಘೋರವಾಗಲೂಬಹುದು. ಇಂತಹವರಿಗೆಂದೇ ವಿಶೇಷ ಎಂ.ಸಿ.ಆರ್. ಚಪ್ಪಲಿಗಳನ್ನು ತಯಾರಿಸಿಕೊಡುವ ಸಂಸ್ಥೆಗಳೇ ಹುಟ್ಟಿಕೊಂಡು ಒಳ್ಳೇ ವ್ಯವಹಾರ ಕುದುರಿಸಿಕೊಂಡಿವೆ.

ಈ ಮೊದಲು ನಾನು ಪೊರಕೆ ಸ್ಥಾನ ಮನೆಮೂಲೆ, ಚಪ್ಪಲಿಗಳ ಸ್ಥಾನ ಹೊರ ಜಗುಲಿ ಕೆಳಗೆ ಅಂದಿದ್ದೆ. ಪೊರಕೆಯ ಸ್ಥಾನ ಬದಲಾಗದೇ ಇದ್ದರೂ, ಚಪ್ಪಲಿಗಳ ಸ್ಥಾನ ಹೊರಜಗುಲಿ ಜೊತೆಗೆ, ನಿಮ್ಮ ಬಾತ್ ರೂಂ, ಬೆಡ್‌ರೂಂವರೆಗೂ ತಲುಪಿದೆ. ದೇವರ ಮನೆಗೊಂದು ನುಸುಳಿಲ್ಲ. ಮೊದಲೆಲ್ಲಾ ಒಬ್ಬರಿಗೆ ಒಂದು ಜೊತೆ ಚಪ್ಪಲಿ ಅಂತಿದ್ದರೆ, ಇಂದು ಪ್ರತಿಯೊಬ್ಬರಿಗೂ ಅದೆಷ್ಟೋ ಜೊತೆ ಚಪ್ಪಲಿಗಳಾಗಿವೆ. ಒಬ್ಬ ರಾಜಕಾರಿಣಿ ಮನೆಯಲ್ಲಿ ಚಪ್ಪಲಿಗೆಂದೇ ಒಂದು ಪ್ರತ್ಯೇಕ ಅಲಮಾರಿ ಇಟ್ಟೋ ಅಥವಾ ಒಂದು ಕೊಠಡಿಯನ್ನೇ ಬಿಟ್ಟು ಅದರಲ್ಲಿ ಐದು ನೂರೋ, ಸಾವಿರ ಜೊತೆ ಚಪ್ಪಲಿಯೋ ಇದೆಯಂತೆ! ಚಪ್ಪಲಿಗಳ ವೈವಿಧ್ಯತೆಗಳ ಬಗೆಗೆ ಹೇಳಿದರೆ ಅದೇ ಒಂದು ಪ್ಯಾರಾ ಆಗುತ್ತದೆ.

ಸುಕೋಮಲೆಯರ ಪಾದಗಳಿಗೆ ಸೂಕ್ಷ್ಮವಾದ ಸೂಕ್ತವಾದ ಚಪ್ಪಲಿಗಳಾದರೆ, ಗಡಸು ಗಂಡಸರಿಗೆ ಗಡುಸಾದ, ಒರಟಾದ ಚಪ್ಪಲಿಗಳು. ಮಕ್ಕಳಿಗೆ, ಯುವಜನರಿಗೆ, ವಯಸ್ಕರಿಗೆ, ವೃದ್ಧರಿಗೆ ಬೇರೆಬೇರೆ ಅಳತೆಯ ಚಪ್ಪಲಿಗಳು; ಪಾದತಳಕ್ಕೆ ಮಾತ್ರ ರಕ್ಷಣೆ ನೀಡುವುವು ಒಂದು ಬಗೆಯುವಾದರೆ, ಕಾಲುಪೂರ್ತಿ ಮುಚ್ಚುವ ರೀತಿಯ ಚಪ್ಪಲಿಗಳು ಮತ್ತೊಂದು ಬಗೆಯವು. ಇದಲ್ಲದೇ ಇವುಗಳ ಶೇಪುಗಳೋ, ದುಂಡಗಿರುವವು, ಚೌಕ ಮೂತಿಯವು, ಸೊಟ್ಟ ಮೂತಿಯವು, ತ್ರಿಕೋನ ಮೂತಿಯವು, ಅಗಲ ಮೂತಿಯವು, ಇಲಿಮೂತಿಯವು ಹೀಗೆ ಒಂದೇ ಎರಡೇ!

ಈ ಚಪ್ಪಲಿಗಳ ಖರೀದಿ ಬಗೆಗೆ ಒಂದು ತಮಾಷೆ ಪ್ರಸಂಗ ನೆನಪಿಗೆ ಬರುತ್ತಿವೆ

ಒಬ್ಬ ವ್ಯಾಪಾರಿ ವಿದೇಶದಿಂದ ಚಪ್ಪಲಿಗಳನ್ನು ತರಿಸಲು ಯೋಚಿಸುತ್ತಾನೆ. ಆದರೆ ಹೊರದೇಶದಿಂದ ಆಮದು ಮಾಡಿಕೊಂಡ ಸರಕಿನ ಮೇಲೆ ಶೇ.30ರಿಂದ ಶೇ.50 ರಷ್ಟು ತೆರಿಗೆ ಕಟ್ಟಬೇಕಾಗಿರುತ್ತದೆ. ಈ ತೆರಿಗೆ ಕಟ್ಟದಿದ್ದ ಮಾಲುಗಳನ್ನು

ವಶಪಡಿಸಿಕೊಂಡು. ಅವುಗಳನ್ನು ಹರಾಜಿನಲ್ಲಿ ಮಾರಾಟಮಾಡಿ ಬಂದ ಹಣವನ್ನೇ ತೆರಿಗೆಗೆ ಜಮಾಮಾಡಿಕೊಳ್ಳಲಾಗುತ್ತದೆ. ಈ ವ್ಯಾಪಾರಿ ತನ್ನ ಬುದ್ಧಿವಂತಿಕೆ ಉಪಯೋಗಿಸಿ ಯಾವ ರೀತಿಯಲ್ಲಿ ತೆರಿಗೆ ಉಳಿಸಿಕೊಳ್ಳುತ್ತಾನೆಂಬುದನ್ನು ಕೇಳಿ. ಚಪ್ಪಲಿ ಕಂಪನಿಗೆ ಇವನು ಕೊಂಡ ಚಪ್ಪಲಿಗಳನ್ನು ಪ್ರತ್ಯೇಕವಾಗಿ ಎರಡು ಪೆಟ್ಟಿಗೆಗಳಲ್ಲಿ ಅಂದರೆ ಒಂದು ಪೆಟ್ಟಿಗೆಯಲ್ಲಿ ಬರೀ ಎಡಗಾಲಿನ ಚಪ್ಪಲಿಗಳು ಮತ್ತೊಂದು ಪೆಟ್ಟಿಗೆಯಲ್ಲಿ ಬರೀ ಬಲಗಾಲಿನ ಚಪ್ಪಲಿಗಳನ್ನು ತುಂಬಿ ಎರಡು ಪ್ರತ್ಯೇಕ ಬಂದರುಗಳಿಗೆ ಕಳುಹಿಸಲು ಸೂಚಿಸುತ್ತಾನೆ. ಸರಕು ಬಂದರುತಲುಪಿದಾಗ ತೆರಿಗೆ ಕಟ್ಟಲು ನಿರಾಕರಿಸುತ್ತಾನೆ. ಅಧಿಕಾರಿಗಳು ಅವನ್ನು ಹರಾಜು ಹಾಕಿದಾಗ ಕಡಿಮೆ ಬೆಲೆಗೆ ತನ್ನ ಏಜಂಟರಿಂದ ಖರೀದಿ ಮಾಡುತ್ತಾನೆ. ನಂತರ ಅವುಗಳನ್ನು ತನ್ನ ಕೇಂದ್ರದಲ್ಲಿ ಸರಿಜೋಡಿಗಳಾಗಿ ರೀಪ್ಯಾಕ್ ಮಾಡಿಕೊಂಡು ತೆರಿಗೆ ವಂಚಿಸುತ್ತಾನೆ. ಹೇಗಿದೆ ಇವನ ಬುದ್ಧಿವಂತಿಕೆ! ಕೆಲವು ಪ್ರಾಣಿಗಳು ಸಾಯಲಿಕ್ಕೆಂದೇ ಹುಟ್ಟುತ್ತವಂತೆ, ಅಂತೆಯೇ ಮೆಟ್ಟಲಿಕ್ಕೆಂದೇ ಇರುವವು ಈ ಚಪ್ಪಲಿಗಳು. ಕೆಲವು ಮನುಷ್ಯರನ್ನೂ ಚಪ್ಪಲಿಗೆ ಹೋಲಿಸಲಾಗುತ್ತದೆ. ಇನ್ನು ಕೆಲವರು ಇವರನ್ನು ಮೆಟ್ಟಿ ಮೇಲೇರುತ್ತಾರೆ. ಮೇಲೇರಿದವರು, ತಾವು ಮೆಟ್ಟಬಂದ ಚಪ್ಪಲಿಗಳನ್ನು ಮರೆಯುತ್ತಾರೆ. ಇಲ್ಲಿ ಚಪ್ಪಲಿ ಅಂದರೆ, ಸಹಾಯ ಪಡೆಯುವುದು ಎಂಬರ್ಥದಲ್ಲಿ ಬಳಸಲಾಗಿದೆ. ಅದು ಧನಸಹಾಯ ಆಗಿರಬಹುದು, ವಸ್ತುಸಹಾಯವಾಗಿರಬಹುದು, ಸಮಾರಂಭಗಳಲ್ಲಿ ಹಾರಹಿಡಿದು ನಿಂತವರು, ಚಪ್ಪರ ಕಟ್ಟುವವರು, ಪರದೆಯ ಹಿಂದೆ ಕೆಲಸ ನಿರ್ವಹಿಸಿದವರು ಇವರೆಲ್ಲರನ್ನೂ ಈ ಗುಂಪಿಗೆ ಸೇರಿಸಬಹುದು.

## 49. ಭಾಷಾದುರಭಿಮಾನ

ಅದೇನೋಕಪ್ಪಾ ಈ ತಮಿಳರಿಗೆ ಅವರ ಸರ್ಕಾರ್ದೋರೋ, ಅವ್ರ ತಂದೆ ತಾಯಿಗ್ಳೋ ತಮಿಳ್ಬಿಟ್ಟು ಬ್ಯಾರೆ ಭಾಷೆ ಮಾತಾಡ್ದ್ರೆ ದಂಡ ಆಕ್ತೀವಿ ಅಂತ ಎದ್ರಿಸಿ ಬುಟ್ಟಿದ್ದಾರೋ ಅಥ್ವಾ ಈ ಎಲ್ಬಿಟೀಈ ಭ್ಯಂಗ್ಳೋ, ಐಎಎಸ್ ಪ್ಯಾಸ್ಮಾಡಿರೋವ್ರಿಂದ ಇಡ್ದು ರಿಕ್ಷಾಕಾರನ್‌ಗಳವರ್ಗೂ, ಅವರೋದ್ಕಡೆಯೆಲ್ಲ ಬರೀ ತಮಿಳ್ನಲ್ಲೇ ಮಾತಾಡ್ತಾರೆ! ಬ್ಯಾರೇವ್ರ ಭಾಷೆ ಅರ್ಥ ಆದ್ರೂನೂವೆ ತಮಿಳ್ನಲ್ಲೇ ಉತ್ರಕೊಡ್ತಾರೆ! ನಮ್ಮೂರ್ಗಳಲ್ಲೇ ಇಂಗಾದ್ರೆ, ಇನ್ನು ಆ ತಮಿಳ್ರದೇಸಕ್ಕೆ ಏನಾರ ಓಗೋಟೇಂ ಬಂದ್ರೆ ನಮ್ಮವ್ರ ಗತಿ ಆ ಎಂಕಟ್ರಮ್ಣನ್ಗೇ ಗೊತ್ತು. ಅವ್ರೂರ್ನಲ್ಲಿ ಅಂಗ್ಡಿ, ಆಪೀಸು, ಇಸ್ಕೂಲು, ಬಸ್ಸು, ರೈಲು ಎಲ್ಲದ್ರಮೇಲೂ ತಮಿಳ್ನಲ್ಲೇ ಬರ್ದಿರ್ತಾರಂತೆ. ನನ್ನಂತಾ ಕನ್ನಡಮುಕ್ಕ್ಗಳು ಅಲ್ಲಿಗೇನಾರ ಓದ್ರೆ ಏನ್ಮಾಡ್ಬೇಕಾ? ಅದೇ ನಮ್ಮವ್ರ ತಕ್ಕಳ್ಳಿ, ಎರಡಕ್ಷರ ಕಲೀದಿದ್ರು, ಯಾರ್ಯಾರು ಯಾವ್ಯಾವ ಭಾಸೇಲಿ ಮಾತಾಡ್ಸಿದ್ರೆ ಅವರ್ಗೆ ಅವರವರ ಭಾಸೇನಲ್ಲೇ ಉತ್ರಕೊಡ್ತಾರೆ. ಹಂಪೀಲಿರೋ ಲಂಬಾಣಿ ಉಡುಗ್ರು, ಹತ್ತುಹದಿನೈದು ಫಾರಿನ್ ಭಾಸೆ ಕಲ್ತು, ಪರ್ದೇಸಿಗಳಿಗೆ ಗೈಡ್‌ಗಳಾಗಿ ಕೆಲ್ಸ ಮಾಡ್ತಾರಂತೆ! ಕೆಲವ್ರು ಬೇರೆ ಬೇರೆ ಭಾಸೆಗಳ್ನ, ಕನ್ನಡ್ದಲ್ಲೋ, ಇಂಗ್ಲೀಸ್ನಾಗೋ ಕಲಿಸೋ ಬುಕ್ಸ್ನೂ ಕೊಂಡ್ಕೋತಾರೆ. ದೂರದರ್ಶನದ ಕೆನರಾ ಬ್ಯಾಂಕಿನ ಒಂದು ಜಾಹಿರಾತಿನಲ್ಲಿ ನಮ್ಮ ಕನ್ನಡಿತಿ ಸುಧಾ ಬೆಳವಾಡಿ, ಅದೇ ನಮ್ಮ ಮೇಕಪ್ ನಾಣಿಮಗ್ಳು, ಅವಳೇ, ತನ್ನ ಪಂಜಾಬಿ ಸೊಸೆ ಜೊತೆ ಮಾತಾಡೋಕೆ ಪಂಜಾಬಿ ಕಲೀತಾಳೆ. ಸೊಸೇನ ಬರ್ಮಾಡಿಕೊಳ್ಳೋಕೆ ಇಷ್ಟು ಆಡಿದ ಪಂಜಾಬಿಯನ್ನು, ಇಂಗ್ಲೀಷಿಗೆ ಭಾಷಾಂತರ ಮಾಡೋವರ್ಗೂ ಆ

ಸೊಸೇಗೆ ಇವ್ಳು ಆಡಿದ್ದು ಪಂಜಾಬಿ ಅಂತ ಗೊತ್ತಾಗೋದೇ ಇಲ್ಲ! ಈಗೇನಪ್ಪಾ. ನೆಟ್ಟಗೆ ಸ್ಕೂಲ್ಗೆ ಓಗಿ ಅಕ್ಷರ ಕಲೀದಿದ್ರೂನೂವೆ ಕಂಪ್ಯೂಟರ್‌ನಲ್ಲೇ ಎಲ್ಲಾ ಭಾಸೆ ಕಲ್ಯೋ ಕೆಲ್ಸಾಕೂಡಾ ಆಯ್ತಾ ಐತೆ. ತೆಪ್ಪಾಯ್ತು ಕನಪ್ಪ,ಏನೋಏಳೋಕ್ ಓಗಿ. ಏನೋಏಳ್ತಾ ಇವ್ನಿ. ನಮ್ಮ ಕನ್ನಡ್ನಾಡ್ನಲ್ಲಿ ಅಕ್ಕಪಕ್ಕದ್ನೇಲಿರೋ ಬ್ಯಾರೆ ಭಾಸೇವ್ರು ಅವರಿಲ್ಲಿರೋಗಂಟ ತಮ್ಮ ಭಾಸೆ ನಮ್ಗೆ ಕಲ್ಸೋ ಕೆಲ್ಸ ಮಾಡ್ತಾರ್ರೇವಿನಾ ನಮ್ಮ ಕನ್ನಡಭಾಸೆ ಕಲ್ಯೋ ಕೆಲ್ಸಾ ಮಾಡಾಕಿಲ್ಲ. ನಮ್ಮವ್ರೂ ಅಷ್ಟೇಯಾ ಅವ್ರಿಗೆ ಕನ್ನಡ ಕಲ್ಸೋ ಕೆಲ್ಸಾ ಮಾತ್ರ ಮಾಡಾಕಿಲ್ಲ.ನಾವೂವೇ ಹಿಂದೀವ್ರಿಗೆ ಜಟಕಾ ಸಾಬಿ ಭಾಸೆ, ತಮಿಳ್ರಿಗೆ ಕೊಂಗಾಟಿ ಭಾಸೆ, ತೆಲುಗ್ರಿಗೆ ಸೆಟ್ರಭಾಸೆ  ಇಂಗೆ ಮಾತಾಡಕಿಲ್ವಾರಾ ಅಂಗೆ. ಇಂಗಾದ್ರೆ ಕನ್ನಡಾ ಬೆಳ್ಯೋದಾದ್ರೂ ಎಂಗೇ ಅಂತ? ನಾನ್ ಅಂಜ್ಕೋತಿದ್ದಂಗೇ ಆತುನೋಡಿ.ಈಚ್ಗೆ ನಮ್ಮುಡ್ಗ ಅದೇ ನಂಸಡ್ಕಾ, ಆಪೀಸು ಕೆಲ್ಸದ್ಮೇಲೆ ಚೆನ್ನೈಗೆ ಅಂದ್ರೆ ಅಳೇ ಮದ್ರಾಸಿಗೆ ಓಗಿದ್ದ. ಜೊತ್ಗೆ ಬಾರ್ಲೇಂತ ರೈಲಲ್ಲಿ ನನ್ನೂ ಕರ್ಕಂಡೋಗಿದ್ದ. ರೇಲ್‌ವೇ ಟೇಸನ್‌ನಲ್ಲಿಳೀತಿದ್ದಾಗ್ಲೇ ಸುರುಆಯ್ತು ನೋಡಿ ನನ್ನ ಪರ್ದಾಟ! ಟೀಸೀ ಬಂದು ಒದ್ದೆಬ್ಬಿ ಕೊನೇಟೇಸನ್ ಬತ್ತು ಎರಂಗು ಎರಂಗು ಅಂದಾಗ್ಲೇ ನಂಗೊತ್ತಾಗಿದ್ದು ನಾವು ತಮಿಳ್ನಾಡಿನಲ್ಲಿದ್ದೀಮಿ ಅಂಬೋದು. ಟೇಸನ್ನಿನಿಂದ ಒರಗ್ಬಂದು ಆಟೋ ಸ್ಟ್ಯಾಂಡಿನಾಗೆನಿಂತಿದ್ದ ಒಂದು ಆಟೋತಾಕೋಗಿ "ಬತ್ತೀಯೇನಪ್ಪಾ?" ಅಂತಕೇಳಿದ್ದೇತಡಾ "ಎಂಗೇ" ಅಂದಾ! ಕೈನಲ್ಲಿ ಮಡಿಕ್ಕೊಂಡಿದ್ದ ಚೀಟಿತೋರ್ಸಿ "ಇಂಗೇ" ಅಂದ ನಂಸಡ್ಕಾ. ಆದ್ರೆ ಕೈಲಿದ್ದ ಚೀಟೀಲಿ ಬರ್ದಿದ್ದು ಕನ್ನಡದಲ್ಲಿ! ಅದ್ಕೆ ಆ ಆಟೋ ಅಸಾಮಿ "ತೆರ್ಯಾದು ಪೋ" ಅಂದ. ನಂಗೇ ಎಂಗೇಳ್ಬೇಕೋ ಗೊತ್ತಾಯ್ತಾ ಇಲ್ಲ.

ಒಟ್ನಲ್ಲಿ ನೆಪ್ಪಿ ಮಾಡ್ಕೊಂಡು "ಮೌಂಟ್ರೋಡು" ಅಂದೆ. "ವಕ್ಕಾರು" ಅಂತೇಳಿ ಊರೆಲ್ಲಾ ಸುತ್ತಾಡ್ಸಿ ಕೊನೇಗೆ ಒಂದು ದೊಡ್ರೋಡಿಗೆ ಬಂದು ಆಟೋ ನಿಲ್ಸಿದ. ಪಕ್ಕದಲ್ಲೇ ಇದ್ದ ಟೀ ಸಾಪಿನವನತ್ರ ಕೈತೋರ್ಸಿ "ಅಂಗೆ ಪೋಯ್ಯಾ ಪೋ" ಅಂದ. ಆ ಸಾಪಿನವ್ನೋ ಚೀಟಿ ನೋಡಿದವ್ನೇ "ನೇರಾಪೋ" ಅಂದ. ನಾವು ಉಡುಕ್ತಾ ಇರೋ ಆಪೀಸು ಅಲ್ಲೇ ಇರ್ಬೈದು ಅಂತ ಅವನ್ಮುಕ ತಿರುಗ್ಸಿದ ಕಡೇಗೇ ಒಂಟ್ವಿ, ಎರ್ಡು ಕಿ.ಮೀ ಓದ್ರೂ ಆಪೀಸು ಸಿಗ್ಲೇಇಲ್ಲಾ. ಅಲ್ಲಾವ್ನೋ ಬೀಡಿ ಸೇಯ್ತಾ ನಿಂತಿದವ್ನ ಅತ್ರ ಈ ಆಪೀಸು ಎಲ್ಲದೆ ಅಂದದ್ಕೆಅವ್ನೂ "ನೇರಾಪೋ" ಅಂತಂದ್ಬುಟ್ಟ. ಇಂಗೇ ಯಾರ್ಕೇಳಿದ್ರೂ ಒಂದೇ ಉತ್ರ "ನೇರಾಪೋ". ನಂಗೂ ಬೋರ್ಹೋಗೋಯ್ತು, ಈ ನಾಡಿನಾ ಬಡಿಯಾ: ಆಫೀಸ್ ಕೆಲ್ಸ ಇನ್ಯಾರಾದ್ರೂ ಮಾಡ್ಕೊಳ್ಲಿ ಬಲ್ಲಾ ವಾಪಸು ಊರ್ಗೋಗ್ಮಾ ಅಂತೇಳಿ

ಆಟೋ ಇಡ್ಕೊಂಡು ರೇಲ್ವೆ ಟೇಸನ್‌ಗೆ ವಾಪಸ್ಬಂದ್ವು. ನಮ್ಮೂರಿನ ರೈಲು ಅತ್ತೋವಾಗ ಮತ್ಯಾರೋ ಬಂದು ನಂತಾವ ಒಂದು ಚೀಟಿ ತೋರ್ಸಿ "ಎಕ್ಕಡಾ" ಅನ್ನೋದಾ? "ತೆರ್ಯಾದು..ನೇರಾಪೋ" ಅಂತೇಳಿ ರೈಲೊಳಕ್ಕೇ ಓಡೋದೆ.

ಜ್ಞಾಪ್ತಿಗ್ಬಂತು ಇನ್ನೊಂದು ತಮಿಳ್ ಚಿನ್ನುಡಿ 'ತೆರ್ಯಾದುಪೋಯಾ'! ಅದನ್ನು ಒಂದು ಕನ್ನಡ ಸಿನಿಮಾದಲ್ಲೂ ಸಾಧುಕೋಕಿಲ ಮೇಲೆ ಚಿತ್ರೀಕರಿಸಲಾಗಿದೆ. ಅವನು ನನ್ನಂತೆ ಬೆಂಗಳೂರಿನ 'ಜಿವಾಜಿನಗ್ರ'ಕ್ಕೆ ಓಗ್ತಾಯಿರ್ತಾನೆ. ಎದುರಿಗೆ ಒಂದು ಭವ್ಯ ಬಂಗಲೆ ನೋಡಿ, ಅಲ್ಲಿದ್ದವನೊಬ್ಬನನ್ನು ಇದು ಯಾರದು? ಎಂದಾಗ ಆತ 'ತೆರ್ಯಾದುಪೋಯಾ' ಅನ್ನುತ್ತಾನೆ. ಇನ್ನೂ ಸ್ವಲ್ಪ ಮುಂದೆ ಬಂದಾಗ ಒಂದು ದೊಡ್ಡ ಸಿನಿಮಾ ಥೇಟರ್ ನೋಡಿ, ಮತ್ತೊಬ್ಬನನ್ನು ಇದು ಯಾರದು ಎಂದಾಗ ಬಂದದ್ದು ಅದೇ ಉತ್ತರ 'ತೆರ್ಯಾದುಪೋಯಾ'. ಹೀಗೇ ಆ ಊರಿನಲ್ಲಿದ್ದ ಆಸ್ಪತ್ರೆ, ಕೈಗಾರಿಕೆ,ಶಾಲೆ ಹೋಟಲ್, ಸಾರಿಗೆ ವ್ಯವಸ್ಥೆ ಎಲ್ಲವೂ ಇದೇ 'ತೆರ್ಯಾದುಪೋಯಾ'ದೇ ಅಂದುಕೊಳ್ಳುತ್ತಾನೆ. ಇನ್ನೂ ಮುಂದೆ ಹೋಗುತ್ತಿದ್ದಾಗ ಎದುರಿನಿಂದ ಒಂದು ಹೆಣ ಹೊತ್ತುಕೊಂಡು ಬರುತ್ತಿದ್ದವರನ್ನು ಯಾರು ಸತ್ತುಹೋಗಿದ್ದು ಎಂದು ಹೆಣಹೊತ್ತವನನ್ನು ಕೇಳಿದಾಗ ಬಂದ ಉತ್ತರ 'ತೆರ್ಯಾದುಪೋಯಾ'! ಇವನು ಅಂದುಕೊಂಡದ್ದು ಈ 'ತೆರ್ಯಾದು ಪೋಯಾ' ಎಂಥ ದೊಡ್ಡಮನುಷ್ಯಾ , ಇಷ್ಟೆಲ್ಲಾ ಜನರಿಗೆ ಉಪಕಾರ ಮಾಡಿದವನೇ ಇಂದು ಹೋಗಿಬಿಟ್ಟನಲ್ಲಾ ಅಂತಾ!

ಉಪಸಂಹಾರ: ಬೆಂಗಳೂರಿನಲ್ಲಿ ಒಂದು ಕಡೆ 'ಎಕ್ಕಡ' ಮತ್ತೊಂದು ಕಡೆ 'ಎನ್ನಡ' ಇವೆರಡರ ನಡುವೆ ನಲುಗಿದೆ 'ಕನ್ನಡ'!

## 50. ಹೆಸರಿನಲ್ಲೇನಿದೆ?

ಒಮ್ಮೆ ಪಂಡಿತ್ ನೆಹರೂಜಿ ಭಾಷಣ ಮಾಡೋವಾಗ ಹೇಳಿದ್ದು "ಸುಂದರವಾದ ಗುಲಾಬಿಯನ್ನು ಯಾವುದೇ ಹೆಸರಿನಿಂದ ಕರೆದರೂ ಏನಂತೆ? ಅದು ಗುಲಾಬಿಯೇ" ಈ ವಿಷಯ ಅಷ್ಟು ಸರಳ ಅನ್ನಿಸುವುದಿಲ್ಲ. ರಾಮರಾಯರನ್ನು ಕೃಷ್ಣರಾಯ ಅಂತಲೋ ರಾಮಯ್ಯ ಅಂತಲೋ, ಕುರ್ಚಿಯನ್ನು ಮೇಜು ಅಂತಲೋ ಕರೆದವರನ್ನು ಏನನ್ನುತ್ತಾರೆ? ತಲೆಕೆಟ್ಟಿದೆ ಅಂತಲೋ ಹುಚ್ಚ ಅಂತಲೋ ಅನ್ನುತ್ತಾರೆ. ಪ್ರತಿಯೊಬ್ಬರೂ, ಎಲ್ಲಕ್ಕಿಂತ ಹೆಚ್ಚು ಪ್ರೀತಿಸುವುದು ತಮ್ಮ ಹೆಸರನ್ನೇ. ಹೆಸರಿಗೆ ಅಷ್ಟು ಪ್ರಾಮುಖ್ಯತೆ ಇದೆ. ಅಲ್ಲಾ ಸ್ವಾಮಿ ಹೆಸರಿನ ಬಗ್ಗೆ ಈ ರೀತಿ ತಲೆ ಕೆಡಿಸಿಕೊಳ್ಳುವ ಅವಶ್ಯಕತೆ ಏನಿದೆ ಅಂತೀರಾ; ದಾಸರೇ ಹೇಳಿಲ್ಲವೇ "ನಿನ್ನ ನಾಮದ ಬಲ ಒಂದಿದ್ದರೇ ಸಾಕು" ಅಂತಾ! ಅದೇ ನಾ ಹೇಳಹೊರಟಿರೋ ವಿಷಯ. ಹಿಂದೆಲ್ಲ ಜನರು ಹೆಚ್ಚುಹೆಚ್ಚಾಗಿ ದೈವಭಕ್ತರಾಗಿದ್ದುದರಿಂದ ತಮ್ಮ ಮಕ್ಕಳಿಗೂ ತಮ್ಮ ಇಷ್ಟ ದೇವರ ಹೆಸರುಗಳನ್ನೇ ಇಡುತ್ತಿದ್ದರು. ಮಕ್ಕಳನ್ನು ಕರೆಯುವಾಗಲೂ ದೇವರ ನೆನೆಯುವ ಭಗವಂತನ ನಾಮಸ್ಮರಣೆಯ ಜೊತೆಜೊತೆಗೆ ಪುಣ್ಯಸಂಪಾದನೆಯ ಹುನ್ನಾರ ಅವರದು. ಅದರಲ್ಲೂ ಒಂದು ನಿಯಮ ಪಾಲನೆ ಆಗುತ್ತಿತ್ತು. ಹಿಂದೂಗಳು ತಮ್ಮ ದೇವರ ಹೆಸರನ್ನೇ ಇಟ್ಟರೆ, ಮುಸಲ್ಮಾನರು ತಮ್ಮ ದೇವರ ಅಂದ್ರೆ ಅಲ್ಲಾಹುಏನ್, ಪೈಗಂಬರನ ಹೆಸರನ್ನೇ ಇಡುತ್ತಿದ್ದರು. ಅದರಲ್ಲೂ ಒಂದು ಮಾತಂತೂ ಸತ್ಯ! ತಾವಿಟ್ಟ ಹೆಸರು ತಮ್ಮ ಜಾತಿ ಸೂಚಕವಾಗಿರುತ್ತಿತ್ತು. ಆಚಾರ್, ಐಯ್ಯಂಗಾರ್, ಗೌಡ, ಅನಿವಾರ್ಯವಾಗಿ ಹೆಸರಿನ ಕೊನೆಯಾಗಿರುತ್ತಿತ್ತು. ಎಷ್ಟೋ ವೇಳೆ ತಾತಮೊಮ್ಮಕ್ಕಳಿಗೆ ಒಂದೇ

ಹೆಸರಿರುತ್ತಿತ್ತು; ಇದು ತಂದೆಯನ್ನು./ ಮಾವನನ್ನು ಬಯ್ಯಬೇಕಾದಾಗ ಮಗನನ್ನು ಬೈಯುವ ಮೂಲಕ ತಮ್ಮ ಕೋಪ ತೋರಿಸಲು ಸಾಧ್ಯವಾಗುತ್ತಿತ್ತು. ನಂತರದ ವರ್ಷಗಳಲ್ಲಿ ಫ್ಯಾಮಿಲಿ ನೇಮ್ ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಅವರು ಮಾಡುತ್ತಿದ್ದ ಉದ್ಯೋಗ ಆಧರಿಸಿ ತಮ್ಮ ಮಕ್ಕಳ ಹೆಸರು ಆಯ್ಕೆಮಾಡುವುದು ಆರಂಭವಾಯಿತು. ಮೆಣಸಿನ ಕಾಯಿ, ಉಳ್ಳಾಗಡ್ಡಿ, ಮೂಲಿಮನೆ, ಮಾಸ್ತರ, ಹವಾಲಿ, ಪುಜಾರಿ, ಸೆಟ್ಟಿ ಮುಂತಾದ ಉದಾಹರಣೆಗಳನ್ನು ನೆನಪಿಸಿ ಕೊಳ್ಳಬಹುದು. ಈ ಹೆಸರುಗಳನ್ನೇ ಹರಿಕಥೆ ದಾಸರು ಲೇವಡಿ ಮಾಡುತ್ತಿದ್ದುದು ಹೀಗೆ "ರೆಕ್ಕೆ ಇಲ್ಲ, ಪುಕ್ಕ ಇಲ್ಲ ಗರುಡಯ್ಯಂಗಾರಿ, ದುಡ್ಡು ಇಲ್ಲ, ಕಾಸು ಇಲ್ಲ ಸಂಪತ್ತೈಯ್ಯಂಗಾರಿ" ಆದರೆ ಈಗಿನ ಕಾಲದಲ್ಲಿ ಯಾವ ಹೂವು ಯಾರ ಮುಡಿಗೋ ಅನ್ನುವಂತೆ ಅಂತರಜಾತಿ ವಿವಾಹಗಳು ಸಾಮಾನ್ಯವಾಗಿವೆ, ಹೆಸರಿನಲ್ಲೂ ಹೊಸತನತರುವ ಹುಮ್ಮಸ್ಸು ಯುವತಂದೆತಾಯಂದಿರಿಗೆ.ಆದರಿಂದ ಕೆಲವೊಮ್ಮೆ ಸಂಸ್ಕೃತ ಶ್ಲೋಕಗಳಲ್ಲಿಬರುವ ಪದಗಳು, ಅರ್ಥವಾಗದ ಪದಗಳು, ಬಾಯಲ್ಲಿ ಹೊರಳಲಾರದ ಪದಗಳು, ಇತರೆ ಸಂಸ್ಕೃತಿಯಿಂದ ಹೆಕ್ಕಿತಂದ ಹೆಸರುಗಳು, ಅನ್ವರ್ಥ ಅಥ್ವಾ ಅನರ್ಥನಾಮಗಳೂ ಬಳಕೆಗೆಬಂದಿವೆ.ಹೆಸರುಗಳಿಂದ ಹಿಂದೆ ಗಂಡು ಹೆಣ್ಣುಗಳನ್ನು ಸುಲಭವಾಗಿ ಪತ್ತೆಹಚ್ಚಬಹುದಾಗಿತ್ತು. ಆದರೆ ಇಂದು ಅದೂ ಅಸಾಧ್ಯ! ತಂದೆ ತಾಯಿ ಇಟ್ಟ ಹೆಸರನ್ನೇ ನ್ಯಾಯಾಲಯದಲ್ಲಿ ಅಫಿಡವಿಟ್ ಸಲ್ಲಿಸಿ ಬದಲಾಯಿಸಿಕೊಳ್ಳುವ ಮಕ್ಕಳೂ ಇದ್ದಾರೆ.

ಇಂದು ಹೆಸರೇ ಒಂದು ಜೋಕಾಗಿದೆ. ನಿನ್ನ ಹೆಸರೇನಮ್ಮಾ ಅಂದರೆ ಇವಳು "ನಂದಾ" ಅಂದರೆ ಅವರು 'ಹೌದಮ್ಮಾ ನಾನು ಕೇಳಿದ್ದು ನಿಂದೇ' ಅನ್ನಬೇಕಾಗುತ್ತದೆ. ಯಾಕಂದರೇ ಅವಳ ಹೆಸರೇ ನಂದಾ! ಈಚಿನ ಹೆಸರುಗಳು ಮನುಷ್ಯರದೋ, ಅವರು ಸಾಕುವ ಪ್ರಾಣಿಗಳದೋ ಗೊತ್ತಾಗುವುದೇ ಇಲ್ಲ. ನಾಯಿ, ಬೆಕ್ಕುಗಳಿಗೂ ನಾರಾಯಣ, ಸರಸ್ವತಿ ಅನ್ನುವ ಹೆಸರಿಟ್ಟು, ಮಕ್ಕಳಿಗೆ ಸಿಲ್ಲಿ, ಪಲ್ಲಿ, ನೋನಿ, ಮೋನಿ ಅಂತಾ ಹೆಸರಿಡುವುದು ಸಾಮಾನ್ಯವಾಗಿದೆ. ಇದುವರೆಗೆ ಮನುಷ್ಯರ ಹೆಸರುಗಳ ಬಗ್ಗೆ ಹರಟಿದರೆ ಮುಂದೆ ಇದೆ ಮನೆ ಹೆಸರಿನ ಪುರಾಣ! ಜೀವನದಲ್ಲಿ ಒಂದು ಮದುವೆ ಮಾಡಿಸೋದು, ಒಂದು ಮನೆ ಕಟ್ಟಿಸೋದು ಬಹಳಷ್ಟು ಮಂದಿಗೆ ಕಷ್ಟಸಾಧ್ಯವಾದ ವಿಷಯ. ಕೆಲವ್ರಿಗೆ ತಮ್ಮ ಜೀವಿತಾವಧಿಯಲ್ಲೇ ಅದು ಅಸಾಧ್ಯವಾದರೆ, ಇನ್ನು ಕೆಲವರಿಗೆ ಅದೇ ಉದ್ಯೋಗ. ಅವರನ್ನು ಬಿಡಿ. ತಾನು ಕನಸಿದ ಮನೆಗೆ ಒಂದು ಚಂದದ ಹೆಸರು ಇಡುವುದೂ ಒಂದು ಕಲೆ. ಕೆಲವರು ಆ ಸಾಹಸಕ್ಕೆ ದೇವರ ಕೃಪೆ,

ತಂದೆತಾಯಿಯರ ಕೃಪೆ. ಗುರುಗಳ ಕೃಪೆ ಮುಂತಾದ ಹೆಸರನ್ನು ಇಡುತ್ತಾರೆ. ಮತ್ತೆ ಕೆಲವರು ಹಳೇ ಇಂಗ್ಲೀಷ್ ವ್ಯಾಮೋಹಿಗಳು ತಮ್ಮ ಮನೆಗೆ ವಿಲ್ಲಾ, ಕಾಟೇಜ್, ಬಂಗಲೋ ಮುಂತಾದ ಹೆಸರಿಡುತ್ತಾರೆ. ನನಗೊಂದು ಪ್ರಸಂಗ ನೆನಪಿಗೆ ಬರುತ್ತಿದೆ. ಒಬ್ಬ ತನ್ನ ಮನೆ ಮುಂದೆ ಹಾಕಿದ ಹೆಸರು "ಸೌಂದರ್ಯವಿಲ್ಲ"; ಅದರ ಮುಂದೆ ಕುಹಕಿಯೊಬ್ಬ ಗೀಚಿದ್ದು "ಆದರೂ ಪರವಾಗಿಲ್ಲ". ಒಂದು ಹೆಸರನ್ನು ಆಯ್ಕೆಮಾಡುವಾಗ ಜಾಣ್ಮೆ ಪ್ರದರ್ಶನವೂ ಇರುವುದುಂಟು;ಇತರರಿಗೆ ತಕ್ಷಣಕ್ಕೆ ಅರ್ಥವಾಗದೇನೂ ಹೋಗಬಹುದು. ಉದಾಹರಣೆಗೆ ಒಂದು ಮನೆಮುಂದೆ ಇದ್ದ ಹೆಸರು "ಕೃಶನಿಮಭಾ"; ಏನಿರಬಹುದು ಈ ಹೆಸರಿನ ಮಹಿಮೆ? ವಿಚಾರಿಸಿದಾಗ ತಿಳಿದುಬಂದುದು ಅದು ಅವರ ಕುಟುಂಬ ಸದಸ್ಯರೆಲ್ಲರ ಹೆಸರ ಮೊದಲಕ್ಷರಗಳ ಸಂಗಮ. ಇನ್ನೊಂದು ಮನೆ ಹೆಸರು "ಅನೂಮಾನ್" ಏನು ನಿಮ್ಮ ಅನುಮಾನ? ಅದು ಗಂಡ ಹೆಂಡಿರ ಹೆಸರುಗಳ ಉತ್ತರಾರ್ಧ ಪೂರ್ವಾರ್ಧ ಸಂಗಮ. ಅಂದರೆ ಅನೂರಾಧ ಮತ್ತು ಹನುಮಾನ್ ಸಂಗಮ. ಹೀಗೆ ಮತ್ತೊಬ್ಬರ ಮನೆ "ಟ್ಯೂಷನ್ ಗೃಹ" ಅದು ಆ ಮನೆ ಕಟ್ಟಿಸಲಿಕ್ಕೆ ಬಂದ ಆದಾಯಮೂಲ. ಈಗಂತೂ ಎಲ್ಲ ಕಲಸುಮೇಲೋಗರ; ಯಾವುದು ಯಾವುದರ ಹೆಸರು, ಯಾವ ಲಿಂಗ, ಯಾವ ಪ್ರಾಣಿ ಒಂದೂ ಗೊತ್ತಾಗುವುದಿಲ್ಲ. ಇತರರ ಮೇಲೆ ತಮಗಿರುವ ದ್ವೇಷವನ್ನೂ ತಮ್ಮ ಮುದ್ದಿನ ಪ್ರಾಣಿಗಳಿಗೆ ಹೆಸರಿಡುವುದರ ಮೂಲಕ ಸಾಧಿಸುತ್ತಾರೆ ಈ ಮನುಜರು. ಸಾಹಿತಿ ಲಂಕೇಶ್ ತನ್ನ ನಾಯಿಗೆ ಇಟ್ಟಿದ್ದ ಹೆಸರು "ಸ್ಟೆಫೀಗ್ರಾಫ್"; ಚಿತ್ರ ಹಾಗೂ ರಂಗನಟ ಸಿ.ಆರ್.ಸಿಂಹ ತನ್ನ ಮನೆಗಿಟ್ಟಿರುವ ಹೆಸರು "ಗುಹೆ"; ನಾಗತಿಹಳ್ಳಿ ಚಂದ್ರಶೇಖರ ತನ್ನ ಮಗಳಿಗೆ ಹಾಗೂ ಮನೆಗೆ ಇಟ್ಟ ಒಂದೇ ಹೆಸರು "ಕನಸು". ಈ ವಿಷಯ ಸಂಶೋಧನೆಗೆ ಒಳ್ಳೇ ವಸ್ತು ಎಂದೆನಿಸುತ್ತದೆ. ಮುಂದೆ ನಾವು "ದರೋಡೆ ಗೃಹ" "ಡಕಾಯಿತಿವಿಲ್ಲಾ" "ಲಂಚನಿಲಯ" "ಅಬಾರ್ಶನ್ ಮಹಲ್" ಎಂಬ ಹೆಸರುಗಳನ್ನೂ ನೋಡಬೇಕಾಗುತ್ತೋ ಏನೋ ನಾಕಾಣೆ. ನಮ್ಮೂರಿನ ಹೋಟಲ್ ಒಂದರ ಮಾಲೀಕರ ಹಿಂದಿನ ಗೋಡೆಗೆ ನೇತುಹಾಕಿದ್ದ ಫಲಕ "ವರದರಾಜ ಬಾಣಾವರ". ಓಸಿ ಗಿರಾಕಿಯೊಬ್ಬ ಕ್ಯಾಶ್ ಕೌಂಟರ್ಗೆ ಬಂದು ನಮಸ್ಕಾರ ವರದರಾಜರೇ ಅಂದ. ಮಾಲೀಕ ಆಚೀಚೆ ನೋಡಿ, ಯಾರು, ಯಾರನ್ನು ಕರೆಯುತ್ತಿದ್ದೀರಿ? ಇಲ್ಲಿ ವರದರಾಜ ಯಾರೂ ಇಲ್ಲ ಅನ್ನೋದೆ. ಗಿರಾಕಿ ಬಿಡಲಿಲ್ಲ ಅಲ್ಲ "ನೀವು ಬಾಣಾವರದವರಲ್ಲವೇ"? ಅಂದ. ಅದಕ್ಕೆ ಮಾಲೀಕ ನಮ್ಮ ತಾಯಾಣೆಗೂ ನನಗೂ ಬಾಣಾವರಕ್ಕೂ ಏನೂ ಸಂಬಂಧವಿಲ್ಲ ಅಂದ. ಹಾಗಾದರೆ ನಿಮ್ಮ ಹಿಂದೆ ಈ ಫಲಕ ಯಾಕೆ ಹಾಕಿದ್ದೀರಿ ಅಂದ ಗಿರಾಕಿಗೆ. "ಅದಾ. ಯಾವನೋ

ಪೈಂಟರ್‌ಗೆ "ವಾರದ ರಜ ಭಾನುವಾರ" ಅಂತ ಬರೆಯೋಕೆ ಹೇಳಿದ್ದೆ, ಅವನು ಹೀಗೆ ಬರೆದುಕೊಟ್ಟಿದ್ದಾನೆ" ಅನ್ನೋದೆ! ಹಿಂದೆಲ್ಲಾ ಹೋಟೆಲ್ ಹೆಸರುಗಳೂ ಅದರ ಗಿರಾಕಿಗಳ ಜಾತಿಸೂಚಕವಾಗಿರುತ್ತಿತ್ತು. ಉಡುಪಿ ಬ್ರಾಹ್ಮಣರ ಹೋಟೆಲ್, ನಾಯಿಡು ಹೋಟೆಲ್, ಲಿಂಗಾಯತರ ಹೋಟೆಲ್, ಹಿಂದೂ ಮಿಲಿಟರಿ ಹೋಟೆಲ್ ಮುಂತಾದವು. ಆದರೆ ಈಗ ಅದೆಲ್ಲ ಬದಲಾಗಿದೆ. ಯಾವುದು ವೆಜಿಟೇರಿಯನ್,ಯಾವುದು ನಾನ್‌ವೆಜಿಟೇರಿಯನ್, ಯಾವುದು ಎರಡೂ ಸೇರಿರೋದು ಒಂದೂ ಹೆಸರಿನಿಂದ ಗೊತ್ತಾಗೋದೇ ಇಲ್ಲ. ನನ್ನ ಸಂಬಂಧಿಯೊಬ್ಬ ಒಂದು "ಪರಾಗ್" ಅನ್ನೋ ಹೋಟೆಲಿಗೆ ಹೋಗಿ ವೆಜಿಟೇರಿಯನ್ ಪಲಾವ್ ಕೇಳಿದನಂತೆ. ವೆಜಿಟೇರಿಯನ್ ಪಲಾವೇನೋ ಬಂತು, ತಿನ್ನುವಾಗ ಒಂದು ಚಿಕನ್ ತುಂಡು ಸೇರಿಕೊಂಡುಬಿಟ್ಟಿತ್ತಂತೆ, ಸಪ್ಲೈಯರ್ ಕಣ್ತಪ್ಪಿನಿಂದ! ನಾನು ನೋಡಿದ ಒಂದು ಇಂತಹ ಹೆಸರು "ಮಲಬಾರದವರ ಹೋಟೆಲ್" ಇದೇನು ಹೊಟ್ಟೆ ಕೆಟ್ಟವರಿಗಾಗಿರುವ ಹೋಟೆಲೋ! ಅಥವಾ ಈ ಮಲಬಾರದಿರುವವರಿಗಾಗಿ ಇದು ಪ್ರತ್ಯೇಕಹೋಟಲೇ..! ಈಚೀಚೆಗೆ ಸಕ್ಕರೆ ರೋಗಿಗಳಿಗಾಗಿಯೇ ಪ್ರತ್ಯೇಕ ಊಟ ತಿಂಡಿ, ಪಾನೀಯ ವ್ಯವಸ್ಥೆ ಇರುತ್ತದೆಯಂತೆ, ಏನಾಶ್ಚರ್ಯ! ನಮ್ಮ ಸ್ನೇಹಿತರೊಬ್ಬರು ಗುಲ್ಬರ್ಗಕ್ಕೆ ಹೋದಾಗ ಅವರ ಕಣ್ಣಿಗೆ ಬಿದ್ದ ಹೆಸರು "ದಗದಗಾ ರೆಸ್ಟೋರೆಂಟ" ಒಳಕ್ಕೆ ಕಾಲಿಡಲು ಅಂಜಿಕೆಯಾಗಿ ಬಾಗಿಲ ಬಳಿಯಿಂದಲೇ ಕ್ಯಾಶ್‌ಕೌಂಟರ್‌ನಲ್ಲಿ ಕುಳಿತಿದ್ದ ಮಾಲೀಕರನ್ನು ವಿಚಾರಿಸಿದರಂತೆ ಅವರ ಪ್ರತಿಕ್ರಿಯೆ "ಓ ಅದಾ ತೆಗೀರಿ, ನಂ ಹೋಟಲ್ ಹೆಸರ್ರೀ "ದ ಗದಗಾ ರೆಸ್ಟೋರೆಂಟ್" ಆ ಸೂಳೀಮಗ ಪೇಂಟರ್ ಅದನ್ನು ಹೀಂಗ ಬರದಾನ್ರೀ ಯಪಾ "ಅಂದಾಗ ನನ್ನ ತಲೆತಿರುಗಿದಂಗಾಯಿತು.

ಅಂದಹಾಗೇ ಇತ್ತೀಚೆಗೆ ಬೆಂಗಳೂರಿನಿಂದ ಮೈಸೂರಿಗೆ ಬರುವಾಗ ಕಂಡುಬಂದ ಹೋಟಲುಗಳ ಮುಂದೆ ವಾಹನಗಳು ಖಾಲಿಖಾಲಿ. ಆದರೆ ಒಂದು ಹೋಟಲಿನ ಮುಂದೆಮಾತ್ರ ಹತ್ತಾರು ವಾಹನಗಳು ನಿಂತಿದ್ದವು. ಇದೇನೋ ಹೊಸ ಹೋಟಲ್ ಇರಬಹುದು ಎಂದುಕೊಂಡು ಹೋಟಲ್ ಹೆಸರಿನ ಬೋರ್ಡ್ ನೋಡಿದರೆ ಅಲ್ಲಿದ್ದುದು "ತಿಥಿ ರೆಸ್ಟೋರಂಟ್"! ಇದೇನು ವಿಚಿತ್ರ ಹೆಸರು? ಮತ್ತೆ ನನ್ನ ಯೋಚನಾ ಲಹರಿ ಹರಿಯತೊಡಗಿತು. 'ಟ್ಯೂಷನ್ ಗೃಹ'ದ ತರಹ ತಿಥಿವಾಡಿ ಬಂದ ಆದಾಯದಲ್ಲಿ ತೆರೆದ ಹೋಟಲ್ ಇದಾಗಿರಬಹುದೇ? ಅಥವಾ ಇಲ್ಲಿ ಬಂದವರಿಗೆ ತಿಥಿ ಆಗುವುದು ಗ್ಯಾರಂಟಿಯೋ? ಅಥವಾ ನಿಮ್ಮ ಕಡೆಯವರಿಗೆ ತಿಥಿ ಮಾಡಿಸಲು ತೆರೆದ ಮಾಡರ್ನ್ ಅಪರಕರ್ಮ ಸೆಂಟರ್ರೋ

ಇದು? ಗೊತ್ತಾಗುತ್ತಿಲ್ಲ. ಒಮ್ಮೆ ಒಳಗೆ ಹೋಗಿ ವಿಚಾರಿಸಬೇಕು ಎಂದುಕೊಳ್ಳುತ್ತಾ ಕಾರು ಓಡಿಸುತ್ತಾ ಬರುವಾಗ ಕಾಲು ಆಕ್ಸಿಲೇಟರ್ ಎಷ್ಟು ಜೋರಾಗಿ ತುಳಿಯುತ್ತಿತ್ತೋ ನಾಕಾಣೆ. ಎದುರಿಗೆ ಪೋಲೀಸಿನವನೊಬ್ಬ ಪೀಪಿ ಊದಿ ಕೈ ಅಡ್ಡಹಾಕಿದಾಗಲೇ ಎಚ್ಚರವಾಗಿ ದಢಕ್ಕಂತ ಬ್ರೇಕ್ ಹಾಕಿ ನಿಲ್ಲಿಸಿದೆ. ಸಾಹೇಬ್ರು ಕರೀತಾವ್ರೆ ಅಂದ. ಹೋಗಿ ಅವನು ಕೊಟ್ಟ 300 ರೂ. ಓವರ್ ಸ್ಪೀಡ್ ರಶೀತಿಗೆ ದಂಡ ಕಟ್ಟಿ ಮನೆಗೆ ವಾಪಸಾದೆ. ಮತ್ತೊಮ್ಮೆ ಬೆಂಗಳೂರಿಗೆ ಹೋಗುವಾಗ 'ತಿಥಿ' ಹೋಟಲಿನಲ್ಲೇ ತಿಂಡಿ ತಿನ್ನಲು ನಿಶ್ಚಯಿಸಿ ನನ್ನ ಶ್ರೀಮತಿಗೂ ಗಮನಿಸುವಂತೆ ಹೇಳಿ, ಕಾರನ್ನು ನಿಧಾನವಾಗಿ ಚಲಾಯಿಸುತ್ತಾ, ಹೊರಟೆ. ಮದ್ದೂರು ದಾಟಿ ಚನ್ನಪಟ್ಟಣ ಬಂತು. ಊಹೂಂ ಆ ಬೋರ್ಡು ಕಾಣಿಸಲಿಲ್ಲ. ಚನ್ನಪಟ್ಟಣ ಬಿಟ್ಟು ರಾಮನಗರ ಸೇರಿದೆವು; ಹಸಿವು ವಿಪರೀತ ವಾದಾಗ ಮಧ್ಯೆ ಶಿವಳ್ಳಿಯಲ್ಲಿ ತಿಂಡಿಮುಗಿಸಿ 'ತಿಥಿ' ತಲಾಶ್‌ನಲ್ಲಿ ತೊಡಗಿದೆವು. ಬೆಂಗಳೂರು ಸಮೀಪಿಸಿದರೂ ಆ ಹೋಟಲ್ ಬೋರ್ಡು ಕಾಣಲಿಲ್ಲ.ಆದರೆ ದಾರಿಯಲ್ಲಿ 'ಅತಿಥಿ' ಮತ್ತು 'ಆತಿಥ್ಯ' ಎಂಬ ಎರಡು ಹೆಸರುಗಳು ಕಾಣಿಸಿದವು ಎಂದು ನನ್ನ ಶ್ರೀಮತಿ ತಿಳಿಸಿದಳು. ಬಹುಷಃ 'ಅತಿಥಿ' ಎಂಬ ಹೆಸರೇ ಅಡ್ಡಲಾಗಿದ್ದ ಲಾರಿದೆಸೆಯಿಂದ 'ಅತಿಥಿ'. ಯಲ್ಲಿನ 'ಅ' ಮರೆಯಾಗಿ 'ತಿಥಿ'ಯಾಗಿ ಕಂಡಿರಲೂಬಹುದು ಎಂದುಕೊಂಡು ಸುಮ್ಮನಾದೆ.

## 51. ಸಾಕ್ಷರದಾಟ ಆಡುಮಾ

ಈ ದಪಾ ನಾವು ಒಂದು ಒಸಾ ಆಟ ಆಡುಮಾ, ಅದೇ ಸಾಕ್ಷರದಾಟ! ಏನಂತೀ? ನಾನು ಒಂದ್ಪದಾ ಏಳ್ತೀನಿ. ಪದಾ ಅಂದ್ರೆ ಆಡಲ್ಲಪ್ಪ, ವ್ಯಾಕರ್ಣದಾಗ ಬತ್ತಾವಲ್ಲ ಅದು. ಅಂದ್ರೆ ಅಕ್ಸರಗಳ್ಗುಂಪು. ನೀನು ಅದನ್ನು ಉದ್ದುದ್ದವಾಗಿ ಬೆಳೆಸ್ತಾ ಓಗಬೇಕು. ನೀ ನಿಲ್ಸಿದ್ರೆ, ನಾ ಮುಂದ್ವರಿಸೋದು, ನಾ ನಿಲ್ಸಿದ್ರೆ ನೀ ಮುಂದ್ವರಿಸೋದು. ಬೇರೆ ಆಟಗಳ ತರಾ ಇದರಾಗೆ ಯಾರೂ ಸೋಲಂಗಿಲ್ಲ, ಗೆಲ್ಲಂಗೂ ಇಲ್ಲ. ಹಣ ಪೋಲಾಗೋ ಅಂಗೂಯಿಲ್ಲ. ಆದ್ರೆ ಆಟದ ಮಜಾ ಮಾತ್ರ ಇಬ್ಬರೂ ತಗೋಬೌದು.; ಬೇಕೂಂದ್ರೆ ಇನ್ನೂ ಜಾಸ್ತಿ ಜನಾ ಕೂಡಾ ಸೇರ್ಕೋಬೌದು.

ಯಾವ್ಪದಾ ಮೊದ್ಲು ಏಳೋದೂ ಅನ್ನೋ ಚಿಂತೆ ನನಗೆ. ಅದ್ಯಾಕ್ಲಾ ಚಿಂತೆ ಮಾಡ್ತೀಯೆ; ಚಿಂತೆಯಿಂದ್ಲೇ ಸುರುಅಚ್ಕೋ. ಊಂ.... ಅದೂ ಸರಿ ಕಲಾ. ಕವಿಗಳು ರಾಗ್ವಾಗಿ ಏಳಿಲ್ವಾ, ಚಿಂತೆಗೂ ಚಿತೆಗೂ ಒಯುತ್‌ವಾಸ ಬರೀ ಸೂನ್ಯ. ಚಿತೆ ಸತ್ತೋನಾನ ಸುಟ್ರೆ, ಚಿಂತೆ ಬದುಕಿರೋವ್ನನ್ನೇ ಮಾಡ್ತದಂತೆ ಏಣ. ಈಗ ನಿನ್ಸರ್ದಿನಪ್ಪಾ. ಚಿಂತೆ ಮಾಡಿದ್ರೆ ವಾಪಸ್ಸತ್ತದಾ ಸ್ಮಶಾನಕ್ಕೋದ್ ಏಣಾ ? ಸರ್ಕಾರಕ್ಕೋದ ಅಣಾ ! ಏಂಗದೇ ನನ್ನೇಳ್ಕೆ? ಅದೇನ್ಬುಡ್ಲಾ. ಈ ಚಿಂತೆಮಾಡಿಮಾಡಿ ಸಾಕಾಗೋಗದೆ. ಈಗ ನಂ ದಾಸ್ರಪದಾನ ನೆಪ್ತಿಮಾಡ್ಕೊ. ನೆರೆರಾಜ್ಯದವ ಕನ್ನಡದಲ್ಲಿ ಏಳಿದ್ನಂತೆ:"ಜಿನ್‌ದೆ ಯಾತಕೋ ಮನುಜ. ಬ್ರಾಂದಿಯೇ ತಕೋ" ಅದ್ಕೇ ಇರಬೇಕು ಚಿಂತೆ ಆದೋರೆಲ್ಲಾ ಬ್ರಾಂದಿನೋ ಇನ್ನೇನೇನೋ ತಕೋತಾನೆ ತೂರಾಡ್ತಾಯಿರ್ತಾರೆ. ಈ ತಮಿಳ್ರಂತೂ ಶನಿವಾರ ಬಂತೂಂದ್ರೆ ಬೃಂದಾವನ ಎಕ್ಸ್‌ಪ್ರೆಸ್ ಏರ್ಕೊಂಡು ಬೆಂಗ್ಳೂರಿಗೆ

ಲಗ್ಗೆ ಇಡ್ತಾರೆ, ಅಲ್ಲಿ ಬ್ಯಾನ್ ಐತಲ್ಲಾ ಅದ್ಕೆ.ಸಾಕಪಾ ಈ ಆಟ; ಇದಕ್ಕೆ ಕೊನೆ ಕಾಣೊಲ್ಲವಲ್ಲಾ ಅನ್ನೋ ಚಿಂತೆ ಸುರುವಾಗ ಂಗೆ ಈಗಾಗಲೇ. ಅಲ್ಲಾ ಚಿಂತೆ ಯಾರ್ಗಿಲ್ಲ ಏಳು. ಒಬ್ಬೊಬ್ರಿಗೂ ಅವರವರ್ದೇ ಚಿಂತೆ. ವಿದ್ಯಾರ್ಥಿಗಳ್ಗೆ ಪ್ಯಾಸ್ಮಾಡೋದೇ ಚಿಂತೆ; ಪ್ಯಾಸ್ಮಾಡ್ಬುಟ್ಗ ಕೆಲ್ಸದ ಚಿಂತೆ; ಪಿತೃಗಳಿಗೆ ಮಕ್ಕಳ ಚಿಂತೆ, ಕೆಲ್ಸಗಾರರಿಗೆ ಕೆಲ್ಸ ಕದಿಯೋ ಚಿಂತೆ; ಬಡವರಿಗೆ ದುಡ್ಡಿನ ಚಿಂತೆ, ದುಡ್ಡಿದೋರಿಗೆ ಅದನ್ನ ಡಕಾಯಿತರಿಂದ ಕಾಪಾಡ್ಕೋಳೋ ಚಿಂತೆ. ನಿಂದು ಈ ರೀತಿ ಚಿಂತೆ ಆದ್ರೆ, ನಂದೇ ಬೇರೆ ರೀತಿ ಚಿಂತೆ. ಯುವಕರಿಗೆ ಮದ್ವೆ ಚಿಂತೆ; ಮದ್ವೆ ಆದವರಿಗೆ ಮಕ್ಕಳಾಗಲಿಲ್ವಲ್ಲಾ ಅನ್ನೋ ಚಿಂತೆ; ಮಕ್ಕಳಾದ್ಮೇಲೆ ಅವರ ಎಡುಕೇಸನ್ ಕೊಡ್ಸೋ ಚಿಂತೆ, ಮಕ್ಳು ಬೆಳೆದ್ಮೇಲೆ ಅವ್ರಿಗೆ ಕೆಲ್ಸ ಕೊಡಿಸೋ ಚಿಂತೆ, ಡಾಕ್ಟರೋ, ಇಂಜನಿಯರೋ ಮಾಡೋ ಚಿಂತೆ; ಕೆಲಸ ಕೊಡಿಸೋಕೆ ಲಂಚದ ಹಣ ಹೊಂದಿಸೋ ಚಿಂತೆ; ತಿರುಗಾ ಆ ಹುಡುಗ್ರುಗೆ ಹುಡುಗೀರನ್ನ ಉಡುಕೋ ಚಿಂತೆ ಅವರ್ಗೆ ಮಕ್ಳು, ಅಂದ್ರೆ ನಮ್ಗೆ ಮೊಮ್ಮೊಕ್ಕಾಗ್ಲಿಲ್ವಲ್ಲಾ ಅನ್ನೋಚಿಂತೆ, ಆ ಮೊಮ್ಮೊಕ್ಳ ಇದ್ಯಾಭ್ಯಾಸ, ಮದ್ವೆ ಆಗಲಿಲ್ವಲ್ಲಾ ಅನ್ನೋ ಚಿಂತೆ ಎಟ್‌ಸಿಟೆರಾ..

ಸಾಕ್ಮಾಡಪ್ಪಾ ನಿನ್ನ ಈ ಚಿಂತೆ ಕಂತೇನಾ, ನಿದ್ದೇ ಬರ್‍ತಾ ಐತೆ ಓಗ್ಬಿದ್ಕೋತೀನಿ.

## 54. "ಕವಿಮಂ" ಅಂದ್ರೆ ಏನ್ಲಾ ಸಿವಾ ?

"ಕವಿಮಂ" ಅಂದ್ರೆ ಏನ್ಲಾ ಸಿವಾ ? ಒತ್ತಾರೆಯಿಂದ ತಲೆ ಕೆಟ್ಹೋಗದೆ, ನಿಂಗಾರಾ ಗೊತ್ತಾ ? ಅಂತ ನಮ್ ಸಿವಣ್ಣನ್ ಮಿದ್ಲಿಗೆ ಕೈ ಅಕ್ದೆ. ಒಬ್ಬೊಬ್ಬರು ಒಂದೊಂದತರಾ ವಿವರಣೆ ನೀಡ್ತಾ ಇದಾರೆ. ಒಬ್ಬ 'ಕತ್ಲ ವಿದ್ಯಮಾನ ಮಂಡಳಿ' ಅಂದ್ರೆ ಇನ್ನೊಬ್ಬ " ಕಷ್ಟಕೊಡೋ ವಿದ್ಯುತ್ ಮಂಡಳಿ"ಅಂತಾನೆ. ನನಗಂತೂ ಗೊತ್ತಾಯ್ತಿಲ್ಲ ಈ ಬೆಳಕು ಕೊಡೋ ಮಂಡಳಿಯ ಕತ್ಲ ಇದ್ಯಮಾನ. ಅಲ್ಲಾ ಕಾಂಪಿಟೇಸನ್ ಇಲ್ದೇ ಇರೋ ರಂಗ ಬೇರೆ, ಅಂತಾದ್ರಲ್ಲಿ ವರ್ಷವರ್ಷಾನೂ ಲಾಸಪ್ಪ ಅಂದ್ರೆ ಎಂಗೆ ನಂಬೋದು? ಈ ನಷ್ಟಾನ ತುಂಬ್ಕೋಕೆ ಇವ್ರಿಗೆ ಗೊತ್ತಿರೋದು ರೇಟ್ ಏರಿಸೋದೊಂದೇ ಮಾರ್ಗಾನಾ? ಇಷ್ಟೇ ಆಗಿದ್ರೆ ಅದು ಒಂದು ಥರಾ ಅನ್ಕೋದಾಗಿತ್ತು. ಆದ್ರೆ ಆಗಾಗ್ಗೆ ಒಸೊಸ ರೂಲಿಸು ಮಾಡ್ತಾರೆ. ಪೈಸಾನ ರೂಪಾಯ್ಮಾಡೋದು, ಡಿಪಾಸಿಟ್ ಏರ್ಸೋದು, ಹಿಂದಿನ ಬಾಕಿ ಅಂತ ಬಿಲ್ನಲ್ಲಿ ಒಂದು ದೊಡ್ಡ ಮೊತ್ತ ಸೇರಿಸೋದು, ಅರ್ಥಾನೇ ಇಲ್ಲದ ಡಿಮ್ಯಾಂಡ್ ಚಾರ್ಜು.... ಎಟ್ಸಿಟೆರಾ! ಎಟ್ಸಿಟೆರಾ! ಒಟ್ನಲ್ಲಿ ಜನಗಳಿಂದ ಹಣ ಹೊಡೆಯೋದು. ಮೊನ್ನೆನ್ನೆ ಪೇಪರ್ನಲ್ಲಿ ಓದ್ಲಿಲ್ವಾ, ಕತ್ತಲ್ಗೇರೀಲಿ ಫೋನ್ ಬಿಲ್ ದುಡ್ಡೇ ಲೈಟ್ ಬಿಲ್ಲಂತ ಜಮಾಮಾಡ್ಕೊಂಡವ್ರೆ. ಎಲ್ಲಿದೇ ಅಗ್ಲಿ ದುಡ್ಡು ಬರೋದಿದ್ರೆ ನೀರಿನ ಬಿಲ್, ಟ್ಯಾಕ್ಸ್ ಬಿಲ್ ಎಲ್ಲಾ ಜಮಾ ಮಾಡ್ಕೊಂಡು ತಮ್ಮ ಮಂಡ್ಳಿ ನಷ್ಟಾ ತುಂಬೋ ಕೆಲ್ಸ ಅಚ್ಚುಕಟ್ಟಾಗಿ ಮಾಡ್ಕಂಬುಡ್ತಾರೆ ಈ ಕ.ವಿ.ಮಂ. ಮಂದಿ.

ಅಲ್ಲಣ್ಣಾ, ಇವ್ರು ನಷ್ಟಾ ತಪ್ಸೋ ಪ್ರಯತ್ನ ಮಾಡಿದ್ರೆ ನಮ್ಮ ಜನಗಳ ಕಷ್ಟಾನೂ ತಪಸ್ಬಂಗಲ್ವಾ. ಅಂದ್ರೆ ತಮ್ಮ ನೌಕರರಿಗೆ ಕೊಡೋ ಪುಕ್ಸಟ್ಟೆ ಕರೆಂಟ್ ಉಳ್ಸಿದ್ರೆ, ಅಳ್ಳಿ ಕಡೆ ಕದಿಯೋ ಕರೆಂಟ್ ತಪ್ಸಿದ್ರೆ, ಕದ್ದು ಮುಚ್ಚಿ ನೀರಾವರಿ ಪಂಪ್ ಸೆಟ್ಟುಗಳಿಗೆ ಕರಂಟ್ ಮಾಡ್ಕೊಳ್ಳೊ ಮಂದೀನ ಒಳಕ್ಕೆ ತಳ್ಳಿದರೆ, ದೊಡ್ಡೊಡ್ಡ ಸಂಸ್ಥೆಗಳಿಂದ ಬರಬೇಕಾದ ಲಕ್ಷಾಂತರ ರೂಪಾಯಿ ಬಾಕಿ ಹಣವನ್ನು, ಒಂಚೂರು ಬಿಡದಂತೆ ವಸೂಲ್ಮಾಡಿದ್ರೆ.... ಅಂದ್ರೆ ಮಾಡ್ಬಾರ್ದುದ್ದು ಮಾಡದೇ, ಮಾಡ್ಬೇಕಾದ್ದು ಮಾಡಿದ್ರೆ, ಅವ್ರುಗಳ್ಗೂ ನಮ್ಗೂ ಒಳ್ಳೇದು ಅಲ್ವಾರಾ ?!!!

## 55. ಕಂತ್ರಿ ಕ್ಲಬ್ ಸಾವಾಸ:

ಕಾಲೇಜಿನಲ್ಲಿ ಹೊಸದಾಗಿ ಇಂಟರ್‌ನೆಟ್ ಹಾಕಿಸಿದ್ದ ದಿನಗಳವು. ನಾನೂ ಇ-ಮೇಲ್ ಖಾತೆ ತೆರೆದಿದ್ದೇ ಅಲ್ಲದೇ ನನ್ನ ಕೊಠಡಿಗೆ ಬರುತ್ತಿದ್ದ ಹಲವಾರು ಅಧ್ಯಾಪಕರ ಹೆಸರಿನಲ್ಲೂ ಇ-ಮೇಲ್ ಖಾತೆ ತೆರೆಸಿಕೊಟ್ಟೆ, ಪ್ರತಿನಿತ್ಯ ನನ್ನ ಇ-ಮೇಲ್ ಖಾತೆಯನ್ನು ಇತರ ಸಂಸ್ಥೆಗಳಿಗೆ ತಿಳಿಸುವುದು, ನನ್ನ ಇ-ಮೇಲ್ ಖಾತೆಗೆ ಯಾವುದಾದರೂ ಪತ್ರ, ಮಾಹಿತಿ ಬಂದಿದೆಯೇ ನೋಡುವುದು, ನನ್ನ ನಿತ್ಯಕರ್ತವ್ಯಗಳಲ್ಲಿ ಒಂದಾಗಿಸಿಕೊಂಡೆ. ಕೆಲದಿನಗಳ ನಂತರ ನನ್ನ ಖಾತೆಗೂ ಪತ್ರಗಳು, ಮಾಹಿತಿಗಳು ಬರತೊಡಗಿದವು. ಒಂದು ದಿನ ಅದರಲ್ಲಿ ನಿಮ್ಮ ಇ-ಮೇಲ್ ಖಾತೆಗೆ ಅಮೇರಿಕದಿಂದ ಎಷ್ಟೋ ಲಕ್ಷ ಡಾಲರುಗಳು ಬಂದಿರುವುದಾಗಿ ಮಾಹಿತಿಬಂತು. ಕಂಪ್ಯೂಟರ್ ಪರದೆಯಮೇಲೆ ಒಂದು ಚೆಕ್ಕು, ಅದರಲ್ಲಿ ತುಂಬಿದ್ದ ಎಷ್ಟೋ ಸೊನ್ನೆಗಳ ಹಿಂದೆ ಒಂದು ಸಂಖ್ಯೆ, ನನ್ನ ಹೆಸರು ಎಲ್ಲ ಇತ್ತು. ನನಗೋ ಎಲ್ಲಿಲ್ಲದ ಖುಷಿ. ಆ ಮೊತ್ತವನ್ನು ಭಾರತೀಯ ರೂ.ಗಳಿಗೆ ಪರಿವರ್ತಿಸಿ ನೋಡಿದರೆ, ಎಷ್ಟೋ ಕೋಟಿ ರೂ.ಗಳಷ್ಟಾಗಿತ್ತು. ನನಗೋ ಆ ಮೊತ್ತವನ್ನು ಹೇಗೆ ಹೇಗೆ ಬಳಸಬಹುದು ಎಂದೆಲ್ಲಾ ಕನಸುಕಂಡೆ. ಈ ಹಣವನ್ನು ಹೇಗೆ ಪಡೆಯಬಹುದು ಎಂದೂ ಯೋಚಿಸಿದೆ. ಈ ಲಾಟರಿಬಹುಮಾನ ಪಡೆಯಬೇಕಾದರೆ, ಮೊದಲು ನನ್ನ ಬ್ಯಾಂಕ್ ಖಾತೆಸಂಖ್ಯೆ, ವಿಳಾಸ, ಮೊಬೈಲ್ ಸಂಖ್ಯೆ ಮುಂತಾದ ಮಾಹಿತಿಗಳ ಜೊತೆಗೆ, ಸುಮಾರು 25,000 ರೂ.ಗಳನ್ನು ತೆರಿಗೆ ರೂಪದಲ್ಲಿ ಪತ್ರದಲ್ಲಿ ತಿಳಿಸಿದ ಖಾತೆಗೆ ಜಮಾಮಾಡಲು ಸೂಚಿಸಿದ್ದರು. ಕೋಟಿಕೋಟಿ ಹಣಸಿಗುವಾಗ 25,000 ರೂ. ತುಂಬ ಜುಜುಬಿ ಅಂತಲೂ ಅನ್ನಿಸಿತ್ತು.

ಮಾರನೇದಿನವೇ ಮತ್ತೊಂದು ಕಂಪನಿಯಿಂದ ಮತ್ತೆ ಹಲವಾರು ಕೋಟಿ ರೂ.ಗಳ ಬಹುಮಾನ ಬಂದಿರುವುದಾಗಿ ಪತ್ರಬಂದಿತ್ತು. ಸ್ವಲ್ಪ ಅನುಮಾನ ಶುರುವಾಯಿತು. ಈ ವಿಷಯವನ್ನು, ಕಂಪ್ಯೂಟರ್ ಮಾರಾಟಗಾರ ಸ್ನೇಹಿತರೊಬ್ಬರೊಡನೆ ಗುಟ್ಟಾಗಿ ಹಂಚಿಕೊಂಡೆ.

ಕಾಗದತರಿಸಿಕೊಟ್ಟಮೇಲೆ, ಅವರು ಜೋರಾಗಿ ನಗಲು ಪ್ರಾರಂಭಿಸಿದರು. ನನಗೋ ಆಶ್ಚರ್ಯ, ಅನುಮಾನ ಎಲ್ಲ ಉಂಟಾಯಿತು. ನನ್ನ ಇ-ಮೇಲ್ ಖಾತೆಗೂ ಇಂತಹ ಹತ್ತಾರು ಪತ್ರಗಳು ಬಂದಿವೆ. ಅದರಲ್ಲಿ ಕಾಣಿಸುತ್ತಲ್ಲಾ ಚೆಕ್ಕು, ಅದರ ಒಂದು ಮುದ್ರಿತ ಝೆರಾಕ್ಸ್ ಪ್ರತಿಯನ್ನ ತೆಗೆದುಕೊಂಡುಬನ್ನಿ, ನಂತರ ಆ ಸಾಕ್ಷಿಯನ್ನು ತೆಗೆದುಕೊಂಡು ಪೋಲೀಸ್ ಠಾಣೆಗೆ ಹೋಗಿ ದೂರುನೀಡೋಣ ಅಂದು ಕಳುಹಿಸಿದರು. ಮಾರನೇ ದಿನ ಕಾಲೇಜಿಗೆ ಬಂದನಂತರ, ಆ ಚೆಕ್ಕಿನ ಪ್ರತಿತೆಗೆಯಲು ಪ್ರಯತ್ನ ಮಾಡಿದೆ. ನನ್ನ ಹೆಸರಾಗಲೀ, ಆ ಮೊತ್ತವಾಗಲೀ, ಕಳುಹಿಸಿದವರ ವಿಳಾಸವಾಗಲೀ, ಸಹಿಯಾಗಲೀ ಕಾಪಿಯಾಗಲಿಲ್ಲ. ಭ್ರಮನಿರಸನವಾಗಿ ಅಲ್ಲಿಂದ ಮುಂದೆ ಅಂತಹ ಪತ್ರಗಳಕಡೆಗೆ ಗಮನಕೊಡವುದನ್ನೇ ಬಿಟ್ಟೆ ಅನ್ನಿ. ಮೊದಮೊದಲು ಕಂಪ್ಯೂಟರಿನಲ್ಲಿ ಇ-ಮೇಲ್ ರೂಪದಲ್ಲಿ ಬರುತ್ತಿದ್ದ ಆಮಿಷಗಳು, ಇತ್ತೀಚೆಗೆ ಮೊಬೈಲುಗಳಿಗೆ ಬರಲು ಪ್ರಾರಂಭಿಸಿದೆ. ಅಂತಹ ಆಮಿಷಗಳಿಗೆ ಬಲಿಬಿದ್ದು ಸಾವಿರಾರು ರೂಪಾಯಿಗಳನ್ನು ಕಳೆದುಕೊಂಡವರು ಪೋಲೀಸರಿಗೆ ದೂರು ಕೊಟ್ಟ ವಿಷಯಗಳು ವೃತ್ತಪತ್ರಿಕೆಗಳಲ್ಲಿ,ಟೀವೀಗಳಲ್ಲಿ ವರದಿಯಾಗುತ್ತಲೇಇವೆ. ಬುದ್ಧಿವಂತರು ಅವನ್ನು ನೆಗ್ಲೆಕ್ಟ್ ಮಾಡಿದರೆ, ದಡ್ಡರು ಹಣಕಳೆದುಕೊಳ್ಳುತ್ತಿದ್ದಾರೆ.

ಮೈಸೂರಿಗೆ ಬಂದು ಒಂದೆರಡು ವರ್ಷಗಳಾಗಿತ್ತು. ಒಂದು ದಿನ ನನ್ನ ಮನೆ ದೂರವಾಣಿ ಟ್ರಿಣ್‌ಗುಟ್ಟಿತು. ರಿಸೀವರನ್ನು ಕೈಗೆತ್ತಿಕೊಂಡ ಕೂಡಲೇ ಅತ್ತಕಡೆಯಿಂದ ಇಂಪಾದ ಹೆಣ್ಣುದನಿಯೊಂದು ಇಂಗ್ಲೀಷಿನಲ್ಲಿ 'ನಮಸ್ಕಾರ, ಕಂಗ್ರಾಚುಲೇಶನ್ಸ್, ನಿಮ್ಮ ದೂರವಾಣಿ ಸಂಖ್ಯೆ ನಿಮ್ಮನ್ನು ಅದೃಷ್ಟವಂತರನ್ನಾಗಿ ಮಾಡಿದೆ. ಸುಮಾರು 5000 ಮಂದಿಯಲ್ಲಿ ನಿಮ್ಮ ಹೆಸರು ಆಯ್ಕೆ ಆಗಿದೆ. ತಾವು ಇಂತಹ ದಿನ ಈ ಹೋಟಲಿನಲ್ಲಿ ನಡೆಯುವ ಸಮಾರಂಭದಲ್ಲಿ ಭಾಗವಹಿಸಲು ಕೋರುತ್ತಿದ್ದೇವೆ' ಎಂದಿತು. ನಮಗೋ ನಮ್ಮ ಅದೃಷ್ಟದ ಬಗೆಗೆ ಹೆಮ್ಮೆ ಅನಿಸಿತು ಈ ಹಿಂದೆ ನಾನು ಹಲವಾರು ಸಲ ನನ್ನ ಅದೃಷ್ಟ ಪರೀಕ್ಷೆಮಾಡಲು ಲಾಟರಿ ಟಿಕೇಟುಗಳನ್ನು ಖರೀದಿಸುತ್ತಿದ್ದೆ. ಒಮ್ಮೆಮಾತ್ರ 5 ರೂ. ಬಂದಿತ್ತು. ಆದರೆ ನನ್ನ ಹೆಂಡತಿ ದೂರದರ್ಶನ ಕ್ವಿಜ್ ಒಂದರಲ್ಲಿ

ಭಾಗವಹಿಸಿ 5000ರೂ.ಗಳ ಬಹುಮಾನ ಪಡೆದಿದ್ದಳು. ಹೀಗಾಗಿ ಅವಳ ಹೆಸರಿನಲ್ಲಿದ್ದ ದೂರವಾಣಿ ಆಯ್ಕೆ ಆಗಿದ್ದು ಅವಳ ಅದೃಷ್ಟದಿಂದಲೇ ಹೊರತು, ನನ್ನ ಅದೃಷ್ಟದಿಂದಲ್ಲ ಎಂಬುದು ನಿರ್ವಿವಾದ. ಒಟ್ಟಿನಲ್ಲಿ ಮೈಸೂರಿಗೆ ಬಂದಮೇಲೆ ನಮ್ಮ ಅದೃಷ್ಟ ಖುಲಾಯಿಸಿತು ಅನ್ನಿಸಿ, ತಿಳಿಸಿದ ದಿನಾಂಕದಂದು ಹೇಳಿದ ಹೋಟಲಿಗೆ ಹೋದೆವು. ಅಲ್ಲಿನ ಹಾಲಿನಲ್ಲಿ ಹಲವಾರು ಟೇಬಲ್ಲುಗಳು ಹಾಕಲಾಗಿತ್ತು. ಕೆಲವು ಮೇಜುಗಳ ಸುತ್ತ ಜನಗಳು ಕುಳಿತ್ತಿದ್ದರು. ನಮ್ಮ ಹೆಸರು ತಿಳಿಸಿದಾಗ ಒಂದು ಖಾಲಿ ಟೇಬಲ್ ತೋರಿಸಿದರು.. ಹೋಗಿ ಕುಳಿತಾಗ 2 ಕಪ್ ಕಾಫಿ ಬಂತು. ಕಾಫಿ ಕುಡಿಯುತ್ತಿದ್ದಾಗ ಒಬ್ಬ ಟ್ರಿಂ ಆಗಿ ಡ್ರೆಸ್ ಮಾಡಿಕೊಂಡಿದ್ದ ಯುವಕ ಬಂದು ಕೈಕುಲುಕಿ ಉಭಯಕುಶಲೋಪರಿ ವಿಚಾರಿಸಿದ. ನಮ್ಮ ಪರಿಚಯ ಆದನಂತರ ತನ್ನ ಪರಿಚಯ ಮಾಡಿಕೊಂಡು 'ಸಾರ್, ನಾನೂ ನಿಮ್ಮ ಕಾಲೇಜಿನ ಹಳೇವಿದ್ಯಾರ್ಥಿ. ಪಕ್ಕದ ಹಳ್ಳಿಯವನೇ. ಆದರೆ ಈ ಕೆಲಸ ಸಿಕ್ಕಿದಮೇಲೆ ಮೈಸೂರಿನಲ್ಲಿ ಬಂದು ನೆಲೆಸಿದ್ದೇನೆ. ನಾನು ಓದಿದ ಕಾಲೇಜಿನ ಮೇಷ್ಟ್ರಿಗೇ ಈ ಅದೃಷ್ಟ ಒಲಿದಿರುವುದು ನನಗೆ ತುಂಬಾ ಸಂತೋಷವಾಗಿದೆ' ಅಂದು ನನಗೇ ಗೊತ್ತಾಗದಂತೆ, ನನ್ನ ಕಿವಿಗೆ ಹೂಇಟ್ಟ. ನಂತರ ಒಂದರ್ಧ ಘಂಟೆ ಆ ಸಂಸ್ಥೆ, ಅದರ ಚಟುವಟಿಕೆಗಳು ನಮಗೆ ಅದರ ಸದಸ್ಯತ್ವ ಪಡೆದರೆ ಸಿಗಬಹುದಾದ ಸೌಲಭ್ಯಗಳು ಎಲ್ಲ ತಿಳಿಸಿದ. ಒಂದ್ಯೆವತ್ತು ಸಾವಿರ ಒಟ್ಟಿಗೆ ಅಥವಾ ಕಂತುಗಳಲ್ಲಿ ಕಟ್ಟಿದರೆ, ನಾವು ಉಚಿತವಾಗಿ ದೇಶದ ಅಥವಾ ವಿದೇಶದ ಹೋಟಲುಗಳಲ್ಲಿ ತಂಗಬಹುದಾದ ಆಮಿಷಗಳನ್ನು ನಮ್ಮ ಮುಂದಿಟ್ಟ. ನಾನಾದರೋ ಬಹಳ ಚಾಕಚಕ್ಯತೆಯಿಂದ ನಮ್ಮ ವಯಸ್ಸು, ಅನಾರೋಗ್ಯ ಮುಂತಾದ ಅಂಶಗಳನ್ನು ಅವನ ಮುಂದೆವಿವರಿಸಿ, ಸದಸ್ಯತ್ವ ಪಡೆಯಲು ಆಗುವುದಿಲ್ಲವೆಂದೂ, ನಮಗೆ ಅದೇನು ಗಿಫ್ಟ್ ಕೊಡುತ್ತೀರೋ ಅದನ್ನು ಕೊಡಿ ಎಂದೆ.ಇನ್ನು ನಮ್ಮನ್ನು ಬಕರಾಮಾಡಲು ಸಾಧ್ಯವಿಲ್ಲವೆಂದು ಅರಿತ ಆ ಯುವಕ ನಮಗೆ ಒಂದು ಪ್ಯಾಕೆಟ್‌ಕೊಟ್ಟು ಕಳಿಸಿದ ಅನ್ನಿ. ಮನೆಗೆ ಬಂದು ಬಿಚ್ಚಿನೋಡಿದಾಗ ಅದೊಂದು 6 ಪಿಂಗಾಣಿ ಟೀ ಕಪ್‌ಗಳಾಗಿತ್ತು. ಹೀಗೆ ಅವರ ಗಾಳದಿಂದ ತಪ್ಪಿಸಿಕೊಂಡುಬಂದೆವು.

ಆದರೆ ನಮ್ಮ ಬೀಗರು ಅದಾಗಲೇ ಆ ಸಂಸ್ಥೆ ಸದಸ್ಯತ್ವ ಪಡೆದಿರುವುದರಿಂದ, ನನ್ನ ಮಗಳು ಅಳಿಯನನ್ನು ಮಧುಚಂದ್ರನಪದಲ್ಲಿ, ಹಾಲಿಡೇ ಪ್ಯಾಕೇಜ್ ಅನ್ವಯ, ಜಮ್ಮುವಿಗೂ .ಶಿಮ್ಲಾಗೂ ಕಂತ್ರಿಕ್ಲಬ್ಬಿನವತಿಯಿಂದ ಕಳುಹಿಸಿದ್ದರು ಹೋಟಲಿನಲ್ಲಿ 2 ರಾತ್ರಿ 3 ಹಗಲು ಉಚಿತ ವಸತಿ ಒದಗಿಸುವುದಾಗಿ

ತಿಳಿಸಿದ್ದುದರಿಂದ ತಮ್ಮ ಸ್ವಂತ ಖರ್ಚಿನಲ್ಲಿ ಜಮ್ಮುವಿಗೆ ಹೋಗಿದ್ದಾಗ ಆದ ವಂಚನೆಯನ್ನು ವಿವರಿಸಿದುದು ಹೀಗೆ. ಪ್ಯಾಕೇಜಿನಲ್ಲಿ ಉಚಿತವಾಗಿದ್ದುದು ಹೋಟಲ್ ವಸತಿ ಮಾತ್ರ, ಕುಡಿಯಲು ನೀರು ಬೇಕಾದರೂ ಅದಕ್ಕೆ ಸಾಮಾನ್ಯ ದರಕ್ಕಿಂತ 3 ರಷ್ಟು ಹೆಚ್ಚುತೆರಬೇಕು.ನಮಗೆ ನೀಡಿದ ತಿಂಡಿ, ಊಟ, ಟ್ಯಾಕ್ಸಿ ಸೌಲಭ್ಯ ಎಲ್ಲಕ್ಕೂ ನಾವು ಮಾಡಿದ ಖರ್ಚು, ನಾವು ಯಾವುದೇ ಪ್ಯಾಕೇಜ್ ಇಲ್ಲದೇ, ಹೋಗಿಬಂದಿದ್ದರೆ ಆಗಬಹುದಾದ ಖರ್ಚಿಗೆ ಹೋಲಿಸಿದರೆ ವಿಪರೀತ ಜಾಸ್ತಿ. ಪ್ಯಾಕೇಜ್ ತೆಗೆದುಕೊಳ್ಳುವವರಿಗಿಂತ ಬಡಾ ಬಕರ ಇನ್ನೊಬ್ಬರಿಲ್ಲ ಅಂದರು. ನಮ್ಮ ಬುದ್ಧಿವಂತಿಕೆಗೆ ನಮ್ಮ ಬೆನ್ನು ನಾವೇ ತಟ್ಟಿಕೊಂಡೆವು ಅನ್ನಿ.

# 56. ಭಾಷಾ ವ್ಯಾಕರಣ

ಲಾಗಾಯ್ತಿನಿಂದಲೂ ಗಂಡಸರು ಗಂಡಸರನ್ನು ತಮ್ಮ ವಯಸ್ಸಿಗೆ ಅನುಗುಣವಾಗಿ ಅಣ್ಣ, ಅಪ್ಪ, ಮಗಾ ಅಂತ್ಲೂ, ಹೆಂಗಸರು ಹೆಂಗಸರನ್ನು ಅಕ್ಕ, ಅಮ್ಮ, ಅವ್ವ, ಮಗಳೇ ಅಂತಲೂ ಕರೀತಾ ಇರೋದು ಎಲ್ಲರಿಗೂ ಗೊತ್ತೇ ಇದೆ. ಹಳ್ಳಿಯಿಂದ ಬಂದವ್ರು, ಪಟ್ಟಣದ ಯುವಕರನ್ನು ಬುದ್ಧಿ, ದೇವ್ರು, ನಮ್ಮಪ್ಪ ಅಂತ ಕರೆದು ತಮ್ಮ ದೊಡ್ಡಗುಣವನ್ನು ತೋರಿಸಿಕೊಳ್ಳೋದು ಉಂಟು. ನಮ್ಮ ವ್ಯಾಕರಣದ ಮಾಸ್ತರುಗಳು ಅಣ್ಣ, ಅಪ್ಪಾ ಇವು ಪುಲ್ಲಿಂಗಗಳು ಅಂತಾನೂ, ಅಕ್ಕ, ಅವ್ವ ಇವು ಸ್ತ್ರೀಲಿಂಗಗಳು ಅಂತಾನೂ ಅವತ್ತಿನಿಂದ ಇವತ್ತಿನವರೆಗೂ ನಮ್ಮ ಕಿವಿಗಳಿಗೆ ಭೈರಿಗೆ ಕೊರೆದಂತೆ ಹೇಳಿಕೊಟ್ಟಿದ್ದೂ ಉಂಟು. ಈ ವಿಷಯ ಎಲ್ಲರಿಗೂ ಅರ್ಥ ಆದ್ರೂನೂವೆ ನಮ್ಮ ಕಾಲೇಜೋದೋ ಐಕಳಿಗೆ ಯಾಕೆ ಗೊತ್ತಾಯ್ತಾ ಇಲ್ಲವೋ ಆ ಸಿವನೇ ಏಳಬೇಕು.

ಹುಡುಗ್ರು ಕಾಲೇಜಿನಾಗೆ ತಮ್ಮ ಸ್ನೇಹಿತರನ್ನ ಏನಮ್ಮಾ ಬಾರಮ್ಮಾ ಹೋಗಮ್ಮಾ ಅಂತಾ ಕರಿದ್ರೆ, ಹುಡುಗೀರು ತಮ್ಮ ಗೆಳತಿಯರನ್ನು Come Man, Go Man ಅಂತ ಮಾತಾಡಸ್ತವೆ. ಅವಕ್ಕೆ ಈ ವ್ಯಾಕರಣಾನ್ನೋದು ಇರೋದೇ ಗೊತ್ತಿಲ್ಲವೋ, ಅಥ್ವಾ ಹುಡುಗೀರನ್ನ ಹುಡುಗ್ರು ಹುಡುಗ್ರನ್ನು, ಹುಡುಗೀರು ಮಾತಾಡ್ಸೋಕೆ ಆಗದ ತಮ್ಮ ಬಯಕೇನ್ನ ಹೀಗೆ ತೀರಿಸಿಕೊಳ್ಳುತ್ತವೆಯೋ ಆ ಸಿವನೇ ಏಳಬೇಕು. ಭಾಷಾ ಪಂಡಿತರು ಹೇಳೋ ಹಾಗೆ ಕಾಲದಿಂದ ಕಾಲಕ್ಕೆ ಕೆಲವು ಪದಗಳು ತಮ್ಮ ಅರ್ಥ ಬದಲಾಯಿಸಿಕೊಳ್ಳುವಂತೆ. ಇನ್ನು ಕೆಲವು ತಮ್ಮ ಅರ್ಥ ಹಾಗೂ ಅಸ್ತಿತ್ವ ಕಳೆದುಕೊಳ್ಳುತ್ತವಂತೆ. ಅದೇ ರೀತಿ ಅವ್ವ ಇದ್ದಿದ್ದು ಅಪ್ಪ ಆಯ್ತದೆ. ಅಪ್ಪ ಇದ್ದಿದ್ದು ಅವ್ವ ಆಯ್ತದೆ. ಕೆಲವು

ಪದಗಳಿಗೆ ಎರಡೆರಡು ಅರ್ಥಗಳೂ ಇರುತ್ತವಂತೆ, ಕಾಶೀನಾಥನ, ಜಗ್ಗೇಶನ ಫಿಲಂ ಡಯಲಾಗ್‌ತರಹ! ಉದಾಹರಣೆಗೆ, ನಾಮ ಹಾಕೋದು, ಮಂಗಳಾರತಿ ಮಾಡೋದು, ಚೊಂಬು ಹಿಡಿಸೋದು, ಉಗಿಯೋದು, ಮುಖದಿಂದ ನೀರಿಳಿಸೋದು, ಮೀಟರ್ ಇದೆಯಾ ಅನ್ನೋದೂ ಮುಂತಾದವು. ಇವಕ್ಕೆ ಮೇಲೊಂದು ಅರ್ಥ ಇದ್ದರೆ ಒಳಗೊಂದು ಅರ್ಥ ಇರ್ತವೆ. ಇವತ್ತಿನ ಸಿನಿಮಾಗಳಲ್ಲಿಯಂತೂ ಈ ರೀತಿಯ ಗೊಂದಲದ ಭಾಷೆ ತುಂಬಾ ಬಳಕೆಯಲ್ಲಿದೆ. ಹೀಂಗ ಭಾಷೆ ಯಾವ ಕಡೆ ಬೆಳಿತಾಯಿದೆಯೋ, ಇನ್ಯಾವ ಕಡೆ ಮುದುರ್‍ಕೋತಾಯಿದೆಯೋ ಆ ಸಿವನೇ ಏಳಬೇಕು .

## 57. ರೆಕಾರ್ಡ್.. ರೆಕಾರ್ಡ್

ಮಾತೆತ್ತಿದ್ರೆ ರೆಕಾರ್ಡ್ ತೋಡ್. ಈ ಕಾಲ್ದಲ್ಲಿ ಆರ್ಡಿನರಿ ಕೆಲ್ಸಗಳಿಗೆ ಬೆಲೆಯೇ ಇಲ್ಲ. ಅದು ಆಟ ಇರ್ಲಿ, ಪಾಠ ಇರ್ಲಿ, ಅಥ್ವಾ ಇನ್ನಾವುದೇ ಇರ್ಲಿ, ರೆಕಾರ್ಡ್ ಆದ್ರೆ ಮಾತ್ರ ಅದಕ್ ಬೆಲೆ. ಈಗ ನೋಡಿ, ಪೋಸ್ಟ್ ಕಾರ್ಡಿನ ಬೆಲೆ ಬರೀ 15 ಪೈಸೆ ಅನ್ನೋದು, ಅದ್ರಿಂದ ಸರ್ಕಾರಕ್ಕೆ ಆಗ್ತಿರೋ ನಷ್ಟ ಎಲ್ರ ಕಣ್ಣಿಗೆ ಕಾಣ್ಸಿದ್ದು "ಸುರಭಿ"ಗೆ ಬಂದ 10 ಲಕ್ಷ ಚಿಲ್ರೆ ಉತ್ತರದಿಂದ ಅಲ್ವಾ! ಆ ನಷ್ಟ ತುಂಬ್ಕೋಳೋಕೆ ಅಂತ ಪೋಸ್ಟಾಫೀಸವ್ರು 'ಕಾಂಪಿಟೇಶನ್ ಪೋಸ್ಟ್ ಕಾರ್ಡ್' ಅನ್ನೋದನ್ನೇ ಹೊರಡಿಸಿ, ಅದಕ್ಕೆ 50 ಪೈಸೆ ಇಟ್ಟರು. ಹಂಗೆ ವರ್ಷ ವರ್ಷಾನೂ ಆ ದೇವ್ರ ಕಲೆಕ್ಷನ್ ಕೋಟಿ ಮೀರ್ತು, ಈ ದೇವ್ರ ಕಲೆಕ್ಷನ್ ಇನ್ನಷ್ಟು ಕೋಟಿ ದಾಟ್ತು ಅಂತ ಓದ್ತಾ ಇದ್ರೆ ಆ ದೇವ್ರ ಮೇಲೆ ಎಲ್ಲ ತರಹದ ಜನರ ಗಮನ ಹರಿಯುತ್ತೆ. ಅವರ ಗಮನದ ಜೊತೆಗೆ ಸರ್ಕಾರದ, ಅದರ ಬೇರೆ ಬೇರೆ ಇಲಾಖೆಗಳ ಗಮನಾನೂ ಹರಿಯುತ್ತೆ. ಈ ರೀತಿ ಹಿಂದೆ ವೆಂಕಟೇಶ್ವರನ ಅದೇ ತಿರುಪತಿ ತಿಮ್ಮಪ್ಪನ ಮೇಲೆ ತೆರಿಗೆ ಇಲಾಖೆ ಗಮನ ಹರಿದಿದ್ದೇ ತಡಾ ಆ ದೇವರನ್ನೇ ನಂಬಿದ್ದ ಮಂದಿಗೆ ಸಂಕಟಕ್ಕೆ ಕಾರಣ ಆಗಿತ್ತು. ಆಗ ಆ ಪೂಜಾರಿಗಳು, ಅಧಿಕಾರಿಗ್ಳೂ ಎಲ್ಲ ಸೇರಿ ಕಾನೂನನ್ನು ತಮ್ಮ ಅನುಕೂಲಕ್ಕೆ ತಿರುಚಿ, ಅಂದ್ರೆ ತಿರುಚಾನೂರ ಪದ್ಮಾವತೀನ್ನ ವೆಂಕಟ್ರಮಣನ ಜೊತೆ ಸೇರ್ಸಿ ಕುಟುಂಬ, ಅವಿಭಕ್ತ ಕುಟುಂಬ ಅಂತೆಲ್ಲಾ ಮಾಡಿ ತೆರಿಗೆ ಹೊರೆ ಇಳ್ಸಿದ್ರೂ ಅನ್ನಿ. ವೆಂಕಟ್ರಮ್ಮನ ಸಂಕಟ ತಪ್ಸೋಕೆ ಪದ್ಮಾವತೀನೆ ಬೇಕಾಯ್ತು. ಅಕಸ್ಮಾತ್ ಇಲಾಖೆವ್ರು ಇನ್ನೊಬ್ಬ ರೆಕಾರ್ಡ್ ಕಲೆಕ್ಷನ್ ದೇವ್ರು ಅಯ್ಯಪ್ಪನನ್ನೋ, ಗಣೇಶನನ್ನೋ, ಆ..ಸುಬ್ರಮಣ್ಯನನ್ನೋ ಅಟ್ಯಾಕ್

ಮಾಡಿದಿದ್ರೆ ಆವಾಗ ಆ ಭಕ್ತರು ಯಾರ ಮೊರೆ ಹೋಗ್ಬೇಕಾಗಿತ್ತು ? ಅನ್ನೋ ಇಚಾರ ನನ್ ತಲೆ ಕೊರೀತಿದೆ. ಇದೇನೆ ಇರ್ಲಿ ನಂತರದ ದಿವಸಗಳಲ್ಲಿ ಸರ್ಕಾರಗಳೇ ಈ ಇಲಾಖೆಗಳಿಗೆ ಸೂಚನೆ ನೀಡಿ ಈ ದೇವ್ರುಗಳ ಆದಾಯ ಸರ್ಕಾರದ ಕೆಲ್ಸಗಳಗೆ ಖಜಾನೆಗೆ ಸೇರಿಸಬೇಕಾದ್ರೆ ಸಾಕುಸಾಕಾಗಿರತ್ತೆ.

ಈಗಂತೂ ಯಾತಯಾತರದ್ದೋ ರೆಕಾರ್ಡ್. ಮೊನ್ನೆ ದೀಪಾವಳೀ ಹಬ್ಬಕ್ಕೆ ಒಂದಿಸ್ಕೂಲಿನ ಮಕ್ಕಳು 3000 ದೀಪಗಳನ್ನು ದೀಪದ ಅಕಾರದಲ್ಲಿಟ್ಟದ್ದೇ ಒಂದು 'ಲಿಮ್ಕಾ' ರೆಕಾರ್ಡ್ ಆಗಿಬಿಟ್ಟಿದೆ. ಒಟ್ಟಿಗೆ ಸಾವಿರಾರು ಜನ ಒಟ್ಟಿಗೆ ಹಾಡುಹೇಳುವುದು, ಒಟ್ಟಿಗೆ ಬೆತ್ತಲಾಗುವುದು, ಎಲ್ಲದರಲ್ಲೂ ರೆಕಾರ್ಡ್ ಮಾಡೋಕೆ ತೊಡಗಿದ್ದಾರೆ ಇಂದಿನ ಮಂದಿ!

## 58. ವಾಕಿಂಗ್ .. ನೋ ವಾಕಿಂಗ್

ಉದರನಿಮಿತ್ತಂ ಬಹುಕೃತ ವೇಷಂ – ಹೌದುಸ್ವಾಮಿ, ಎಲ್ಲಾವಮಾಡೋದು ಒಟ್ಟೆಗಾಗಿ, ಗೇಣುಬಟ್ಟೆಗಾಗಿ ಅಲ್ವಾರಾ. ಕೆಲವ್ರುಮೈಯಿಂದ ದುಡೀತಾರೆ, ಇನ್ಕೆಲವ್ರು ತಲೆಯಿಂದ, ಈ ಮೈಯಿಂದ ದುಡಿಯವ್ರನ್ನ ಕಂಡ್ರೆ ಇವನ್ಗೆ ತಲೆ ಇಲ್ಲಾ, ಅದ್ಕೆ ಎತ್ನಂಗೆ ದುಡೀತಾನೆ ಅಂತದೆ ಈ ಸಮಾಜ; ತಲೆಯಿಂದ ದುಡಿಯವರ್ನ ಕಂಡ್ರೆ ಈ ವಯ್ಯನ್ಗೆ ಮೈಯಲ್ಲಿ ಕಸುವಿಲ್ಲ, ಅದ್ಕೆ ತಲೇಲಿ ದುಡೀತಾವ್ನೆ ಅನ್ತಾವೆ ಅದೇ ಜನ. ಒಟ್ನಲ್ಲಿ ಎಲ್ಲರ್ಗೂ ಆಡ್ಕಂಡು ನಗಾದೆ ಇದರ ಅಲ್ಲಲ್ಲ ಇವರ ಕೆಲ್ಸಾ! ನಾನೂ ಇಂಗೇ ಒಂದಿಸ್ಕೂಲಲ್ಲಿ ಮೇಸ್ಟ್ರ ಕೆಲ್ಸಕ್ಕೆ ಸೇರ್ಕಂಡು ಮೂವತ್ತೈದು ವರ್ಸಾತು. ತಲೆ ಕೆಲ್ಸಾ, ತರ್ಲೆ ಕೆಲ್ಸ ಎಲ್ಲ ಮಾಡ್ಕೊಂಡು ಕಾಲ ಕಳೀತಾ ಕಳೀತಾ, ಪುರ್ಸೊತ್ತಿದ್ದಾಗ್ಲೆಲ್ಲಾ, ಒಟ್ಟೇಗೇನಾರಾ ಹಾಕ್ತಾ ಇದ್ದದರ ಪರ್ಣಾಮಾ ಏನಪ್ಪಾ ಅಂದ್ರೆ, ಉಬ್ಬರಿಸಿದ ಡೊಳ್ಳು ಒಟ್ಟೆ! ನಗುವ ಬುದ್ದನ (Laughing budda) ಪ್ರತಿರೂಪ. ಆದ್ರೂ ಒಂತರಾ ಕುಸಿ, ಕೆಲವ್ರು ಏನು ತಿಂದ್ರೂ ಒಣಕೊಂಡೇ ಇದ್ರೆ, ಇನ್ಕೆಲವ್ರು, ಜಾಸ್ತಿ ತಿನ್ನದೇ ಇದ್ರೂ, ಉಬ್ತಾನೇ ಇರ್ತಾರೆ. ಬ್ಯಾರೇವ್ರು ಆಡಿಕೊಂಡ್ರೆ, 'ನಮ್ ಬಾಡಿ, ನಾವ್ ಹೊತ್ಕೋತೀವಿ, ನಿಮ್ಗೇನು?' ಅಂತಾ ರೇಗ್ತಾರೆ. ಮುಂದೆ ಒಂದಿನ, ಆ ಭಾರಾನೇ ಹೊರೋಕಾಗ್ದೇಯಿರೋತರಾ ಆಗಿ, ಖಾಯಿಲೆಗಳು ಅಮರಿಕೊಂಡ್ರೆ, ಆವಾಗ ಸುರುಮಾಡ್ತಾರೆ. ವಾಕಿಂಗು, ಜಾಗಿಂಗು, ಸ್ವಿಮ್ಮಿಂಗೂ, ಸ್ಲಿಮ್ಮಿಂಗೂ ಇತ್ಯಾದಿ. ಮೊದ್ಮೊದಲು ಯಾರಾದ್ರೂ ವಾಕಿಂಗ್ ಅಂದ್ರೆ ವಾಕರಿಕೆ ನನ್ಗೆ. ನನ್ಗ್ಯಾಕಾರ ವಾಕಿಂಗ್ ಏನಿದ್ರೂ ಕಾಯ್ಲೆ ಬಂದು ಡಾಕಟ್ರು ಇನ್ನೇನೂ ಮಾಡಕಾಗಕಿಲ್ಲಾ, ಜಿನಾ ಒಂದ್ಯೆದಾರು ಕಿಲೋಮೀಟರು ನಡೀರಿ

ಅಂದ್ವಾಕೆ ಆರಂಭ. ಯಾವ್ದೇ ಪಾರ್ಕಲ್ಲಿ ನೋಡಿ, ಓಡೋವ್ರು, ಏದುಸಿರು ಬಿಟ್ಕೊಂಡು ಒದ್ದಾಡೋರೂ, ದಪ್ಪೊಟ್ಟೆ ಬಿಟ್ಕಂಡು ಕುಣಿದಾಡೋರೂ ಇಂಗೆ ಎಲ್ಲಾ ಆನೇಮರಿಗಳ್ ತರಾದವ್ರು. ಉಸಾರಾಗಿರೋವ್ನು ಯಾವ್ನನ್ಗಾತಾನೇ ಬೆಳಗಾಗೆದ್ದು ಬೇರೆ ಕೇಮಿಲ್ದೆ ವಾಕಿಂಗು, ಜಾಗಿಂಗು ಅಂತಾ ಟೇಂ ವೇಸ್ಟ್ ಮಾಡ್ತಾನೆ? ಇನ್ನೀ ಎಂಗಸ್ರುಗಳು ನೆಟ್ಗೆ ಮನೆ ಕೆಲ್ಸ ಮಾಡ್ಕೊಂಡಿದ್ರೆ, ಮೈಯೂ ಬರಾಕಿಲ್ಲ, ಒಟ್ಟೇನೂ ಉಬ್ಬರಿಸಾಕಿಲ್ಲ; ಅದ್ಬುಟ್‌ಬುಟ್ಟು ಮೂರೊತ್ತು ಟೀವಿ ಮುಂದೆ ಕುತ್ಕೊಂಡು ಕಿತ್ತೋಗಿರೋ, ಕಣ್ಣೀರ್‌ತರ್ಸೋ ಧಾರ್ವಾಹಿಗಳ್ನ ನೋಡ್ಕೋತಾ, ಮಂಗ್ನಾಟದ 'ಸೋ'ಗಳಿಗೆ ಹಲ್ಬಿಡ್ತಾ, ಕರ್ಚೀಫ ಬಾಯಿಗ್ಮಡೀಕೊಂಡು ಮುಸಿಮುಸಿ ಅಂತಾ ನಗ್ತಾ, ಆಗಾಗ ಕರಿದ ಬೋಂಡಾನೋ, ಬಜ್ಜೀನೋ, ಚಿಪ್ಸನ್ನೋ ಮೆಯ್ತಾಯಿದ್ರೆ ಮೈಬರ್ದೇ ಇನ್ನೇನಾಯ್ತದೆ? ಡುಂ ಅಂತಾ ಗಣಪತಿ ಒಟ್ಟೇ ಆಯ್ತದೆ. ಆಗ ಮೇಲುಸ್ರು ಬಿಟ್ಕೊಂಡು ಡಾಕ್ಟರ್ತಾವ ಓದ್ರೆ, ಆವಯ್ಯೇಳೋದು .. ದಿನಾ ಎಲ್ಡ್ಮೂರ್ ಕಿ.ಮೀ ವಾಕಿಂಗ್ ಮಾಡೀ ಅಂತಾನೆ. ನಂಗಾಗಿದ್ದೂ ಅಂಗೇಯಾ. ಮೂರೊತ್ತೂ ಕೂತ್ಕೊಂಡು ಆಳೂಮೂಳೂ ತಿಂತಿದ್ನ್ಯಾ? ನಂಗೇ ಗೊತ್ತಿಲ್ದಂಗೆ ನನ್ಹೊಟ್ಟೆ ಬೆಳೀಕ್ಸುರುಮಾಡ್ತು. ಅದೊಂದಿನ ಯಾಕೋ ಮೈಕೈಯೆಲ್ಲಾ ಜೋಮಿಡ್ದಂಗಾತು. ಸ್ನೇತ್ರೆಲ್ಲ, ಒಂತರಾ ಪೆಸಲ್ಲಾಗಿ ನನ್ನನ್ನೇ ತಿರುಗಿ ನೋಡೋಕ್ಸುರುಮಾಡ್ದ್ರು. ಕನ್ಡಿ ನೋಡ್ದ್ರೆ ಯಾವನೋ ಡುಮ್ಮ, ಗಢವಾ ನನ್ನೇ ತಿರುಗಿ ನೋಡ್ತಾವ್ನೆ! ಆಮೇಕೆ ಗೊತ್ತಾತು, ಆ ಜೋಬದ್ರ ಕಳೆ ಮುಖ ಒತ್ಕೊಂಡು, ನಿಂತಿದ್ದ ಒಟ್ಟೆಡುಮ್ಮ, ಬೇರೆ ಯಾರೂ ಅಲ್ಲ, ನಾನೇಯಾ ಅಂತ. ಕಂಡವ್ರು ಸ್ನೇತ್ರು ಏಳಿದ್ರು, ಲೋಮಗಾ, ಒಸಿ ನಿಗಾ ಮಡ್ಗಬೇಕ್ಲಾ.

ನನ್ಕತೇನೇ ಇಂಗೆ. ಕೆಲ್ಸಕ್ಕೆ ಸೇರಿದ್ದೊಸದ್ರಲ್ಲಿ ತೂಕ ನೋಡ್ಸದ್ರೆ ಅಂಡರ್ ವೇಯ್ಟ್; ಮದ್ವೇಗ್ಮುಂಚೆ ತೂಕಾನೂ ಅಷ್ಟೇಯಾ ಬರೀ 40ಕೆಜಿ; ಇನ್ಸುರೆನ್ಸ್ ಕಂಪನೀವ್ನು ಆಕ್ದ ಪೆನಾಲ್ಟಿ ಪ್ರೀಮಿಯಮ್ಮು! ಆದ್ರೆ ಮದ್ವೆ ಆಗಿ ಆರು ತಿಂಗಳಲ್ಲಿ ತೂಕ ಅತ್ರತ್ರ ಡಬ್ಬಲ್ ಅಂದ್ರೆ ಎಪ್ಪತ್ತೈದು; ಇದು ಓವರ್‌ವೇಟು. ಇನ್ಸುರೆನ್ಸ್ ಪಾಲಿಸಿ ತಂಗೊಂಡ್ರೆ ಈಗ್ಲೂ ಪೆನಾಲ್ಟಿ ಪ್ರೀಮಿಯಮ್ಮು, ಎಲ್ಲೈಸಿ ಮ್ಯಾನೇಜರ್ ತೂಕದ ಮೆಸೀನ್ ಇಡ್ಕಂಡೇ ನನ್ನಿಸ್ಕೂಲಿಗೆ ಓಡ್ಬಂದ, ತೂಕ ಸರಿಯಾಗದಾ ಅಂತ ನೋಡಾಕೆ! ಅವನ್ಗೆ ಎದರ್ಕೆ ಯಾನಪ್ಪಾ ಅಂದ್ರೆ, ಇಂಗೆ ಆರೇ ತಿಂಗ್ಳಲ್ಲಿ ತೂಕ ಡಬ್ಬಲ್ಲಾದ್ರೆ, ಮುಂದ್ಕೆ ಎಂಗೆ? ಇವನ್ಗೇನಾರ ದೊಡ್ಕಾಯ್ಲೆ ಅಂಟ್ಕೊಂಡದಾ ಅನ್ನೋದು ಅವ್ನ ಚಿಂತೆ. ಮದ್ವೇಗ್ ಮುಂಚೆ ಒಲಿಸಿದ ಅಂಗಿ ಟೈಟೋ ಟೈಟು. ನಂಗೂ ಒಂಥರಾ ಕುಸಿ, ದಪ್ಪಾನೇ ಆಗೊಲ್ಲ ಅಂದ್ಕೊಂಡವ್ನಿಗೂ ಮೈ ಬತ್ತು ಅನ್ನೋ ಸಂತೋಸ.

ಈಗ ತೂಕ ನನಗೇ ಏಳ್ಗೆ ಕಷ್ಟ ಆಗದೆ. ಮೊಕ ಇಳೀಬಿದ್ದದೆ, ಕಣ್ಣುಗ್ಳು ಗುಳಿ ಬಿದ್ದವೆ. ಗಂಟಲ್‌ನರ ಉಬ್ಬಿಕೊಂಡದೆ! ನನ್ನನ್ನ್ ಪರೀಕ್ಷೆ ಮಾಡಿದ ಡಾಕ್ತ್ರು, ನಿನ್ದು ಒಂದಾ, ಎರಡಾ ಎಲ್ಲ ತಂಗೊಂಬಾ ಅಂತೇಳ್ಕಳಿಸಿದಾ. ಗಡಿಗೇಲಿ ಎರಡಾ ತಗೊಂಡೋದ ನನ್ತಾತನ್‌ತರಾ ಅಲ್ಲ, ಸಲ್ಪ ಸಲ್ಪಾನೇ ತಗೊಂಡೋದೇ ಅನ್ನಿ. ಅದನ್ನೆಲ್ಲಾ ಪರೀಕ್ಸೆ ಮಾಡ್ದ್ಮೇಲೆ, ರಕ್ತಾ ಅಂದ. ಅದನ್ನೂ ಸಿರಿಂಜಿನಲ್ಲಿ ಬಸ್ಕೊಂಡು ಮೂರು ದಿನಾ ಬಿಟ್ಟು ಅಂತ ಕಳ್ಸಿದಾ ಮನೇಗೆ. ಮೂರ್ದಿನಾ ಯಾಕೆ, ವಾರಾನೇ ಬುಟ್ಕೊಂಡು ಬರ್ತೀನಿ, ಸರ್ಯಾಗಿ ನೋಡೇಳಿ ಅನ್ಬುಟ್ಟು ಬಂದಿದ್ದೆ. ವಾರ ಕಳ್ಕೊಂಡು ಆ ಡಾಕ್ಟ್ರನ್ನ ನೋಡೋಕೆ ಓಗಿದ್ದೆ. ರಿಪೋರ್ಟ್ ಕೈಗಿಟ್ಟು 'ಸುಗರು' ಅಂದ. ಗೊತ್ತಾಗ್ನಿಲ್ಲ ಅಂದೆ, ಸಕ್ಕರೆ ಕಾಯ್ಲೆ ಅಂದ. ನಂಗೇ ಆಶ್ಚರ್ಯ! ನಾನ್ ಎಚ್ಚು ಇಷ್ಟಪಟ್ಟು ತಿಂತಾಯಿದ್ದದ್ದು ಖಾರ ತಿಂಡಿ, ನನ್ನೆಡ್ತಿ ತಿಂತಿದ್ದದ್ದು ಸೀ; ಆದ್ರೆ ಸೀರೋಗ ಬಡ್ಕೊಂಡಿರೋದು ನನ್ಗೆ!! ಅದೂ ವಾಸ್ಯಾಗ್ದೇಯಿರೋ ಕಾಯ್ಲೇ; ಇನ್ಮುಂದ್ಕೆ ಅನ್ನ ಇಲ್ಲ, ಸೀ ಇಲ್ಲ, ಸಪ್ಪೆ ಸಾರು, ರಾಗಿ ಮುದ್ದೆ. ಇಲ್ಲಾ ಇಲ್ಲಾ ನನ್ಕೈಯಲ್ಲಾಗಾಕಿಲ್ಲ ಈ ಡಯಟ್ಟು, ಬಾಯ್ಕಟ್ಟು ಎಲ್ಲ. ಮಾಸ್ಟರ್ ಹಿರಣ್ಣಯ್ಯ ಹಿಂದೆ ನಾಟ್ಕದಲ್ಲಿ ಏಳಿದ್ದು ನೆಪ್ಪಾಯ್ತು:" ಮೊದ್ಲು ಅರ್ಧ ಗುಳಿಗೆ, ಆಮೇಲೆ ಪೂರ್ತಿ ಗುಳಿಗೆ, ಇನ್ನೂ ಮುಂದ್ಕೆ ಇನ್ಸುಲಿನ್ ಇಂಜೆಕ್ಸನ್ನು, ಜೀವ ಇರೋವರ್ಗೂ;ಅಲ್ಲಿಂದ್ಮುಂದ್ಕೆ ಗುಳಿಗೇನೆ ಟಿಫನ್ನು, ಊಟ ಎಲ್ಲ". ಎಂತಾ ಕಾಯ್ಲೆ ಅಮರ್ಕೊಂಡ್ತಪ್ಪಾ ನಂಗೆ ಸಿವನೇ ಅಂತ ತಲೇ ಮೇಗೆ ಕೈ ಒತ್ಕಂಡೆ. ಆಗ ಡಾಕ್ಟರ್ ಏಳಿದ್ದು, ಇದೆಲ್ಲದರ ಜೊತೆಗೆ ನೀವು ಮಾಡ್ಲೇಬೇಕಾದ್ದು ಇನ್ನೊಂದದೆ, ಅದೇ ವಾಕಿಂಗು. ಹೀಗೆ ಸುರುವಾಯಿತು ನನ್ನ ವಾಕಿಂಗು. ದಿನಾ ಬೆಳಿಗ್ಗೇನೇ ಏಳೋದೂ,ಏಳೋದಲ್ಲಾ, ಏಳೋದನ್ನ ಅಭ್ಯಾಸ ಮಾಡ್ಕೋಳ್ಳೋದು ಮೊದಲನೇ ಕೆಲ್ಸಾ. ನಾನೂ ಈ ಹಿಂದೆ ಬೇಗ ಏಳ್ತಿದ್ದೆ. ಆದ್ರೆ ಮಗ್ಗಲು ಬದಲ್ಸಿ ಮತ್ತೆ ಮಲಕ್ಕೊಳ್ತಿದ್ದೆ ಅಷ್ಟೆ. ಚಡ್ಡಿ ಆಕ್ಕೊಂಡು ಓಡಿದ್ರೆ ಒಪ್ಕೋಳೋಷ್ಟು ಮಂದಿಯಲ್ಲ ನಮ್ಮೂರವ್ರು. ಅದಕ್ಕಾಗಿ ಓಡೋಕ್ಕೆ ಅಂತ ಟ್ರ್ಯಾಕ್ಸೂಟ್ (Track suit) ಕೊಂಡ್ಕೋಬೇಕು. ಅಮೇಲೆ ಅದಕ್ಕೊಪ್ಪೋ ದಪ್ಪೂಸು; ತಲೇಗೆ ಮಂಕಿಕ್ಯಾಪು, ಕೈಗೆ ಗವಸು. ಕಾಲ್ಗೆ ಸಾಕ್ಸು ಇಂಗೇ ಅತ್ತಾರು ಒಂದಿಸ್ಕೋಬೇಕಾಯ್ತು. ವಾಕಿಂಗ್ ಅಂದ್ರೆ ಜೊತೇಗೊಬ್ಬ ಇದ್ರೆ ಚೆಂದ ಅನ್ನಿಸ್ತು. ಆದ್ರೆ ಡಾಗುಟ್ರು ಮೊದ್ಲೇ ಎಚ್ಚರಿಸಿದ್ರು, ಅರಟೆ ಒಡ್ಕೊಂಡು ಕಾಲೆಳ್ಕೊಂಡು ಮಾಡೋದು ವಾಕಿಂಗ್ ಅಲ್ಲ.ಅದ್ರಿಂದ ಪ್ರಯೋಜ್ನಾನೂ ಇರೊಲ್ಲ. ವಾಕಿಂಗ್ ಅಂದ್ರೆ ಬ್ರಿಸ್ಕ್ ವಾಕಿಂಗ್, ಜಾಗಿಂಗ್‌ಗಿಂತ ಸ್ವಲ್ಪ ಕಡಿಮೆ ಸ್ಪೀಡು ಇರ್ಬೇಕು ಅಂತ. ಅಂಗಾಗಿ ನನ್ಗೆ ಸರಿ ಒಂದೋ ಮೇಟಗೆ (Mate) ಉಡುಕಾಟ. ಬೆಸ್ಟ್ ಅಂತ ಎಂಡತಿಯನ್ನೇ

ಎಬ್ಬಿಸಿದೆ. ಒಂದೇ ಜಿನಕ್ಕೆ ಯಕಾಸ! ಯಾಕಂದರೆ ಸ್ಪೀಡ್ ಯತ್ವಾಸ. ನಾನ್ ಅತ್ ಎಜ್ಜೆ ಮಡಗಿದ್ರೆ ನನ್ನೆಂಡ್ತೀದು ಎರಡೆಜ್ಜೆ. ಜೋಡಿ ಇದಕ್ಕೆ ಸರಿ ಓಗೊಲ್ಲ ಅಂತ ಅವಳ್ನ ಬಿಟ್ಟೆ. ಬೇರೇ ಕಡೆ ಕಣ್ಣಾಯ್ತಿದೆ. ಸಿಕ್ಕ್ದ,ಹಿಂದಿನ್ ಬೀದಿ ರಾಮಣ್ಣ. ಸ್ವಲ್ಪ ಕಾಲೈಬಾದ್ರೂ ನಡಿಯೋದ್ರಲ್ಲಿ, ಅದ್ರಲ್ಲೂ ವಾಕಿಂಗ್ನಲ್ಲಿ ಭಾರೀ ಫಾಸ್ಟು! ನಾನೂ ಫಾಸ್ಟು, ಅವನೂ ಫಾಸ್ಟು, ಒಟ್ನಲ್ಲಿ ನಮ್ಜೋಡಿ ನೋಡ್ದೋರೆಲ್ಲ, ತಮ್ಮತಮ್ಮಲ್ಲೇ ಮಾತಾಡ್ಕೋತಾಯಿದ್ದದ್ದು 'ನಡದ್ರೆ ಅವರಂಗೆ ನಡೀಬೇಕು, ಅದಪ್ಪಾ ನಿಜವಾದ ವಾಕಿಂಗು.' ಅದೇನ್ ಕಣ್ಣ್‌ಸ್ರಾತೋ ನಾಕಾಣೆ, ನಮ್ ಜೋಡಿ ನಡೆದದ್ದು ಸ್ವಲ್ಪ ದಿನ ಮಾತ್ರ, ಯಾಕಂದ್ರೆ ಅವನಿಗೆ ಟ್ರಾನ್ಸಫರ್ ಬೇರೆ ಊರಿಗೆ. ಬೆಳಗಾಗೆದ್ದು ರೈಲು ಹಿಡಿಯೋಕೆ ಓಡೋದ್ಕೆ ಮೀಸಲಾತು ಅವನ ವಾಕಿಂಗು, ನಾನಾದೆ ಮತ್ತೆ ಸಿಂಗಲ್ಲು.

ವಾಕಿಂಗ್ ಓದ್ರೆ ಎಲ್ಲ ಕೇಳೊವ್ರೆ ನಿಂಮೇಟೆಲ್ಲಿ, ನನ್ಗೂ ಏಳಿ ಏಳಿ ಸಾಕಾಯ್ತು. ದಾರಿ ಬದ್ಲಾಯಿಸಿದೆ. ಈಗ ನಾನು ಓಗೋಕ್ತುರು ಅಚ್ಚಂಡಿದ್ದು ಗದ್ದೆಮಧ್ಯ, ಜನವೂ ಕಡಿಮೆ, ವಾಹನ ಸಂಚಾರವೂ ಕಡಿಮೆ ಇರೋ ತಾವ. ಒಳ್ಳೇ ಗಾಳಿ, ಕಾಲುವೆ ಬದಿ ರಸ್ತೆ, ಪಕ್ಕದಲ್ಲಿ ದಾರಿಗುಂಟ ಮೈಕಗಳು ಅದೇ ಮೈಲಿಕಲ್ಲುಗಳು, ಸಾರಿ, ಈಗೆಲ್ಲಾ ಕಿ.ಮೀ ಕಲ್ಲುಗಳು. ಎಷ್ಟು ದೂರ ಓಗಿದ್ದೀನಿ ಅಂತ ತಿಳ್ಕೊಳೋಕೆ ಸುಲಭ ಆಯ್ತು. ದಿನಾ ಎರಡು ಕಿಮೀ ಓಗೋದು, ಮತ್ತೆ ವಾಪಸು ಬರೋದು, ಅಂದ್ರೆ ದಿನಕ್ಕೆ ನಾಕು ಕಿಲೋಮೀಟರು, ಮೆಷರ್ಡ್ ವಾಕಿಂಗು! ತಗೋತಿದ್ ಟೈಂ ನಲ್ವತ್ತು ನಿಮಿಷಗಳು ಮಾತ್ರ, ನಾಕಾರು ತಿಂಗಳು ನನ್ನ ಈ ಮೆಷರ್ಡ್ ವಾಕಿಂಗು ಚೆನ್ನಾಗೇ ನಡೀತು. ಮೇನ್ ರಸ್ತೆಯಲ್ಲಿ ನಡೆಯೋವಾಗ ಮಳೆಗಾಲದಲ್ಲಿ ಛತ್ರಿ ಇಡಕೊಂಡಾದ್ರೂ ವಾಕಿಂಗ್ ಮಾಡ್ತಾ ಇದ್ದೆವು. ಈಗ ನಾನು ಓಡಾಡ್ತಾ ಇದ್ದ ರಸ್ತೆ ಗದ್ದೆ ತೆವರಿ. ಎತ್ತಿನ ಗಾಡಿ ಓಡಾಡಿದ್ದ ಮಣ್ಣು ರಸ್ತೇಲೂ ತೆವರಿಗಳಾಗಿದ್ದವು. ಮಳೆಗಾಲದಲ್ಲಿ ಕಾಲು ಮುಂದಕ್ಕಿಟ್ರೆ, ಪಕ್ಕಕ್ಕೆಳ್ಕೋದು, ಸ್ಪೀಡ್ ಹೇಳೋಕೆ ಆಗೊಲ್ಲ, ಜಾರ್ದೇ ನಡ್ಕೋದು, ಬೀಳದೇ ತಪ್ಪಿಸ್ಕೋಳ್ಳೋದೇ ಮುಖ್ಯ ಆಯ್ತು, ಕಾಲುವೆಗಳಲ್ಲಿಯೂ ವಾಯಿದೆನೀರು ಬಿಟ್ಟಿತ್ತು, ನೀರಾವರಿ ಇಲಾಖೆ.

ಅಲ್ಲೊಂದು ಕಡೆ ನೀರಿನಲ್ಲಿ ಅದೇನೋ ಉದ್ದನೆಯ ಕೋಲು ತೇಲಿಬಂದಂತಾಯಿತು. ಏನೆಂದು ಆ ಕಡೆ ತಿರುಗಿದೆ ಅಷ್ಟೆ, ಕಾಲು ಮಾರುದ್ದ ಜಾರಿತು. ಅದೇನೋ ಮೊಣಕಾಲ ಒಳಗಡೆ ಸದ್ದಾದ ಹಾಗಾಯಿತು. ಗೊತ್ತಾಗಲಿಲ್ಲ, ಹ್ಯಾಗೋ ಜಾರದೇ ಸಾವರಿಸಿಕೊಂಡು ನಿಂತುಬಿಟ್ಟೆ. ವೀರ ಹನುಮಾನ್ ಪೋಸಿನಲ್ಲಿ! ಸ್ವಲ್ಪ ಹೊತ್ತಾದ ಮೇಲೆ ಕಾಲು ನೋವೆನಿಸಿದರೂ. ಏನೂ ಆಗದವನಂತೆ.

ಕಾಲೆಳೆದುಕೊಂಡು ಮನೆ ತಲುಪಿದೆ. ಬಚ್ಚಲುಸೇರಿ ಸ್ನಾನ ಮುಗಿಸಿ ಶಾಲೆಕಡೆ ಹೊರಟೆ. ಮಧ್ಯಾಹ್ನದ ವೇಳೆಗೆ ನೋವು ಹೆಚ್ಚಾದಂತೆನಿಸಿತು. ನನ್ನ ಸ್ನೇಹಿತನೊಡನೆ, ಡಾಕ್ಟರ್ ಹುಡುಕಿಹೊರಟೆ.

ಸರ್ಕಾರೀ ಡ್ಯೂಟಿ ಅರ್ಧ ಮುಗಿಸಿ, ಮಧ್ಯಾಹ್ನವೇ ಖಾಸಗೀ ಡ್ಯೂಟಿಗೆ ಬಂದ ಮೂಳೆ ಡಾಕ್ಟರ್ಗೆ ನನ್ನ ಮೊಣಕಾಲು ತೋರಿದೆ.ನನ್ನ ಕಾಲು ನೋಡುತ್ತಿದ್ದಂತೆಯೇ, ಆ ಡಾಕ್ಟರ್, ಪಕ್ಕದಲ್ಲಿದ್ದ ಅಸಿಸ್ಟೆಂಟನಿಗೆ "ಎಚ್‌ಎಲ್‌ಕ್ರ್ಯಾಕು" ಅಂದ. ಬೈದನೇನೋ ಅಂದುಕೊಂಡೆ. ಮೆಲ್ಲಗೆ ಮಂಚದ ಮೇಲ್ಹತ್ತಿ, ಅಂದವನೇ ಮಂಡೀವರೆಗೆ ಅದೆಂತದೋ ಬಿಳೀ ಪುಡಿ ಒದ್ದೆಮಾಡಿ ಕಲಸಿ ಬಳಿದ. ಸ್ವಲ್ಪ ಹೊತ್ತಿನಲ್ಲೇ ನನಗೆ ಕಾಲಮೇಲೆ ದಪ್ಪ ದಢೀ ಇಟ್ಟಂಗಾಯಿತು. ಒಂದಷ್ಟು ಮಾತ್ರೆ ಬರೆದುಕೊಟ್ಟು ಮಧ್ಯಾನದ ಸಂಪಾದನೆ ಮಾಡಿಕೊಂಡು ಸರ್ಕಾರಿ ಡ್ಯೂಟಿಗೆ ಓಡಿದ. ಆಮೇಲೆ ಅವನ ಅಸಿಸ್ಟಂಟ್ ಹೇಳಿದ್ದು, ನನ್ನ ಮೊಣಕಾಲಿನಲ್ಲಿ ಅಗಿರೋದು "ಹೇರ್ ಲೈನ್ ಕ್ರ್ಯಾಕ್ ಫ್ರಾಕ್ಚರ್" ಅಂತ. ಅದೇ "ಹೆಚ್ಚೆಲ್ ಕ್ರ್ಯಾಕು"! ಅಲ್ಲಿಂದಲೇ ಶಾಲೆಗೆ ಫೋನ್ ಮಾಡಿಸಿ ಮತ್ತೊಬ್ಬರನ್ನ ನನ್ನ ಸ್ಕೂಟರ್ ಓಡಿಸಿಕೊಂಡು ಬರೋಕೆ, ಕರೆಸಿಕೊಂಡು, ಮೊದಲು ಜೊತೆ ಬಂದವನ ಬೆನ್ನುಹತ್ತಿ ಮನೆ ಸೇರಿಕೊಂಡೆ ಅನ್ನಿ. ನನ್ನನ್ನ ನೋಡಿದ ನನ್ಹೆಂಡ್ರು ಫುಲ್ ಗಾಬ್ರಿ; ಇದೇನಪ್ಪಾ, ಬೆಳಿಗ್ಗೆ ಅಷ್ಟು ಚೆನ್ನಾಗಿ ಸ್ಕೂಟರ್ ತಗೊಂಡೋದ ನನ್ನಗಂಡಾ, ಹಿಂಗೆ ಕಾಲ್ಗೆಲ್ಲ ಪ್ಲಾಸ್ಟರ್ ಆಕ್ಕೊಂಡು ಬಂದವ್ನೆ ಅಂತ.

'ಬಡ್ಕೊಂಡ್ರೇ ಕೇಳ್ತೀರಾ ಆ ಸುಡುಗಾಡು ಕಾಲುವೆ ರಸ್ತೇಲಿ ವಾಕಿಂಗ್ ಹೋಗ್ಬೇಡೀ ಅಂದ್ರೆ, ಈಗ ಅನುಭವಿಸಿ' ಅಂತಾ ಯದ್ವಾ ತದ್ವಾ ಉಗಿದ್ಲು. ಆದ್ರೂ ನನ್ನ ಬಗ್ಗೆ ಕೇರ್ ತಗೊಂಡಳು. ಭಾನುವಾರ ಮತ್ತು ಸರ್ಕಾರಿ ರಜಾದಿನಗಳನ್ನು ಹೊರತು ಪಡಿಸಿದರೆ, ಬೇರೆ ರಜಾ ಇರುವುದಿಲ್ಲ ಶಾಲೆಯ ಮುಖ್ಯಸ್ಥರಿಗೆ. ನಾನೂ ಸಹಾ ಪ್ರತಿದಿನ ಶಾಲೆಗೆ ಹೋಗಲೇಬೇಕಾಗಿದ್ದುದರಿಂದ, ನನ್ನ ಗಳಿಕೆಯ ರಜೆ ಬಳಸಿಕೊಂಡು, ಮತ್ತೊಬ್ಬರನ್ನು ನನ್ನ ಜಾಗದಲ್ಲಿ ಪ್ರತಿಷ್ಠಾಪಿಸಲು ಒಪ್ಪಿಸಿ, ಆಡಳಿತ ಮಂಡಳಿಯ ಒಪ್ಪಿಗೆ ಪಡೆದು, ರಜೆ ಬಳಸಬೇಕಾಗಿತ್ತು. ಅಂತೂ ಹಾಗೆ ಮಾಡಿ, ಮನೆಯಲ್ಲಿ ಕೂತೆ. ಇದರಿಂದ ಯಾರಿಗೆ ಬಿಡುವು ಸಿಕ್ಕಂತಾಯಿತು? ನನಗೋ, ನನ್ನಹೆಂಡತಿಗೋ? ಮುಂದೆ ನೋಡಿ.

ಶಾಲೆಗೆ ಹೋಗದೇ ಇರುವುದರಿಂದ, ಕುತೂಹಲಗೊಂಡ ಸಹೋದ್ಯೋಗಿಗಳು, ಬೆಳಿಗ್ಗೆ ಮತ್ತು ಸಂಜೆ ಮನೆಗೆ ಭೇಟಿನೀಡಲು ಪ್ರಾರಂಭಿಸಿದರು.

ಬಂದ ಪ್ರತಿಯೊಬ್ಬರೊಂದಿಗೂ, ಇದು ಹೇಗೆ ಆಯಿತು ಎಂಬ ಬಗ್ಗೆ ಒಂದು ಮಿನಿ ಭಾಷಣ ನೀಡಬೇಕಾಗಿದ್ದುದು ನನಗೆ. ಅದರಜೊತೆಗೆ ಬಂದವರಿಗೆ ಸಾಧ್ಯವಾದ ಸತ್ಕಾರ ನೀಡುವುದು ನನ್ನ ಹೆಂಡತಿಯ ನಿತ್ಯಕರ್ಮ ಆಯಿತು. ನಾವು ಈ ಹೊಸಮನೆಗೆ ಬಂದಗಳಿಗೆಯಲ್ಲಿ ಮನೆ ಕಾಂಪೌಂಡ್ ಒಳಗೆ ಜಾಗ ಇಲ್ಲದಿದ್ದುದರಿಂದ, ಮನೆ ಹೊರಗಡೆ ಒಂದು ಮಾವಿನ ಬೀಜ ಬಿತ್ತಿದ್ದೆವು. ಅದು ಹಲವಾರು ವರ್ಷಗಳ ಬಳಿಕ ಒಂದು ದೊಡ್ಡ ಫಲನೀಡುವ ಮರವಾಗಿ ಬೆಳೆದಿತ್ತು.. ಅದರ ಹಣ್ಣುಗಳೋ, ಸಕ್ಕರೆಗಿಂತ ಸಿಹಿ, ಒಮ್ಮೆ ತಿಂದರೆ ಮತ್ತೊಮ್ಮೆ ತಿನ್ನಲು ಹಾತೊರೆಯುತ್ತಿದ್ದರು ಮಂದಿ. ಒಂದೊಂದು ಹಣ್ಣೂ ಸುಮಾರು ಒಂದೂವರೆಯಿಂದ ಎರಡು ಕೇಜಿ ತೂಗುತ್ತಿತ್ತು. ಸರಿ, ಆ ಸಮಯದಲ್ಲಿ ನಮ್ಮ ಮರದಲ್ಲಿ ಬಂಪರ್ ಬೆಳೆ ಬಂದಿತ್ತು. ಆದುದರಿಂದ ಬಂದವರಿಗೆಲ್ಲಾ ಕೊನೆಗೆ ಎರಡೋ ಮೂರೋ ಮಾವಿನ ಹಣ್ಣನ್ನು ಕೊಟ್ಟು ಕಳುಹಿಸುತ್ತಿದೆವು.. 'ಇದು ಯಾವ ಜಾತಿ?' ಮಾಮೂಲಿ ಪ್ರಶ್ನೆ. ಇದಕ್ಕೆ ನಾನು ಇಟ್ಟಹೆಸರು 'ಪಲ್ಲವಿಕಾ'! ಅದೇ ನನ್ನ ಮಗಳ ಹೆಸರು ಇಟ್ಟಿದ್ದೆ ಆ ಹಣ್ಣಿಗೆ.

ಮೊದಲೇ ಈ ಹೆಚ್‌ಎಲ್‌ಕ್ರ್ಯಾಕಿನಿಂದಾಗಿ ವಾಕಿಂಗಿಗೆ ಕತ್ತರಿ ಬಿದ್ದಿತ್ತು. ಜೊತೆಗೆ ಮನೆಗೆ ಬಂದ ಅತಿಥಿಗಳ ಸತ್ಕಾರದ ಜೊತೆಗೆ ನನಗೂ ಅದೇ ಸತ್ಕಾರ. ಪರಿಣಾಮ, ನನ್ನ ಶುಗರ್ ಲೆವೆಲ್ ಹಿಮಾಲಯ ಹತ್ತಲು ಓಡತೊಡಗಿತು. ಇದೇನು ರೋಗ ನಿಧಾನವೋ, ರೋಗುಲ್ಬಣ ಚಿಕಿತ್ಸೆಯೋ ತಿಳಿಯದಾಯಿತು. ರೀ  ಸ್ವಲ್ಪ ಒಳಗೆ ಬರ್ತೀರಾ, ಅಂತ ಒಳಕರೆದಳು. ನೋಡಿ, ನನಗೂ ಈ ಸತ್ಕಾರ ಮಾಡಿಮಾಡಿ ಸಾಕಾಗಿ ಹೋಗಿದೆ. ನೀವು ಮುಂದಿನವಾರದಿಂದ, ನಿಮ್ಮ ಶಾಲೆಗೆ ಹೋಗಲು ಪ್ರಯತ್ನಿಸಿ. ಆಟೋದಲ್ಲೇ ಹೋಗಿ, ದಯಮಾಡಿ ಮನೇಲಿರಬೇಡಿ ಅಂತ ಸ್ಟ್ರೀಟ್ ಆರ್ಡರ್ ಮಾಡಿದಳು .. ಶ್ರೀಮತಿ. ದೂಸ್ರಾ ಮಾತಾಡ್ದೇ, ದೂಸ್ರಾದಿನದಿಂದಲೇ ಕಾಲೆಳೆದುಕೊಂಡು ಶಾಲೆಗೆ ಹೊರಟೇ ಅನ್ನಿ.

## 59. ಆನೆ ಬಂತು ಆನೆ

ಕಾಡಿಗೆ ಬಂದ ಹೊಸತು. ಜೀವಂತ ಆನೆಗಳನ್ನು ನೋಡುವ ಹಂಬಲ. ಇವರ ಆಸೆ ನೆರವೇರಿಸುವಂತೆ ಒಮ್ಮೆ ಆನೆಗಳ ಒಂದು ಹಿಂಡು ನೀರು ಕುಡಿಯಲು ವಸತಿ ಶಾಲೆಯ ಹತ್ತಿರ ಹರಿಯುತ್ತಿದ್ದ ಝರಿಯ ಬಳಿ ಬಂದಿವೆಯೆಂದು ಸೋಲಿಗರಿಂದ ತಿಳಿದುಬಂತು. ಸರಿ ಶಾಲೆಯಲ್ಲಿ ತಂಗಿದ್ದ ಸೋಲಿಗ ಮಕ್ಕಳು, ಅಡಿಗೆಯವನು, ಅಪ್ಪ, ಅಮ್ಮ, ಅಣ್ಣಂದಿರು ತಂಗಿಯೊಡನೆ ಝರಿಯ ಹತ್ತಿರಕ್ಕೆ ಎಲ್ಲರೂ ದೌಡಾಯಿಸಿದೆವು. ಆನೆಗಳು ಗುಂಪುಗುಂಪಾಗಿ ನೀರುಕುಡಿದು, ನೀರೆರೆಚಿಕೊಂಡು ಮೈ ತಂಪಾಗಿಸಿಕೊಳ್ಳುತ್ತಿದ್ದವು. ನಮಗೋ ಖುಷಿಯೋ ಖುಷಿ. ಅದನ್ನು ಸಶಬ್ದವಾಗಿ ವ್ಯಕ್ತಪಡಿಸತೊಡಗಿದಾಗ ಆನೆಗಳ ಗಮನ ನಮ್ಮ ಕಡೆ ತಿರುಗಿತು. ಮೊದಲೇ ಆನೆಗಳ ಕಣ್ಣು ಕಿವಿ ಬಲು ಚುರುಕು. ನಮ್ಮ ಓಡಾಟದ, ಕಿರುಚಾಟದ ಸಪ್ಪಳ ಅದರ ಕಿವಿಗೆ ಅಪ್ಪಳಿಸಿದ್ದೇ ತಡ ಅವುಗಳ ಏಕಾಗ್ರತೆಗೆ ಭಂಗ ಬಂದಂತಾಯಿತು. ಹಿಂಡು ಮರಿಸಲಗವೊಂದು ನಮ್ಮ ಕಡೆ ತಿರುಗಿನಿಂತಿತು. ಕೂಡಲೆ ಕಾಡುವಾಸಿಗಳಾಗಿದ್ದ, ಕಾಡುಪ್ರಾಣಿಗಳ ವರ್ತನೆ ಬಗೆಗೆ ಚೆನ್ನಾಗಿ ತಿಳಿದಿದ್ದ ಸೋಲಿಗರು "ಓಡಿ ಬುದ್ದೀ, ಓಡಿ; ಆ ಆನೆ ನಮ್ಮನ್ನು ಅಟ್ಟಿಸಿಕೊಂಡು ಬರುತ್ತೆ" ಎಂದು ಕೂಗಿಕೊಂಡು ಒಬ್ಬೊಬ್ಬರೂ ಒಂದೊಂದು ದಿಕ್ಕಿಗೆ ಓಡಿದರು. ಆನೆಯೂ ನಮ್ಮತ್ತ ದಾಪುಗಾಲು ಹಾಕಲು ಆರಂಭಿಸಿತು. ಚಿಕ್ಕ ಹುಡುಗಿಯರಾಗಿದ್ದರಿಂದ ನಾವು ಝರಿಯ ಕೆಳ ಅಂಚಿಗೆ ಹೋಗಿರಲಿಲ್ಲವಾದುದರಿಂದ ಬೇಗ ಓಡಿಹೋಗಿ ಮನೆಬೇಲಿ ಸೇರಿಕೊಂಡೆವು. ತಂದೆ ಮತ್ತು ಹಿರಿಯಣ್ಣ ಕೆಳಗಿನಿಂದ ಓಡಿಬರಬೇಕಾಗಿತ್ತು. ಕಿರಿಯಣ್ಣ ಮತ್ತು ಉಳಿದ ಸೋಲಿಗ

ಹೈಕಳು ಕಾಡಿನಲ್ಲಿ ಮಾಯವಾದರು. ಹಿರಿಯಣ್ಣ ಅಲ್ಲೇ ಇದ್ದ ಚಿಕ್ಕ ಮರವೊಂದರ ಬುಡದಲ್ಲಿ ಅಡಗಿ ಕುಳಿತ. ನಮ್ಮಪ್ಪ ಬಿಳಿ ಜುಬ್ಬ ಮತ್ತು ಪಂಚೆ ಉಟ್ಟಿದ್ದುದರಿಂದ ಆನೆಯ ದೃಷ್ಟಿ ಅವರ ಮೇಲೆ ನೆಟ್ಟಿತ್ತು. ಅವಿತಿದ್ದ ಸೋಲಿಗ ಹುಡುಗರು "ಬುದ್ಧೀ, ನಿಮ್ಮ ಬಟ್ಟೆ ಕಿತ್ತೆಸೆಯಿರಿ" ಎಂದು ಕೂಗಿದರು. ನಮ್ಮಪ್ಪ ಪ್ರಯತ್ನಪಟ್ಟರೂ, ಕಚ್ಚೆಪಂಚೆ, ಜುಬ್ಬ ತೆಗೆಯಲು ಆಗಲಿಲ್ಲ. ಹಾಗೂ ಹೀಗೂ ಮನೆಬೇಲಿಬಳಿ ಬರುವವೇಳೆಗೆ ನಮ್ಮ ನಾಯಿಗಳು ರಸ್ತೆಗೆ ಬಂದು ಬಗುಳಲಾರಂಭಿಸಿದವು. ಆನೆ ನೋಟ ಅವುಗಳತ್ತ ತಿರುಗಿತು. ಬದುಕಿದೆಯಾ ಬಡಜೀವವೇ ಅಂತ ನಮ್ಮಪ್ಪ ಮನೆ ಸೇರಿದರು. ಆನೆ ನಾಯಿಗಳನ್ನು ಅಟ್ಟಿಸಿಕೊಂಡು ಹೋಯಿತು. ಅವು ಹೇಗೋ ಕಾಡೊಳಗೆ ತಪ್ಪಿಸಿಕೊಂಡು ಬದುಕಿದವು. ನಂತರ ಸೋಲಿಗರಿಂದ ತಿಳಿದು ಕೊಂಡಿದ್ದು, "ಹಾವು ಎದುರಾದಾಗ ನೆಟ್ಟಗೆ ಓಡಬೇಕು, ಆನೆ ಎದುರಾದಾಗ ಸೊಟ್ಟಗೆ ಓಡಬೇಕು " ಎಂಬುದು. ಕೊನೆಗೆ ಆನೆ ಕಣ್ಮರೆಯಾದ ಮೇಲೆಯೇ, ಉಳಿದವರು ಒಬ್ಬೊಬ್ಬರಾಗಿ ಮನೆ ಸೇರಿದುದು. ಅಂದಿನಿಂದ ಇಂದಿನವರೆಗೆ ಯಾವುದೇ ಕಾಡುಪ್ರಾಣಿಯನ್ನೂ ಅದರಲ್ಲೂ ಆನೆಯನ್ನು ಅದರ ಪರಿಸರದಲ್ಲಿ ನೋಡುವ ಸಾಹಸ ನಾವ್ಯಾರೂ ಮಾಡಲಿಲ್ಲ

## 60. ತಲೆ ಕೆಡ್ಸೋ ವಿಜ್ಞಾನಿಗಳು

ಮಾಡ್ರನ್ ಬ್ರೆಡ್ಡುಗಳ ಬಗ್ಗೆ ಕೇಳಿರಬೇಕಲ್ಲಾ ! ಅಂಗೇ ಈ ಮಾಡ್ರನ್ ಬ್ರಮ್ಮಗಳ ಬಗ್ಗೆ ಕೇಳಿದ್ದೀಯೇನ್ಲಾ ? ಆ ಬ್ರಮ್ಮ ಸೃಷ್ಟಿಮಾಡಿದ್ದು ನಮ್ಮಗಳನ್ನ ಅಂದ್ರೆ ನಮ್ಮ ಮಗಳನ್ನ ಮತ್ತು ನಮ್ಮನ್ನೂ, ನಮ್ಮ ಸುತ್ತಲ ಪ್ರಾಣಿಪಕ್ಷಿಕೀಟಗಳನ್ನ ಕೂಡಾ. ಆದ್ರೆ ನಮ್ಮ ವಿಜ್ಞಾನಿಗಳು ಇನ್ನೂ ಒಂದು ಎಜ್ಜೆ ಮುಂದೆ ಓಗಿ ಬ್ರಮ್ಮನ್ಗೇನೆ ಸವಾಲೆಸೆದಿದ್ದಾರೆ. ಅಗ್ಲೂರಾತ್ರಿ ಒಂದಲ್ಲ ಒಂದು ಒಸದನ್ನು ಸೃಷ್ಟಿಮಾಡ್ತಾರೆ. ಅಂಗೇ ನಮ್ತಲೇನೂ ಕೆಡಿಸ್ತಾರೆ. ಆಡುಗಳ್ತರಾ ಎಲ್ಲಾ ಪೀಲ್ಡಾಗೂ ಕೈಆಡಿಸ್ತಾರೆ. ಈ ವಿಜ್ಞಾನಿಗಳಲ್ಲಿ ಕೆಲವರು ಒಸೊಸ ಪ್ರಾಣಿತಳಿಗಳ್ನೇ ಉಟ್ಟಾಕ್ತಾಯಿದಾರೆ. ಜಪಾನಿನ ಕುಳ್ ಇಜ್ಞಾನಿ ಒಬ್ಬ ಪಾಕೀಟ್ ನಾಯಿ ಉಟ್ಟಾಕಿದ್ರೆ ಅಮೇರಿಕಾದವ್ನು 'ಜರ್ಮನ್' ಅಲ್ಲಲ್ಲಾ 'ಹರ್ಮನ್' ಅನ್ನೋ ಹೋರಿ ಸೃಷ್ಟಿ ಮಾಡಿ ದೊಡ್ಡ ಇಕ್ಕಟ್ಟಿಗೆ ಸಿಕ್ಕಾಕ್ಕೊಂಡವ್ನೆ. ಒಬ್ಬ ಸಿಂಹಾನೂ ಹುಲೀನೂ ಜೊತೆ ಆಕ್ಸಿ 'ಸಿಂಹುಲಿ' ಉಟ್ಟಾಕಿದ್ರೆ, ಇನ್ನೊಬ್ಬ ಹುಲೀನೂ ಸಿಂಹನೂ ಕೂಡಿಸಿ 'ಹುಸಿಂಹ' ಸೃಷ್ಟಿಸಿದ. ಅಂಗೇನೇ ಕತ್ತೇಗೆ ಕುದ್ರೆ ಕೊಡಿಸಿ 'ಮ್ಯೂಲ್' ಹುಟ್ಟಿಸಿದ; ನಾವ್ಯಾಕೆ ಇದನ್ನ ಕತ್ತೆ + ಕುದುರೆ = 'ಕದ್ರೆ' ಅನ್ನಬಾರದು ? ಇದು ಇನ್ನೂ ಮುಂದ್ವರ್ದ್ರೆ ಮೊಲ + ಇಲಿ = ಮೊಲಿ ಅಥ್ವಾ ಇಲಿ + ಮೊಲ = ಇಲ ಯಾಕೆ ಸೃಷ್ಟಿ ಆಗಬಾರದು? ಒಟ್ನಲ್ಲಿ ಈ ವಿಜ್ಞಾನಿಗಳು ಅಜ್ಞಾನಿ ಪ್ರಾಣಿಗಳ ಮೇಲೆ ಏನೇನೋ ಪ್ರಯೋಗಗಳನ್ನ ಮಾಡ್ತಾ ಇರಬೇಕಾದರೆ ಇನ್ನೊಂದು ಗುಂಪು ಗಿಡಮರಗಳ ಮೇಲೆ ಪ್ರಯೋಗ ಮಾಡ್ತಾ ಇದಾರಂತೆ !

ಅಲ್ಲಾ ಹಿಂದಿನವ್ರು ಗುಲಾಬಿ ಹೂ ಅಂದರೆ ಗುಲಾಬಿ ಬಣ್ಣದ ಹೂ ಅಂತ ಬಣ್ಣವನ್ನೇ ಗುರ್ತಿಡಿತಿದ್ದರು. ಈಗ ನೋಡಿ ಗುಲಾಬಿ ಅನ್ನೋದು ತನ್ನ ಬಣ್ಣಾನ ಕಳಕೊಂಡು ಬರೀ ಹೂವಾಗಿ ಉಳಿದಿದೆ. ಹಳದಿ ಗುಲಾಬಿ, ಕೆಂಪು ಗುಲಾಬಿ, ಗುಲಾಬಿ ಗುಲಾಬಿ, ಆರೆಂಜ್ ಗುಲಾಬಿ, ನೀಲಿ ಗುಲಾಬಿ ಇಂಗೆ ಬಣ್ಣಬಣ್ಣದ ಗುಲಾಬಿ ತಯಾರಿ ಮಾಡವ್ರೆ. ಹತ್ತಿ ಅಂದ್ರೆ ನಮ್ಗೆ ಗೊತ್ತಿರೋದು ಬಿಳಿ ಅರಳೆ ಅಲ್ವಾರಾ. ಆದರೆ ಈ ವಿಜ್ಞಾನಿಗಳು ಸೃಷ್ಟಿಮಾಡಿರೋದು ನೀಲಿ ಹತ್ತಿ. ನೀಲಿ ಕೋಸು ಇತ್ಯಾದಿ. ಇನ್ನೂ ಚೋಜಿಗ ಅಂದ್ರೆ ಬೀಜವಿಲ್ಲದ ಹಣ್ಣು! ಅದೇ ಸೀಡ್ಲೆಸ್ಸು, ಅದು ದ್ರಾಕ್ಷಿ ಆಗಿರಬೌದು, ಸೀಬೆಹಣ್ಣಾಗಿರಬೌದು. ಅದೇ ನಮ್ಮ ಸ್ಟಾರ್ ಜಗ್ಗೇಶ ಸಿನ್ಮಾ ಒಂದ್ರಲ್ಲಿ ನಮ್ಮಪ್ಪ 'ಸೀಡ್ಲೆಸ್ ಕಳ್ಳೇಕಾಯಿ ಬೆಳ್ದಾ' ಅಂತ ಜೋಕ್ ಮಾಡಿದ್ದೂ ಇದೆ. ಇನ್ನೂ ಒಂದು ಗುಂಪದೆ. ಅವ್ರಂತೂ ನಮ್ತಲೆ ಕೆಡ್ಸಿ ನಮ್ಮ ತಿಕ್ಕಲ್ ಮಾಡ್ತವೆ. ಒಬ್ಬೊಬ್ಬ ಇಜ್ಞಾನಿ ಒಂದೊಂದಪ ಒಂದೊಂದು ಹೇಳಿಕೆ ಬಿಸಾಕ್ತವೆ. ಅದರ ಪರಿಣಾಮಾ ಮಾತ್ರ ಬೋ ಜಾಸ್ತಿ. ಯಾವ್ದನ್ನು ನಂಬಬೇಕು ಯಾವ್ದನ್ನು ಬಿಡಬೇಕು ಗೊತ್ತಾಗ್ದೆ ತಲೆ ಚಿಟ್ಕೋಳ್ಳೋ ಅಂಗಾಯ್ತದೆ. ಒಬ್ಬ ಹಾಲ್ಕುಡೀರಿ ಅಂದ್ರೆ ಇನ್ನೊಬ್ಬ ಏನ್ಬೇಕಾದ್ರೂ ಕುಡೀರಿ, ಅದ್ರೆ ಹಾಲ್ಮಾತ್ರ ಕುಡೀಬೇಡಿ ಅಂತಾನೆ. ಗಾಂದಿತಾತ ಪಾನನಿರೋಧ ಎಂಡ ಕುಡೀಬೇಡಿ. ಅಂದ್ರೆ ದಿನಾ ಸ್ವಲ್ಪ ತಕ್ಕೊಂಡ್ರೆ ನಿಮ್ಗೆ ಹಾರ್ಟ್‌ಅಟ್ಯಾಕ್ ಆಗೋಕಿಲ್ಲ ಅನ್ನೋವ ಇನ್ನೊಬ್ಬ. ಒಬ್ಬ ಎಣ್ಣೆ ಕುಡೀಬೇಡಿ ಅಂದ್ರೆ ಇನ್ನೊಬ್ಬ ಬೆಣ್ಣೆ ತಿನ್ನಿ ಅಂತಾನೆ. ಅದ ಕುಡೀಬೇಡಿ, ಇದ ತಿನ್ನಬೇಡಿ ಅನೋವರ ಮಧ್ಯೆ ಒಬ್ಬ ವಾಸಿ, ನೀವ್ ತಿನ್ನಿ ಅಂದ; ಏನನ್ನ ಅಂದ್ಕೊಂಡ್ರಿ, 'ಬೂಸಾ' ಮತ್ತು 'ಕೆಸರನ್ನ' .. ಬೋ ರುಚಿಯಾಗಿರ್ತದಂತೆ! ನಮ್ಮಂತಾ ಅಜ್ಞಾನಿಗಳು ಏನ್ಮಾಡ್ಬೇಕಾ? ನೀವೇ ಹೇಳಿ? ಅದ್ನೇ ನಮ್ಮ ರಾಜೀವಪ್ಪ, ಅದೇ 'ಆಜಾದೀ ಬಚಾವೋ' ನ ರಾಜೀವ್ ದೀಕ್ಷಿತ್ ಭಾಸಣಾ ಮಾಡ್ತಾ ಏಳಿದ್ದು, 'ಈಗಿನ್ ಬಹುರಾಷ್ಟ್ರೀಯ ಕಂಪನಿಗಳು ನವ್ ಮಕ್ಕಳಿಗೆ ಕುಡಿಸ್ತಾಯಿರೋ 'ಹಾರ್ಲಿಕ್ಸ್' ಮತ್ತು 'ಬೂಸ್ಟ್' ಏನೂ ಅನ್ಕೊಂಡಿದ್ದೀರಿ, ಅದು 'ಎಣ್ಣೆತೆಗೆದಮೇಲೆ ಉಳಿಯೋ ಹಿಂಡಿ & ಕಾಳು ಬಿಡಿಸಿದ ಮೇಲೆ ದನಕ್ಕೆ ತಿನ್ನಿಸೋ ತೌಡು'! ಇದಕ್ಕೇನಂತೀರಿ? ಕದ್ದುಮುಚ್ಚಿ ಯಾಕೇಳೂದೂಂತ ಎಣ್ಣೆ ಕಂಪನಿಗಳು ಈಚೆಗೆ ಮಾರಾಟಕ್ಕೆ ಬಿಟ್ಟಿರೋ ಹೊಸ ಎಣ್ಣೆ 'ರೈಸ್ ಬ್ರ್ಯಾನ್ ಆಯಿಲ್' ಅದೇನೂ ಅನ್ಕೊಂಡಿದೀರಿ 'ಅಕ್ಕಿ ತೌಡಿನ ಎಣ್ಣೆ'!

## 61. ಆ ಮೂರು ಘಟನೆಗಳು:

ಅಜ್ಜಿಯನ್ನು ಕಂಡರೆ ಆ ಮೊಮ್ಮೊಕ್ಕಳಿಗೆ ಎಲ್ಲಿಲ್ಲದ ಪ್ರೀತಿ. ಅವರಿಗೆ ಇಳಿವಯಸ್ಸಾಗಿದ್ದರೂ, ತಮ್ಮ ಏರುವಯಸ್ಸಿನ ಸಮಕ್ಕೆ ಆಡಬೇಕೆಂಬುದು ಆ ಮೊಮ್ಮೊಕ್ಕಳ ಆಸೆ. ಅವರಿಗೇನು ಗೊತ್ತು ಅವರ ಸಮಕ್ಕೆ ಆಡಲು ನಮಗೆ ತಾಖತ್ತಿಲ್ಲದಿರುವುದು. ನಮಗೋ ಆದಷ್ಟೂ ಕೆಲಸ ಕಡಿಮೆಮಾಡಿಕೊಂಡು ಯಾವುದೇ ರಿಸ್ಕ್ ತೆಗೆದುಕೊಳ್ಳದೇ, ಕೈಕಾಲು ಮೂಳೆ ಮುರಿದುಕೊಳ್ಳದೇ ಉಳಿದ ಜೀವಿತವನ್ನು ಕಳೆಯಬೇಕೆಂಬುದು. ಈ ಚಿಕ್ಕ ಮಕ್ಕಳು ಎಲ್ಲೇ ಹೋಗಲೀ, ಓಡಿಕೊಂಡು ಹೋಗುವುದೇ ಅಭ್ಯಾಸ. ಅವರಂತೇ ನಾವು ಓಡಬೇಕೆನ್ನುವುದು ಅವರ ಬಯಕೆ. ಕೆಲವೊಮ್ಮೆ, ನಾವು ನಿಧಾನವಾಗಿ ಮುಂದೆ ಮುಂದೆ ಹೋಗುತ್ತಿದ್ದರೆ, ಹಿಂದಿನಿಂದ ತಳ್ಳುವುದು, ನಮ್ಮನ್ನೂ ಅವರಂತೆ ಓಡುವಂತೆ ಪ್ರೇರೇಪಿಸುವುದು ಸಾಮಾನ್ಯ. 'ನಮಗಾಗುವುದಿಲ್ಲಪ್ಪಾ' ಅಂದರೂ ಬಿಡದೇ, 'ನಿನಗಾಗುತ್ತಜ್ಜೀ' ಎನ್ನುತ್ತಾ ನಮ್ಮನ್ನು ತಳ್ಳಿಕೊಂಡು ಹೋಗುವ ಈ ಮಕ್ಕಳನ್ನು ಕಂಡಾಗ, 'ನನಗೂ ಇನ್ನಷ್ಟು ಶಕ್ತಿ ಇದ್ದಿದ್ದರೆ' ಎಂದನಿಸದೇ ಇರಲಾರದು.

ನಮ್ಮಜ್ಜಿಗೆ ಆ ಕಾಲದಲ್ಲಿ ಬರುತ್ತಿದ್ದ ಏಕೈಕ ಟೀವೀ ಚಾನಲ್‌ನಲ್ಲಿ ಮಧ್ಯಾಹ್ನ ಊಟದ ಸಮಯದಲ್ಲಿ ಪ್ರಸಾರವಾಗುತ್ತಿದ್ದ ಹಿಂದಿ ಧಾರಾವಾಹಿ 'ಶಾಂತಿ' ನೋಡುವ ಹವ್ಯಾಸ. ಮಗಳ ಮನೆಗೆ ಹೋದ ಸಮಯದಲ್ಲಿ ಮೊಮ್ಮೊಕ್ಕಳು ತಮ್ಮೊಡನೆ ಅಜ್ಜಿ ಆಟವಾಡಬೇಕೆನ್ನುವ ಹಂಬಲ. 'ಅಜ್ಜೀ, ನೀನು ಧಾರಾವಾಹಿ ನೋಡಬೇಡ. ನಮ್ಮೊಂದಿಗೆ ಆಟವಾಡಲು ಬಾ' ಎಂದು ಬಲವಂತದಿಂದ ಟಿವಿ ಆಫ್ ಮಾಡಿದಾಗ' ಏನಪ್ಪಾ, ಈ ಮೊಮ್ಮೊಕ್ಕಳು ಒಂದು ಧಾರಾವಾಹಿಯನ್ನು ನೋಡಲೂ

ಬಿಡುವುದಿಲ್ಲವಲ್ಲಾ' ಎಂದು ಮುನಿಸುಬಂದರೂ, ಮೊಮ್ಮೊಕ್ಕಳ ಪ್ರೀತಿಯ ಬಗೆಗೆ ಯೋಚನೆಮಾಡಿಕೊಂಡು ನಮ್ಮೆಲ್ಲ ನೋವುಗಳನ್ನೂ ಮರೆತು ಅವುಗಳ ಕೋರಿಕೆ ಈಡೇರಿಸುವುದೇ ನಮ್ಮ ಬಾಳಿನ ಗುರಿ ಎಂದುಕೊಂಡು ಸುಮ್ಮನಾದರು ಅಜ್ಜಿ.

ಎಲ್ಲಕ್ಕಿಂತ ನನ್ನ ಬಾಲ್ಯದ ದಿನಗಳಬಗೆಗೆ ಹೆಚ್ಚಾಗಿ ನೆನಪಿನಲ್ಲಿ ಉಳಿದಿರುವುದು, ಸಮ್ಮರ್ ದಿನಗಳಲ್ಲಿ ತಿರುಪತಿಗೆ ನಮ್ಮಪ್ಪ ಕಳುಹಿಸಿದಾಗ, ನಮ್ಮಜ್ಜಿ ಪ್ರೀತಿಯಿಂದ ಮುಚ್ಚಿಕೊಡುತ್ತಿದ್ದ ಚಿಲ್ಲರೆ ಕಾಸುಗಳಿಂದ, ತಾಟಿನುಂಗು ತಿನ್ನುತ್ತಿದ್ದುದು, ರೈಲ್ವೆ ಸ್ಟೇಷನ್ ಬಳಿ ಸರ್ಕಲ್‌ನಲ್ಲಿದ್ದ ಜ್ಯೂಸ್ ಅಂಗಡಿಯಲ್ಲಿ ಕೋಲಾಕುಡಿದು, ಅಲ್ಲಿಂದ ಮುಂದೆ ಮಾರುತ್ತಿದ್ದ ಐಸ್‌ಕ್ಯಾಂಡಿ ಚೀಪಿಕೊಂಡು ಮನೆಕಡೆ ಓಡಿಬರುತ್ತಿದ್ದುದು ಮಾತ್ರ ಚೆನ್ನಾಗಿ ನೆನಪಿದೆ. ತಾಯಿಯ ತಂಗಿ, ತಮ್ಮಂದಿರೊಡನೆ ಸೇರಿಕೊಂಡು ಅರ್ಧರಾತ್ರಿಯವರೆಗೂ 'ಬಾಂಬೆ ಟ್ರೇಡ್' ಆಟ ಆಡುತ್ತಾ ದಾಳದ ಗರ/ದಾಯಕ್ಕೆ ಅನುಗುಣವಾಗಿ ಕಾಯಿನಡೆಸಿ, ಆ ಚಿಕ್ಕ ವಯಸ್ಸಿನಲ್ಲೆ ಸಾಲ ಪಡೆಯುವುದು, ಸೈಟ್‌ಕೊಳ್ಳುವುದು, ಮನೆಕಟ್ಟಿ ಬಾಡಿಗೆಪಡೆಯುವುದು ಮುಂತಾದುವಲ್ಲಿ ಮುಳುಗಿರುವಾಗ ಊಟದ ನೆನಪಾಗುವುದಾದರೂ ಹೇಗೆ? ಊಟ ಮರೆತ್ತದ್ದಕ್ಕೆ ಅಜ್ಜಿಯಿಂದ ಪ್ರೀತಿಯ ಬೈಗುಳಕೇಳಿ, ನಂತರ ಅವರೇ ಕಲೆಸಿ ತಟ್ಟೆಯಲ್ಲಿ ಹಾಕಿಕೊಟ್ಟ ಊಟವನ್ನು ಉಂಡಿದ್ದೂ ಉಂಟು.

## 62. 'ಟೊಮೇಟೊ, ಬೀನಿಸು, ಸೌತೇಕಾಯಿ ತರಕಾರೀ'

ದಿನನಿತ್ಯ ಬೆಳಿಗ್ಗೆ 8–30 ರಿಂದ 9 ಘಂಟೆಯೊಳಗೆ ಮನೆಮುಂದಿನ ರಸ್ತೆಯಲ್ಲಿ ಕೇಳಿಬರುತ್ತಿದ್ದ 'ಟೊಮೆಟೊ, ಬೀನಿಸು, ಸೌತೇಕಾಯಿ ತರಕಾರೀ' ಅನ್ನೋ ಕೂಗು ಕಳೆದ ಒಂದು ವಾರದಿಂದ ಕೇಳಿಬರುತ್ತಿಲ್ಲ. ಬೆಲೆ ತುಸು ಹೆಚ್ಚೇ ಆದರೂ, ತೂಕದಲ್ಲಿ ತುಸು ಹೆಚ್ಚೇ ತರಕಾರಿ ಕೊಡುತ್ತಿದ್ದುದರಿಂದ, ಸರ್ಕಲ್‌ವರೆಗೆ ಹೋಗದೇ, ಮನೆಮುಂದೆಯೇ ತರಕಾರಿ ತಂದುಕೊಡುತ್ತಿದ್ದ ಮುದುಕನ ಬಗೆಗೆ ಒಂದು ರೀತಿಯ ಆತ್ಮೀಯತೆ ಬೆಳೆದಿತ್ತು. ಈ ಹಿಂದೆಯೂ ಕೆಲವು ಸಲ ಹೀಗೇ ವಾರಗಟ್ಟಲೇ ಕಾಣೆಯಾಗುತ್ತಿದ್ದ ಆ ಮುದುಕ, ಹಲವು ದಿನಗಳನಂತರ ಮನೆಮುಂದೆ ಬಂದಾಗ, 'ಏನಪ್ಪಾ, ಎಲ್ಲಿ ಹೋಗಿದ್ದೆ, ಏನಾಗಿತ್ತು, ಹುಷಾರಿರಲಿಲ್ಲವಾ?' ಅಂತ ಪ್ರಶ್ನೆಗಳ ಸುರಿಮಳೆಗಯ್ಯುತ್ತಿದ್ದೆ. 'ಏನೂ ಇಲ್ಲವ್ವಾ, ತರಕಾರಿ ಬೆಲೆ ಶಾನೆ ದುಬಾರಿ ಆಗಿಬಿಟ್ಟು, ಬಂಡ್ವಾಳ ಇರಲಿಲ್ಲ' ಅಂತಾ ರಾಗ ಎಳೆದಾಗ ಅವನ ಬಂಡವಾಳಕ್ಕಾಗಿ ಒಂದಿನ್ನೂರು ರೂಪಾಯಿಗಳನ್ನಾದರೂ ಕೊಟ್ಟುಬಿಡೋಣವೇ ಎಂದೆನಿಸುತ್ತಿತ್ತು. ಒಂದೆರಡು ಬಾರಿ ಕೊಟ್ಟೂ ಇದ್ದೆ. ಆ ಸಾಲದ ಹಣವನ್ನು ಅವನಿಂದ ಆಗಾಗ ತರಕಾರಿ ಖರೀದಿಸಿ ವಜಾಮಾಡಿ ಕೊಳ್ಳುತ್ತಿದ್ದೆ. ಕೆಲವೊಮ್ಮೆ ಆರೋಗ್ಯ ಕೈಕೊಟ್ಟು ಆಸ್ಪತ್ರೆ ಸೇರಿದ್ದೂ ಉಂಟಂತೆ. ಮಕ್ಕಳೆಲ್ಲಾ ಬೆಂಗಳೂರು ಸೇರಿರುವುದರಿಂದ, ಹೆಂಡತಿ ತೀರಿಕೊಂಡಿರುವುದರಿಂದ, ತಾನೊಬ್ಬನೇ ತರಕಾರಿ ಗಾಡಿ ತಳ್ಳಿಕೊಂಡು ವ್ಯಾಪಾರಮಾಡುತ್ತಿದ್ದ. ತೀರ ಹುಷಾರು ತಪ್ಪಿದಾಗ ಮಾತ್ರ, ಮಗ ಬೆಂಗಳೂರಿಗೆ ಕರೆಸಿಕೊಂಡು, ಆಸ್ಪತ್ರೆಗೆ ಸೇರಿಸಿ ನೋಡಿಕೊಳ್ಳುತ್ತಿದ್ದ. ಹುಷಾರಾಗುತ್ತಲೇ ಅವನೇ ಸಾಗಹಾಕುತ್ತಿದ್ದನೋ, ಇವನೇ ಬಂದು

ಬಿಡುತ್ತಿದ್ದನೋ ಗೊತ್ತಿಲ್ಲ. ನಾನೇ ಅವನ ಈ ಪರದಾಟ ನೋಡಿ, 'ನೆಮ್ಮದಿಯಾಗಿ ಮಕ್ಕಳೊಂದಿಗೆ ಇರೋದುಬಿಟ್ಟು, ಯಾಕಪ್ಪಾ ಹೀಗೆ ಕಷ್ಟಪಡುತ್ತಿದ್ದೀ' ಅಂತ ಹೇಳಿದ್ದೂ ಆಗಿದೆ. ಆದರೆ ಆತ ನನಗೆ ಮಕ್ಕಳಿಗೆ ತೊಂದರೆಕೊಟ್ಕೊಂಡು ಅವರ ಹಂಗಿನಲ್ಲಿರೋಕ್ಕೇ ಇಷ್ಟವಿಲ್ಲ ಕಣವ್ವಾ' ಅನ್ನುತ್ತಿದ್ದ. ಬೀದಿಬೀದಿಯಲ್ಲಿ ಗಾಡಿ ತಳ್ಳಿಕೊಂಡು ತರಕಾರಿ ಮಾರುತ್ತಿದ್ದ ಆ ಮುದುಕ. ಒಂದು ಬಿಳೀ ಶರಟು, ಒಂದು ಬಿಳೀ ಪಂಚೆ ಇದೇ ಅವನ ಉಡುಪು. ಎಂದೂ ಅವನು ಪ್ಯಾಂಟು ಹಾಕಿದ್ದುದು ನಾನು ನೋಡಿಲ್ಲ. ತೀರ ಚಳಿಗಾಲದಲ್ಲೂ ಇದೇ ರೀತಿ ಬರುತ್ತಿದ್ದುದನ್ನು ನೋಡಲಾಗದೇ ನಮ್ಮೆಜಮಾನರ ಒಂದು ಸ್ವೆಟರ್‌ಕೊಟ್ಟಿದ್ದೆ ಒಮ್ಮೆ. ಕೆಲದಿನಗಳು ಅದನ್ನು ಹಾಕಿಕೊಂಡು ಬರುತ್ತಿದ್ದ.

ನನ್ನ ಮಗಳಿಗೆ ಹೆರಿಗೆಯಾಗಿ ನಮ್ಮ ಮನೆಗೆ ಪುಟ್ಟ ಮೊಮ್ಮಗ ಬಂದನಂತರವೂ ಈ ಮುದುಕನಿಂದ ತರಕಾರಿ ಖರೀದಿ ನಡೆಸುತ್ತಿದ್ದೆ. ಮಗು ಸ್ವಲ್ಪ ದೊಡ್ಡದಾದನಂತರ, ಪ್ರತಿದಿನ ಈತನ 'ತರಕಾರೀ' ಅನ್ನೋ ಕೂಗು ರಸ್ತೆತುದಿಯಲ್ಲಿ ಕೇಳಿದಾಕ್ಷಣ, ನನ್ನ ಮೊಮ್ಮಗನನ್ನು ಎತ್ತಿಕೊಂಡು ಅವನನ್ನು ತೋರಿಸುತ್ತಿದ್ದಳು ನನ್ನ ಮಗಳು. ಅವನೂ ಆ ದಿನ ತರಕಾರಿ ಕೊಳ್ಳದಿದ್ದರೂ, ಮಗುವಿನ ಕೈಗೆ ಒಂದು ಕ್ಯಾರಟ್ ಕೊಟ್ಟುಹೋಗುತ್ತಿದ್ದ. ಆತನೂ ಈ ಮಗುವನ್ನು ತನ್ನ ಮೊಮ್ಮಗನಂತೆ ಆತ್ಮೀಯತೆಯಿಂದ ಒಂದು ಮುತ್ತುಕೊಟ್ಟು ಹೋಗುತ್ತಿದ್ದ. ಮಗುವೂ ಅವನ ದನಿ ಕೇಳಿದಕೂಡಲೇ "ಕ್ಯಾರಟ್ ತಾತ ಬಂದಾ, ಕ್ಯಾರಟ್ ತಾತ ಬಂದಾ" ಎನ್ನುತ್ತಾ, ತನ್ನನ್ನು ಅವನ ಬಳಿ ಕರೆದೊಯ್ಯುವಂತೆ ಕೇಳತೊಡಗಿತ್ತು. ಬಾಣಂತಿತನವನ್ನು ಮುಗಿಸಿಕೊಂಡು ಮಗಳು ತನ್ನ ಅತ್ತೆಯ ಮನೆಗೆ ಹೋದನಂತರ ಆಗಾಗ್ಗೇ ಆ ಮಗುವಿನ ಬಗೆಗೆ ವಿಚಾರಿಸಿಕೊಳ್ಳುತ್ತಿದ್ದ ಆ ಮುದುಕ. ನಾವೇನಾದರೂ ಮಗಳ ಮನೆಗೆ ಹೋಗಿಬಂದೆವು ಎಂದು ಹೇಳಿದರೆ, ತಕ್ಷಣ ಮಗುವಿನ ಬಗೆಗೆ ಕೇಳುತ್ತಿದ್ದ.

ಪಡೆದ ಸಾಲ ಇನ್ನೂ ತೀರಿರದಿದ್ದರೂ, ಒಮ್ಮೊಮ್ಮೆ ತನ್ನ ಬಂಡವಾಳದ ಸಮಸ್ಯೆ ಬಗೆಗೆ ಹೇಳಿಕೊಂಡು, ಮತ್ತೆ ಸ್ವಲ್ಪ ಹಣಕೊಡಿ ಎಂದು ಕೆಲವೊಮ್ಮೆ ಪೀಡಿಸುತ್ತಲೂ ಇದ್ದ. ಕೆಲವೊಮ್ಮೆ ತರಕಾರಿ ಕೊಂಡು, ಸಾಲದ ಕಡೆಗೆ ವಜಾಮಾಡಿಕೊಳ್ಳಲು ಬಯಸಿದಾಗ, 'ಇವತ್ತು ಇನ್ನೂ ಬೋಣೀನೇ ಆಗಿಲ್ಲಾ, ನಾಳೆ ಇಟ್ಕೊಳ್ಳಿ' ಅಂತ ಗೋಗರೆಯುತ್ತಿದ್ದ. ಆಗೆಲ್ಲ ನಮ್ಮೆಜಮಾನ್ರು, 'ಭಲೇ ಪಾಕಡಾ ಇದ್ದಾನ್ಲೇ. ನಿನ್ ತರಕಾರೀ ಮುದ್ಕಾ. ಸಾಲ ಸುಲಭವಾಗಿ ಸಿಗುತ್ತೇ ಅನ್ನೋದು ಗೊತ್ತಾಗಿ ಪದೇ ಪದೇ ಈಸ್ಕೋತಾ ಇದಾನೆ, ಹುಷಾರಾಗಿರು,

ಜಾಸ್ತಿ ಕೊಟ್ಟು ಸಿಗಾಕೋಬೇಡ' ಅಂತ ರೇಗುತ್ತಿದ್ದರು. ಆಗೆಲ್ಲಾ ನಾನು ಆ ಮುದುಕನ ಪರವಾಗಿ ವಾದಮಾಡಿ, 'ಅಯ್ಯೋ ಬಿಡ್ರಿ, ನೀವಂತೂ ಯಾರೊಬ್ಬರಿಗೂ ಒಂದು ಪೈಸೇನೂ ಕೈಯೆತ್ತಿ ಕೊಡೊಲ್ಲಾ, ಪಾಪ ಬಡತನ, ಒಂದೆರಡು ಕಾಸು ದಾನಮಾಡಿದ್ವಿ ಅಂತ ತಿಳ್ಕೊಳ್ಳಿ' ಅಂತ ರೇಗ್ತಿದ್ದೆ. ಹಾಗೂ ಹೀಗೂ ಕೊಟ್ಟ ಸಾಲ ತರಕಾರಿ ಕೊಂಡು ವಜಾಮಾಡ್ಕೋತಿದ್ದೆ.

'ರೀ ಯಾಕೋ ತರಕಾರಿ ಮುದುಕಾ ವಾರದಿಂದ ಬರ್ತಾನೇ ಇಲ್ವಲ್ಲಾ, ಇವತ್ತೇನಾದರೂ ನಾನು ಸ್ನಾನಕ್ಕೋಗಿದ್ದಾಗ ಬಂದಿದ್ವನಾ?' ಅಂತ ಆಗಾಗ ಯಜಮಾನ್ರನ್ನ ವಿಚಾರಿಸುತ್ತಿದ್ದೆ. ಆಗೆಲ್ಲಾ, 'ಅಯ್ಯೋ ಬಿಡೆ, ನಿನಗೇನು ಆ ಮುದುಕನ ಹತ್ರಾನೇ ತರಕಾರಿ ತಗೋಬೇಕಾ? ವಾರಕ್ಕೊಂದ್ಸಲಾ ಸರ್ಕಲ್‌ಗೆ ಹೋದ್ರೆ, ಕಣ್ಣಿಗೆ ಬೇಕಾದ್ದು, ತಾಜಾ ತರಕಾರೀನೇ ಸಿಗುತ್ತೆ' ಅಂತ ರೇಗ್ತಾಯಿದ್ರು. ಆದರೂ ನನಗೆ ಆ ಮುದುಕನ ಬಗೆಗೆ ಏನೋ ಕನಿಕರ. ಮನಸಿಗೆ ಏನೋ ಮುಜುಗರ. ಮನೆಗೆಲಸದವಳನ್ನೂ ವಿಚಾರಿಸಿದೆ 'ಏನಮ್ಮಾ ತರಕಾರಿ ಮುದುಕನ್ನ ಎಲ್ಲಾದರೂ ನೋಡಿದ್ಯಾ?'. ಅವಳೂ 'ಇಲ್ಲಮ್ಮಾ, ಆ ಮುದುಕ ಕಾಣ್ತಾನೇ ಇಲ್ಲ' ಅನ್ನುತ್ತಿದ್ದಳು. 'ತಿರುಗೀ ಏನಾರ ಹುಷಾರು ತಪ್ಪಿದ್ನಾ ಮುದಕಾ?' ಅಂದ್ಕೊಂಡು ಸುಮ್ಮನಾದೆ.

ಇವತ್ತು ಬೆಳಿಗ್ಗೆ ಎದುರುಮನೆ ಮನೆಕೆಲಸದವಳು ನಮ್ಮನೆ ಮನೆಕೆಲಸದವಳನ್ನು ನೋಡಿದವಳೇ 'ಆ ಮುದ್ಕ ನಿನ್ನೆ ಸತ್ತೋದ' ಅಂದಳು. ನನಗೋ ಯಾರ ಬಗೆಗೆ ಇವಳು ಹೇಳುತ್ತಿದ್ದಾಳೆ? ಅನ್ನೋ ತುಮುಲ, ಕುತೂಹಲ. ಬಾಗಿಲು ತೆಗೆದವಳೇ, 'ಯಾವ ಮುದುಕಾ?' ಅಂತ ವಿಚಾರಿಸಿದೆ. ಅದಕ್ಕವಳು 'ಅದೇ ಕಣವ್ವಾ, ನೀವು ದಿನಾ ತರಕಾರಿ ತಗೋತಿದ್ರಲ್ಲಾ, ಅದೇ ಮುದುಕಾ, ವಾರದಿಂದ ಜ್ವರಾ ಅಂತ ಮನಗಿದ್ನಂತೆ, ಬೆಳಿಗ್ಗೆ ವೇಳೆಗೆ ಸತ್ತೋಗಿದ್ನಂತೆ ಕಣವ್ವಾ, ಮಕ್ಕಳು ಬಂದು ಮಣ್ಣಾಕಿದ್ವಂತೆ' ಅಂತ ಒಂದೇ ಉಸುರಿಗೆ ಒದರಿದಳು. ನನಗೆ ಒಂದು ಕ್ಷಣ ನನ್ನವರೊಬ್ಬರನ್ನು ಕಳೆದುಕೊಂಡ ಅನುಭವ. ನನಗೇ ಅರಿವಿಲ್ಲದಂತೆ ಕಣ್ಣಂಚಿನಲ್ಲಿ ನೀರು ಜಿನುಗಿತು. ನಮ್ಮೆಜಮಾನರು ಇತರ ಗಂಡಸರಂತೆ, ಯಾವುದನ್ನೂ, ಯಾರನ್ನೂ, ನನ್ನನ್ನೂ ಸೇರಿಸಿಕೊಂಡು ಮನಸ್ಸಿಗೆ ಹಚ್ಚಿಕೊಳ್ಳುವವರಲ್ಲ. ಅವರಿಗೆ ಆ ಮುದುಕ ಹೋಗಿಬಿಟ್ಟ ವಿಚಾರ ಹೇಳಿದರೂ, ಯಾವುದೇ ತೀಕ್ಷ್ಣ ಪ್ರತಿಕ್ರಿಯೆ ಮೂಡಿದ್ದು ಕಾಣಲಿಲ್ಲ.

ಈಗಲೂ ಕಳೆದ ವಾರ ಆ ತರಕಾರಿ ಮುದುಕನಿಂದ ಕೊಂಡ ತರಕಾರಿ

ಅಡುಗೆ ಮಾಡುತ್ತಿದ್ದೇನೆ. ನನ್ನ ಯಜಮಾನರು, 'ತರಕಾರಿ ತರಲು ಸರ್ಕಲ್‌ಗೆ ಹೋಗೋಣವಾ' ಅಂದಾಗ, 'ಇನ್ನೂ ಆ ಮುದುಕನಿಂದ ಕೊಂಡ ತರಕಾರಿ ಮುಗಿದಿಲ್ಲ, ಅದು ಮುಗಿದಮೇಲೇ ಹೋಗೋಣ' ಅಂತ ತರಕಾರಿಕೊಳ್ಳೋದನ್ನೇ ಮುಂದೂಡಿದೆ. ನನ್ನ ಮನದಲ್ಲಿ ಈಗಲೂ ಆವಾಗಾವಾಗ 'ತರಕಾರೀ'ಅಂತ ಆ ಮುದುಕ ಕೂಗಿದಂತೆ ಆಗುತ್ತದೆ.

## 63. ಕಾಲೇಜಿನ...... ಆ ದಿನಗಳು

ಕಾಲೇಜಿಗೆ ಪಿಯೂಸಿಗೆ ಮೈಸೂರಿನ ಪ್ರಖ್ಯಾತ ಧರ್ಮರತ್ನಾಕರ ಡಿ.ಬನುಮಯ್ಯ ಕಾಲೇಜಿಗೆ ಸೇರಿಸಿದರು ನಮ್ಮಪ್ಪ. ಪಿ.ಯೂ.ಸಿ ಓದುವಾಗ, ನಮ್ಮ ತರಗತಿಗೆ ಡಿ.ಬನುಮಯ್ಯನವರ ಮೊಮ್ಮಗ, ನಟ ಭಯಂಕರ (ನಮ್ಮ ದೃಷ್ಟಿಯಲ್ಲಿ) ಕಾಲೇಜಿನ ಪ್ರಾಂಶುಪಾಲ ಬಿ.ವಿ.ಬನುಮಯ್ಯನವರೇ ಒಂದು ತರಗತಿ ತೆಗೆದುಕೊಳ್ಳುತ್ತಿದ್ದರು. ಈ ಮಾತನ್ನ ಯಾತಕ್ಕಪ್ಪ ಹೇಳ್ದೇ ಅಂದರೆ ಒಂದೇ ವರ್ಷದ ಪಿ.ಯೂ.ಸಿ ಮುಗಿಸಿ ಪದವಿಗೆ ಬಿ.ಕಾಂಗೆ ಬಂದಾಗ ಒಮ್ಮೆ ಯಾವುದೋ ಕಾರಣಕ್ಕೆ ಕಾಲೇಜಿನ ವಿದ್ಯಾರ್ಥಿಗಳೆಲ್ಲ ಸೇರಿ ಒಂದು ಭಾರೀ ಸ್ಟ್ರೈಕ್ ಮಾಡಿದ್ದೆವು. ವಿದ್ಯಾರ್ಥಿಗಳ್ಯಾರೂ ತರಗತಿಗಳಿಗೆ ಹೋಗಕೂಡದು; ಹೋದರೂ ಅಟೆಂಡೆನ್ಸ್ ಹೇಳಕೂಡದು ಇವು ನಮ್ಮಲ್ಲಿನ ಅಲಿಖಿತ ಒಪ್ಪಂದ. ಒಂದೆರಡು ದಿನ ನಮ್ಮ ಒಪ್ಪಂದ ಯಶಸ್ವಿಯೂ ಆಯಿತು. ಮೂರನೇ ದಿನ ಹೊರಗಡೆ ಪ್ರಾಂಶುಪಾಲ ಬನುಮಯ್ಯನವರು ಎಲ್ಲರನ್ನೂ ಗದರಿಸುತ್ತಾ, 'ಇದ್ದರೆ ತರಗತಿ ಒಳಗಿರಿ, ಇಲ್ಲದಿದ್ದರೆ ಕಾಲೇಜು ಆವರಣ ಬಿಟ್ಟು ತೊಲಗಿ' ಎಂದು ಕೂಗಾಡುತ್ತಿದ್ದುದರಿಂದ, ಕೆಲವರು ಕಾಲೇಜಿನ ಕಾಂಪೌಂಡಿನಾಚೆ ಓಡಿಹೋದರೆ, ನಾವೆಲ್ಲರೂ ತಲೆ ತಗ್ಗಿಸಿಕೊಂಡು ತರಗತಿಗಳಲ್ಲಿ ಬಂದು ಕೂತೆವು. ನಮ್ಮ ತರಗತಿಗೆ ಕಾಲೇಜಿಗೆ ಹೊಸದಾಗಿ ಸೇರಿದ್ದ ಒಬ್ಬ ಅಧ್ಯಾಪಕರು ಬಂದರು, ಬಂದವರೇ ಅಟೆಂಡೆನ್ಸ್ ಕರೆಯಲು ಆರಂಭಿಸಿದರು. ಮೊದಲೇ ಮಾತನಾಡಿಕೊಂಡಿದ್ದಂತೆ, ಯಾರೂ ಅಟೆಂಡೆನ್ಸ್‌ಗೆ ಉತ್ತರಕೊಡಲಿಲ್ಲ. ನಮ್ಮ ಗ್ರಹಚಾರಕ್ಕೆ ಪ್ರಾಂಶುಪಾಲರು ಸುತ್ತಾಡುತ್ತ ನಮ್ಮ ತರಗತಿಗೇ ಬರಬೇಕೇ? ನಾವೆಲ್ಲ ಗಪ್‌ಚುಪ್

ಅಂತ ಕೂತೆವು. ಪ್ರಾಂಶುಪಾಲ ಬನುಮಯ್ಯನವರು ತರಗತಿಯಲ್ಲಿದ್ದ ಅಧ್ಯಾಪಕರನ್ನು, 'ಅಟೆಂಡೆನ್ಸ್ ತೆಗೆದುಕೊಂಡಿರಾ'? ಅಂದರು. ಅದಕ್ಕೆ ಆ ಅಧ್ಯಾಪಕರು, 'ಸಾರ್ ಯಾರೂ ಪ್ರೆಸೆಂಟ್ ಹೇಳುತ್ತಿಲ್ಲ', ಅಂತ ನಿಜಾನೇ ಹೇಳಿದರು. ನಮಗೋ ತೊಳ್ಳೆನಡುಕ ಶುರುವಾಯಿತು. ಬನುಮಯ್ಯನವರು, 'ಯಾವನ್ರೀ ಅವನು, ಅಟೆಂಡೆನ್ಸ್ ಹೇಳದೇ ಇದ್ದೋನು' ಅಂತ ಅಬ್ಬರಿಸಿದರು. ಮುಂದಿನ ಸಾಲಿನಲ್ಲಿ ಕುಳಿತಿದ್ದ ಕುಳ್ಳ ರಾಮಚಂದ್ರನ ಕಡೆ ಕೈತೋರಿಬಿಟ್ಟರು ಆ ಅಧ್ಯಾಪಕರು. 'ಲೇಯ್, ಎದ್ದೇಳೋ ನಿಂತ್ಕೊಂಡ್ರೆ ಮೂರಡಿ ಇಲ್ಲ, ಆಟ ಆಡ್ತೀರಾ ಇಲ್ಲಿ ಬಂದು', ಅಂತ ಗದರಿದ್ದಕ್ಕೆ ನಡಗೋಕ್ಕೇ ಆರಂಭಿಸಿದ ನಮ್ಮ ಪ್ರತಿನಿಧಿ, ಕುಳ್ಳ ರಾಮಚಂದ್ರ, 'ಈಗ ಮತ್ತೆ ಅಟೆಂಡೆನ್ಸ್ ಕರೀರಿ, ಯಾರು ಪ್ರೆಸೆಂಟ್ ಹೇಳೋಲ್ಲ ನಾನೂ ನೋಡ್ತೀನಿ,' ಅಂತ ಕೂತೇಬಿಟ್ಟರು ಬನುಮಯ್ಯ! ಸರಿ ಮತ್ತೆ ಆ ಅಧ್ಯಾಪಕರು ಅಟೆಂಡೆನ್ಸ್ ಕರೆದರು, ನಾವೆಲ್ಲರೂ ಎಲ್ಲ ಮುಚ್ಚಿಕೊಂಡು ಹಾಜರಿ ಹೇಳಿದೆವು. ಆನಂತರ ನಡೆದಿದ್ದೇ ನಾನು ಪ್ರಯೋಗಿಸಿದ 'ನಟ ಭಯಂಕರ' ಬಿರುದಿಗೆ ಸಾಕ್ಷಿಯಾದುದು. ಅಟೆಂಡೆನ್ಸ್ ವ್ಯವಹಾರ ಮುಗಿದುದೇ ಬನುಮಯ್ಯನವರು ಎದೆ ಹಿಡಿದುಕೊಂಡು ಕೂತುಬಿಟ್ಟರು. ನಾವೆಲ್ಲ ಗಾಬರಿಯಾದೆವು.ಎಷ್ಟು ಕಷ್ಟಬಿದ್ದು ತಮ್ಮ ಹಿರಿಯರು ಒಂದು ಉದಾತ್ತ ಗುರಿಯಿಟ್ಟುಕೊಂಡು ಈ ಕಾಲೇಜನ್ನು ಸ್ಥಾಪಿಸಿದರು. ಅದರ ಹೆಸರನ್ನು ಕೆಡಿಸಲು ಯತ್ನಿಸಿದ ಈ ವಿದ್ಯಾರ್ಥಿಗಳ ನಡವಳಿಕೆಗಳಿಂದ ತಮ್ಮ ಮನಸ್ಸಿಗೆ ಆದ ಆಘಾತ ಎಷ್ಟು ಎಂದೆಲ್ಲ ಹೇಳಿ ನಮ್ಮ ಕಣ್ಣಲ್ಲಿ ನೀರು ತರಿಸಿದರು. ನಂತರ ಇನ್ನುಮುಂದೆ ಯಾವುದೇ ಕಾರಣಕ್ಕೆ ಕಾಲೇಜಿಗೆ ಕೆಟ್ಟ ಹೆಸರು ತರದಂತೆ ನಮ್ಮೆಲ್ಲರಿಂದ ಭಾಷೆ ತೆಗೆಸಿದರು. ಆಮೇಲೆ ತಮ್ಮ ಭಾಷಣವನ್ನು ಮುಗಿಸುವ ಹಂತದಲ್ಲಿ, 'ಅವನ್ಯಾರ್ರೀ ಹಿರಣ್ಣಯ್ಯ, ನಾವೂ ಅವನಪ್ಪಂತರ ನಾಟಕಾ ಆಡ್ತೀವಿ' ಅಂದುಬಿಡೋದೇ.... ಆಗಲೇ ನನಗನ್ನಿಸಿದ್ದು ಇವರು ಈವರೆಗೆ ಮಾಡಿದ್ದು ನಾಟಕಾನೇ? ಅಂತ, ಆಗ ಮನದಲ್ಲಿ ಎದ್ದ ಉದ್ಗಾರ.. ನಟ ಭಯಂಕರ !

ತರಗತಿಯಲ್ಲಿ ಕನ್ನಡ ಭಾಷಾ ವಿಷಯವನ್ನು ಸಿಂಧುವಳ್ಳಿ ಅನಂತ ಮೂರ್ತಿ (ಸ್ವಾಮ್) ತೆಗೆದುಕೊಳ್ಳುತ್ತಿದ್ದರು. ಬಹುಶಃ 'ಭೀಮ ದುರ್ಯೋಧನೀಯ' ಅನ್ನುವ ಪದ್ಯ ಸಂಕಲನ ಬೋಧಿಸುತ್ತಿದ್ದರು. ಸಾಮ್ರಾಟ್ ಕಾರವೇಲ ಅನ್ನುವ ಅವಿಸ್ತರ ಪತ್ಯ ಬೇರೆ. ಪದ್ಯದ ಬಗ್ಗೆ ನಮಗೆ ಬರುವ ಸಂಶಯ ಪದಗಳ ಕೆಳಗೆ ಗೆರೆ ಎಳೆದು ಒಂದು ಕ್ವೆಶ್ಚನ್ ಮಾರ್ಕ್ ಹಾಕಿರಿ, ಇತರ ಪಂಡಿತರೊಡನೆ ಚರ್ಚಿಸಿ ತಿಳಿಸುತ್ತೇನೆ ಎಂದು ಹೇಳಿ ಮುಂದುವರಿಸುತ್ತಿದ್ದರು. ವರ್ಷದ ಕೊನೆಯಲ್ಲಿ

ಗೆರೆಗಳು ಮತ್ತು ಕ್ವೆಶ್ಚನ್ ಮಾರ್ಕ್‌ಗಳು ಹಾಗೇ ಇರುತ್ತಿದ್ದವು. ಅಂತೆಯೇ ಅವಿಸ್ತರ ಪತ್ನ ಸಾಮ್ರಾಟ್ ಕಾರವೇಲ ಅಪತ್ಯವನ್ನು ಕಥೆ ಹೇಳಿದಂತೆ ಓದಿಕೊಂಡು ಹೋಗುತ್ತಿದ್ದರು. ಅದರಲ್ಲಿ ಮಧ್ಯೆ ನಾಯಕ ನಾಯಕಿಯನ್ನು ಹುಲಿಯಿಂದ ಕಾಪಾಡುವ ಸಂಗತಿ ಬಂದಾಗ ಇದು ನೀವು ಸಿನಿಮಾಗಳಲ್ಲಿ ನೋಡುವಂತಹ ದೃಶ್ಯ ನೀವೇ ಓದಿಕೊಳ್ಳಿ ಎಂದು ಹದಿನೈದು ಪುಟ ಎಗರಿಸಿದ್ದರು.

ನಾವು ಪದವಿಗೆ ಸೇರಿದ ಅವಧಿಯ ಸ್ಕೀಂ ಪ್ರಕಾರ ಬಿಕಾಂ ಪದವಿಯಲ್ಲಿ ಮೊದಲ ಪಬ್ಲಿಕ್ ಪರೀಕ್ಷೆ ಎರಡನೇ ವರ್ಷದ ಅಂತ್ಯಕ್ಕೆ. ಎರಡನೇ ವರ್ಷದಲ್ಲಿ ಆರಂಭಿಸಿದ ವಿಷಯಗಳ ಪರೀಕ್ಷೆ ಅಂತಿಮ ಅಂದರೆ ಮೂರನೇ ವರ್ಷದ ಅಂತ್ಯಕ್ಕೆ. ಆದುದರಿಂದ ಮೊದಲ ವರ್ಷ ಸಂಜೆವೇಳೆಯಲ್ಲಿ ಟೈಪಿಂಗ್ ಷಾರ್ಟ್‌ಹ್ಯಾಂಡ್ ಕಟ್ಟಿದೆ. ಅಲ್ಲಿಯೂ ಜೂನಿಯರ್ ಮಾತ್ರ ಫಸ್ಟ್ ಕ್ಲಾಸಿನಲ್ಲಿ ಪ್ಯಾಸುಮಾಡಿದರೂ ಸೀನಿಯರ್‌ಗೆ ಹೋಗಲಿಲ್ಲ. ಹಲವಾರು ಸ್ಪರ್ಧೆಗಳಲ್ಲಿಯೂ ಟಾಪಾಗಿದ್ದ ನನ್ನನ್ನು ಕಂಡರೆ ಬೋಧಕರಿಗೂ ಹೆಮ್ಮೆ. ಬ್ಯಾಚ್‌ಮೇಟ್ ಭಾಗ್ಯರೇಖ ಸ್ನೇಹಸಂಪಾದಿಸಲು ಹರಸಾಹಸಪಟ್ಟರೂ ಸಾಧ್ಯವಾಗಲಿಲ್ಲ. ಮಡಿಕೇರಿಯ ಗೌರಮ್ಮ ಮಾತನಾಡಿಸುತ್ತಿದ್ದಳು.

ಮೊದಲ ಪದವಿ ಪರೀಕ್ಷೆಯಲ್ಲಿ ಇಕನಾಮಿಕ್ ಅನಾಲಿಸಿಸ್ ಎಂಬ ಒಂದು ಪೇಪರ್ ಉಳಿಯಿತು, ಆದರೆ ಮೂರು ಪೇಪರ್ ಪರೀಕ್ಷೆ ತೆಗೆದುಕೊಳ್ಳಬೇಕಾಯಿತು. ಯಾಕಂದರೆ ಇಕನಾಮಿಕ್ ಜ್ಯಾಗ್ರಫಿ, ಇಕನಾಮಿಕ್ ಡೆವಲಪ್‌ಮೆಂಟ್ ಮತ್ತು ಇಕನಾಮಿಕ್ ಅನಾಲಿಸಿಸ್ ಅವು ಒಂದು ಗುಂಪು, ಯಾವುದೇ ಒಂದು ವಿಷಯದಲ್ಲಿ ಫೇಲಾದರೂ ಮೂರೂ ವಿಷಯಗಳನ್ನು ಪುನಃ ಕಟ್ಟಬೇಕಾಗಿತ್ತು. ಅಪ್ಪ ಏನನ್ನುತ್ತಾರೋ ಎಂದು ಅಳುಕುತ್ತಾ ಮನೆಗೆ ಬಂದೆ. ವಿಷಯ ತಿಳಿದುಕೊಂಡ ಅಪ್ಪ ಏನೂ ಹೇಳದೆ, 'ಸೆಪ್ಟೆಂಬರ್ ಇದೆಯಲ್ಲಾ' ಅಂದರು, ಚಟೀರೆಂದು ಕೆನ್ನೆಗೆ ಹೊಡೆಯದಿದ್ದರೂ ಹೊಡೆದಂತೆ ಭಾಸವಾಯಿತು. ಸೆಪ್ಟೆಂಬರ್‌ನಲ್ಲೇ ಕನಿಷ್ಠ ಅಂಕಗಳೊಡನೆ ಆ ಗುಂಪು ವಿಷಯ ಮುಗಿಸಿಕೊಂಡೆ , ಮಾರ್ಚಿಯಲ್ಲಿ ಅಂತಿಮ ಪರೀಕ್ಷೆಯನ್ನೂ ಯಶಸ್ವಿಯಾಗಿ ಮುಗಿಸಿದೆ ಸೆಕೆಂಡ್ ಕ್ಲಾಸಿನಲ್ಲಿ. ಹೆಚ್ಚಾಗಿ ಕಾಲೇಜಿನಲ್ಲಿ ಸ್ನೇಹಿತರಿರಲಿಲ್ಲ. ಬಾಲ್ಯದ ಗೆಳೆಯ ಕೃಷ್ಣ ನಾನು ಸೇರಿದ್ದ ಬಿನುಮಯ್ಯ ಕಾಲೇಜಿಗೇ ಸೇರಿದ್ದ. ನಮ್ಮ ಸೆಕ್ಷನ್‌ನಲ್ಲೇ ಇದ್ದ. ಸಾಹಿತ್ಯ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಲಿದ್ದ. ಎಚ್ಚೆಸ್ಕೆ (ಹೆಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್) ರವರಿಗೆ ಪ್ರೀತಿಪಾತ್ರನಾಗಿದ್ದ. ಮೊದಲಬಾರಿಗೆ ಸಹಪಾಠಿಗಳೊಡನೆ "ಕಾವ್ಯಾಂಗ ಅಸೋಸಿಯೇಶನ್" ಸ್ಥಾಪಿಸಿದ ಹೆಮ್ಮೆ ನಮಗೆ.ಕಾಲೇಜಿನ ಎಲ್ಲ ವಿದ್ಯಾರ್ಥಿಗಳೂ.

ಬಹುಶಃ ಪ್ರಾಂಶುಪಾಲರೂ ಹೆದರುತ್ತಿದ್ದ ಏಕೈಕ ಅಧ್ಯಾಪಕ ಎಂದರೆ ಜಾರ್ಜ್ ಮಾನ್ಯುಯೆಲ್. ನಮ್ಮ ಸ್ಟಾಟಿಸ್ಟಿಕ್ಸ್ (ಸಂಖ್ಯಾಶಾಸ್ತ್ರದ) ಲೆಕ್ಚರರ್.ಅಜಾನುಬಾಹು ವ್ಯಕ್ತಿತ್ವ, ಯಾವಾಗಲೂ ಗಂಭೀರವದನ. ನಗು ಎಂಬುವುದನ್ನೇ ಮರೆತಂತಹ ವ್ಯಕ್ತಿ ಈ ಮಾನ್ಯುಯಲ್. ಆದರೆ ಪಾಠದಲ್ಲಿ ಏ ಒನ್. ಒಂದು ಎಕ್ಸರ್‌ಸೈಜಿನಲ್ಲಿ ಎಲ್ಲ ಪ್ರಶ್ನೆಗಳಿಗೂ ಕ್ರಮಬದ್ಧವಾಗಿ ಉತ್ತರ ಸಿದ್ಧಪಡಿಸಿಟ್ಟುಕೊಂಡು ಬರುತ್ತಿದ್ದರು. ಲೆಕ್ಕ ಬಿಡಿಸಲು ಹೇಳಿ ತರಗತಿ ಉದ್ದಗಲಕ್ಕೂ ತಿರುಗಾಡುತ್ತಿದ್ದರು. ಹಾಗೆ ತಿರುಗಾಡುವಾಗ ನಮ್ಮ ಪುಸ್ತಕಗಳನ್ನೂ, ನಾವು ಲೆಕ್ಕ ಬಿಡಿಸುತ್ತಿದ್ದ ರೀತಿಯನ್ನೂ ಗಮನಿಸುತ್ತಿದ್ದರು. ನಾವೇನಾದರೂ ಲೆಕ್ಕ ಬಿಡಿಸಿದ್ದೇವೆ ಅಂದರೆ, ಹಂತ ಹಂತವಾಗಿ ಉತ್ತರ ನಿರೀಕ್ಷಿಸುತ್ತಿದ್ದರು. ತಪ್ಪೇನಾದರೂ ಹೇಳಿದರೆ, ಕೋಪಗೊಂಡು ಇಂಗ್ಲೀಷಿನಲ್ಲಿ "Am I feeding mud into your head" ಅಂತ ಗದರುತ್ತಿದ್ದರು. ಕೆಲಸಲ ಪಕ್ಕ ಬಂದು ನಿಂತಾಗಲಂತೂ ನಾವು ಲೆಕ್ಕಬಿಡಿಸುವುದನ್ನೇ ಮರೆತು ತಲೆತಗ್ಗಿಸಿ ಕುಳಿತುಬಿಡುತ್ತಿದ್ದೆವು. ಅದನ್ನು ಕೃಷ್ಣ ಒಮ್ಮೆ ಹೇಳಿಯೂ ಬಿಟ್ಟ, ಅಂಜಂಜುತ್ತಾ. ಆದರೆ ಈ ಮೇಷ್ಟ್ರು ಬೇಸರ ವ್ಯಕ್ತಪಡಿಸಿದ್ದು ಮಾತ್ರ, ನಾವು ಅಂತಿಮ ವರ್ಷದಲ್ಲಿ ಅಂಕಪಟ್ಟಿಯಲ್ಲಿ ವಿಷಯ ಸಮೂಹದ ಒಟ್ಟು ಅಂಕಗಳನ್ನು ನಮೂದಿಸಲೆಂದು ಮುಷ್ಕರಹೂಡಿ ಯಶಸ್ವಿ ಆದಾಗ. ಮರುದಿನ ತರಗತಿಗೆ ಬಂದವರೇ, 'you people have snatched the mirror from my hands' ಅಂತ ಗುಡುಗಿದರು. ಯಾಕೆಂದರೆ ನಮಗೆ ಹೆಚ್ಚು ಅಂಕ ಬರುತ್ತಿದ್ದುದೇ ಅವರ ವಿಷಯ ಸ್ಟಾಟಿಸ್ಟಿಕ್ಸ್‌ನಲ್ಲಿ. ಮತ್ತೊಮ್ಮೆ ಅವರು ಬೇಸರಿಸಿದ್ದು ಅವರಿಗೆ ಆದಾಯತೆರಿಗೆ ಇಲಾಖೆಯಿಂದ ನೋಟೀಸ್ ಬಂದಾಗ. ಮರ್ಯಾದೆ ಎಂಬುದೇ ಈ ಇಲಾಖೆಯವರಿಗೆ ಗೊತ್ತಿಲ್ಲವೆಂದು ಕಾಣಿಸುತ್ತದೆ ಎಂದಿದ್ದರು. ನಾವು ಲೆಕ್ಕ ತಪ್ಪುಮಾಡಿದಾಗ ಅದನ್ನು ಪತ್ತೆ ಹಚ್ಚಿದ ಸಂದರ್ಭದಲ್ಲಿ ಅವರು ಬಯ್ಯುತ್ತಿದ್ದುದು "ಹಂಡೆಯಲ್ಲಿನ ಅನ್ನ ಆಗಿದೆಯೋ ಇಲ್ಲವೋ ತಿಳಿಯಲು ಎಲ್ಲ ಅಗುಳುಗಳನ್ನು ಹಿಚಿಕಿ ನೋಡಬೇಕಾಗಿಲ್ಲ ಕಣ್ರೋ, ಒಂದೆರಡು ಅಗಳು ಹಿಚುಕಿದರೇ ತಿಳಿಯುತ್ತೆ ಅದರ ಯೋಗ್ಯತೆ" ಅಂತ.

ಇವರಿಗೆ ವ್ಯತಿರಿಕ್ತ ಅಂದರೆ ಕೆ.ಎಸ್.ಎಸ್. ಅರ್ಥಾತ್ ಕೆ.ಎಸ್. ಶ್ರೀಕಂಠೇಶ್ವರ ಐಯ್ಯರ್. ತರಗತಿಗೆ ಬರುತ್ತಿದ್ದಂತೆಯೇ, ಎರಡೂ ಹಸ್ತಗಳನ್ನು ಉಜ್ಜುತ್ತಾ, 'ನೋಟ್ಸ್ ಬರ್ಕಂಡ್ಬಿಡ್ರಪ್ಪಾ ತುಂಬಾ ಬಾಕಿ ಉಳ್ಕಂಡ್ಬಿಟ್ಟಿದೆ', ಅನ್ನುತ್ತಾ ನಗುನಗುತ್ತಲೇ ಪಾಠ ಮಾಡುತ್ತಿದ್ದವರು. ಕಡ್ಲೆಕಾಯಿ ವ್ಯಾಪಾರಿಯನ್ನೇ ಉದಾಹರಣೆ ನೀಡಿ ಬ್ಯಾಂಕಿಂಗ್ ಪರಿಚಯಿಸುತ್ತಿದ್ದವರು ಎಕ್ಸೆಸ್ಕೆ ಅವರ ಅಪಾರ ಸೇವೆಗೆ ಇಂದಿಗೂ ನಿವೃತ್ತಿ ವೇತನ ಸಿಕ್ಕಿಲ್ಲವೆಂಬುದು ವಿಪರ್ಯಾಸ. ಈಗ್ಗೆ ಕೆಲವು ವರ್ಷಗಳ

ಹಿಂದೆ ವಿ.ವಿ.ಮಟ್ಟದ ಕ್ಷೇಮನಿಧಿ ಸಮಿತಿ ಪರವಾಗಿ ಇವರನ್ನು ಆಮಂತ್ರಿಸುವ ಸಲುವಾಗಿ ನನ್ನ ಶಿಷ್ಯ-ಕಂ-ಕೊಲೀಗ್ ರಮೇಶ್‌ನೊಡನೆ ಮನೆಗೆ ಹೋಗಿದ್ದಾಗ ಆತನನ್ನು ಆತ್ಮೀಯವಾಗಿ ಮಾನಸ ಪೌತ್ರ ಎಂದು ಕರೆದಿದ್ದರು. ಇವರನ್ನು ಕಾಲೇಜಿನಿಂದಲೇ ಹೊರಹಾಕಿದ್ದೂ ನಾವು ಓದುತ್ತಿದ್ದಾಗಲೇ ಅನ್ನುವುದೂ ದು:ಖದ ಸಂಗತಿಗಳಲ್ಲಿ ಒಂದು. ಆದರೆ ಮುಂದೆ ಸುಧಾ ವಾರಪತ್ರಿಕೆ, ಪ್ರಜಾವಾಣಿ ಮುಂತಾದ ಮಾಧ್ಯಮಗಳು ಹಾಗೂ ಪ್ರಸಾರಾಂಗ ಅವರ ಸೇವೆಯನ್ನು ಚೆನ್ನಾಗಿಯೇ ಬಳಸಿಕೊಂಡುದು ಸಮಾಧಾನಕರ ವಿಷಯ. ಪಟಪಟನೇ ಹಲವಾರು ವರ್ಷಗಳ ಉತ್ಪನ್ನಗಳ ಅಂಕಿಅಂಶಗಳನ್ನು, ಟೇಬಲ್‌ಗಳನ್ನೇ ಬಾಯಿಪಾಠ ಮಾಡಿದಂತೆ ಉದುರಿಸುತ್ತಿದ್ದವರು, ಆದರೆ ಮಾರ್ಕ್ಸ್ ನೀಡುವುದರಲ್ಲಿ ಜಿಪುಣಾಗ್ರೇಸರ ಎಂದು ಬಿರುದು ಪಡೆದವರು ಮೇಜರ್ ಡಿ. ಆರ್. ಭೀಮಸೇನರಾವ್. ಯಾವ ಪ್ರತಿಭಾವಂತನೂ ಇವರಿಂದ ಹತ್ತಕ್ಕೆ ಆರು ಅಂಕ ಪಡೆದಿದ್ದಿಲ್ಲ. ಆದರೆ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾಗಿ ಅವರ ಮುಂದೆ ನಿಂತಾಗ, ಅವರು ಹೇಳುತ್ತಿದ್ದುದು, ನಿಮ್ಮ ಪಿತ್ತ ನೆತ್ತಿಗೇರದಿರಲೆಂದು ನಾನು ಹಾಗೆ ಮಾಡುತ್ತಿದ್ದೆ, 'ನನ್ನ ಬಳಿ ಶೇ.20 ತೆಗೆದುಕೊಂಡವ ಪರೀಕ್ಷೆಯಲ್ಲಿ ಸೆಕೆಂಡ್‌ಕ್ಲಾಸ್, ಶೇ.40 ಪಡೆದರೆ ಪರೀಕ್ಷೆಯಲ್ಲಿ ಖಂಡಿತ ಫಸ್ಟ್ ಕ್ಲಾಸ್' ಎನ್ನುತ್ತಿದ್ದರು. ಕಂಪನಿ ಲಾ ಮಾಡುತ್ತಿದ್ದವರು. ಪಿಟೀಲ್‌ರಾವ್ ಅರ್ಥಾತ್ ಪಿ.ಟಿ.ಲಕ್ಷ್ಮೀನಾರಾಯಣರಾವ್. ಗಾಬರಿಗಾಬರಿಯಾಗಿ ವಿಷಯ ಒದರುತ್ತಿದ್ದ ಬಾಲಾಜಿ, ನಾವು ಹೆಚ್ಚಾಗಿ ಗೋಳು ಹುಯ್ದುಕೊಂಡಿದ್ದೂ ಇವರನ್ನೇ. ನನಗೇ ತಲೆನರೆತರೂ ಇಂದಿಗೂ ಅಚ್ಚ ಕಪ್ಪು ಕೂದಲಿರುವ, ಮುದ್ದು ಮುದ್ದಾಗಿ ಮಾತಾಡುತ್ತಾ ಕಾಸ್ಟಿಂಗ್ ಪಾಠಮಾಡುತ್ತಿದ್ದ ಪಿ.ವಿ.ನರಹರಿ, ಮುದ್ದಾದ ಅಂಕೆ ಸಂಖ್ಯೆಗಳನ್ನು ಬೋರ್ಡಿನಲ್ಲಿ ಮೂಡಿಸಿ ಲೆಕ್ಕ ಹೇಳಿಕೊಡುತ್ತಿದ್ದ ಎಂ.ಎಸ್.ಆರ್ (ರಾಮಸ್ವಾಮಿ ಐಯ್ಯಂಗಾರ್). ತೀರ ಕೋಪಬಂದಾಗ ಬಯ್ಯುತ್ತಿದುದು 'ನೀವೆಲ್ಲಾ ಚರಂಡಿಯಲ್ಲಿ ಬಿದ್ದಿರುವ ಗೊಣ್ಣೆ ಹುಳುಗಳಂತೆ ಕೊಚ್ಚೆಯಲ್ಲಿ ಒದ್ದಾಡುತ್ತೀರಿ'. ಒಮ್ಮೆ ಇವರು ತರಗತಿಗೆ ಬರುವ ಮುನ್ನ ಇವರ ಟೇಬಲ್ ಮೇಲೆ ಪ್ಯಾರಿಸ್ ಚಾಕಲೇಟ್ ಪೇಪರ್‌ನಿಂದ ಮಾಡಿದ ಬೊಂಬೆಯೊಂದನ್ನು ಸಿಕ್ಕಿಸಿಟ್ಟಿದೆವು. ಅದನ್ನು ನೋಡಿ ನಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ ಎಂದು ಅಂದುಕೊಳ್ಳುತ್ತಿದ್ದ ನಮಗೆ ಆಶ್ಚರ್ಯ. ಏನೂ ಮಾತನಾಡದೇ ಅದನ್ನು ಕೈಗೆತ್ತಿಕೊಂಡು ತಿರುಗಿಸಿನೋಡಿ "ಈ ಬುದ್ಧಿವಂತಿಕೆಯನ್ನು ಲೆಕ್ಕ ಕಲಿಯುವುದರಲ್ಲಿ ಬಳಸಿದರೆ, ಫಸ್ಟ್ ಕ್ಲಾಸ್ ಗ್ಯಾರಂಟಿ ಈ ಬಡ್ಡಿ ಮಗನಿಗೆ" ಅಂದಿದ್ದರು. ಮುಂದೆ ನಾನು ಅಧ್ಯಾಪಕ ವೃತ್ತಿಹಿಡಿದಾಗ ನನ್ನ ಆದರ್ಶ ಗುರುಗಳಲ್ಲಿ ಅಗ್ರಸ್ಥಾನ ಈ [illegible]

ಮತ್ತು ರಾಮಸ್ವಾಮಿ ಐಯ್ಯಂಗಾರರಿಗೆ. ಅವರ ರೀತಿಯನ್ನು ಅಳವಡಿಸಿಕೊಂಡೆ. ಕಚ್ಚೆ ಪಂಚೆ ವೇಸ್ಟ್ ಕೋಟ್ ಹಾಕಿಕೊಂಡು ಸ್ವಾರಸ್ಯಕರವಾಗಿ ಇಂಗ್ಲೀಷ್ ಹೇಳಿಕೊಡುತ್ತಿದ್ದ ಎಂ.ರಾಮಸ್ವಾಮಿ, ಇವರು ನಾನು ಪಿ.ಯೂ.ಸಿಯಲ್ಲಿದ್ದಾಗ ಹೇಳಿದ ಘಟನೆಯೊಂದು ಇಂದಿಗೂ ನಿಚ್ಚಳವಾಗಿ ನೆನಪಿನಲ್ಲಿದೆ. ಆಗೆಲ್ಲಾ ಕಾಲೇಜು ಓದುತ್ತಿದ್ದವರೇ ಕಡಿಮೆ ಮಂದಿ. ಪರೀಕ್ಷೆ ಮುಗಿದ ಮೇಲೆ ಮೌಲ್ಯಮಾಪನ ಮಾಡುತ್ತಿದ್ದುದು ಅದೇ ಅಧ್ಯಾಪಕರೇ, ಅದೂ ತಮ್ಮತಮ್ಮ ಮನೆಯಲ್ಲೇ. ಹೀಗೊಮ್ಮೆ ಮೌಲ್ಯಮಾಪನ ಮಾಡುತ್ತಿದ್ದ ಉತ್ತರ ಪತ್ರಿಕೆಯಲ್ಲಿ ವಿದ್ಯಾರ್ಥಿಯೊಬ್ಬ ಬಳಸಿದ್ದ ಪದ ತಲೆಕೆಡಿಸಿತಂತೆ. ಕೇಳಿದ್ದ ಪ್ರಶ್ನೆಗೂ, ಆ ಪದಕ್ಕೂ ಯಾವುದೇ ಸಂಬಂಧ ಕಲ್ಪಿಸಲು ಇವರಿಗೆ ಸಾಧ್ಯವೇ ಆಗಲಿಲ್ಲವಂತೆ. ಆ ಪದ 'ಟೈಗರ್ ಬೋನ್'. ಛಲಬಿಡದೆ ತ್ರಿವಿಕ್ರಮನಂತೆ, ಈ ಎಮ್ಮಾರ್ ಆ ವಿದ್ಯಾರ್ಥಿಯನ್ನೇ ಕರೆಸಿ, ಈ ಪದದ ಅರ್ಥ ಏನು? ನೀನು ಈ ಪ್ರಶ್ನೆಯ ಉತ್ತರವಾಗಿ ಇದನ್ನು ಏಕೆ ಬಳಸಿದೆ? ಎಂದು ಕೇಳಿದ್ದಕ್ಕೆ ಆ ಭೂಪ ನಗಲಾರಂಭಿಸಿದನಂತೆ, ತನ್ನ ಮೇಷ್ಟ್ರ ದಡ್ಡತನಕ್ಕಾಗಿ. ಅಷ್ಟೂ ಗೊತ್ತಾಗಲಿಲ್ಲವಾ ಸಾರ್, ನೀವು ಇಲಿಬೋನು ಕೇಳಿಲ್ವ, ಹಾಗೇ ಇದು ಹುಲಿಬೋನು ಅಂದನಂತೆ ಆ ಭೂಪ. ಇದನ್ನು ಹೇಳಿ ನಮ್ಮನ್ನೆಲ್ಲಾ ನಗೆಗಡಲಲ್ಲಿ ಕೆಡವಿದ್ದರು. ನಿಜವೆನ್ನಿಸುವಂತೆ ಕಾಲ್ಪನಿಕ ಕಥೆಗಳನ್ನು ಘಟನೆಗಳಂತೆ ಹೇಳಿ ನಮ್ಮ ಮೈ ನವಿರೇಳುವಂತೆ ಮಾಡುತ್ತ ಕಾನೂನು ಬೋಧನೆಮಾಡುತ್ತಿದ್ದ ಡಿ.ಸದಾಶಿವರಾವ್ ಮನದಲ್ಲಿ ಉಳಿದಿರುವ ಮತ್ತೊಬ್ಬ ಅಧ್ಯಾಪಕರು.

ಈ ಡಿ ಎಸ್ ಹೇಳಿದ ಒಂದು ಕೇಸ್ ಹೀಗಿದೆ. ಒಮ್ಮೆ ಒಂದು ಕೊಲೆ ನಡೆಯಿತು. ರೇಲ್ವೆ ಹಳಿಗಳ ಮೇಲೆ ರುಂಡವಿಲ್ಲದ ಒಂದು ದೇಹ ಬಿದ್ದಿತ್ತು. ವಕೀಲರು ಈ ರುಂಡವಿಲ್ಲದ ದೇಹಕ್ಕೇ ಕೊಲೆಗಡುಕರ ಬಗ್ಗೆ ಪ್ರಶ್ನಿಸಿದಾಗ ಆ ದೇಹ ತನ್ನ ಕೈಗಳಿಂದ ಪಕ್ಕದ ಕಾಡಿನತ್ತ ಕೈತೋರಿಸಿತು. ಆ ಜಾಡನ್ನು ಹಿಡಿದು ಹೋದ ಪೋಲೀಸರಿಗೆ ಕೊಲೆಗಡುಕರು ಸಿಕ್ಕಿ ಹಾಕಿಕೊಂಡರು. ಅಂದು ಕೇಳಿದ ಈ ವಿವರಣೆ, ಮೈ ರೋಮಾಂಚನಗೊಳಿಸಿತ್ತು. ಆದರೆ ಇದು ಎಷ್ಟರ ಮಟ್ಟಿಗೆ ಸತ್ಯ ಅನ್ನುವುದು ಇಂದೂ ನನಗೆ ಒಂದು ಯಕ್ಷ ಪ್ರಶ್ನೆಯಾಗಿದೆ. ಆದರೂ ಇವರಿಂದಲೂ ನಾನು ಕಲಿತ ಪಾಠ, ಎಂತಹ ಬೋರಿಂಗ್ ವಿಷಯವನ್ನೂ ಸ್ವಾರಸ್ಯಕರವಾಗಿ ಬೋಧಿಸುವುದು. ನಾನು ಕಮರ್ಷಿಯಲ್ ಲಾ/ ಕಂಪನಿ ಲಾ ಪಾಠಮಾಡಬೇಕಾಗಿ ಬಂದಾಗ ಸಂಬಂಧಪಟ್ಟ ಕೇಸುಗಳನ್ನು ಉದಾಹರಣೆ-ಕೊಟ್ಟು ಪಾಠ ಮಾಡಲು ಪ್ರಾರಂಭಿಸಿದ್ದು ಇವರ ಪಾಠದ ವೈಖರಿಯಿಂದಲೇ ಅನ್ನಿಸುತ್ತೆ.

ನಾನು ಬುದ್ಧಿವಂತನೋ ದಡ್ಡನೋ, ಹೆದರು ಪುಕ್ಕಲನೋ ನನಗೇ ತಿಳಿಯದು. ಬಿ.ಕಾಂ ವ್ಯಾಸಂಗಮಾಡುವಾಗಲೇ ಸಹಪಾಠಿಗಳಿಗೆ ರಜಾದಿನಗಳಲ್ಲಿ ಮಹಾರಾಜ ಕಾಲೇಜು ಪಾರ್ಕಿನಲ್ಲಿ ಕೂಡಿಸಿಕೊಂಡು ಸಂಖ್ಯಾಶಾಸ್ತ್ರ ಲೆಕ್ಕಗಳನ್ನೂ, ಅಕೌಂಟೆನ್ಸಿ ಲೆಕ್ಕಗಳನ್ನೂ ಹೇಳಿಕೊಡುತ್ತಿದ್ದೆ; ತರಗತಿಯ ಕೊನೆ ಬೆಂಚಿನಲ್ಲಿ ಕುಳಿತುಕೊಂಡು ಚೇಷ್ಟೆಮಾಡುತ್ತಿದ್ದೆ. ಅಧ್ಯಾಪಕರು ಕೇಳುತ್ತಿದ್ದ ಪ್ರಶ್ನೆಗಳಿಗೆ ಉತ್ತರ ಗೊತ್ತಿದ್ದರೂ ಉತ್ತರಿಸುವ ಧೈರ್ಯಸಾಲದೇ, ಪಕ್ಕದವರಿಗೆ ಹೇಳಿಕೊಡುತ್ತಿದ್ದೆ; ಅವರು ಆ ಉತ್ತರಗಳನ್ನು ಹೇಳಿ ಶಹಭಾಸ್‌ಗಿರಿಪಡೆದರೆ, ನಾನು ಪೆಚ್ಚುಪೆಚ್ಚಾಗಿ ನಗುತ್ತಿದ್ದೆ. ಆದರೂ ಸ್ಟಾಟಿಸ್ಟಿಕ್ಸ್‌ನಲ್ಲಿನ ಕಿರುಪರೀಕ್ಷೆ (ಟೆಸ್ಟ್)ಯಲ್ಲಿ ನಮ್ಮ ಸೆಕ್ಷನ್‌ನಲ್ಲಿ ನಾನೇ ಹೈಯೆಸ್ಟ್! ಪಕ್ಕದ ಬಿ ಸೆಕ್ಷನ್‌ನಲ್ಲಿ ಅದೇ ಟೆಸ್ಟ್‌ನಲ್ಲಿ ಅತಿ ಹೆಚ್ಚು ಅಂಕಗಳಿಸಿದ ಅನಂತನಿಗೆ ಮೇಷ್ಟ್ರು ಹೇಳಿದ್ದು, 'ಹೆಚ್ಚು ಅಂಕ ಬಂದಿದೆಯೆಂದು ಬೀಗಬೇಡ, ನಿನಗಿಂತ ಹೆಚ್ಚು ಅಂಕ ಪಡೆದವನೊಬ್ಬ ಎ ಸೆಕ್ಷನ್‌ನಲ್ಲಿದ್ದಾನೆ.' ಅಂತ. ಆಗ ನನ್ನನ್ನು ಹುಡುಕಿಕೊಂಡು ಬಂದ ಅನಂತನ್ ಮುಂದೆ ನನ್ನ ಆತ್ಮೀಯ ಗೆಳೆಯರಲ್ಲಿ ಒಬ್ಬನಾದ. ಬಾಲ್ಯಗೆಳೆಯ ಕೃಷ್ಣ ಪದವಿಮುಗಿಸಿ ಉದ್ಯೋಗ ಅರಸಿ ಹೋದನಾದರೆ, ಈ ಬಿ.ಕಾಂ ಗೆಳೆಯ ಅನಂತ ನನ್ನೊಡನೆ ಸ್ನಾತಕೋತ್ತರ ಪದವಿಮುಗಿಸಿ ಮಂಗಳೂರು ಮತ್ತು ಮೈಸೂರು ಸ್ನಾತಕೋತ್ತರ ಕೇಂದ್ರಗಳಲ್ಲಿ ಅಧ್ಯಾಪಕನಾಗಿ ದುಡಿದಿದ್ದಾನೆ. ಸಧ್ಯ ಮಾನಸಗಂಗೋತ್ರಿಯ ಬಹದ್ದೂರ ಇನ್ಸಿಟ್ಯೂಟ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್‌ನಲ್ಲಿ ಪ್ರೊಫೆಸರಾಗಿದ್ದಾನೆ. ಜೂನ್‌ನಲ್ಲಿ ನಿವೃತ್ತನಾಗುತ್ತೇನೆ ಅಂದಿದ್ದಾನೆ. ನಂತರ ರಾಣಿ ಚೆನ್ನಮ್ಮ ವಿ.ವಿ.ಯ ಕುಲಪತಿಯಾಗಿ ನಿವೃತ್ತನಾದ. ಕೃಷ್ಣ ವಾಲಂಟರಿ ತೆಗೆದುಕೊಂಡು ಕೈ ತುಂಬ ಹಣ ಕೂಡಿಸಿಕೊಂಡು, ಕಮಲಾನಗರದಲ್ಲಿ ಸ್ವಂತ ಅಪಾರ್ಟ್‌ಮೆಂಟ್ ಹೊಂದಿದ್ದಾನೆ.

ಬಿ. ಕಾಂ ನಲ್ಲಿ ನನ್ನೊಡನೆ ಇದ್ದ ಕೆಲ ಆತ್ಮೀಯರಲ್ಲಿ ಒಬ್ಬ ಜಯರಾಜ್. ಈತ ತನ್ನ ವಿಚಿತ್ರ ನಡೆವಳಿಕೆಗಳಿಂದ ನನ್ನನ್ನು ಆಕರ್ಷಿಸಿದ್ದ. ಕಾಲೇಜು ವಾರ್ಷಿಕ ಕೂಟದ ಫೋಟೋದಲ್ಲಿ ತಲೆಗೆ ಟೋಪಿಹಾಕಿಕೊಂಡು, ಅದರ ತುದಿಗೆ ಒಂದು ನೀಲಿ ಸ್ಫಟಿಕದ ಹೂ ಸಿಕ್ಕಿಸಿಕೊಂಡು ನಿಂತಿದ್ದ ದೃಶ್ಯ ಇನ್ನೂ ತಲೆಯಿಂದ ಮಾಸಿಲ್ಲ. ನಮ್ಮ ಕಾಲೇಜಿನ ಮುಂದಿನ ಸಯ್ಯಾಜಿರಾವ್ ರಸ್ತೆಯಲ್ಲಿ ಖಳನಟ ಎಂ.ಪಿ.ಶಂಕರ್ ನಡೆದುಕೊಂಡು ವಾಕಿಂಗ್ ಹೋಗುತ್ತಿದ್ದುದು ಸಾಮಾನ್ಯ. ಈ ಜಯರಾಜ್ ನಮ್ಮೊಡನೆ 'ನಾನು ಈ ಎಂ.ಪಿ.ಶಂಕರ್‌ಗೆ ಡಿಕ್ಕಿ ಹೊಡೆಯುತ್ತೇನೆ' ಅಂತ ಜಂಬ ಕೊಚ್ಚಿಕೊಂಡಿದ್ದ, ನಾವೂ ಇದನ್ನು ನೋಡಿಯೇಬಿಡೋಣ ಅಂತ ಕಾಲೇಜು ಒಳಗೆ ನಿಂತಿದ್ದೆವು. ಎಂ.ಪಿ.ಶಂಕರ್ ಆ ಕಡೆಯಿಂದಬರುತ್ತಿದ್ದರು.

ಜಯರಾಜ ಈ ಕಡೆಯಿಂದ ಎದುರುಬಂದು ಎಲ್ಲೋ ನೋಡುತ್ತಾ ಅವರಿಗೆ ಡಿಕ್ಕಿಕೊಟ್ಟು, ಸಾರಿ ಕೇಳಿದ. ಅವರು ಮುಂದಕ್ಕೆ ಹೋದನಂತರ, ನಮ್ಮಲ್ಲಿಗೆ ಬಂದ ಜಯರಾಜ 'ನೋಡಿದೆಯಾ. ನಾನು ಹೇಳಿದಂತೆ ಮಾಡಿದೆ' ಎಂದ. ಇನ್ನೊಬ್ಬ ಸ್ನೇಹಿತ ಗುರುದೇವ. ಅವನನ್ನು ಬಂಡಲ್ ಗುರುದೇವ ಅಂದರೆ ತಪ್ಪಾಗಲಾರದೇನೋ. ಬರೀ ಬೂಗಳೆ ಬಿಡುತ್ತಿದ್ದ ಈತ ನಮ್ಮನ್ನು ರೋಚಕ ಕಥೆಗಳ ಮೂಲಕ ಖುಷಿಪಡಿಸುತ್ತಿದ್ದುದಂತೂ ಸತ್ಯ. ನೆನಪಿನಲ್ಲಿ ಉಳಿದಿರುವವರಲ್ಲಿ ಎಳಂದೂರು ಎಂಬ ಸರ್‌ನೇಮ್ ಹೊಂದಿದ್ದ ನಾರಾಯಣಮೂರ್ತಿ, ಕಣ್ಣದಕ ಉಜ್ಜಿಕೊಳ್ಳುವಂತೆ [illegible] ಕರ್ಚೀಫಿನಿಂದ ಒಮ್ಮೆ ಕ್ಲಾಸ್ ಪರೀಕ್ಷೆಯಲ್ಲಿ ಕಾಪಿಹೊಡೆದಿದ್ದ ಎಂ.ಎಸ್. ಕೃಷ್ಣಸ್ವಾಮಿ, ಹಾಸನದ ಹತ್ತಿರದ ಶಾಂತಿಗ್ರಾಮದ ಮತ್ತೊಬ್ಬ ಎಸ್.ಎನ್.ಕೃಷ್ಣಸ್ವಾಮಿ, ಕಳ್ಳ ರಾಮಚಂದ್ರ, ಇತರರ ಸಹಪಾಠಿಗಳು. ಈ ನಾರಾಯಣಮೂರ್ತಿ ನನಗೆ ತಿಳಿದಂತೆ ಬೆಂಗಳೂರಿನ ಕಿಸಾನ್ ಆಗ್ರೋ ಫುಡ್ಸ್ ಕಂಪನಿಯಲ್ಲಿ ಕೆಲಸದಲ್ಲಿದ್ದ. ಎಂ.ಎಸ್. ಕೃಷ್ಣಸ್ವಾಮಿ ಒಮ್ಮೆ ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜಿನ ಪಕ್ಕದ ರಸ್ತೆಯಲ್ಲಿ ಮನೆಮಾಡಿದ್ದ. ಶಾಂತಿಗ್ರಾಮದ ಕೃಷ್ಣಸ್ವಾಮಿ ಕೆನರಾಬ್ಯಾಂಕಿನಲ್ಲಿ ಕೆಲಸದಲ್ಲಿದ್ದ. ರಾಮಚಂದ್ರ ಹಿಂದಿನ ಬೆಂಚಿನ ಸಹಪಾಠಿ ಯಾವಾಗಲೋ ಕುರ್ಚಿ ಕದ್ದಿದ್ದ ಎಂದು ತಿಳಿದುಬಂದಿತ್ತು. ಒಮ್ಮೆ ನಾವೆಲ್ಲರೂ ಸೋಮನಾಥಪುರಕ್ಕೆ ಪಿಕ್‌ನಿಕ್ ಹೋಗಿದ್ದೆವು. ಅಲ್ಲಿ ನನಗೆ ಮೊದಲಬಾರಿಗೆ ಸಿಗರೇಟು ಸೇದಿಸುವ ಪ್ರಯತ್ನ ಮಾಡಿಸಿದರು. ಆಗಲೋ ಯಾವಾಗಲೋ ಕದ್ದು ಸೇದುತ್ತಿದ್ದ ಚಟವಾಗುವವರೆಗೂ ಬೆಳೆದು ಮದುವೆಯಾದನಂತರದ ಹಲವಾರು ವರ್ಷಗಳ ನಂತರ ಬಲುಕಷ್ಟದಿಂದ ಬಿಟ್ಟುಹೋಯಿತು. ಮತ್ತೊಬ್ಬ ಜಲಪುರಿ ಗುರುಮೂರ್ತಿ. ಓದುತ್ತಿದ್ದಾಗಲೇ ಸಹಪಾಠಿ ಜ್ಯೋತಿನಗರದಿಂದ ಬರುತ್ತಿದ್ದ ನಳಿನಿಗೆ ಡವ್‌ಹೊಡೆಯುತ್ತಿದ್ದ.

ಇನ್ನೊಬ್ಬ ನಾಗರಾಜನೂ ನಳಿನಿ ಸ್ನೇಹಕ್ಕಾಗಿ ಹಪಹಪಿಸುತ್ತಿದ್ದ. ನನಗೂ ನನ್ನನ್ನು ಯಾರಾದರೂ ಮಾತನಾಡಿಸಬಾರದೇ ಅನ್ನಿಸುತ್ತಿತ್ತು. ಯಾವ ಹೆಣ್ಣೂ ಸ್ನೇಹಿತೆಯಾಗಿರಲು ಇಷ್ಟ ಪಡಲಿಲ್ಲ. ಇದ್ದ ಮೂರುಮಂದಿಯಲ್ಲಿ ಒಬ್ಬಳು ಮೆಡ್ಡಿ ಭಾರತಿ. ಮತ್ತೊಬ್ಬಳು ಮುದಿ ಪ್ರಭಾಮಣಿ ಮತ್ತು ಮೂರನೆಯವಳೇ ನಳಿನಿ. ಒಮ್ಮೆ ಮಾತ್ರ ವಯಸ್ಸಾದವಳಂತಿದ್ದ ಪ್ರಭಾಮಣಿ ಅನ್ನುವವಳು ನೋಟ್ಸ್ ಕೇಳಿದ್ದಳು. ಪಾಲಿಗೆ ಬಂದಿದ್ದೇ ಪಂಚಾಮೃತ ಅಂತ ಅಂದುಕೊಂಡು. ಖುಷಿಯಿಂದ ನೀಡಿದ್ದೆ. ಕೇವಲ 40 ಕಿಲೋ ತೂಕದ ಸಣಕಲ ದೇಹದ ಯಾವುದೇ ವಾಹನ ಹೊಂದಿರದ, ಹೆಚ್ಚು ಪಾಕೆಟ್‌ಮನಿ ಹೊಂದಿರದ ನನ್ನನ್ನು ಯಾರು ಇಷ್ಟಪಡುತ್ತಾರೆ ಅಲ್ಲವಾ? ಬಿ.ಕಾಂ ಅಂತಿಮ ವರ್ಷದಲ್ಲಿ ಕಲ್ಯಾಣ್‌ಕುಮಾರ್ ಮತ್ತು ರೇವತಿ

ಸಾಮಾನ್ಯವಾಗಿ ತಂಗುತ್ತಿದ್ದ ನಾವೆಲ್ಲ ಅವರದೇ ಹೋಟೆಲ್ ಅಂದುಕೊಂಡಿದ್ದ ಸುಜಾತ ಹೋಟೆಲಿನಲ್ಲಿ "ಸ್ನೇಹ ಸಮ್ಮಿಲನ" ಎಂಬ ವರ್ಷಾಂತ್ಯಕೂಟ ಏರ್ಪಡಿಸಿದ್ದೆವು. ಆ ಸಂದರ್ಭಕ್ಕಾಗಿ "ಈ ಮಿಲನ, ಸ್ನೇಹ ಸಮ್ಮಿಲನ, ಎಂದೂ ಮರೆಯಲಾಗದ ನಮ್ಮ ಸಮ್ಮಿಲನ" ಎಂಬ ಒಂದು ಕವನವನ್ನು ರಚಿಸಿದ್ದೆ. ಅದನ್ನು ಸಮಾರಂಭದಲ್ಲಿ ಹಾಡಿ ಸಂತೋಷಪಟ್ಟಿದೆನು.

## 64. ಮೌನ ಕ್ರಾಂತಿ (Silent Revolution)

ಕ್ರಾಂತಿ (Revolution) ತತ್‌ಕ್ಷಣದ/ ದಿಢೀರ್ ಬದಲಾವಣೆ ಸೂಚಿಸಿದರೆ ವಿಕಾಸ(Evolution) ಬದಲಾದ ಪರಿಸ್ಥಿತಿಗೆ ನಿಧಾನವಾಗಿ ಹೊಂದಿಕೊಳ್ಳುವುದು ಎನ್ನಬಹುದು. ಸಮಾಜದಲ್ಲಿ ಕ್ರಾಂತಿ ಸಾಧ್ಯ, ಆದರೆ ಪ್ರಕೃತಿಯಲ್ಲಿ ವಿಕಾಸ ಮಾತ್ರ ಸಾಧ್ಯ. ಪ್ರಕೃತಿಯ ಕ್ರಾಂತಿ ಅಂದರೆ ಅದು ವಿನಾಶ. ಆದರೆ ಉತ್ಪಾದನಾ/ವಾಣಿಜ್ಯ ಕ್ಷೇತ್ರಗಳಲ್ಲಿಯೂ ಈ ಎರಡೂ ಬದಲಾವಣೆಗಳನ್ನು ಕಾಣಬಹುದು. Diversification ಅನ್ನೋ ಹೆಸರಿನಲ್ಲಿ ಕೈಗಾರಿಕಾ ಸಂಸ್ಥೆಗಳು ತಾವು ಹಿಂದಿನಿಂದಲೂ ತಯಾರಿಸುತ್ತಿದ್ದ ವಸ್ತುಗಳ ಉತ್ಪಾದನೆಯನ್ನು ಸ್ಥಗಿತಗೊಳಿಸಿ ಅಥವಾ ಹಳೆಯದರ ಜೊತೆಗೆ, ಹೊಸ ವಸ್ತುಗಳ ಉತ್ಪಾದನೆಯಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು, ಬದಲಾದ ಪರಿಸ್ಥಿತಿಯಲ್ಲಿ ತಮ್ಮ ಬದುಕನ್ನು ಕಂಡುಕೊಳ್ಳುವ ಚಾಳಿ ಈಚಿನ ದಿನಗಳಲ್ಲಿ ಕಂಡುಬರುತ್ತಿದೆ. ಈ ಸಂಬಂಧ ಸರ್ಕಾರಿ ಕಾನೂನುಗಳು ಮತ್ತು ಗ್ರಾಹಕರ ಆದ್ಯತೆಗಳಲ್ಲಿ ಉಂಟಾಗುವ ಬದಲಾವಣೆಗಳನ್ನೂ ಗಮನಿಸಬೇಕಾಗುತ್ತದೆ. ಯಾವುದಾದರೂ ಉತ್ಪನ್ನ ಗ್ರಾಹಕ ಹಿತವಿರೋಧಿ ಅಂತ ಅನ್ನಿಸಿಕೊಂಡಲ್ಲಿ ಅದರ ಉತ್ಪಾದನೆಯನ್ನು ಕೈಬಿಟ್ಟು ಬೇರೆ ಗ್ರಾಹಕಸ್ನೇಹಿ ವಸ್ತುಗಳನ್ನು ಉತ್ಪಾದಿಸದೇ ಬೇರೆ ಯಾವ ಮಾರ್ಗಕಾಣುತ್ತದೆ? ಇಂತಹ ಸಂಕಟ ಪರಿಸ್ಥಿತಿಯಲ್ಲಿ ಬದಲಾವಣೆಗೆ ಒಗ್ಗದಕಂಪನಿಗಳು, ವ್ಯವಹಾರ ನಿಲ್ಲಿಸಿ, ಕಂಪನಿ ಮುಚ್ಚಿಕೊಂಡು ಹೋದ ಉದಾಹರಣೆಗಳು ನಮ್ಮ ಮುಂದಿವೆ. ಬ್ರೂಕ್‌ಬಾಂಡ್ ಬಿಎಸ್‌ಎ ಬಾಂಡ್ ಮೋಟರ್‌ಬೈಕ್, ನರ್ಮದಾ ಸ್ಕೂಟರ್, ಸ್ಟಾಂಡರ್ಡ್ ಕಾರು ಉತ್ಪಾದನಾ ಸಂಸ್ಥೆ, ಐಡಿಯಲ್ ಜಾವಾ ಮುಂತಾದವು. ಕೋಕಾಕೋಲ, ಪೆಪ್ಸಿಕೋಲಾ,

ಮ್ಯಾಗಿ ನೂಡಲ್ಸ್ ಭಾರತದ ಮಾರುಕಟ್ಟೆಯಲ್ಲಿ ಮಾರಾಟ ಏರುಪೇರು ಕಾಣಬೇಕಾಯಿತು. ಕೆಲವು ಸಂಸ್ಥೆಗಳು ದೇಶ ತೊರೆದವು, ಮತ್ತೆ ಕೆಲವು ಇತರ ಸಂಸ್ಥೆಗಳೊಡನೆ ಹೊಂದಾಣಿಕೆ ಮಾಡಿಕೊಂಡು ಬದುಕಿದವು. ಫಿಯಟ್ ಕಾರು ಕಂಪನಿ, ಹೀರೋ-ಹೊಂಡಾ ಮುಂತಾದವು. ಕೆಲವು ಗಟ್ಟಿಯಾಗಿ ಪೈಪೋಟಿ ನಡೆಸಿ ತಮ್ಮ ಅಸ್ತಿತ್ವವನ್ನು ಇನ್ನೂ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ಉದಾ: ರಾಯಲ್ ಎನ್‌ಫೀಲ್ಡ್ ಕಂ., ಕೋಕಾಕೋಲ ಕಂಪನಿ. ಇಂತಹ ಇಕ್ಕಟ್ಟಿನ ಪರಿಸ್ಥಿತಿ ಎದುರಿಸಬೇಕಾಗಿ ಬಂದುದು ಪ್ರಖ್ಯಾತ ಸಿಗರೇಟ್ ತಯಾರಕರಾದ ಐ.ಟಿ.ಸಿ ಯವರಿಗೆ. ಅದು ಹತ್ತಾರು ಬಗೆಯ ಸಿಗರೇಟುಗಳನ್ನು ತಯಾರಿಸಿ ಕೋಟ್ಯಾಂತರ ರೂ.ಗಳ ವ್ಯವಹಾರ ನಡೆಸುತ್ತಿದ್ದ ಕಂಪನಿ. ಎಳೆ ಹುಡುಗರಿಂದ ಹಣ್ಣುಹಣ್ಣು ಮುದುಕರವರೆಗೂ ಹೊಗೆಸೊಪ್ಪು ಚಟ ಹತ್ತಿಸಿ, ಅವರ ಅನಾರೋಗ್ಯದ ಚಟ್ಟದಮೇಲೆ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದ ಈ ಕಂಪನಿ, ವ್ಯವಹಾರಕ್ಕೆ ತಂಬಾಕು ನಿಷೇದ ಕಾನೂನಿನ ಜಾರಿಯಿಂದ ಕೊಡಲಿಪೆಟ್ಟು ಬಿದ್ದಂತಾಯಿತು. ಕಂಪನಿ ಅನಿವಾರ್ಯವಾಗಿ ಇತರೆ ವಸ್ತು ಉತ್ಪಾದನೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳದಿದ್ದಲ್ಲಿ, ಕಂಪನಿ ಮುಚ್ಚುವ ಪರಿಸ್ಥಿತಿ ನಿರ್ಮಾಣವಾಗುತ್ತಿತ್ತು. ಲಕ್ಷಾಂತರ ಷೇರುದಾರರು ಮುಳುಗಿಹೋಗುತ್ತಿದ್ದರು. ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡು ತನ್ನ ವ್ಯವಹಾರ ಮುಂದುವರಿಸಿಕೊಂಡು ಹೋಗಲು, ತಂಬಾಕು ಬೆಳೆಗಾರರು ನಿರ್ಗತಿಕರಾಗುತ್ತಾರೆ ಎಂಬ ನೆಪ ಮುಂದೊಡ್ಡಿತು. ಸಿಗರೇಟು ಪ್ಯಾಕುಗಳ ಮೇಲೆ "ಸಿಗರೇಟು ಸೇವನೆ ಆರೋಗ್ಯಕ್ಕೆ ಹಾನಿಕರ" ಎಂಬ ಎಚ್ಚರಿಕೆ ಮುದ್ರಿಸಿ ಮಾರಾಟ ಮುಂದುವರೆಸಿತು. ಸರ್ಕಾರದ, ಸಾಮಾಜಿಕ ಕಾರ್ಯಕರ್ತರ ಒತ್ತಡ ಹೆಚ್ಚಿ ತಂಬಾಕು ಎಲ್ಲ ರೀತಿಯ ಉತ್ಪನ್ನಗಳ ಮಾರಾಟ ನಿಷೇಧ ವಿಧಿಸುವುದು ಅನಿವಾರ್ಯ ಅಂತಾದಾಗ, ಕೊನೆಗೂ ಎಚ್ಚೆತ್ತ ಕಂಪನಿ ಕಾನೂನಿನ ಮುಂದೆ ಮಂಡಿಯೂರಿತು. ಹೊಸ ಹೊಸ ಉತ್ಪನ್ನಗಳತ್ತ ತನ್ನ ಗಮನ ಕೇಂದ್ರೀಕರಿಸಲು ಆರಂಭಿಸಿತು. ಖಾದ್ಯ ತೈಲ, ಅಯೋಡಿನ್ ಸಹಿತ ಉಪ್ಪು,ಮಸಾಲೆ ಪದಾರ್ಥಗಳು, ಹೋಟಲ್ ಉದ್ಯಮ, ವಿವಿಧ ರೀತಿ ಬಿಸ್ಕತ್‌ಗಳು, ರೆಡಿಮಿಕ್ಸ್/ರೆಡಿಮೀಲ್ಸ್ ಐಟಂಗಳು, ಬೆಂಕಿಪೊಟ್ಟಣ, ಅಗರಬತ್ತಿ ಮುಂತಾದ ಕ್ಷೇತ್ರಗಳಿಗೆ ಪ್ರವೇಶ ಪಡೆದು ಯಶಸ್ವಿಯಾಗಿದೆ. ಬದುಕಿಬಾಳುವ ಕಲೆಯನ್ನು ಈ ರೀತಿ ರೂಢಿಸಿಕೊಂಡು, ಜನಪ್ರಿಯ ಕಂಪನಿಯಾಗಿ ರೂಪ ಪರಿವರ್ತನೆ ಪಡೆದಿದೆ. ಈ ಜಾಣ್ಮೆಯನ್ನು ಎಲ್ಲರೂ ಅಳವಡಿಸಿಕೊಂಡರೆ ಎಷ್ಟು ಚೆನ್ನ ಅಲ್ಲವೇ?

## 65. ಹೊರಗಡೆ ತಿಂಡಿ ತಿನ್ನಲು ಹಾತೊರೆಯುವುದೇಕೆ?

ಅದು ಹಾಗೇನೇ ಅಂತ ಕಾಣುತ್ತೆ. ಕೆಲಸದ ಕಾರಣದಿಂದಲೋ, ವಿದ್ಯಾಭ್ಯಾಸದ ಕಾರಣಕ್ಕಾಗಿಂಯೋ ಬೇರೇ ಊರುಗಳ ಹಾಸ್ಟಲುಗಳಲ್ಲಿಂಯೋ, ಹೋಟಲುಗಳಲ್ಲಿಂಯೋ ದಿನಂಪ್ರತಿ ತಿನ್ನಬೇಕಾದವರು, ಅರೇ ಯಾವಗಪ್ಪಾ ನಾವು ಮನೆ ಊಟ ಮಾಡುವಂತಾಗುತ್ತದೆ ಎಂದುಕೊಂಡರೆ, ತಮ್ಮ ಮನೆಯ ಬಳಿಯೇ ಕೆಲಸಕಾರ್ಯ ಮಾಡಿಕೊಂಡು ಸಮಯಸಮಯಕ್ಕೆ ಮನೆ ಊಟ ತಿನ್ನುವವರಿಗೆ ಯಾವಾಗಲಾದರೊಮ್ಮೆ ಹೋಟಲೂಟ ಮಾಡಬೇಕೆಂಬ ಚಪಲ ಮೂಡುವುದು ಸಹಜ. ಇದು ಮನುಷ್ಯನ ವೀಕ್‌ನೆಸ್ ಗಳಲ್ಲೊಂದೆನಿಸುತ್ತದೆ. ಅದೇನೋ ಕಣಪ್ಪ, ಅದೇನು ಹಾಕಿ ತಿಂಡಿ ತಯಾರಿಸುತ್ತಾರೋ, ಆ ಹೋಟಲ್ ತಿಂಡಿ ಬಾಯಿಗೆ ಒಂತರಾ ರುಚಿ. ಮತ್ತೆಮತ್ತೆ ತಿನ್ನಬೇಕೆನಿಸುತ್ತದೆ. ನನಗಂತೂ ನನ್ನ ವಿದ್ಯಾಭ್ಯಾಸದ ವೇಳೆಯಲ್ಲಾಗಲೀ, ನಂತರ ನಾನು ನೌಕರಿ ತಲಾಶ್ ಮಾಡಿಕೊಂಡು ಪಕ್ಕದೂರಿಗೆ ಹೋದಾಗಲಾಗಲೀ ಹೋಟಲ್ ಊಟ, ತಿಂಡಿ ಮಾಡುತ್ತಿದ್ದುದು ಬಹಳ ಅಪರೂಪದ ಸಂಗತಿ. ನಾನು ಕಾಲೇಜು ಕಲಿಯುತ್ತಿದ್ದ ಸಮಯ. ಕಾಲೇಜು ಮುಗಿಸಿ ಮನೆಗೆ ಬಂದಮೇಲೆ, ಸಂಜೆಯಾಯಿತೆಂದರೆ, ಸ್ನೇಹಿತರೊಡನೆ ಒಂದು ರೌಂಡ್ ವಾಕಿಂಗ್ ಹೊರಡುತ್ತಿದ್ದೆವು. ಒಮ್ಮೆ ಒಂಟಿಕೊಪ್ಪಲಿನ ಆಕಾಶವಾಣಿಪಾರ್ಕ್‌ವರೆಗೆ ಹೋದರೆ, ಮತ್ತೊಮ್ಮೆ ಹಾರ್ಡಿಂಗ್ ಸರ್ಕಲ್ ಬಳಿಯ ನಿಷಾದ್‌ಬಾಗ್ ವರೆಗೆ ಹೋಗುತ್ತಿದ್ದೆವು. ಒಮ್ಮೆಯಂತೂ ಮೈಲ್ಯಾಕ್ ಪೇಂಟ್ಸ್ ಕಂಪನಿಯ ಹತ್ತಿರವಿದ್ದ ಈದ್‌ಗಾ ಮೈದಾನದ ಗುಡ್ಡಹತ್ತಿಬಂದಿದ್ದೂ ಉಂಟು.

ಹಾಗೆ ಹೋಗಿವಾಪಸಾಗುವಾಗ ಯಾವುದಾದರೂ ಹೋಟಲಿಗೆ ನುಗ್ಗಿ ಬಜ್ಜಿ ಬೋಂಡಾ ತಿನ್ನುತ್ತಿದ್ದುದು ಮಾಮೂಲಿ. ಅದರಲ್ಲೂ ಸಾಧ್ಯವಾದಾಗಲೆಲ್ಲಾ ಟೌನ್‌ಹಾಲ್ ಹಿಂಭಾಗದ ಗಾಂಧಿಸ್ಕ್ವೇರ್‌ನಲ್ಲಿರುವ 'ಮಧುನಿವಾಸ್' ನಮ್ಮ ಪೆಟ್ ಕಾರ್ನರ್. ಒಮ್ಮೊಮ್ಮೆ ಅದರ ಹಿಂಭಾಗದಲ್ಲಿ ಪ್ರಭಾ ಥಿಯೇಟರ್ ಮಗ್ಗುಲ ಕಾಫಿಹೌಸ್‌ಗೂ ಹೋಗುತ್ತಿದ್ದೆವು. ಹೀಗೆ ಹೊರಗಿನ ತಿಂಡಿ ತಿನ್ನುವುದು ನನ್ನ ಫೇವರೈಟ್ ಹಾಬಿಗಳಲ್ಲೊಂದು.

ನಾನು ಪದವಿಮುಗಿಸಿ ಮಂಡ್ಯದಲ್ಲಿ ಅಧ್ಯಾಪಕನಾಗಿ ಕೆಲಸಕ್ಕೆ ಸೇರಿದ ಕೆಲವು ತಿಂಗಳುಗಳಲ್ಲೇ ಪರಿಚಯವಾದ ಸಹೋದ್ಯೋಗಿ ರಾಮದೇವತುಂಗ, ಕನ್ನಡ ಅಧ್ಯಾಪಕ. ಅವರ ತಂದೆ ಪೇಟೇಬೀದಿಯಲ್ಲಿ ಪ್ರಾರಂಭಿಸಿದ್ದ 'ತರಕಾರಿ ಹೋಟಲ್' ಅವರ ನಿಧನದ ನಂತರ ಅವರ ಮಗ, ರಾಮದೇವತುಂಗರ ತಮ್ಮ, ಶ್ರೀನಿವಾಸತುಂಗ ನೋಡಿಕೊಳ್ಳುತ್ತಿದ್ದರು. ಸಂಜೆಯಾಯಿತೆಂದರೆ ಅವರ ಜೊತೆ ಹೋಟಲಿಗೆ ಹೋಗಿ ಫೇಮಸ್ 'ರಾಮಣ್ಣ ದೋಸೆ' ತಿಂದು ಬರುತ್ತಿದ್ದೆವು. ಮುಂದೆ ಶಾಸ್ತ್ರಿ ಮತ್ತು ಶ್ರೀವತ್ಸ ಪರಿಚಯವಾದರು. ಸಂಜೆವೇಳೆ ಕುಳಿತು ಹರಟೆಹೊಡೆಯಲು ಒಂದು ತಾಣ ಸಿಕ್ಕಿತ್ತು. ಅಲ್ಲಿಗೆ ಬಂದು ಸೇರುತ್ತಿದ್ದ ಇತರರೊಡನೆ ತರಕಾರಿ ಹೋಟಲಿಗೆ ಮೆರವಣಿಗೆಯಂತೆ ಹೊರಟು ರಾಮಣ್ಣದೋಸೆ ಸವಿದು ಮನೆಗೆ ವಾಪಸಾಗುತ್ತಿದ್ದೆ. ಈ ಚಟ ಮದುವೆಯಾಗಿ, ನನ್ನ ಹೆಂಡತಿಯೊಡನೆ ಬೇರೆ ಮನೆಮಾಡುವವರೆಗೆ ಮುಂದುವರೆದಿತ್ತು.

ಅಲ್ಲಿಂದಾಚೆಗೆ ನನ್ನ ಹೋಟಲು ತಿಂಡಿಗೆ ಬಿತ್ತು ಕತ್ತರಿ! ಹೆದರಬೇಡಿ ಅಂದಿನಿಂದ ಇಂದಿನವರೆಗೂ ನಾನು ಹೋಟಲಿಗೆ ಹೋಗಲು ಅವಕಾಶವೇ ಬಲು ಅಪರೂಪವಾಗಿಬಿಟ್ಟಿದೆ. ಏಕೆಂದರೆ ಹೊತ್ತುಹೊತ್ತಿಗೆ ನನ್ನ ಹಸಿವನ್ನು ಅರ್ಥಮಾಡಿಕೊಂಡು ಆಗಾಗ ಏನಾದರೂ ತಿನ್ನಲು ಕೊಟ್ಟುಬಿಡುತ್ತಾಳೆ ನನ್ನ ಶ್ರೀಮತಿ. ಆದುದರಿಂದಲೇ ನಾನು ಹೇಳಿದುದು. ನನಗೆ ಹೋಟಲಿನಲ್ಲಿ ತಿನ್ನುವ ಅವಕಾಶವನ್ನೇ ಕಿತ್ತುಕೊಂಡು ಬಿಟ್ಟಳು ನನ್ನ ಹೆಂಡತಿ ಅಂದುದು. ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ಹೋಟಲಿನ ಕಲಬೆರಕೆ ಆಹಾರ ತಿನ್ನುವುದು ತಪ್ಪಿ ಆರೋಗ್ಯ ಸುಧಾರಿಸಿದೆ ಅನ್ನಬೇಡಿ. ಅಪರೂಪಕ್ಕೊಮ್ಮೆ ಹೊರಗಡೆ ಅಂದರೆ ಹೋಟಲಿನಲ್ಲೋ, ಯಾರಾದರೂ ತಿಥಿಗೋ, ಮದುವೆಗೋ ಊಟಕ್ಕೆ ಕರೆದರೆ ಆನಂದವೋ ಆನಂದ ಆದರೂ ಹೊರಗೆ ತೋರಿಸಿಕೊಳ್ಳುವಂತಿಲ್ಲ. ಅಂತಹ ಸಂದರ್ಭಗಳಲ್ಲಿ ನನ್ನ ಹೆಂಡತಿ ಆ ಅವಕಾಶವನ್ನು ತಪ್ಪಿಸಲು ಹೇಳುತ್ತಿದ್ದ

ಒಂದುಕಾರಣ: 'ನನಗೆ ಹೊರಗೆ ತಿಂದರೆ ಮೈಗೆ ಆಗಿ ಬರೊಲ್ಲಾ, ಫುಡ್ ಪಾಯ್ಸನ್ ಆಗುತ್ತೆ'. ಜೊತೆಗೆ 'ಎಷ್ಟು ಚೆನ್ನಾಗಿ ಮೃಷ್ಟಾನ್ನ ಮಾಡಿಕೊಟ್ಟರೂ, ರಸ್ತೆಬದಿಯದನ್ನು ಕಂಡರೆ ಚಂಗನೆ ಹಾರುವ ಶುನಕದಂತೆ, ನಿಮ್ಮ ಬುದ್ಧಿ' ಎಂದು ಮೂದಲಿಸುತ್ತಾಳೆ.

## 66. ನಾನು ಅವ(ನಾ/ಳಾ)ಗಿದ್ದಿದ್ದರೆ?

ಇದೊಂದು ವಿಚಿತ್ರ ಅನ್ನಿಸಿಕೆ. ಗಂಡು ಮಕ್ಕಳಾದ ದಂಪತಿಗಳು ತಮ್ಮ ಮಗುವಿಗೆ, ಮೊಗ್ಗಿನ ಜಡೆ, ಹೆಣ್ಣುವೇಷ ಹಾಕಿ ಹರ್ಷಿಸಿದರೆ, ಹೆಣ್ಣು ಹೆತ್ತವರು ತಮ್ಮ ಮಗುವಿಗೆ ಗಂಡುಡುಗೆ ಹಾಕಿ ಫೋಟೋ ತೆಗೆಸುವುದು ನಾವೆಲ್ಲರೂ ಗಮನಿಸಿರುವ ಅಂಶ. ಎರಡೂ ಮಕ್ಕಳು ಇರುವವರು ಅದಕ್ಕೆ ಇದರ ಉಡುಪು, ಇದಕ್ಕೆ ಅದರ ಉಡುಪು ಹಾಕುವುದೂ ಉಂಟು. ಮನೋವಿಜ್ಞಾನಿಗಳು ಹೇಳುವಂತೆ ಪ್ರತಿ ಗಂಡಿನಲ್ಲಿಯೂ ಕೆಲಭಾಗ ಹೆಣ್ಣಿನ ಭಾವನೆಗಳು (ಹೆಂಗರುಳು) ಇರುವಂತೆ ಪ್ರತಿ ಹೆಣ್ಣಿನಲ್ಲಿಯೂ ಕೆಲವಂಶ ಗಂಡಿನ ಗಢಸುತನ (ಗಂಡುಬೀರಿತನ) ಇರುತ್ತದೆ.

ಒಂದು ಹೆಣ್ಣಿನ ಮನಸ್ಸಿನ ಭಾವನೆಗಳನ್ನು ಮತ್ತೊಂದು ಹೆಣ್ಣು ಮಾತ್ರ ಅರಿಯಬಲ್ಲುದು ಎಂಬುದಾಗಿರಬಹುದು ಅಥವಾ ಒಂದು ಹೆಣ್ಣು ತನ್ನ ಭಾವನೆಗಳನ್ನು, ಮತ್ತೊಂದು ಹೆಣ್ಣಿನೊಡನೆ ಹಂಚಿಕೊಳ್ಳುವಷ್ಟು ಸಲೀಸಾಗಿ ಮತ್ತೊಂದು ಗಂಡಿನೊಂದಿಗೆ, ಅವನು ತನ್ನ ಗಂಡನೇ ಆಗಿದ್ದರೂ, ತನ್ನೆಲ್ಲ ಭಾವನೆಗಳನ್ನು ಹಂಚಿಕೊಳ್ಳಲು ಬಯಸುವುದಿಲ್ಲ. ಕೆಲವೊಂದು ವಿಷಯಗಳನ್ನು ತನ್ನಲ್ಲೇ ಮುಚ್ಚಿಟ್ಟುಕೊಂಡು ಯಾರೊಂದಿಗೂ ಹಂಚಿಕೊಳ್ಳದೇ ಸಾಯುವುದೂ ಉಂಟು. ಅದನ್ನು ಅರಿಯಲು ನಾನು ಹೆಣ್ಣಾಗಿರಬಾರದಿತ್ತೇ ಎಂದು ಗಂಡಸರು ಒಂದಲ್ಲ ಒಂದುಭಾರಿ ಅಂದುಕೊಂಡಿರಬಹುದು. ಹೆಂಗಸರು ಹೆಂಗಸರು ಒಂದೆಡೆ ಕಲೆತಾಗ ಏನು ಮಾತನಾಡುತ್ತಿರುತ್ತಾರೆ ಎಂಬ ಕುತೂಹಲ ಎಲ್ಲ ಗಂಡಸರಿಗೂ ಇರುತ್ತದೆ. ಏಕೆಂದರೆ ಅವರು ಎಷ್ಟು ಹೊತ್ತಾದರೂ ಮಾತು ನಿಲ್ಲಿಸುವುದೇ ಇಲ್ಲ.

ಬಹುತೇಕ ನಟರು ಒಂದಲ್ಲ ಒಂದು ಸಿನಿಮಾದಲ್ಲಿ ಹೆಣ್ಣುವೇಷಹಾಕಿ ನಟಿಸಿರು ವುದನ್ನು ನೋಡಬಹುದು. ಅದು ಜಗ್ಗೇಶನ ಮೇಕಪ್ ಸಿನಿಮಾ ಇರಬಹುದು, ರಮೇಶಅರವಿಂದ್ ಅಭಿನಯದ ರಂಗೇಗೌಡ ಅಥವಾ ಶರಣ್‌ರ ಜೈಲಲಿತಾ ಸಿನಿಮಾ ಪಾತ್ರವಿರಬುದು. ಮುಖ್ಯಮಂತ್ರಿ ಚಂದ್ರು, ಶ್ರೀಧರ್, ದುನಿಯ ವಿಜಿಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಎಲ್ಲ ಹುಡುಗರಿಗೂ ತಮ್ಮ ವಿದ್ಯಾರ್ಥಿದೆಸೆಯಲ್ಲಿ ಒಮ್ಮೆಯಾದರೂ ತಾವು ಹುಡುಗಿಯರಾಗಿದ್ದರೆ ಅನ್ನಿಸಿರುತ್ತದೆ. ಅಂತೆಯೇ ಹೆಣ್ಣುಮಕ್ಕಳಿಗೂ ತಾವು ಹುಡುಗನಾಗಿದ್ದರೆ ಅನ್ನಿಸದೇ ಇರದು.

ಯುವಕರು ಒಬ್ಬೊಬ್ಬರೇ ಇರುವಾಗ, ಮನೆಯವರೆಲ್ಲ ಹೊರಹೋಗಿರುವಾಗ, ತಮ್ಮ ಅಕ್ಕ ತಂಗಿಯರ ಉಡುಪುಗಳನ್ನು ಧರಿಸಿ ಕನ್ನಡಿಮುಂದೆ ನಿಂತು ತಮ್ಮ ಆಕಾರ-ವಿಕಾರಗಳನ್ನು ನೋಡಿ ಸಂತೋಷಿಸುವುದೂ ಸಾಮಾನ್ಯ. ಇನ್ನು ಹೆಣ್ಣು ಮಕ್ಕಳಂತೂ ಬಹಿರಂಗವಾಗಿಯೇ ಜೀನ್ಸ್ ಪ್ಯಾಂಟ್, ಟೀ ಶರ್ಟ್ ತೊಟ್ಟು ಓಡಾಡುತ್ತಿರುವುದು ಇಂದು ಸರ್ವೇ ಸಾಮಾನ್ಯ ಸಂಗತಿಯಾಗಿದೆ. ಗಂಡು ಹುಡುಗರು ತಮ್ಮ ಗೆಳೆಯರನ್ನು 'ಬಾಮ್ಮ, ಹೋಗಮ್ಮ' ಎನ್ನುವುದು, ಅಂತೆಯೇ ಹೆಣ್ಣುಮಕ್ಕಳು ತಮ್ಮ ಗೆಳತಿಯರೊಂದಿಗೆ 'ಕಂ-ಡಾ, ಗೋ-ಡಾ' ಎಂದು ಸಂಭೋಧಿಸುವುದು ಸಾಮಾನ್ಯ ಸಂಗತಿ.

ಈ ಗೀಳು ಕೆಲವರಲ್ಲಿ ಅತಿಯಾದಾಗ ಅವರು ಈ ವಿಚಿತ್ರ 'ಗಂಡೆಣ್ಣು' ಅಥವಾ 'ಹೆಣ್ಗಂಡು' ವರ್ಗಕ್ಕೆ ಸೇರುತ್ತಾರೆ ಎನ್ನಬಹುದು. ಕೆಲವರಂತೂ ತಮ್ಮ ಈ ವಿಚಿತ್ರ ಕಾಮನೆಯನ್ನು ಆಗಗೊಳಿಸಲಿಕ್ಕಾಗಿ, ತಮ್ಮ ಲಿಂಗವನ್ನೇ ಬದಲಾವಣೆ ಮಾಡಿಸಿಕೊಳ್ಳುವ ಶಸ್ತ್ರಚಿಕಿತ್ಸೆಯ ಹುಚ್ಚುಸಾಹಸಕ್ಕೂ ಕೈಹಾಕುವುದು ಕಂಡುಬರುತ್ತದೆ. ಆದರೂ ಪ್ರಕೃತಿಯೇ ಗಂಡು ಹೆಣ್ಣುಗಳ ನಡುವೆ ಕೆಲವು ದೈಹಿಕ ವ್ಯತ್ಯಾಸಗಳನ್ನು ಮಾಡಿ, ನೀವು ನಿಮ್ಮ ಲಿಂಗವನ್ನು ಎಷ್ಟೇ ಮುಚ್ಚಿಡಲು ಪ್ರಯತ್ನಿಸಿದರೂ ಅದು ಸಾಧ್ಯವಾಗದಂತೆ ನೋಡಿಕೊಂಡಿದೆ. ಹೆಂಗಸರು ತಾವೂ ಗಂಡಸರಂತೆ ಎಲ್ಲ ಕ್ಷೇತ್ರಗಳಲ್ಲಿಯೂ ಕಾರ್ಯನಿರ್ವಹಿಸುತ್ತೇವೆಂದು ಮುಂದೆಬರುತ್ತಿದ್ದಾರೆ. ಇದು ಕೆಲಮಟ್ಟಿಗೆ ಸಾಧ್ಯವಾದರೂ ಸಹಾ, ಒಂದು ಗಂಡಸು ಮಕ್ಕಳನ್ನು ಹೆರಲು ಸಾಧ್ಯವೇ ಇಲ್ಲ. ಕೆಲವೊಮ್ಮೆ ಪ್ರಕೃತಿ ಗಂಡುಲಕ್ಷಣಗಳುಳ್ಳ ಹೆಣ್ಣುಗಳನ್ನೂ, ಹೆಣ್ಣು ಲಕ್ಷಣಗಳುಳ್ಳ ಗಂಡುಗಳನ್ನೂ ಸೃಷ್ಟಿಮಾಡಿಬಿಟ್ಟು ಎಡವಟ್ಟು ಮಾಡಿಬಿಡುತ್ತದೆ. ಸಮಾಜ ಅವರನ್ನೇ ಚನ್ನಪಟ್ಟಣ' 'ಚಕ್ಕಾ' 'ನಪುಂಸಕ' 'ಬೃಹನ್ನಳೆ' ಎಂದೆಲ್ಲಾ ಕರೆಯುತ್ತಿದೆ. ಈಗ ಅವರನ್ನು 'ಥರ್ಡ್ ಜಂಡರ್'/ 'ತೃತೀಯ ಲಿಂಗಿ' ಎಂಬ ಪ್ರತ್ಯೇಕ ವರ್ಗವಾಗಿ ಪರಿಗಣಿಸಿದೆ. ಇತ್ತೀಚಿನವರೆಗೂ

ಇಂತಹವರಿಗೆ ಮತದಾನದ ಹಕ್ಕು ನೀಡಲಾಗಿರಲಿಲ್ಲ. ಅವರಿಗೂ ಮೀಸಲಾತಿ ಕಲ್ಪಿಸಬೇಕೆಂಬ, ಶಿಕ್ಷಣದಲ್ಲಿ ಅವಕಾಶ ಕಲ್ಪಿಸಬೇಕೆಂಬ ಬೇಡಿಕೆ ಪರಿಗಣನೆಯಲ್ಲಿದೆ. ಇತ್ತೀಚೆಗೆ ನಮ್ಮ ಕನ್ನಡದ ಲಿಂಗದೇವರು ನಿರ್ದೇಶಿಸಿದ ಈ ವಿಷಯಹೊಂದಿರುವ ಸಂಚಾರಿ ವಿಜಯ್ ನಟಿಸಿದ 'ನಾನು ಅವನಲ್ಲ ಅವಳು' ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಲಭಿಸಿರುವುದು ಈ ತೃತೀಯ ಲಿಂಗಿಗಳ ಬಗೆಗೆ ನಮ್ಮ ತಾತ್ಸಾರ ವರ್ತನೆ ಬದಲಾಗಬೇಕೆಂಬ ಸಂದೇಶ ಸಾರುತ್ತಿದೆ. ಸಮಾಜ ಅವರನ್ನು ತಮ್ಮಲ್ಲೊಬ್ಬರಂತೆ ಒಪ್ಪಬೇಕಷ್ಟೆ.

## ಪದ್ಮ – ಸೀತಾರಾಮ್ ದಂಪತಿಗಳ ಬದುಕು ಬವಣೆ

ಎಳಂದೂರು ಕಡೆಯಿಂದ ಅಂದು ಆ ಕೆಂಪು ಬಸ್ಸು ಧೂಳೆಬ್ಬಿಸುತ್ತಾ ಏದುಸಿರುಬಿಡುತ್ತಾ ಸಾಗುತ್ತಿತ್ತು. ಅನತಿದೂರದಲ್ಲಿ ಬೆಟ್ಟದ ಮೇಲಿನ ಆ ದೇವಸ್ಥಾನ ಕಾಣಿಸಿದ್ದೇ ತಡ ಬಸ್ಸಿನಲ್ಲಿದ್ದವರೆಲ್ಲರಲ್ಲಿ ಭಕ್ತಿ ಸ್ಫುರಿಸಿತು. ಶ್ರದ್ಧೆಯಿಂದ ಕುಳಿತಲ್ಲಿಂದಲೇ ಶ್ರೀ ರಂಗನಾಥನಿಗೆ ಶಿರಬಾಗಿ ನಮಸ್ಕರಿಸಿದರು. ಆದರೆ ಅದನ್ನು ತಲುಪಲು ಇನ್ನೂ ಹಲವಾರು ಘಂಟೆಗಳ ಪ್ರಯಾಣ ದುರ್ಗಮ ಅರಣ್ಯದಲ್ಲಿನ ತಿರುವುಗಳಲ್ಲಿ ಸಾಗಬೇಕಿತ್ತು, ಬೆಟ್ಟದ ದಾರಿಯನ್ನೂ ಕ್ರಮಿಸಬೇಕಿತ್ತು. ಯಾವುದೇ ಕ್ಷಣದಲ್ಲಿಯಾದರೂ ಆನೆಗಳ ಹಿಂಡು ರಸ್ತೆಗೆ ಅಡ್ಡವಾಗಿ ಬರಬಹುದಿತ್ತು; ಬಸ್ಸಿನ ಚಾಲಕ ಏಮಾರಿದರೇ ಒಳಗಿದ್ದವರೆಲ್ಲರೂ ಒಂದೇ ಸಾರಿಗೆ ನೂರಾರು ಅಡಿ ಕಂದರಕ್ಕೆ ಧುಮುಕಬೇಕಾಗಿತ್ತು. ಇದಾವುದೂ ಆಗದೇ ಬೆಟ್ಟದ ತಪ್ಪಲನ್ನು ಹಾದು ಮೇಲೇರಿ ಬಿಳಿಗಿರಿರಂಗನ ಸನ್ನಿಧಿಗೆ ಎಲ್ಲರನ್ನೂ ಸುರಕ್ಷಿತವಾಗಿ ತಂದು ಸೇರಿಸಿತ್ತು ಆ ಕೆಂಪು ಬಸ್ಸು. ಇದಕ್ಕಾಗಿ ಪ್ರಯಾಣಿಕರೆಲ್ಲರೂ ಮತ್ತೊಮ್ಮೆ ಸ್ವಾಮಿಗೆ ತಮ್ಮ ಕೃತಜ್ಞತೆ ಸಲ್ಲಿಸಿದರು. ಸೀತಾರಾಮ ಪದ್ಮ ದಂಪತಿಗಳು ತಮಗೆ ವಹಿಸಿದ್ದ ಕಾರ್ಯ ನಿರ್ವಹಿಸುವ ಮೊದಲು ರಂಗನಾಥನ ದರ್ಶನ ಪಡೆದು ಪೂಜೆಮಾಡಿಸಿದರು. ತಮ್ಮ ಗುರಿ ಹುಡುಕುತ್ತಾ ಮತ್ತೆ ಬೆಟ್ಟದಿಂದ ಕೆಳಗಿಳಿಯಲು ಪ್ರಾರಂಭಿಸಿದರು. ಸುಮಾರು 2 ಕಿ.ಮೀ ದೂರ ಕ್ರಮಿಸಿದಾಗ ಕೆಲವು ಸೋಲಿಗರ ಪೋಡುಗಳು ಗೋಚರಿಸಿದವು. ತಣ್ಣಗೆ ಹರಿಯುತ್ತಿದ್ದ ಝರಿಯ ಪಕ್ಕದಲ್ಲಿ, ಹುಲ್ಲು ಮಾಡು ಹೊದಿಸಿದ್ದ ಆದಿವಾಸಿಗಳ ಗುಡಿಸಲುಗಳೇ ಈ ಪೋಡುಗಳು. ಅವರಾಡುತ್ತಿದ್ದ ಭಾಷೆಯೋ

ಕನ್ನಡವೇ ಆಗಿದ್ದರೂ ಕನ್ನಡ ಅನ್ನಿಸುತ್ತಿರಲಿಲ್ಲ. ಹೆಸರಿಗೆ ತಕ್ಕಂತೆ ಆದಿವಾಸಿಗಳಂತೆಯೇ ಬಾಳ್ವೆ ನಡೆಸುತ್ತಿದ್ದ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ಈ ದಂಪತಿಗಳನ್ನು, ಗಾಂಧಿ ಸ್ಮಾರಕ ನಿಧಿಯವರು ನೇಮಿಸಿ ಬಿಳಿಗಿರಿ ರಂಗನ ಬೆಟ್ಟಕ್ಕೆ ಕಳುಹಿಸಿದ್ದರು. ಅದಾಗಲೇ ಈ ಪ್ರಯತ್ನವನ್ನು, ಈ ಹಿಂದೆ ಕೆಲವರಿಗೆ ವಹಿಸಲಾಗಿತ್ತಾದರೂ, ಅದರಲ್ಲಿ ಯಶಕಾಣದೇ ಅವರೆಲ್ಲ ಊರು ಬಿಟ್ಟಿದ್ದರು. ಛಲಬಿಡದ ತ್ರಿವಿಕ್ರಮನಂತೆ ಗಾಂಧಿ ಸ್ಮಾರಕ ನಿಧಿಯವರು ಈ ದಂಪತಿಗಳಿಗೆ ಆ ಕಾರ್ಯವನ್ನು ವಹಿಸಿದ್ದರು. ಯುವದಂಪತಿಗಳಲ್ಲಿ ಇನ್ನೂ ಜೀವನೋತ್ಸಾಹ ಪುಟಿಯುತ್ತಿದ್ದುದರಿಂದ ಇದನ್ನು ಒಂದು ಸವಾಲಾಗಿ ಸ್ವೀಕರಿಸಿ ಇಲ್ಲಿಗೆ ಬಂದಿದ್ದರು. ಪೋಡುಗಳ ಪಕ್ಕದಲ್ಲಿ ಶಾಲೆ ಎಂಬ ಹೆಸರಿನಲ್ಲಿ ಒಂದು ಗುಡಿಸಲು ಅರ್ಧಂಬರ್ಧ ಜೀರ್ಣವಾದ ಸ್ಥಿತಿಯಲ್ಲಿ ನಿಂತಿತ್ತು. ತುರ್ತಾಗಿ ತಮಗೆ ವಾಸಮಾಡಲು ಒಂದು ವ್ಯವಸ್ಥೆ ಮಾಡಿಕೊಳ್ಳಬೇಕಿತ್ತು. ಅಲ್ಲಿರುವ ಸೋಲಿಗರೊಡನೆ ಸಂಕೇತ ಭಾಷೆಗಳನ್ನು ಬಳಸಿ ಅವರ ಸಹಾಯದಿಂದ ತಮ್ಮ ವಾಸಕ್ಕೆ ಮತ್ತು ಶಾಲೆಗೆ ಎರಡು ಗುಡಿಸಲುಗಳನ್ನು ನಿರ್ಮಿಸಿಕೊಂಡರು. ತಮ್ಮ ಜೀವನಾವಶ್ಯಕ ವಸ್ತುಗಳನ್ನು ಬೆಟ್ಟದ ಕೆಳಗಿನಿಂದ ಅಥವಾ ಎಳಂದೂರಿನಿಂದ ಕತ್ತೆಗಳ ಮೇಲೆ ಹೇರಿಸಿಕೊಂಡು, ನಡೆದುಕೊಂಡು ಬರಬೇಕಿತ್ತು. ಬಸ್ಸಿಗಾಗಿ ಕಾದರೆ ಇಡೀ ದಿನಕ್ಕೆ ಇರುತ್ತಿದ್ದುದು ಒಂದೇ ಒಂದು ಕೆಂಪುಬಸ್ಸು. ಶಾಲೆ ತೆರೆಯಲು ಎಲ್ಲ ಸಿದ್ಧತೆ ಆಗಿತ್ತು;ಆದರೆ ಬೇಕಾದ ವಿದ್ಯಾರ್ಥಿಗಳೆಲ್ಲಿ? ವಿದ್ಯಾರ್ಥಿಗಳನ್ನು ಕರೆತರಲು ಸೋಲಿಗರ ಹಿರಿಯರ ಮನವೊಲಿಸುವ ಸಾಹಸ ಮಾಡಬೇಕಿತ್ತು. ಹಿರಿಯರೊಪ್ಪಿದರೆ ಮಕ್ಕಳೊಪ್ಪುತ್ತಿರಲಿಲ್ಲ; ಮಕ್ಕಳೊಪ್ಪಿದರೆ ಹಿರಿಯರೇ ಒಪ್ಪುತ್ತಿರಲಿಲ್ಲ. ಊಟ ತಿಂಡಿ ಆಸೆ ತೋರಿಸಿ, ಕಷ್ಟಪಟ್ಟು ಐದಾರು ಮಕ್ಕಳನ್ನು ಕಲೆಹಾಕಿದ್ದಾಯಿತು. ಬೆಳಿಗ್ಗೆ ತಿಂಡಿ ತಿನ್ನಿಸಿ ಪ್ರಾರ್ಥನೆ ಮಾಡಿಸಿ ಅಕ್ಷರ ತಿದ್ದುಹಾಕಬೇಕು ಅನ್ನುವಷ್ಟರಲ್ಲಿ ಎರಡು ಬೆರಳು ತೋರಿಸಿ ಕಾಡಿಗೆ ಓಡಿಹೋದ ಮಕ್ಕಳು ಹಿಂತಿರುಗಿ ಬರುತ್ತಿರಲಿಲ್ಲ. ಊಟವಾದ ಮೇಲೂ ಇದೇ ಕಥೆ.. ಕೆಲವು ಭಾರಿ ಈ ದಂಪತಿಗಳು ಆ ಮಕ್ಕಳ ಹಿಂದೆಯೇ ಕಾಡಿನಲ್ಲಿ ಓಡಿಹೋಗಿ ಅವರನ್ನು ಹಿಡಿಯಲುಯತ್ನಿಸಿ ಕಾಲಿಗೆ ಕಳ್ಳಿಮುಳ್ಳು ಚುಚ್ಚಿಸಿಕೊಂಡು ನೋವನುಭವಿಸಿದ್ದೂ ಆಯಿತು. ಅಂತೂ ಸಾಹಸಪಾಡಿ ಎರಡಂಕಿ ಮಕ್ಕಳನ್ನು ಸೇರಿಸುವುದರಲ್ಲಿ ಯಶಸ್ವಿಯಾಗಿದ್ದೇ ಈ ದಂಪತಿಗಳ ಸಾಧನೆ. ತಮ್ಮ ಮಕ್ಕಳನ್ನೂ ಈ ಸೋಲಿಗರ ಮಕ್ಕಳೊಟ್ಟಿಗೇ ವಿದ್ಯಾಭ್ಯಾಸ ಮಾಡಿಸಿದರು ಈ ದಂಪತಿಗಳು. ಸಂಜೆಹೊತ್ತು ಸೋಲಿಗರ ಮಕ್ಕಳಜೊತೆಗೆ ಕಾಡಿನಲ್ಲಿ ಅಲೆದಾಡಿ, ಕಾಡಿನ ಹಣ್ಣುಗಳನ್ನು ತಿಂದು, ಕಡ್ಡಿ ಜೇನು ತಿಂದು

ಬಾಯಿ ಚಪ್ಪರಿಸುತ್ತಿದ್ದರು. ಝರಿಯ ಬಳಿ ಹೋಗಿ ನೀರಿನಲ್ಲಿ ಕಾಲು ಆಡಿಸುತ್ತಾ ಕುಳಿತ ಮಕ್ಕಳಿಗೆ, ದೂರದಲ್ಲಿ ಆನೆಗಳ ಹಿಂಡು ನೀರುಕುಡಿಯಲು ಬಂದುದು ಕಂಡು ರೋಮಾಂಚನ ಆಗುತ್ತಿತ್ತು. ಒಮ್ಮೆಯಂತೂ ಅವುಗಳಲ್ಲಿ ಕೆಲವು ಈ ಮಕ್ಕಳ ಕಡೆ ಕಾಲುಹಾಕಿದಾಗ ಒಬ್ಬೊಬ್ಬರೂ ಒಂದೊಂದು ದಿಕ್ಕಿಗೆ ದಿಕ್ಕಾಪಾಲಾಗಿ ಪೇರಿಕಿತ್ತಿದ್ದನ್ನು, ಇಂದಿಗೂ ಮಕ್ಕಳು ನೆನೆಸಿಕೊಂಡು ಮೈ ಬೆವರುತ್ತಾರೆ.

ಕ್ರಮೇಣ ತಮಗೆ ಬೇಕಾದ ತರಕಾರಿಗಳನ್ನು ಪಕ್ಕದಲ್ಲೇ ಬೆಳೆಯತೊಡಗಿದರು. ತೊಗರಿ, ಹುರುಳಿ, ಬದನೆ, ಬಾಳೆ, ಹಲಸು ಮುಂತಾದ ಗಿಡಮರಗಳನ್ನೂ ಬೆಳೆಸತೊಡಗಿದರು. ಮೊದಲ ಬಾರಿಗೆ ಬೆಳೆ ತೆಗೆದುದರಿಂದ ಎಲ್ಲ ಬೆಳೆಗಳೂ ಸೊಂಪಾಗಿ ಬೆಳೆದವು. ಕಾಡಿನಲ್ಲಿದ್ದ ಆನೆಗಳ ಹಿಂಡು ಆಗಾಗ ಈ ತೋಟಕ್ಕೆ ನುಗ್ಗಿ ದಾಳಿಮಾಡತೊಡಗಿದವು. ರಾತ್ರಿ ಅವುಗಳ ಕೂಗಾಟ, ಮಣ್ಣಿನ ಗೋಡೆಗೆ ಮೈತಿಕ್ಕಾಟ, ಬೆಳಗಾಗೆದ್ದು ಹೊರನೋಡಿದರೆ, ಹೊಸಕಿಹಾಕಿದ ಬಳ್ಳಿಗಳು, ಹೊಸದಾಗಿ ಹಾಕಿದ ಲದ್ದಿ ಅವುಗಳು ಬಂದುಹೋಗಿದ್ದ ಕುರುಹುಗಳು. ಜೀವ ಅಂಗೈಲಿಟ್ಟುಕೊಂಡು ಕಾಲ ಸವೆಸಹತ್ತಿದರು ಸೀತಾರಾಮ ಪದ್ಮ ದಂಪತಿಗಳು. ಮೇಲುಕೋಟೆಯ ಸಂಪ್ರದಾಯಸ್ಥ ಕುಟುಂಬದಿಂದ ಬಂದ ಸೀತಾರಾಮ್ ಹಸುಸಾಕಣೆ ಕೂಡಾ ಮಾಡಿದರು.ಸೋಲಿಗ ಮಕ್ಕಳಿಗೆ ಹೇರ್ ಕಟ್ ತಾವೇ ಖುದ್ದಾಗಿ ಮಾಡಿದರು. ಮೊದಮೊದಲು ಅಡಿಗೆ ಮಾಡಲು ಒಂದೆರಡು ಮಣ್ಣಿನ ಮಡಕೆಗಳು, ಊಟ ಮಾಡಲು ಒಂದು ಮಣ್ಣಿನ ತಟ್ಟೆ, ನಂತರದ ದಿನಗಳಲ್ಲಿ, ಮಣ್ಣಿನ ಮಡಕೆಗಳ ಜೊತೆ ಅಲ್ಯೂಮಿನಿಯಂ, ಹಿತ್ತಾಳೆ,ತಾಮ್ರದ ಪಾತ್ರೆಗಳನ್ನು ಕೊಂಡಾಗ ಅವುಗಳಿಗೆ ಕಲಾಯಿಯನ್ನೂ ತಾವೇ ಮಾಡುತ್ತಿದ್ದರು. ಹೀಗೆ ಕೃಷಿಕ,ಅಡುಗೆ ಭಟ್ಟ, ಕ್ಷೌರಿಕ, ಮೇಸನ್, ಪ್ಲಂಬರ್, ಕಲಾಯ್‌ಸಾಬ್ ಹೀಗೆ ವಿವಿಧ ಪಾತ್ರಗಳನ್ನು ಶಿಕ್ಷಕ ವೃತ್ತಿಯ ಜೊತೆಗೇ ಯಶಸ್ವಿಯಾಗಿ ನಿರ್ವಹಿಸಿದವರು ಈ ಸೀತಾರಾಮ್. ಈ ಮಧ್ಯೆ ಬೆಟ್ಟಕ್ಕೆ ಟಾರು ರಸ್ತೆ ಬಂತು, ಬಸ್ಸುಗಳ ಓಡಾಟ ಹೆಚ್ಚಾಯಿತು. ಒಂದೊಂದೇ ಹೋಟಲ್‌ಗಳು ಬೆಟ್ಟದಲ್ಲಿ ತಲೆಎತ್ತಲಾರಂಭಿಸಿದವು. ಸೋಲಿಗರು ನಾಗರೀಕತೆಗೆ ತಮ್ಮನ್ನು ಒಗ್ಗಿಸಿಕೊಳ್ಳತೊಡಗಿದರು. ಅವರಲ್ಲೂ ಮಕ್ಕಳ ವಿದ್ಯಾಭ್ಯಾಸದ ಪ್ರಾಮುಖ್ಯತೆಯ ಅರಿವುಮೂಡತೊಡಗಿತು. ಸರ್ಕಾರದವರೂ ಸಹಾ ಕಾಡನ್ನು ಕಡಿದು ಆಲೂಗೆಡ್ಡೆಫಾರಂ ಮಾಡಿದರು. ಕಡಿದ ಮರಗಳನ್ನು ಸಾಗಿಸಲು ಸಾಕಿದ ಆನೆಗಳನ್ನು ಹೆಗ್ಗಡದೇವನಕೋಟೆ ಕಡೆಯಿಂದ ಬರಮಾಡಿಕೊಂಡರು. ಆ ಆನೆಗಳಿಗೆ ತಿರುಗಾಡಿಸಿಕೊಂಡು, ಮೈ ತೊಳೆಸಿಕೊಂಡು

ಹೋಗಲು ಅವರು ಬರುತ್ತಿದ್ದುದು ಈ ಗಾಂಧಿ ಸ್ಕೂಲಿನ ಬಳಿ ಹರಿಯುತ್ತಿದ್ದ ಹಳ್ಳದ ಬಳಿಗೆ. ಒಮ್ಮೆ ಆ ಸಾಕಿದ ಆನೆಗಳ ಜೊತೆ ಬಂದ ಒಂದು ಆನೆಮರಿ ಇವರ ಹಿರಿಮಗನನ್ನು ಅಟ್ಟಿಸಿಕೊಂಡು ಬಂದಾಗ ಅವರ ಹಿರಿಮಗ ಸಣ್ಣ ಮರವೊಂದನ್ನು ಏರಿ ಕುಳಿತಿದ್ದನಂತೆ. ಆದರೂ ಆನೆಮರಿ ಹತ್ತಿರಬಂದಾಗ ಧುಮುಕಿ ಮನೆಕಡೆ ಓಟ ಕಿತ್ತನಂತೆ! ಅಡ್ಡಬಂದ ಆನೆಮರಿ ಇವನನ್ನು ಹಣೆಯಿಂದ ತಳ್ಳತೊಡಗಿದಾಗ, ಇವನೂ ಅದನ್ನು ಹಿಂದಕ್ಕೆ ತಳ್ಳಹೊರಟನಂತೆ! ಕೊನೆಗೆ ಗೆದ್ದವರು ಯಾರೆಂದು ಗೊತ್ತಾಯಿತಲ್ಲ. ಮೈಕೈ ತರಚಿಕೊಂಡು ಮನೆಗೆ ಬಂದು ಉಗಿಸಿಕೊಂಡನಂತೆ. ಇನ್ನು ಆ ಸೋಲಿಗಮಕ್ಕಳ ವಿದ್ಯಾಭ್ಯಾಸ ಎಂತಹದು! ಒಂದಿಡೀ ವರ್ಷ ಅ,ಆ ತಿದ್ದಿ ಹಾಕುತ್ತಿದ್ದರಂತೆ. ವರ್ಷದ ಕೊನೆಗೆ ಆ ಅ,ಆ ಅಕ್ಷರಗಳನ್ನು ಆ ಮಕ್ಕಳು ಬರೆಯುತ್ತಿದ್ದುದು ತಿರುಗಾಮುರುಗಾ. ಅದನ್ನು ಸರಿಮಾಡಲು ಮತ್ತೆ ಹೆಣಗಾಟ, ಮಕ್ಕಳ ಗೋಣಗಾಟ. ಅಂತೂ ಇಂತೂ ಒಂದನೇ ತರಗತಿಯಿಂದ ಆರನೇ ತರಗತಿವರೆಗೆ ಈ ಗುರುಕುಲದಲ್ಲೇ ಮಕ್ಕಳ ಶಿಕ್ಷಣ ಮುಂದುವರೆಯಬೇಕು. ನಂತರ ಏಳನೇ ತರಗತಿ ಪರೀಕ್ಷೆ, ಅದೇ ಪಬ್ಲಿಕ್ ಪರೀಕ್ಷೆ ಎದುರಿಸಲು ಚಾಮರಾಜನಗರಕ್ಕೋ, ಎಳಂದೂರಿಗೋ ಹೋಗಿ ಅಲ್ಲಿಯೇ ಶಾಲೆ ಕಲಿತು ಪರೀಕ್ಷೆ ಬರೆಯಬೇಕು. ಹೀಗೆ ವಿದ್ಯಾಭ್ಯಾಸ ಮುಂದುವರೆಸಿ ಡಬ್ಬಲ್ ಡಿಗ್ರಿ ಮಾಡಿ ಮುಗಿಸಿದ ಒಬ್ಬನೇ ಒಬ್ಬ ಸೋಲಿಗ ವಿದ್ಯಾರ್ಥಿ. ಅವನಿಗೆ ಕೆಲಸಕ್ಕಾಗಿ ಅಲೆದಲೆದು ಸಾಕಾಗಿ,ಕೊನೆಗೂ ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಒಂದು ಕೆಲಸ ಸಿಕ್ಕಿದ್ದು ಇಡೀ ಪೋಡಿನವರಿಗೆ ಮತ್ತು ಶಿಕ್ಷಕ ಸೀತಾರಾಮಪದ್ಮ ದಂಪತಿಗಳಿಗೂ ಹಿಡಿಸಲಾರದ ಸಂತಸ ತಂದಿತು. ಪಡೆದ ಸಂಬಳ ಸಾರ್ಥಕವಾಯಿತೆಂದು ಹಿಗ್ಗಿದರು.

ಬಿಳಿಗಿರಿ ರಂಗನ ಬೆಟ್ಟಕ್ಕೆ ಬರಲು ಗಾಂಧಿ ಸ್ಮಾರಕ ನಿಧಿಯವರು ಕಾರಣ ಎಂದು ಈ ಹಿಂದೆ ತಿಳಿಸಲಾಗಿತ್ತು. ಏಕೆಂದರೆ ಈ ದಂಪತಿಗಳು ಕೆಂಗೇರಿಯ ಗಾಂಧಿ ಪ್ರಣೀತ ಜೀವನ ಶಿಕ್ಷಣ ಕೇಂದ್ರದಲ್ಲಿ ಒಟ್ಟಿಗೆ ತರಬೇತಿ ಪಡೆಯುತ್ತಿದ್ದರು. ಇಬ್ಬರ ಧ್ಯೇಯೋದ್ದೇಶಗಳೂ ಒಂದೇ ಇದ್ದುದರಿಂದ ಮುಂದೆ ಒಟ್ಟಾಗಿ ಸಮಾಜಸೇವೆ ಮಾಡುವ ಇಚ್ಛೆಮೇರೆಗೆ, ಇಬ್ಬರೂ ಬಾಳಸಂಗಾತಿಗಳಾದರು. ಬೇರೆ ಬೇರೆ ಪ್ರಾಂತ್ಯಗಳಿಂದ ಮನೆತನಗಳಿಂದ ಬಂದ ಇವರ ಮದುವೆಯನ್ನು ಎರಡೂ ಕಡೆಯ ಹಿರಿಯರು ಅನುಮೋದಿಸಲಿಲ್ಲ. ಆದರೂ ಯೌವನದ ಹುಚ್ಚು ಉತ್ಸಾಹ, ಗಾಂಧಿ ಮಹಾತ್ಮನಲ್ಲಿನ ಅಚಲ ವಿಶ್ವಾಸ ಇವರನ್ನು ತಮ್ಮ ದಾರಿಯಲ್ಲಿ

ಮುಂದುವರಿಯಲು ಉತ್ತೇಜಿಸಿತು. ಇದಕ್ಕೂ ಮೊದಲು ಸೀತಾರಾಮ ವಿದ್ಯಾರ್ಥಿ ದೆಸೆಯಿಂದಲೇ ದೇಶದ ಸ್ವಾತಂತ್ರ್ಯ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಜೈಲು ಶಿಕ್ಷೆಯನ್ನೂ ಅನುಭವಿಸಿದ್ದರು ಜೈಲು ಶಿಕ್ಷೆ ಇವರನ್ನು ದೇಶದ ಸ್ವಾತಂತ್ರ್ಯ ಹೋರಾಟದಿಂದ ವಿಮುಖಗೊಳಿಸುವ ಬದಲು ಅದರೆಡೆಗೆ ಸೆಳೆಯಿತು. ತಮ್ಮ ಉಳಿದ ಜೀವಿತವನ್ನು ಸಮಾಜಸುಧಾರಣೆಗೆ ಮುಡಿಪಾಗಿಡುವ ಪಣ ಕೈಗೊಂಡು ಕೆಂಗೇರಿಯ ಜೀವನ ಶಿಕ್ಷಣ ಕೇಂದ್ರ ಸೇರಿದರು. ಸ್ವಾತಂತ್ರ್ಯ ಹೋರಾಟಗಾರರ ಜೊತೆ ಸೇರಿಕೊಂಡು ಕರಪತ್ರ ಹಂಚುವುದು, ಘೋಷಣೆಕೂಗುವುದು ಮುಂತಾದ ಚಿಕ್ಕವರು ಮಾಡಬಹುದಾದ ಅಳಿಲು ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ತಾವೇ ಚರಕದಿಂದ ನೂಲು ತೆಗೆದು, ಅದನ್ನು ಖಾದಿಭಂಡಾರಕ್ಕೆ ಒಯ್ದುಮುಟ್ಟಿಸಿ, ಅದಕ್ಕೆ ಬದಲಾಗಿ ಖಾದಿ ಬಟ್ಟೆ ಪಡೆದು ಜೀವನದುದ್ದಕ್ಕೂ ಖಾದಿಧಾರಿಯಾಗಿ ಬಾಳಿದರು. ತಮ್ಮ ಪತ್ನಿಗೂ ಖಾದಿ ಬಿಟ್ಟು ಬೇರೆ ಮಿಲ್ ಬಟ್ಟೆ ತೊಡುವುದನ್ನು ನಿಷೇಧಿಸಿದರು. ತಮ್ಮ ಮಕ್ಕಳಿಗೂ ಖಾದಿ ಧಾರಣೆ ಮಾಡಿಸಿದರು. ಬೆಟ್ಟದ ಇವರ ಶಿಕ್ಷಣ ಕೇಂದ್ರಕ್ಕೆ ಹೆಸರಾಂತ ಸಾಹಿತಿಗಳಾದ ದ.ರಾ.ಬೇಂದ್ರೆ, ತ್ರಿವೇಣಿ ಸಹೋದರಿಯರು, ಅಲನಹಳ್ಳಿ ಕೃಷ್ಣ, ಕೆ.ರಾಮದಾಸ್, ಲಾಯರ್ ವೆಂಕಟರಂಗ ಅಯ್ಯಂಗಾರ್, ಪುತಿನ ಮಗಳು ಅಲಮೇಲು, ರಾಮಕೃಷ್ಣಾಶ್ರಮದ ಸ್ವಾಮಿಗಳು ಮುಂತಾದವರು, ಹಲಕೆಲವು ವಿದೇಶಿ ವ್ಯಕ್ತಿಗಳು ಭೇಟಿ ನೀಡಿ ಇವರ ಕಾರ್ಯವನ್ನು ಶ್ಲಾಘಿಸಿದ್ದರು. ಸೋಲಿಗ ಮಕ್ಕಳಿಗೆ ಆಟಪಾಠಗಳ ಜೊತೆಗೆ ಗಾಂಧಿಭಜನೆ, ದೇಶಭಕ್ತಿ ಗೀತೆಗಳನ್ನು ಹಳೇ ಸಿನಿಮಾಹಾಡುಗಳ ಧಾಟಿಯಲ್ಲಿ ರಚಿಸಿ ಬಾಯಿಪಾಠ ಮಾಡಿಸಿದ್ದರು ಪದ್ಮ. ಈ ಮಕ್ಕಳ ಬಾಯಿಂದ ಗೀತೆಗಳನ್ನು ಕೇಳಿ ಮನಸೋತ ಅತಿಥಿಗಳು ಸೋಲಿಗ ಮಕ್ಕಳ ಫೋಟೋಗಳನ್ನು ಕ್ಲಿಕ್ಕಿಸಿದ್ದರೂ ಕೂಡಾ. ಬೆಟ್ಟಕ್ಕೆ ಬರುವ ಮೊದಲು ಕರ್ನಾಟಕದ ಇತರೆ ಕಡೆಗಳಲ್ಲೂ ವಿಧವಿಧವಾದ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಸೀತಾರಾಮ್‌ಪದ್ಮ ದಂಪತಿಗಳು, ವಿನೋಬ ಭಾವೆ ಹಾಗೂ ಅವರ ಸಹೋದರ ಬಾಳ್ಕೋಬಾ ಭಾವೆಯವರ ಕರ್ನಾಟಕ ಪ್ರವಾಸದ ವೇಳೆ ಅವರೊಡನೆಯೇ ತಮ್ಮ ಮಕ್ಕಳ ಸಮೇತ ಸಂಚರಿಸಿದರು. ವಿವಿಧ ಗ್ರಾಮಗಳಲ್ಲಿ ವಾಸ್ತವ್ಯ ಏರ್ಪಡಿಸಿ, ಅವರ ಭಾಷಣಗಳನ್ನು ಗ್ರಾಮಸ್ಥರಿಗೆ ತಿಳಿಹೇಳುವಲ್ಲಿ ನಿರತರಾದರು. ತಮ್ಮಲ್ಲಿದ್ದ ಒಡವೆಗಳನ್ನು ಈ ಸಂದರ್ಭದಲ್ಲಿ ವಿನೋಬರವರ ಪಾದಚರಣಗಳಿಗೆ ಅರ್ಪಿಸಿ ಮಾದರಿ ದಂಪತಿಗಳಾದವರು ಈ ಪದ್ಮಸೀತಾರಾಮ್ ಇವರ ಕಿರಿಮಗನನ್ನು

ವಿನೋಬಾ ತಮ್ಮ ತೊಡೆಯಲ್ಲಿ ಕೂರಿಸಿಕೊಳ್ಳುತ್ತಿದ್ದ ದೃಶ್ಯ ಇನ್ನೂ ಇವರ ಕಣ್ಣಿಗೆ ಕಟ್ಟಿದಂತಿದೆ. ಇಂದು ಆ ಪದ್ಮಳೂ ಇಲ್ಲ, ಸೀತಾರಾಮನೂ ಇಲ್ಲ. ಎಲ್ಲ ಮಕ್ಕಳ ಮನದ ಬರೀ ನೆನಪುಗಳು ಅಷ್ಟೇ!

# ಒಳಗಿನಿಂದ ರಕ್ತ ಸುರಿಯುತ್ತಿದೆ

ಎಳೆ ಮಕ್ಕಳ ಬಾಯಲ್ಲಿ 'ಅಮ್ಮ' 'ಅಪ್ಪ' ಪದ ಆದನಂತರ ಸಲೀಸಾಗಿ ಬರುವುದೇ 'ತಾತ' ಎಂಬ ಪದ. ನಂತರ 'ಅಜ್ಜಿ' ಮತ್ತು ಇತರ ಪದಗಳು. ಆದುದರಿಂದಲೇ ಈ ಅಜ್ಜ ಅಜ್ಜಿಯರಿಗೆ ತಮ್ಮ ಮೊಮ್ಮಕ್ಕಳೆಂದರೆ 'ಪ್ರಾಣ'. ಅವರಿಗೆ ಪೆಟ್ಟಾದರೆ, ಅದು ಅವುಗಳ ಅಪ್ಪ ಅಮ್ಮಂದಿರಿಂದಲೇ ಆಗಿರಬಹುದು, ಅಥವಾ ಎದ್ದು ಬಿದ್ದು ಗಾಯಮಾಡಿಕೊಂಡಿರಬಹುದು, ಆಗ ಓಡಿಬರುವುದೇ ಈ ಅಜ್ಜ ಅಜ್ಜಿಯರೆಡೆಗೆ. ಏಕೆಂದರೆ ಆ ಪುಟ್ಟಮಕ್ಕಳ ಪಾಲಿಗೆ ಇವರೇ ರಕ್ಷಕರು.

ಇನ್ನೂ ಕೆಲವು ಕಾರಣಗಳಿಗಾಗಿ ಈ ಪುಟ್ಟ ಕಂದಮ್ಮಗಳು ತಮ್ಮ ಅಜ್ಜ ಅಜ್ಜಿಯರನ್ನು ಪ್ರೀತಿಸಿ ಹಚ್ಚಿಕೊಳ್ಳುತ್ತವೆ. ತಮಗೆ ಬೇಕಾದ ತಿಂಡಿತಿನಿಸುಗಳನ್ನು ಕೊಡಿಸುವವರು, ತಂದೆ ತಾಯಂದಿರ ಹೊಡೆತಗಳಿಂದ ತಮ್ಮನ್ನು ತಪ್ಪಿಸುವವರು, ತಮ್ಮ ಮನಸ್ಸಿಗೆ ಹಿತವೆನಿಸುವ ಕಥೆಗಳನ್ನು ಹೇಳಿ ತಮ್ಮನ್ನು ಮಲಗಿಸುವವರು, ತಮ್ಮೊಡನೆ ಆಟವಾಡುವವರು ಇನ್ನೂ ಮುಂತಾದ ಕಾರಣಗಳಿಗಾಗಿ ಮಕ್ಕಳು ತಮ್ಮ ಅಜ್ಜ ಅಜ್ಜಿಯರನ್ನು ಆಶ್ರಯಿಸುತ್ತವೆ.

ಒಮ್ಮೆ ನಮ್ಮ ಮೊಮ್ಮಗನಿಗೆ ಅವರಪ್ಪ ಬಲು ಪ್ರೀತಿಯಿಂದ ಒಂದು ಬೆಲೆಬಾಳುವ ಸುಮಾರು 30 ಆಟದ ಕಾರುಗಳಿದ್ದ ಒಂದು ಪ್ಲಾಸ್ಟಿಕ್ ಪೆಟ್ಟಿಗೆ ತಂದುಕೊಟ್ಟಿದ್ದನು. ಈ ಮಗುವಿಗೆ ಖುಷಿಯೋ ಖುಷಿ. ಎಲ್ಲ ಕಾರುಗಳನ್ನೂ ತೆಗೆದು ಅಲ್ಲಲ್ಲಿಟ್ಟು ಪೆಟ್ಟಿಗೆಯನ್ನೂ ಒಂದು ಕಡೆ ಇಟ್ಟು ಎಲ್ಲ ಕಡೆ ಓಡಾಡುತ್ತಿತ್ತು. ಹಾಗೆ ಓಡಾಡುವ

ಭರದಲ್ಲಿ ಆ ಪೆಟ್ಟಿಗೆಯಮೇಲೆ ಕಾಲಿಟ್ಟುಬಿಟ್ಟ. ಲಟ್ ಅಂತ ಮುರಿಯಿತು ಆ ಪುಟ್ಟ ಪೆಟ್ಟಿಗೆ! ಈ ಶಬ್ದ ಕೇಳಿ ಅಡುಗೆಮನೆಯಿಂದ ಓಡಿಬಂದ ಅಮ್ಮ, ಅಪ್ಪತಂದು–ಕೊಟ್ಟ ಹೊಸ ಪೆಟ್ಟಿಗೆ ಮುರಿದುಬಿಟ್ಟುದಕ್ಕಾಗಿ ಆ ಮಗುವಿಗೆ ಬಯ್ಯುತ್ತಾಳೆಂದು ಬೆದರಿದ ಮಗು ಜೋರಾಗಿ ಅಳಲು ಆರಂಭಿಸಿದ. ನಮಗೆಲ್ಲ ಮಗುವಿಗೆ ಏನಾಯಿತೋ ಎಂಬ ಗಾಬರಿ, ಅದರ ಅಮ್ಮನಿಗೂ ಮಗುವಿಗೇನಾಯಿತೋ ಎಂಬ ತಳಮಳ. ಕಾಲು ಎತ್ತಿ ನೋಡಿದರೆ ಗಾಯವೇನೂ ಆಗಿರಲಿಲ್ಲ. ಆದರೆ ಮಗು ಅಳು ನಿಲ್ಲಿಸುತ್ತಿಲ್ಲ 'ಏನಾಯಿತೋ?' ಎಂದು ಅಮ್ಮ ಕೇಳಿದುದಕ್ಕೆ 'ರಕ್ತ ಸುರಿಯುತ್ತಿದೆ' ಎಂಬ ಉತ್ತರ! ಎಲ್ಲೋ ಕಾಣುತ್ತಿಲ್ಲವಲ್ಲೋ ಅಂದುದಕ್ಕೆ ಮಗು ಕೊಟ್ಟ ಉತ್ತರ 'ಒಳಗಿನಿಂದ ರಕ್ತ ಸುರಿಯುತ್ತಿದೆ'! ತನ್ನನ್ನು ಅಮ್ಮ ಬಯ್ದು ಹೊಡೆದು ಮಾಡದಿರಲೆಂದು ಮಗು ಈ ರೀತಿ ಬುದ್ಧಿವಂತಿಕೆಯ ಉತ್ತರ ಕೊಟ್ಟಿತ್ತು. ನಾವು ಹೇಗೋ ಮಾಡಿ ಅವರಪ್ಪ ಬರುವ ವೇಳೆಗೆ ಆ ಪೆಟ್ಟಿಗೆಯನ್ನು ರಿಪೇರಿಮಾಡಿಕೊಟ್ಟು ಬಯ್ಯುವ ಅವಕಾಶವನ್ನೇ ತಪ್ಪಿಸಿದ್ದೆವೆನ್ನಿ.